ಹುಬ್ಬಳ್ಳಿ
ಸೋಮವಾರ, 25 ಮೇ 2026
ಸಂಪುಟ 16, ಸಂಚಿಕೆ 61, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಭಾರತವೇ ಮಹಾಶಕ್ತಿ: ಮಾರ್ಕೊ ರೂಬಿಯೊ |09
ವೈಟ್‌ಹೌಸ್ ಬಳಿ ಮತ್ತೆ ಗುಂಡಿನ ಸದ್ದು |09
ಪಕ್ಷ ಸಂಘಟನೆಗೆ ಈಗಲೇ ಸಜ್ಜಾಗಿ |09

ಫಾಲ್ಟಾ ವಿಧಾನಸಭಾ ಕ್ಷೇತ್ರಕ್ಕೆ ಮರುಮತದಾನ | ಟಿಎಂಸಿಗೆ 4ನೇ ಸ್ಥಾನ

ಫಾಲ್ಟಾದಲ್ಲಿ ಬಿಜೆಪಿ ಜಯಭೇರಿ

ಕೋಲ್ಕತ್ತಾ: ತೃಣಮೂಲ ಕಾಂಗ್ರೆಸ್‌ನ ಭದ್ರಕೋಟೆ ಖ್ಯಾತ ಫಾಲ್ಟಾ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಮರು ಮತದಾನದಲ್ಲಿ ಬಿಜೆಪಿ ಅಭ್ಯರ್ಥಿ ದೇಬಾಂಶು ಪಂಡಾ ಬರೋಬ್ಬರಿ 1.09 ಲಕ್ಷ ಮತಗಳ ಅಂತರದಲ್ಲಿ ವಿಜಯಿಯಾಗಿದ್ದಾರೆ. ಟಿಎಂಸಿ ಅಭ್ಯರ್ಥಿ ಜಹಂಗೀರ್ ಖಾನ್ ನಾಲ್ಕನೇ ಸ್ಥಾನಕ್ಕೆ ನೂಕಲ್ಪಟ್ಟಿದ್ದಾರೆ. ಪಂಡಾ ಅವರಿಗೆ ದೊರೆತಿರುವ ಮತಗಳು 1,49,666. 2.36 ಲಕ್ಷ ಮತದಾರರನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಜಹಂಗೀರ್ ಖಾನ್‌ಗೆ ದೊರೆತಿರುವ ಮತಗಳು ಕೇವಲ 7,783. ಸಿಪಿಎಂನ ಸಂಭುನಾಥ್ ಕುರ್ಮಿ 40,645ಮತಗಳೊಂದಿಗೆ ದ್ವಿತೀಯ ಸ್ಥಾನಿಯಾಗಿದ್ದು, ಕಾಂಗ್ರೆಸ್‌ನ ಅಬ್ದುರ್ ರಜಾಕ್ ಮೊಲ್ಲಾ 10,084ಮತಗಳೊಂದಿಗೆ ತೃತೀಯ ಸ್ಥಾನದಲ್ಲಿದ್ದಾರೆ.

ಬೆಳಕಿಗೆ ಬರುತ್ತೆ ಸತ್ಯ: ಪ್ರಸ್ತುತ ವಿಜಯ ಮುಖೇನ ಪ.ಬಂಗಾಳ ಚುನಾವಣೆಗೆ ಸಂಬಂಧಿಸಿ ಚುನಾವಣಾ ಆಯೋಗದ ದಾಖಲೆಗಳಲ್ಲಿ ಬಿಜೆಪಿಯ ಸ್ಥಾನಬಲ 208ಕ್ಕೇರಿದೆ. ಬಿಜೆಪಿಗೆ ಅಭೂತಪೂರ್ವ ವಿಜಯ ನಿಶ್ಚಿತವೆಂಬುದು ಆರಂಭದ ಟ್ರೆಂಡ್‌ಗಳಿಂದಲೇ ವ್ಯಕ್ತವಾಗಿತ್ತು. ಜನರಿಗೆ ಮುಕ್ತವಾಗಿ ಮತ ಚಲಾಯಿಸಲು ಅವಕಾಶ ದೊರೆತಾಗ ಸತ್ಯ ಬೆಳಕಿಗೆ ಬರುವುದು ಎಂಬುದಕ್ಕೆ ಈ ಫಲಿತಾಂಶ ಸಾಕ್ಷಿ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹರ್ಷ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ದೇಬಾಂಶು ಪಂಡಾರನ್ನು ಬಲಿಷ್ಠ ಜನಾದೇಶ ಮುಖೇನ ಗೆಲ್ಲಿಸಿದ ಫಾಲ್ಟಾ ಜನತೆಗೆ ತಾನು ಶಿರಬಾಗಿ ನಮಿಸುತ್ತೇನೆ ಎಂದು ಸಿಎಂ ಅಧಿಕಾರಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಹೇಳಿದ್ದಾರೆ. ➡ಪುಟ ೮



ಮಂಪರು ಸ್ಥಿತಿಯಲ್ಲಿ ಟಿಎಂಸಿ ಪಾಳಯ

ಮರು ಮತದಾನದಂದು ಟಿಎಂಸಿ ಪಾಳಯದಲ್ಲಿ ಹೆಚ್ಚಿನ ಚಟುವಟಿಕೆ ಕಂಡುಬರಲಿಲ್ಲ. ಪಕ್ಷದ ಕಚೇರಿಗಳು ನಿದ್ರೆ ತೂಗುತ್ತಿದ್ದವು. ಸ್ಪರ್ಧಿ ಖಾನ್ ಕೂಡ ಸಾರ್ವಜನಿಕರ ಕಣ್ಣಿಗೆ ಬಿದ್ದಂತಿರಲಿಲ್ಲ. ಮತದಾನದಂದು ಖಾನ್ ನಿವಾಸಕ್ಕೆ ಬೀಗ ಜಡಿಯಲಾಗಿತ್ತು ಎಂದು ಸ್ಥಳೀಯ ನಿವಾಸಿಗಳು ಹೇಳಿದ್ದಾರೆ. ಟಿಎಂಸಿಯ ಸ್ಥಳೀಯ ಕಾರ್ಯಕರ್ತರ ಗೈರು ಕೂಡ ಎದ್ದು ಕಾಣಿಸಿತ್ತು.

ಚಾಟ್‌ಜಿಪಿಟಿ, ಯೂಟ್ಯೂಬ್ ನೋಡಿ ಐಇಡಿ ತಯಾರಿಸಿದ್ದ ಆರೋಪಿಗಳು

ಬಾಂಬ್ ತಯಾರಿಕೆಗೆ ಎಐ ಬಳಕೆ

ಹೊಸದಿಲ್ಲಿ: ರಾಷ್ಟ್ರ ರಾಜಧಾನಿ ದಿಲ್ಲಿಯನ್ನು ಬೆಚ್ಚಿಬೀಳಿಸಿದ್ದ ಕೆಂಪುಕೋಟೆ ಪ್ರದೇಶದ ಭೀಕರ ಸ್ಫೋಟ ಪ್ರಕರಣದ ತನಿಖೆಯಲ್ಲಿ ಆತಂಕಕಾರಿ ಅಂಶಗಳು ಬೆಳಕಿಗೆ ಬಂದಿವೆ. ಸ್ಫೋಟ ಪ್ರಕರಣದ ಆರೋಪಿಗಳು ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ, ವಿಶೇಷವಾಗಿ ಚಾಟ್‌ಬಾಟ್‌ಗಳು ಮತ್ತು ಯೂಟ್ಯೂಬ್ ವಿಡಿಯೋಗಳ ಸಹಾಯದಿಂದ ಬಾಂಬ್ ತಯಾರಿಕೆ ಕುರಿತು ಮಾಹಿತಿ ಸಂಗ್ರಹಿಸಿ, ಸುಧಾರಿತ ಸ್ಫೋಟಕ ಸಾಧನಗಳನ್ನು(ಐಇಡಿ) ನಿರ್ಮಿಸಿದ್ದರೆಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಹಿರಂಗಪಡಿಸಿದೆ.

7,500 ಪುಟಗಳ ಚಾರ್ಜ್‌ಶೀಟ್: ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಮೇ 14ರಂದು ವಿಶೇಷ ಎನ್‌ಐಎ ನ್ಯಾಯಾಲಯಕ್ಕೆ ಸುಮಾರು 7,500 ಪುಟಗಳ ಬೃಹತ್ ಚಾರ್ಜ್‌ಶೀಟ್ ಸಲ್ಲಿಸಿದ್ದು, ಅದರಲ್ಲಿ ಉಗ್ರರ ಸಂಚಿನ ಸಂಪೂರ್ಣ ವಿವರಗಳನ್ನು ದಾಖಲಿಸಲಾಗಿದೆ. ➡ಪುಟ ೮

▸ ದಿಲ್ಲಿ ಸ್ಫೋಟ ಪ್ರಕರಣ
▸ ಎನ್‌ಐಎ ಮಾಹಿತಿ



- 5ರಿಂದ 10 ನಿಮಿಷಗಳಲ್ಲಿ ಬಾಂಬ್ ಜೋಡಣೆ
- ಕಲ್ಲಿದ್ದಲು ಗಣಿಗಳಿಂದ ಡಿಟೋನೇಟರ್ ಪೂರೈಕೆ
- ಅನಂತನಾಗ್ ಜಿಲ್ಲೆಯ ಖಾಜಿಗುಂಡ್ ಕಾಡಿನಲ್ಲಿ ಐಇಡಿ ಪರೀಕ್ಷೆ
- ಬಾಂಬ್ ತಯಾರಿಕೆಗೆ ಚಾಟ್‌ಬಾಟ್, ಎಐ ತಂತ್ರಜ್ಞಾನ, ಯೂಟ್ಯೂಬ್ ವಿಡಿಯೋ ದುರ್ಬಳಕೆ
- ಮೇ 14ಕ್ಕೆ 7,500 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದ ಎನ್‌ಐಎ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾನ್ಯ ಸಚಿವರಾದ ಶ್ರೀ ಕೆ.ಜಿ. ಜಾರ್ಜ್ ಅವರು

ಕುಟುಂಬಸ್ಥರ ಆಕ್ರಂದನ
ಮೂವರು ಅಸ್ವಸ್ಥ, ಓರ್ವನಿಗಾಗಿ ಶೋಧ

ಮಳೆಯಿಂದಾಗಿ ನೀರಿನ ಸೆಳೆತ ಹೆಚ್ಚಾಗಿದ್ದೇ ದುರಂತಕ್ಕೆ ಕಾರಣ

ಭಟ್ಕಳ: ಕಪ್ಪೆಚಿಪ್ಪಿಗಾಗಿ ನದಿಗಿಳಿದ 10 ಮಂದಿ ಸಾವು

ಭಟ್ಕಳ/ ಕಾರವಾರ: ಹೊಳೆಯಲ್ಲಿ ಚಿಪ್ಪುಮೀನು ಕಪ್ಪೆಚಿಪ್ಪು ಆರಿಸಲು ಇಳಿದ 10 ಜನರು ನೀರಿನ ಸೆಳೆತಕ್ಕೆ ಕೊಚ್ಚಿ ಹೋಗಿದ್ದಾರೆ. ಭಾನುವಾರ ಭಟ್ಕಳ ತಾಲೂಕಿನ ಶಿರಾಲಿ ಅಳಿವೆಕೋಡಿ ಬಳಿ ಈ ದುರಂತ ಸಂಭವಿಸಿದೆ.

ಮೂವರು ತೀವ್ರ ಅಸ್ವಸ್ಥರಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಪತ್ತೆಯಾಗಿರುವ ಓರ್ವನಿಗಾಗಿ ಶೋಧ ಕಾರ್ಯ ಸಾಗಿದೆ. ಎಂದಿನಂತೆ 14 ಜನ ಕಳಿನಟ್ಟಿ ಹೊಳೆಯಲ್ಲಿ ಕಪ್ಪೆ ಚಿಪ್ಪು ಆರಿಸಲು ನೀರಿಗಿಳಿದಿದ್ದರು. ರಾತ್ರಿಯಿಡೀ ಮಳೆ ಸುರಿದ ಕಾರಣ ಹೊಳೆಯಲ್ಲಿ ನೀರಿನ ಸೆಳೆತ ಹೆಚ್ಚಾಗಿದ್ದು ಇದರಿಂದಾಗಿ ಪರಸ್ಪರ ಕೈಹಿಡಿದು ನೀರಿಗಿಳಿದ ಎಲ್ಲರೂ ನೀರಿನಲ್ಲಿ ಕೊಚ್ಚಿ ಹೋಗಿ ಆಳ ಪ್ರದೇಶದಲ್ಲಿ ನೀರಿನಲ್ಲಿ ಮುಳುಗಿರುವುದಾಗಿ ತಿಳಿದುಬಂದಿದೆ. ಎಲ್ಲಾ 8 ಮೃತ ದೇಹಗಳು ಅಳಿವೆಕೋಡಿ ಬಳಿ ಪತ್ತೆಯಾಗಿವೆ. ➡ಪುಟ ೮



₹5ಲಕ್ಷ ಪರಿಹಾರ: ಸಿಎಂ ಘೋಷಣೆ

ಕಾರವಾರ: ಭಟ್ಕಳ ಸಮೀಪದ ತಟ್ಟೆಹಕ್ಕಲು ಕಡಲ ತೀರದಲ್ಲಿ ಕಪ್ಪೆಚಿಪ್ಪು ತರಲು ಹೋದವರ ಪೈಕಿ ಒಂದೇ ಕುಟುಂಬದ 10 ಮಂದಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ ಘಟನೆಗೆ ತೀವ್ರ ಶೋಕ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ಕಾಣೆಯಾದವರು ಬದುಕಿಬಂದು ತಮ್ಮವರನ್ನು ಕೂಡಿಕೊಳ್ಳಲಿ ಎಂದು ದೇವರಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಮಂತ್ರಿ ಮಂಕಾಳ ವೈದ್ಯ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಶಾಸಕ ಶಿವರಾಮ ಹೆಬ್ಬಾರ್, ಶಾಸಕ ಸತೀಶ ಸೈಲ್ ಮತ್ತಿತರರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಅನುಮಾನಾಸ್ಪದ ಫಲಾನುಭವಿಗಳನ್ನು ಕೈಬಿಡಲು ಕಂದಾಯ ಇಲಾಖೆ ಸೂಚನೆ

84 ಸಾವಿರ ಜನರ ಪಿಂಚಣಿ ರದ್ದು

▸ ವೀರಣ್ಣ ಬಳಿಗಾರ

ಬೆಂಗಳೂರು: ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಸರ್ಕಾರದ ವತಿಯಿಂದ ನೀಡುತ್ತಿರುವ ಪಿಂಚಣಿಗಳಲ್ಲಿ ಸಂದೇಹಾಸ್ಪದ ಫಲಾನುಭವಿಗಳ ಪತ್ತೆ ಕಾರ್ಯ ಕೈಗೊಂಡಿರುವ ಕಂದಾಯ ಇಲಾಖೆಯು ರಾಜ್ಯದಲ್ಲಿ 84,211 ಜನರು ಅನರ್ಹರು ಎಂದು ಗುರುತಿಸಿದ್ದು, ಇವರ ಪಿಂಚಣಿ ರದ್ದುಗೊಳಿಸಲು ತೀರ್ಮಾನಿಸಿದೆ.

ಇ-ಆಡಳಿತ ಇಲಾಖೆಯ ಕುಟುಂಬ ದತ್ತಾಂಶದಿಂದ ಸಮಾಜದ ವಿವಿಧ ವರ್ಗಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಲಭ್ಯ ಮಾಹಿತಿಗಳನ್ನು ಪಡೆದು ಸಾಮಾಜಿಕ ಭದ್ರತೆ ಫಲಾನುಭವಿಗಳ ಮಾಹಿತಿಗಳೊಂದಿಗೆ ತಾಳೆ ಮಾಡಲಾಗಿ, 82.98 ಲಕ್ಷ ಫಲಾನುಭವಿಗಳ ಪೈಕಿ 23.12 ಲಕ್ಷ ಫಲಾನುಭವಿಗಳು ಅರ್ಹತಾ ಮಾನದಂಡಗಳಿಗೆ ಒಳಪಡದೆ ಸಂದೇಹಾಸ್ಪದವಾಗಿ ಪಿಂಚಣಿಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.ಸಂದೇಹಾಸ್ಪದ ಪ್ರಕರಣಗಳನ್ನು ಗ್ರಾಮ ಆಡಳಿತ ಅಧಿಕಾರಿಗಳ ಮೂಲಕ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ವಹಿಸಲು ಸಂಯೋಜನೆ ಮೊಬೈಲ್ ಆ್ಯಪ್ ಸಿದ್ಧಪಡಿಸಿ ರಾಜ್ಯದಲ್ಲಿ ಈಗಾಗಲೇ ಮೇ 21ರ ಅಂತ್ಯಕ್ಕೆ 23,12,667 ಸಂದೇಹಾಸ್ಪದ ಫಲಾನುಭವಿಗಳ ಪೈಕಿ 19,22,833 ಫಲಾನುಭವಿಗಳ ಪರಿಶೀಲನಾ ಕಾರ್ಯವು ಮುಕ್ತಾಯಗೊಂಡಿದೆ. ಉಳಿದ 3,89,834 ಸಂದೇಹಾಸ್ಪದ ಫಲಾನುಭವಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ. ➡ಪುಟ ೮



14,68,723 ಜನರ ಸೌಲಭ್ಯ ಸ್ಥಗಿತ

2,07,156 ಸಂದೇಹಾಸ್ಪದ ಫಲಾನುಭವಿಗಳು ನೀಡಿದ್ದ ವಿಳಾಸದಲ್ಲಿ ವಾಸವಿಲ್ಲದೆ ಇರುವುದು ದೃಢಪಟ್ಟಿದೆ. 12,48,994 ಸಂದೇಹಾಸ್ಪದ ಫಲಾನುಭವಿಗಳು ಪರಿಶೀಲನಾ ಸಮಯದಲ್ಲಿ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಲು ವಿಫಲರಾಗಿದ್ದಾರೆ ಮತ್ತು 12,573 ಸಂದೇಹಾಸ್ಪದ ಫಲಾನುಭವಿಗಳು ತಮ್ಮ ಆದಾಯದ ಬಗ್ಗೆ ಆದಾಯ ದೃಢೀಕರಣ ಪತ್ರ ನೀಡಿರುವುದಿಲ್ಲ. ಈ ಪಿಂಚಣಿಗಳನ್ನು ಸ್ಥಗಿತಗೊಳಿಸಲು ತೀರ್ಮಾನಿಸಲಾಗಿದೆ.

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ
ಹುಬ್ಬಳ್ಳಿ
ಸೋಮವಾರ, 25 ಮೇ 2026
ಸಂಪುಟ 16, ಸಂಚಿಕೆ 61, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ಅಮೆರಿಕ ವಿದೇಶಾಂಗ ಕಾರ್ಯದರ್ಶಿ ರೂಬಿಯೊ ಅಭಿಪ್ರಾಯ
ಭಾರತವೇ ಮಹಾಶಕ್ತಿ

ಹೊಸದಿಲ್ಲಿ: ಭಾರತ ಮತ್ತು ಅಮೆರಿಕ ದೇಶಗಳು ತಮ್ಮ ನಡುವಿನ ಬಿಗುವಿನ ಸಂಬಂಧವನ್ನು ಸರಿಪಡಿಸುವ ಸ್ಪಷ್ಟ ಮುನ್ಸೂಚನೆ ನೀಡಿವೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರು ಭಾನುವಾರ ಭೇಟಿಯಾಗಿ ವ್ಯಾಪಾರ, ವೀಸಾ, ಇಂಧನ ಭದ್ರತೆ, ಗಡಿಯಾಚೆಗಿನ ಭಯೋತ್ಪಾದನೆ ಮತ್ತು ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮಗಳಂತಹ ಸೂಕ್ಷ್ಮ ವಿಷಯಗಳ ಕುರಿತು ಮುಕ್ತ ಚರ್ಚೆ ನಡೆಸಿದರು.

ನಾಲ್ಕು ದಿನಗಳ ಭಾರತ ಪ್ರವಾಸದಲ್ಲಿರುವ ರೂಬಿಯೊ, ಹೊಸದಿಲ್ಲಿಯನ್ನು ಜಾಗತಿಕ ಮಹಾಶಕ್ತಿ ಎಂದು ಬಣ್ಣಿಸಿದರು. ಕಳೆದ ಎರಡು ದಶಕಗಳಿಂದ ಭಾರತ-ಅಮೆರಿಕ ಸಂಬಂಧದಲ್ಲಿದ್ದ ವೇಗ ಕಡಿಮೆಯಾಗಿದೆ ಎಂಬ ವಾದಗಳನ್ನು ತಳ್ಳಿಹಾಕಿದ ಅವರು, ಪ್ರಸ್ತುತ ಅಮೆರಿಕ ಆಡಳಿತದ ಅವಧಿ ಮುಗಿಯುವ ವೇಳೆಗೆ ಉಭಯ ದೇಶಗಳ ಬಾಂಧವ್ಯ ಮತ್ತಷ್ಟು ಬಲಗೊಳ್ಳಲಿದೆ ಎಂದು ಆಶ್ವಾಸನೆ ನೀಡಿದರು.

ಜಾಗತಿಕ ಸ್ಥಿರತೆಗೆ ಭಾರತದ 5 ಅಂಶಗಳ ಕಾರ್ಯಸೂಚಿ: ಚರ್ಚೆಯ ವೇಳೆ ಜೈಶಂಕರ್ ಅವರು ಭಾರತದ ವಿದೇಶಾಂಗ ನೀತಿಯ ಆದ್ಯತೆ ಗಳನ್ನು ಒಳಗೊಂಡ 5 ಅಂಶಗಳ ಕಾರ್ಯಸೂಚಿ ಪ್ರಸ್ತಾಪಿಸಿದರು.

1. ಸಂಘರ್ಷಗಳನ್ನು ಬಗೆಹರಿಸಲು ಸದಾ ಸಂವಾದ ಮತ್ತು ರಾಜತಾಂತ್ರಿಕತೆ ಬೆಂಬಲಿಸುವುದು.
2. ಸುರಕ್ಷಿತ ಮತ್ತು ತಡೆರಹಿತ ಕಡಲ ವ್ಯಾಪಾರಕ್ಕೆ ಬೆಂಬಲ ನೀಡುವುದು.
3. ಅಂತಾರಾಷ್ಟ್ರೀಯ ಕಾನೂನುಗಳಿಗೆ ಕಟ್ಟುನಿಟ್ಟಿನ ಗೌರವ ನೀಡುವುದು.
4. ಮಾರುಕಟ್ಟೆ ಪಾಲು ಮತ್ತು ಸಂಪನ್ಮೂಲಗಳನ್ನು ಅಸ್ತ್ರವಾಗಿ ಬಳಸಿಕೊಳ್ಳುವುದನ್ನು ವಿರೋಧಿಸುವುದು.
5. ಜಾಗತಿಕ ಆರ್ಥಿಕತೆಯ ಅಪಾಯ ತಗ್ಗಿಸಲು ವಿಶ್ವಾಸಾರ್ಹ ಪಾಲುದಾರಿಕೆ ಮತ್ತು ಸ್ಥಿತಿಸ್ಥಾಪಕ ಪೂರೈಕೆ ಸರಪಳಿಗಳನ್ನು ನಂಬುವುದು.

ತೈಲ ಬೆಲೆ ನಿಯಂತ್ರಣ ಅಗತ್ಯ: ಪಶ್ಚಿಮ ಏಷ್ಯಾದ ಬಿಕ್ಕಟ್ಟು ಭಾರತದ ಇಂಧನ ಭದ್ರತೆಯ ಮೇಲೆ ಭಾರೀ ಹೊಡೆತ ನೀಡಿದ್ದು, ಆರ್ಥಿಕ ಸಂಕಷ್ಟ ತಂದೊಡ್ಡಿದೆ ಎಂದು ಜೈಶಂಕರ್ ಬಲವಾಗಿ ಪ್ರತಿಪಾದಿಸಿದರು. ಪುಟ ೮



ವೀಸಾ ನೀತಿಗೆ ಜೈಶಂಕರ್ ಕಳವಳ

ಟ್ರಂಪ್ ಆಡಳಿತದ ಹೊಸ ವೀಸಾ ಮತ್ತು ವಲಸೆ ನೀತಿಗಳಿಂದಾಗಿ ಭಾರತೀಯರ ಕಾನೂನುಬದ್ಧ ಸಂಚಾರಕ್ಕೆ ತೊಂದರೆಯಾಗಬಾರದು ಎಂದು ಜೈಶಂಕರ್ ಕಳವಳ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ರೂಬಿಯೊ, ವಲಸೆ ವ್ಯವಸ್ಥೆಯನ್ನು ಸುಧಾರಿಸುವಾಗ ಪರಿವರ್ತನೆಯ ಅವಧಿಯಲ್ಲಿ ಕೆಲವು ಸಣ್ಣಪುಟ್ಟ ಅಡೆತಡೆಗಳು ಎದುರಾಗುವುದು ಸಹಜ. ಆದರೆ ಇದು ಭಾರತವನ್ನು ಗುರಿಯಾಗಿಸಿಕೊಂಡು ಮಾಡುತ್ತಿರುವುದಲ್ಲ, ಅಂತಿಮವಾಗಿ ಇದು ಎಲ್ಲರಿಗೂ ಸಹಕಾರಿಯಾಗಲಿದೆ ಎಂದರು.

ಸುಸ್ಥಿರವಾದ ವ್ಯಾಪಾರ ಒಪ್ಪಂದ ಶೀಘ್ರ: ಮಾರ್ಕೊ ರೂಬಿಯೊ

ಆರ್ಥಿಕ ಸಂಬಂಧಗಳ ಕುರಿತು ಮಾತನಾಡಿದ ರೂಬಿಯೊ, ಭಾರತ ಮತ್ತು ಅಮೆರಿಕ ಶೀಘ್ರದಲ್ಲೇ ಉಭಯ ದೇಶಗಳ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಪೂರಕವಾದ ಹಾಗೂ ಸುಸ್ಥಿರವಾದ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲಿವೆ ಎಂದು ತಿಳಿಸಿದರು. ಇದೇ ವೇಳೆ, ಚೀನಾ ಮತ್ತು ಪಾಕಿಸ್ತಾನದೊಂದಿಗೆ ಅಮೆರಿಕ ಹೊಂದಿರುವ ಸಂಬಂಧಗಳು ಭಾರತದೊಂದಿಗಿನ ಆಯಕಟ್ಟಿನ ಮೈತ್ರಿಗೆ ಯಾವುದೇ ಧಕ್ಕೆ ತರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ

ಭಯೋತ್ಪಾದನೆ ವಿರುದ್ಧ ಭಾರತದ ನಿಲುವು ಶೂನ್ಯ ಸಹಿಷ್ಣುತೆಯದ್ದಾಗಿದೆ ಎಂದು ಜೈಶಂಕರ್ ಪುನರುಚ್ಚರಿಸಿದರು. 26/11ರ ಮುಂಬೈ ದಾಳಿಯ ಪ್ರಮುಖ ಸಂಚುಕೋರನನ್ನು ಕಳೆದ ವರ್ಷ ಅಮೆರಿಕ ಭಾರತಕ್ಕೆ ಹಸ್ತಾಂತರಿಸಿದ್ದನ್ನು ಅವರು ಶ್ಲಾಘಿಸಿದರು. ನಂತರ ಜೈಶಂಕರ್ ಅವರು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿ, ಈ ಚರ್ಚೆಯು ಅತ್ಯಂತ ಸಕಾರಾತ್ಮಕವಾಗಿತ್ತು ಎಂದು ಉಲ್ಲೇಖಿಸಿದ್ದಾರೆ. ರಕ್ಷಣೆ, ಕೃತಕ ಬುದ್ಧಿಮತ್ತೆ (ಎಐ), ಪರಮಾಣು ಮತ್ತು ಅಪರೂಪದ ಖನಿಜಗಳ ಕ್ಷೇತ್ರಗಳಲ್ಲಿನ ಸಹಕಾರದ ಕುರಿತು ಪರಾಮರ್ಶೆ ನಡೆಸಲಾಗಿದೆ ಎಂದು ಹೇಳಿದರು. ಮಂಗಳವಾರ ನಡೆಯಲಿರುವ ಕ್ವಾಡ್ (ಕ್ಯುಯುಎಡಿ) ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಎದುರು ನೋಡುತ್ತಿರುವುದಾಗಿ ತಿಳಿಸಿದರು. ಇದೇ ವೇಳೆ, ರೂಬಿಯೊ ಅವರು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್ ಅವರನ್ನೂ ಭೇಟಿಯಾಗಿ ರಕ್ಷಣೆ ಮತ್ತು ಟ್ರಸ್ಟ್ (ಟಿಆರ್‌ಯುಎಸ್‌ಟಿ) ಯೋಜನೆ ಕುರಿತು ಚರ್ಚಿಸಿದರು.

ಪಕ್ಷ ಸಂಘಟನೆಗೆ ಈಗಲೇ ಸಜ್ಜಾಗಿ: ನಿತಿನ್ ಸೂಚನೆ

ಬೆಂಗಳೂರು: ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗೆ ಮುನ್ನ ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ಬಲಪಡಿಸುವ ಮಾಸ್ಟರ್ ಪ್ಲಾನ್‌ನೊಂದಿಗೆ ಬೆಂಗಳೂರಿಗೆ ಆಗಮಿಸಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಅದರಲ್ಲಿ ಯಶಸ್ವಿಯಾಗಿದ್ದಾರೆ. ಅಧ್ಯಕ್ಷರಾದ ಬಳಿಕ ಮೊದಲ ಬಾರಿಗೆ ಕರ್ನಾಟಕಕ್ಕೆ ಆಗಮಿಸಿದ ನಿತಿನ್ ನವೀನ್ ಅವರು ರಾಜ್ಯದಲ್ಲಿ ಪಕ್ಷ ಸಂಘಟನೆ, ಅದರ ಲಯ, ಹದ ಎಲ್ಲವನ್ನೂ ಕಂಡುಕೊಂಡಿದ್ದಾರೆ. ಪಕ್ಷದ ನಾಯಕರು, ಪ್ರಮುಖರಿಗೆ ಅಗತ್ಯ ಸಂದೇಶವನ್ನೂ ರವಾನಿಸಿದ್ದಾರೆ. ಪುಟ ೮

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಉತ್ತರೆ

ದಿನದ ಮಾತು

ಇತರರು ಹೊಗಳಿದರೆ ಅದು ತನಗೆ ಗೌರವ; ತಾನೇ ಹೊಗಳಿಕೊಂಡರೆ ಲೋಕ ಅದನ್ನು ಹುಚ್ಚು ಎನ್ನುತ್ತದೆ.
▲ನೀತಿ ಮಂಜರಿ

ಕಿರುಸುದ್ದಿ

ವಿದೇಶಿ ಶಕ್ತಿಗಳ ಕೈಗೊಂಬೆಯಾಗಿರುವ ಕಾಂಗ್ರೆಸ್‌ನ ರಾಹುಲ್: ಬಿಜೆಪಿ ಆರೋಪ
ನರೇಂದ್ರ ಮೋದಿ ಸರ್ಕಾರ ಅಸ್ಥಿರಗೊಳಿಸಲು ಷಡ್ಯಂತ್ರ

ಹೊಸದಿಲ್ಲಿ: ವಿದೇಶಿ ಶಕ್ತಿಗಳ ಕೈಗೊಂಬೆಯಾಗಿರುವ ಕಾಂಗ್ರೆಸ್‌ನ ರಾಹುಲ್ ಗಾಂಧಿ, ದೇಶದಲ್ಲಿ ಅರಾಜಕತೆ ಸೃಜಿಸುವ ಮೂಲಕ ನರೇಂದ್ರ ಮೋದಿ ಸರಕಾರವನ್ನು ಅಸ್ಥಿರಗೊಳಿಸಲು ಷಡ್ಯಂತ್ರ ನಡೆಸುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ವರ್ಷದೊಳಗೆ ಮೋದಿ ಸರಕಾರ ಬೀಳುವುದೆಂದು ರಾಹುಲ್ ಕಾಂಗ್ರೆಸ್‌ನ ಅಲ್ಪಸಂಖ್ಯಾತ ಇಲಾಖೆಯ ಸಲಹಾ ಮಂಡಳಿ ಸಭೆಯಲ್ಲಿ ಹೇಳಿರುವುದು ಬಯಲಾಗಿದ್ದು, ಇದು ವಿಪಕ್ಷ ನಾಯಕ ಮೋದಿ ಸರಕಾರದ ವಿರುದ್ಧ ನಡೆಸುತ್ತಿರುವ ಷಡ್ಯಂತ್ರಕ್ಕೆ ಸಾಕ್ಷಿಯಾಗಿದೆ. ಕಾಂಗ್ರೆಸ್ ಸಹಿತ ಹಲವು ವಿಪಕ್ಷಗಳನ್ನು ಒಳಗೊಂಡ ಟೂಲ್‌ಕಿಟ್ ಗ್ಯಾಂಗ್ ಭಾರತವನ್ನು ಅಸ್ಥಿರಗೊಳಿಸುವ ಕನಸು ಕಾಣುತ್ತಿದ್ದು, ಇದಕ್ಕಾಗಿ ಭಾರೀ ಷಡ್ಯಂತ್ರ ಬೆಸೆದಿವೆ ಎಂಬುದು ರಾಹುಲ್ ಹೇಳಿಕೆಯಿಂದ ದೃಢಪಟ್ಟಿದೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ಎಕ್ಸ್‌ಗೆ ಹಿಂದಿಯಲ್ಲಿ ಹಾಕಿರುವ ಪೋಸ್ಟ್‌ನಲ್ಲಿ ಆರೋಪಿಸಿದ್ದಾರೆ. ರಾಹುಲ್‌ನದು ಸಾಮಾನ್ಯ ಹೇಳಿಕೆಯಲ್ಲ, ದೇಶದಲ್ಲಿ ಅರಾಜಕತೆ ಹಬ್ಬುವ ಗಂಭೀರ ಷಡ್ಯಂತ್ರ ಇದರ ಹಿಂದಿದೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದ್ದಾರೆ. ಮೋದಿ ಸರಕಾರ ವರ್ಷದೊಳಗೆ ಕುಸಿಯುವುದೆಂದು ರಾಹುಲ್ ಕಾಂಗ್ರೆಸ್ ಸಭೆಯಲ್ಲಿ ಹೇಳಿದ್ದಾರೆಂಬ ಮಾಧ್ಯಮ ವರದಿಯನ್ನು ಸಚಿವರು ಎಕ್ಸ್‌ನಲ್ಲಿ ಶೇರ್ ಮಾಡಿದ್ದಾರೆ.

ಇಂಡಿಕೂಟದ ಷಡ್ಯಂತ್ರ ಫಲಿಸದು: ದೇಶದ ಜನತೆ ಪ್ರಧಾನಿ ಮೋದಿ ಬಗ್ಗೆ ತುಂಬು ಗೌರವ-ಶ್ರದ್ಧೆ ಹೊಂದಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸಿ ಬಿಜೆಪಿಯನ್ನು ನೇರಾನೇರ ಸೋಲಿಸುವುದು ಕಷ್ಟ ಅಥವಾ ಮೋದಿ ಸರಕಾರದ ಪದ ಚ್ಯುತಿ ಅಷ್ಟು ಸುಲಭವಲ್ಲವೆಂಬ ಸತ್ಯ ಅರಿತಿರುವ ರಾಹುಲ್ ಮತ್ತವರ ಸಹವರ್ತಿಗಳು ದೇಶಾದ್ಯಂತ ಹಿಂಸೆಗೆ ಪ್ರಚೋದಿಸಲು ಯತ್ನಿಸುತ್ತಿದ್ದಾರೆ. ಅವರ ಭಾರತ ವಿರೋಧಿ ದ್ವೇಷ ಅದೆಷ್ಟು ಗಾಢವಾಗಿದೆಯೆಂದರೆ, ದೇಶದಲ್ಲಿ ಯಾವುದೇ ಧನಾತ್ಮಕ ವಿದ್ಯಮಾನ, ಸಾಧನೆ ನಡೆದರೂ ಅದನ್ನವರು ಸಹಿಸುವುದಿಲ್ಲ. ಪುಟ ೮

ವೈಟ್‌ಹೌಸ್ ಬಳಿ ಮತ್ತೆ ಗುಂಡಿನ ಸದ್ದು

- ದಾಳಿಕೋರನ ಹತ್ಯೆಗೈದ ಸಿಬ್ಬಂದಿ
- ಟ್ರಂಪ್ ಸುತ್ತ ನಡೆದ 3ನೇ ಘಟನೆ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷರ ನಿವಾಸ ವೈಟ್ ಹೌಸ್ ಭದ್ರತಾ ತಪಾಸಣಾ ಕೇಂದ್ರದ ಬಳಿ ಗುಂಡಿನ ದಾಳಿ ನಡೆಸಿದ ಶಂಕಿತನೊಬ್ಬನನ್ನು ಯುಎಸ್ ಸೀಕ್ರೆಟ್ ಸರ್ವಿಸ್ ಅಧಿಕಾರಿಗಳು ಸದೆಬಡಿದಿದ್ದಾರೆ. ಕಳೆದ ಒಂದು ತಿಂಗಳ ಅವಧಿಯಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುತ್ತಮುತ್ತ ನಡೆದ 3ನೇ ಗುಂಡಿನ ದಾಳಿ ಘಟನೆ ಇದಾಗಿದೆ. ಪುಟ ೮

ಹುಬ್ಬಳ್ಳಿ

ಸೋಮವಾರ, 25 ಮೇ 2026

ಸಂಪುಟ 16, ಸಂಚಿಕೆ 61, ಪುಟಗಳು 12

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/ 2011/64413

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಕೆನಡಾಗೆ ಪಿಯೂಷ್ ಗೋಯಲ್ ಇಂದು

• ಪುಟ 2

ಕಿರುಸುದ್ದಿ

ಉಚಿತ ಸಾಮೂಹಿಕ ವಿವಾಹ

ಹುಬ್ಬಳ್ಳಿ: ಇಲ್ಲಿನ ಗಣೇಶಪೇಟೆಯ ಶ್ರೀ ಕರಿಯಮ್ಮದೇವಿ ದೇವಸ್ಥಾನ ಟ್ರಸ್ಟ್ ಕಮಿಟಿಯಿಂದ 2026ರ ಜುಲೈ ಮೊದಲ ವಾರದಲ್ಲಿ ಸಮುದಾಯ ಭವನ ಉದ್ಘಾಟನೆ ಹಾಗೂ ಸರ್ವಧರ್ಮಗಳ 101 ಜೋಡಿಗಳ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ನಿಂಗಪ್ಪ ಜಕ್ಕಲಿ ಹೇಳಿದರು.

ನಗರದ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಕರಿಯಮ್ಮದೇವಿ ದೇವಸ್ಥಾನದ ಸಮುದಾಯ ಭವನದ ನಿರ್ಮಾಣಕ್ಕೆ ಈ ಹಿಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಿದ್ದಾಗ 1 ಕೋಟಿ ರೂ.ಗಳ ವಿಶೇಷ ಅನುದಾನ ಬಿಡುಗಡೆ ಮಾಡಿದ್ದರು. ಅದರ ಜೊತೆಯಲ್ಲಿ ಮತ್ತೊಂದು ಕೋಟಿ ದೇಣಿಗೆ ಮೂಲಕ ಸಂಗ್ರಹಿಸಿ ಅತ್ಯುತ್ತಮವಾದ ಸಮುದಾಯ ಭವನ ನಿರ್ಮಾಣ ಮಾಡಲಾಗಿದ್ದು, ಅದರ ಉದ್ಘಾಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಬರಬೇಕೆಂದು ಅವರ ಸಮಯಾವಕಾಶಕ್ಕಾಗಿ ಕಾಯುತ್ತಿದ್ದೇವೆ ಎಂದರು. ಅಂದು ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಪ್ರಸಾದ ಅಬ್ಬಯ್ಯ ವಹಿಸಲಿದ್ದಾರೆ ಎಂದರು.

101 ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಹೆಸರು ನೋಂದಾಯಿಸಿಕೊಳ್ಳುವ ದಂಪತಿಗಳಿಗೆ ಟ್ರಸ್ಟ್ ವತಿಯಿಂದ ಉಚಿತ ಧೋತಿ, ಶಾಲು, ಸೀರೆ ಹಾಗೂ ಮಾಂಗಲ್ಯ ನೀಡಲಾಗುವುದು ಎಂದರು. ಆಸಕ್ತ ವಧುವರರು ಜೂ.20 ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕೆಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಬಸವರಾಜ ಪೂಜಾರ, ವೈ.ಎಂ.ಹೊನ್ನಳ್ಳಿ, ಫಕೀರಪ್ಪ ವಾಲಿಕಾರ, ಶಂಕರಯ್ಯ ಹಿರೇಮಠ, ಪರಶುರಾಮ ದಿವಾನದ, ಸಹದೇವಪ್ಪ ತಿರಕಣ್ಣವರ ಇದ್ದರು.

ಜೂ.7ರಂದು ಉದ್ಘಾಟನೆ

ಹುಬ್ಬಳ್ಳಿ: ವಿಕಾಸಶೀಲ ಇನ್ಸಾನ್ ಪಕ್ಷದ (ವಿಐಪಿ) ರಾಜ್ಯ ಘಟಕ ಉದ್ಘಾಟನಾ ಸಮಾರಂಭ ಬೆಂಗಳೂರಿನ ಲಲಿತ್ ಅಶೋಕ ಹೋಟೆಲ್‌ನಲ್ಲಿ ಜೂ.7ರಂದು ನಡೆಯಲಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ಕೆ.ಮೋಹನಕುಮಾರ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಘಾಟನಾ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು, ಹಿಂದುಳಿದ ವರ್ಗಗಳ ಸಮುಖಂಡರು ಸೇರಿ 2 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುವರು ಎಂದರು. ಜಿಲ್ಲಾ ಮತ್ತು ತಾಲೂಕು ಘಟಕದ ಪದಾಧಿಕಾರಿಗಳ ನೇಮಕವಾದ ನಂತರ ಬೆಂಗಳೂರಿನ ಅರಮನೆ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಸಲಾಗುವುದು. ರಾಜ್ಯದಲ್ಲಿ ಅಲೆಮಾರಿ, ಅರೆ ಅಲೆಮಾರಿ ಮತ್ತು ಅತಿ ಹಿಂದುಳಿದ ಸಮುದಾಯಗಳ ಜನಸಂಖ್ಯೆ 1.40 ಕೋಟಿ ಇದೆ. ಆದರೆ ಈ ಸಮುದಾಯಗಳ ಬೆರಳೆಣಿಕೆಯಷ್ಟು ಜನ ಮಾತ್ರ ಶಾಸಕರಾಗಿದ್ದು, ರಾಜಕೀಯ ಪ್ರಾತಿನಿಧ್ಯ ಕಲ್ಪಿಸಿಲ್ಲ ಎಂದು ದೂರಿದರು.

ವಿಐಪಿ 'ಇಂಡಿಯಾ' ಕೂಟದಲ್ಲಿದ್ದು, ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 30-40 ಸ್ಥಾನ ನೀಡಿದರೆ ಕಾಂಗ್ರೆಸ್ ಜತೆ ಹೋಗುತ್ತೇವೆ. ಇಲ್ಲವೇ ಹೆಚ್ಚು ಸ್ಥಾನ ನೀಡುವ ಪಕ್ಷದ ಜತೆ ಹೋಗುತ್ತೇವೆ. ಅದು ಸಾಧ್ಯವಾಗದಿದ್ದರೆ ಸ್ವತಂತ್ರವಾಗಿ ಸ್ಪರ್ಧೆ ಮಾಡಲಾಗುವುದು ಎಂದರು.

ರಾಷ್ಟ್ರೀಯ ಕೋಲಿ ಬೆಸ್ತ ನಿಶಾದ್ ಹಿಂದುಳಿದ ವರ್ಗಗಳ ಮಠಾಧೀಶ್ವರರ ಮಹಾಸಭಾದ ಅಡಿ ಇರುವ ಅತಿ ಹಿಂದುಳಿದ ವರ್ಗಗಳ 145ಕ್ಕೂ ಹೆಚ್ಚು ಪೀಠಗಳು ಮತ್ತು ಅಲೆಮಾರಿ ಸಮಾಜದ 46 ಪೀಠಗಳು ನಮಗೆ ಬೆಂಬಲ ನೀಡಿವೆ ಎಂದರು. ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಎ.ಎಚ್. ಮಾತನಾಡಿ, ರಾಜ್ಯದಲ್ಲಿ ಆಡಳಿತ ನಡೆಸಿದ ವಿವಿಧ ರಾಜಕೀಯ ಪಕ್ಷಗಳು ಸಣ್ಣ ಸಮುದಾಯಗಳಿಗೆ ರಾಜಕೀಯ ಸ್ಥಾನಮಾನ ನೀಡದೆ ನಿರ್ಲಕ್ಷ್ಯ ವಹಿಸಿವೆ. ಬಲಿಷ್ಠ ಸಮುದಾಯಗಳಿಗೆ ಮಾತ್ರ ಚುನಾವಣೆಯಲ್ಲಿ ಟಿಕೆಟ್ ನೀಡಲಾಗುತ್ತಿದೆ. ಅತಿ ಹಿಂದುಳಿದ ಸಮುದಾಯಗಳಿಗೆ ಧ್ವನಿ ಇಲ್ಲದಂತಾಗಿದೆ ಎಂದರು.

ಆದಿ ಕಾಯಕಯೋಗಿ ಗುರೂಜಿ, ರಾಘವೇಂದ್ರ ಗುರೂಜಿ, ಷಡಕ್ಷರಿ ಸ್ವಾಮೀಜಿ, ಕೊಟ್ಟೂರೇಶ್ವರ ಶಿವಯೋಗಿಗಳು, ರಾಜು ಗುರು ಸ್ವಾಮೀಜಿ, ಮಹಾದೇವ ಸ್ವಾಮೀಜಿ ಇದ್ದರು.

ನಿಧನ ಸುದ್ದಿ

ಡಾ.ಉಮಾದೇವಿ

ಧಾರವಾಡ: ಇಲ್ಲಿನ ರವೀಂದ್ರ ನಗರದ ನಿವಾಸಿ ಹಾಗೂ ಹುಬ್ಬಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಡಾ.ಉಮಾದೇವಿ ಜಡರಾಮಕುಂಟೆ (54) ಭಾನುವಾರ ನಿಧನರಾದರು. ಇವರಿಗೆ ಕರ್ನಾಟಕ ಕಾಲೇಜಿನ ಪ್ರಾಧ್ಯಾಪಕ ಡಾ.ಬಿ.ಎಸ್.ಭಜಂತ್ರಿ ಪತಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಳಗವಿದೆ.



ಭೂದೇವಿ ಬಿಸಿರೊಟ್ಟಿ

ಕುಂದಗೋಳ: ತಾಲೂಕಿನ ಹಿರೇಗುಂಜಳ ಗ್ರಾಮದ ನಿವೃತ್ತ ಶಿಕ್ಷಕ ಶೇಖರಪ್ಪ ಜಿ.ಬಿಸಿರೊಟ್ಟಿ ಅವರ ಪತ್ನಿ ಭೂದೇವಿ (ಗಿರಿಜವ್ವ) ಬಿಸಿರೊಟ್ಟಿ (49) ಶನಿವಾರ ನಿಧನರಾದರು ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ.





ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನೂತನ ನಿರ್ದೇಶಕರನ್ನಾಗಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕ ಡಾ.ಜಿ.ಎಂ.ಚಂದುನವರ ಅವರನ್ನು ನೇಮಕ ಮಾಡಲಾಗಿದೆ. ಹಿಂದಿನ ನಿರ್ದೇಶಕ ಪ್ರೊ. ಎ.ಎಂ.ಕಡಕೋಳ ಅವರಿಂದ ನಿರ್ದೇಶಕ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡರು.

ಜನಪದ ಸಾಹಿತ್ಯದ ಉಳಿವು ಅಗತ್ಯ

ಧಾರವಾಡ: ಜಾನಪದ ಹಾಡುಗಳು ಬದುಕಿನ ಪಾಠ ಹೇಳಿಕೊಡುವ ಅಮೂಲ್ಯ ಸಾಹಿತ್ಯ. ಇಂತಹ ಜಾಹಿತ್ಯದ ಉಳಿವು ಅಗತ್ಯವಿದೆ ಎಂದು ಕ.ವಿ.ವ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಹೇಳಿದರು.

ನಗರದ ಸಾಹಿತ್ಯ ಭವನದಲ್ಲಿ ತಡಸಿನಕೊಪ್ಪದ ಶ್ರೀ ದ್ಯಾಮವ್ವದೇವಿ ಸಾಂಸ್ಕೃತಿಕ ಮಹಿಳಾ ಸಂಘ ಆಯೋಜಿಸಿದ್ದ ಜಾನಪದ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜನಪದ ಸಾಹಿತ್ಯ ಬದುಕು ತಿದ್ದುತ್ತದೆ ಎಂದರು. ಜನಪದ ಸಾಹಿತ್ಯವನ್ನು ಅವಿದ್ಯಾವಂತರು ಹಾಡು ಕಟ್ಟಿ ಕಾವ್ಯ, ಭಾವಮಯವಾಗಿ ಹಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಜನಪದ ಸಾಹಿತ್ಯವು ಜಗತ್ತಿನ ಎಲ್ಲ ಸಾಹಿತ್ಯದ ತಾಯಿ ಬೇರು ಎಂದರು. ಜನಪದ ನಮ್ಮ ಸಂಸ್ಕೃತಿಯ ಮೂಲ ಬೇರು. ಇದು ದೇಶದ ಗಡಿಯನ್ನು ದಾಟಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆದಿದೆ. ಜನಪದ ಸಾಹಿತ್ಯ ಯಾರ ಸ್ವತ್ತು ಅಲ್ಲ. ಇದು ಜನ ಸಮುದಾಯದ ಸ್ವತ್ತಾಗಿದೆ ಎಂದರು.

ಉಮಾ ಅಗಡಿ ಮಾತನಾಡಿ, ಜಾನಪದ ಕಲಾವಿದರು ಈ ನಾಡಿನ ಜೀವಂತ ಆಸ್ತಿ. ಕಲಾವಿದರ ಬದುಕು ಹಸನಾಗಬೇಕಾಗಿದೆ. ಅವರು ಉತ್ತಮ ಆರೋಗ್ಯ ಹೊಂದಿ, ನಾಡಿನ ಸಾಂಸ್ಕೃತಿಕ ಪರಂಪರೆ ಉಳಿಸಿ, ಬೆಳೆಸಲಿ ಎಂದರು.



ಧಾರವಾಡ: ನಗರದ ಸಾಹಿತ್ಯ ಭವನದಲ್ಲಿ ತಡಸಿನಕೊಪ್ಪದ ಶ್ರೀ ದ್ಯಾಮವ್ವದೇವಿ ಸಾಂಸ್ಕೃತಿಕ ಮಹಿಳಾ ಸಂಘ ಆಯೋಜಿಸಿದ್ದ ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಕ.ವಿ.ವ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಉದ್ಘಾಟಿಸಿದರು. ಸಂಘದ ಅಧ್ಯಕ್ಷೆ ಗಂಗಮ್ಮ ಅಡಿನ ಅಧ್ಯಕ್ಷತೆ ವಹಿಸಿದ್ದರು. ಕಲಾವಿದ ಯಕ್ಕೀರಪ್ಪ ನಡುವಿನಮನಿ, ಕೆ.ಎಸ್.ದುರ್ಗಾದಾಸ್ ಇದ್ದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಜನಪದ ಮತ್ತು ಸಾಂಸ್ಕೃತಿಕ ತಂಡಗಳಿಂದ ಕಲಾ ಪ್ರದರ್ಶನ ನೆರವೇರಿತು.

ಪಾಲಿಕೆ ಸದಸ್ಯರ ರಾಜೀನಾಮೆ ಅಸ್ತ್ರ

ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆಯ ಸತ್ಯಪ್ರತಿಪಾದನೆ ಸತ್ಯಾಗ್ರಹವು ತೀವ್ರಗೊಂಡು, 10ನೇ ದಿನಕ್ಕೆ ಕಾಲಿಟ್ಟಿದೆ. ಭಾನುವಾರ ಪಾಲಿಕೆಯ ಕಾಂಗ್ರೆಸ್ ಸದಸ್ಯರು ರಾಜೀನಾಮೆ ಅಸ್ತ್ರ ಪ್ರಯೋಗಿಸಿ, ರಾಜ್ಯಪಾಲರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಹು-ಧಾ-74ರ ಕ್ಷೇತ್ರದ ಕವಿತಾ ಕಬ್ಬೇರ, ಶಂಭು ಸಾಲಮನಿ, ಡಾ.ಮಯೂರ ಮೋರೆ, ಪರವೀನ ದೇಸಾಯಿ ಗಣೇಶ ಮುಧೋಳ, ಬಿಲಕಿಸಬಾನು ಮುಲ್ಲಾ, ಮಂಜುನಾಥ ಬಡಕುರಿ ಪಕ್ಷದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೌರಿಗೆ ರಾಜೀನಾಮೆ ಸಲ್ಲಿಸಿದರು.

ಗ್ರಾಮೀಣ-71ರ ಕ್ಷೇತ್ರದ ರಾಜಶೇಖರ ಕಮತಿ, ಸೂರವ್ವ ಪಾಟೀಲ, ದಿಲಶಾದಬೇಗಂ ನದಾಫ್, ದೀಪಾ ನೀರಲಕಟ್ಟಿ, ಪ್ರಕಾಶ ಘಾಟಗೆ ಅವರು ಪಕ್ಷದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅರವಿಂದ ಏಗನಗೌಡರ ಕೈಗೆ ರಾಜೀನಾಮೆ ಪತ್ರ ಸಲ್ಲಿಸಿದರು.

ಧಾರವಾಡದ ಸ್ವಾಭಿಮಾನ ಮತ್ತು ಹಿತರಕ್ಷಣೆ ನಮಗೆ ಮುಖ್ಯ. ಪ್ರತ್ಯೇಕ ಪಾಲಿಕೆ ರಚನೆ ಆಗದಿದ್ದರೆ ನಮ್ಮ ಸ್ಥಾನಗಳಿಗೆ ಅರ್ಥವಿಲ್ಲ, ಸರ್ಕಾರದ ಗಮನ ಸೆಳೆಯಲು ಮತ್ತು ಹೋರಾಟದ ಬಿಸಿ ಮುಟ್ಟಿಸಲು ರಾಜೀನಾಮೆ ನೀಡಿದ್ದಾಗಿ ಸರ್ವ ಸದಸ್ಯರು ಹೇಳಿದರು.

ಮುರುಘಾಮಠದ ಮಲ್ಲಿಕಾರ್ಜುನ ಶ್ರೀಗಳು, ಕ್ರಿಶ್ಚಿಯನ್ ಕ್ಯಾಥೋಲಿಕ್ ಸಮಾಜ ಬಾಂಧವರು ಹಾಗೂ ಹೋಲಿ ಕ್ರಾಸ್ ಚರ್ಚ್ ಹೋರಾಟಕ್ಕೆ ಸಂಪೂರ್ಣ ಬೆಂಬಲ ಸೂಚಿಸಿ, ಅಭಿವೃದ್ಧಿ ಮತ್ತು ಆಡಳಿತ ದೃಷ್ಟಿಯಿಂದ ಪ್ರತ್ಯೇಕ ಪಾಲಿಕೆ ರಚಿಸುವಂತೆ ಒತ್ತಾಯಿಸಿದರು. ಪ್ರತ್ಯೇಕ ಪಾಲಿಕೆ ರಚನೆಗೆ ಒಕ್ಕೊರಲಿನ ಒತ್ತಾಯ ಹೇರಲು ಪಾಲಿಕೆ ಸದಸ್ಯರಾದ ದೀಪಾ ನೀರಲಕಟ್ಟಿ ಮತ್ತು ಶಿವಶಂಕರ ಹಂಪಣ್ಣವರ, ಕಾರ್ಯಕರ್ತರು ಅನೇಕ ರೈತರು ತಮ್ಮ ಎತ್ತು, ಚಕ್ಕಡಿಯೊಂದಿಗೆ ಆಗಮಿಸಿ, ಈ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಧಾರವಾಡಕ್ಕೆ ಆಗುವ ಅನ್ಯಾಯ ಖಂಡಿಸಿದರು. ಹುಬ್ಬಳ್ಳಿ-ಧಾರವಾಡ ಒಂದೇ ಪಾಲಿಕೆಯಾಗಿದ್ದರೂ, ಅಭಿವೃದ್ಧಿ ವಿಷಯದಲ್ಲಿ ಧಾರವಾಡಕ್ಕೆ ನಿರಂತರವಾಗಿ ಧೋರಣೆ ತೋರಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಹೋರಾಟ ಸಮಿತಿ ಪ್ರಮುಖರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಧಾರವಾಡದ ಸಾರ್ವಜನಿಕರು ಪ್ರತಿಭಟನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಸರ್ಕಾರ ತಕ್ಷಣವೇ ಎಚ್ಚೆತ್ತುಕೊಂಡು ಪ್ರತ್ಯೇಕ ಪಾಲಿಕೆ ಘೋಷಿಸಬೇಕು ಎಂದು ಆಗ್ರಹಿಸಿದರು.

10ನೇ ದಿನಕ್ಕೆ ಮುಂದುವರಿದ ಪ್ರತ್ಯೇಕ ಪಾಲಿಕೆ ಸತ್ಯಾಗ್ರಹ



ಸದಸ್ಯರ ವಿರುದ್ಧ ವಿನಾಕಾರಣ ಆರೋಪ

ಪ್ರತ್ಯೇಕ ಪಾಲಿಕೆಯ ಹೋರಾಟದಲ್ಲಿ ಭಾಗಿಯಾದ ಕಾಂಗ್ರೆಸ್ ಸದಸ್ಯರ ವಿರುದ್ಧ ಶಾಸಕ ಅರವಿಂದ ಬೆಲ್ಲದ ವಿನಾಕಾರಣ ಆರೋಪ ಮಾಡಿರುವುದು ಸದಸ್ಯರಿಗೆ ನೋವು ತರಿಸಿದೆ. ನಮ್ಮ ಸದಸ್ಯರಿಗೆ ಅಧಿಕಾರ ಮುಖ್ಯವಲ್ಲ, ಪ್ರತ್ಯೇಕ ಪಾಲಿಕೆ ರಚನೆ ಮುಖ್ಯ. ಈ ಕಾರಣಕ್ಕೆ ರಾಜೀನಾಮೆ ನೀಡಿದ್ದು, ಈ ಬಗ್ಗೆ ಸಿಎಂ, ಡಿಸಿಎಂ ಗಮನಕ್ಕೆ ತರುವೆ ಎಂದು ಬ್ಲಾಕ್ ಕಾಂಗ್ರೆಸ್-74 ಅಧ್ಯಕ್ಷ ನಾಗರಾಜ ಗೌರಿ ಹೇಳಿದ್ದಾರೆ.

> ಧಾರವಾಡ ಪ್ರತ್ಯೇಕ ಪಾಲಿಕೆ ಬಹುದಿನಗಳ ಬೇಡಿಕೆ. ಈ ವಿಷಯದಲ್ಲಿ ವಿಳಂಬ ಸರಿಯಲ್ಲ. ಪಕ್ಷಾತೀತವಾಗಿ ನಡೆಯುವ ಈ ಹೋರಾಟಕ್ಕೆ ತಮ್ಮ ಬೆಂಬಲವೂ ಇದೆ. ಶೀಘ್ರವೇ ಪ್ರತ್ಯೇಕ ಪಾಲಿಕೆ ಕಡತಕ್ಕೆ ಅಂಕಿತ ಹಾಕಲು ರಾಜ್ಯಪಾಲರು ಸಹಕರಿಸಲಿ.
> ■ **ಮಲ್ಲಿಕಾರ್ಜುನ ಸ್ವಾಮೀಜಿ**, ಮುರುಘಾಮಠ, ಧಾರವಾಡ

- ಹೋರಾಟಗಾರರ ಸಭೆಯಲ್ಲಿ ಪ್ರಹ್ಲಾದ ಜೋಶಿ ಅವರು, 2 ದಿನದೊಳಗೆ ಸ್ಥಳೀಯ ಶಾಸಕರು, ಪಾಲಿಕೆ ಸದಸ್ಯರನ್ನು ಕರೆದೊಯ್ದು ಕಡತಕ್ಕೆ ರಾಜ್ಯಪಾಲರಿಗೆ ಮನವರಿಕೆ ಮಾಡಿ, ಅಂಕಿತ ಹಾಕಿಸಬೇಕು
- 100 ಜನ ಸತ್ಯಾಗ್ರಹಿಗಳಿಗೆ ರಾಜ್ಯಪಾಲರ ಭೇಟಿಗೆ ಅವಕಾಶ ನೀಡಬೇಕು ಮತ್ತು ಲೋಕಭವನ ದ್ವಾರ ಬಾಗಿಲದ ಬಳಿಯಲ್ಲಿ ರಾಜ್ಯಪಾಲರು ಅನುಮೋದನೆ ನೀಡುವ ಒತ್ತಾಯದ ಪೆಟ್ಟಿಗೆ ಇಡಿ
- ತಕ್ಷಣವೇ ಅನುಮೋದನೆ ನೀಡದಿದ್ದರೆ, ಸಂವಿಧಾನಕ್ಕೆ ಅಪಚಾರ ಎಸಗುವ ರಾಜ್ಯಪಾಲರ ವಿರುದ್ಧ ಗೋ ಬ್ಯಾಕ್ ಚಳವಳಿ ಕೈಗೊಳ್ಳುವ ಮೂರು ಮಹತ್ವದ ನಿರ್ಣಯ ಅಂಗೀಕರಿಸಿದರು

ಗ್ರಾಮೀಣ ಪ್ರತಿಭೆ ಮುಂಚೂಣಿಗೆ ಬರಲಿ

ಅಣ್ಣಿಗೇರಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಂತೆ ನಮೋ ಕಬಡ್ಡಿ (ನರೇಂದ್ರ ಮೋದಿ ಕಬಡ್ಡಿ) ಎನ್ನುವುದು ಬಿಜೆಪಿ ನೇತೃತ್ವದಲ್ಲಿ ಆಯೋಜಿಸಲ್ಪಡುವ ಜನಪ್ರಿಯ ಕಬಡ್ಡಿ ಪಂದ್ಯಾವಳಿಯಾಗಿದೆ. ಗ್ರಾಮೀಣ ಭಾಗದ ಯುವಜನತೆಯನ್ನು ಕ್ರೀಡೆಯತ್ತ ಆಕರ್ಷಿಸಲು ಮತ್ತು ಸಾಂಪ್ರದಾಯಿಕ ಭಾರತೀಯ ಆಟಗಳನ್ನು ಪ್ರೋತ್ಸಾಹಿಸಲು ಈ ಪಂದ್ಯಾವಳಿಯನ್ನು ದೇಶದ ವಿವಿಧ ರಾಜ್ಯಗಳಲ್ಲಿ ಆಯೋಜಿಸಲಾಗುತ್ತದೆ ಎಂದು ಬಿಜೆಪಿ ಮುಖಂಡ ದೇವರಾಜ ಧಾಡಿಬಾವಿ ಹೇಳಿದರು.

ಅವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಲವಡಿ ಮೈದಾನದಲ್ಲಿ ಏರ್ಪಡಿಸಿದ್ದ ನವಲಗುಂದ ವಿಧಾನಸಭಾ ಕ್ಷೇತ್ರದ ದೇವರಾಜ ಧಾಡಿಬಾವಿ ಆರ್ಜಿಸುವ ನಲವಡಿ ಜಿಲ್ಲಾ ಪಂಚಾಯತ್ ಕ್ರಿಕೆಟ್ ಟೂರ್ನಮೆಂಟ್ ನಮೋ ಕಪ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕ್ರಿಕೆಟ್ ಗ್ರಾಮೀಣ ಯುವಕರನ್ನು ತಲುಪಬೇಕು. ಗ್ರಾಮೀಣ ಪ್ರತಿಭೆ ಮುಂಚೂಣಿಯಲ್ಲಿ ಬರಲಿ. ಯುವಕರು ಭಾರತ ದೇಶದ ಬೆನ್ನಲುಬಾಗಿದ್ದು, ಗ್ರಾಮೀಣ ಪ್ರತಿಭೆ ಮುಂಚೂಣಿಯಲ್ಲಿ ಬರಲಿ ಎನ್ನುವ ಉದ್ದೇಶದಿಂದ ಕ್ರಿಕೆಟ್ ಟೂರ್ನಮೆಂಟ್‌ನ ಸದುಪಯೋಗವನ್ನು ನಲವಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಎಲ್ಲ ಗ್ರಾಮೀಣ ಪ್ರದೇಶಗಳ ಕ್ರೀಡಾಪಟುಗಳು ಸದುಪಯೋಗ ಪಡಿಸಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಕ್ರೀಡೆಗಾಗಿ ಕೇಂದ್ರ ಸರ್ಕಾರದಿಂದ ಸಾಕಷ್ಟು ನೆರವು ನೀಡುತ್ತಿದ್ದು, ಯುವಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕು. ಕ್ರೀಡಾಪಟುಗಳು ದುಶ್ಚಟದಿಂದ ದೂರವಿದ್ದು ಬಲಿಷ್ಠವಾದ ಸಾಮರ್ಥ್ಯ ಮತ್ತು ಒಳ್ಳೆಯ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

> ಗ್ರಾಮೀಣ ಕ್ರೀಡಾಪಟುಗಳಿಗೆ ವೇದಿಕೆ ಕಲ್ಪಿಸುವುದು ಹಾಗೂ ಯುವಕರನ್ನು ಸಕ್ರಿಯವಾಗಿ ಸಾಮರಸ್ಯದ ಸೇವೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುವುದು ಕ್ರೀಡೆಯ ಉದ್ದೇಶವಾಗಿದೆ.
> ■ **ಸುರೇಶ ಗಾಣಿಗೇರ್**, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ

ಈ ಸಂದರ್ಭದಲ್ಲಿ ಸುರೇಶ ಗಾಣಿಗೇರ್, ರಘು ಪಾಟೀಲ್, ಬಸವರಾಜ ರಾಮಣ್ಣವರ್, ಎಚ್.ಕೆ. ಪಾಟೀಲ್, ಮಹಾದೇವ ಚುಂಚನೂರ್, ಹನುಮಂತಗೌಡ ರಾಯನಗೌಡ, ಬಸವರಾಜ ರಾಮಣ್ಣವರ, ಬಸವರಾಜ ಯತ್ನಳ್ಳಿ, ಪ್ರತೀಕ್ ಕುಂದಗೋಳ, ಮಂಜುನಾಥ್ ಹಡಪದ, ಆಲೋಕ್ ಕುಲಕರ್ಣಿ ಇದ್ದರು.



ಆದಿತ್ಯ ಆತ್ಮಹತ್ಯೆ | ನ್ಯಾಯಾಂಗ ತನಿಖೆಗೆ ಆಗ್ರಹ

ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ

ಧಾರವಾಡ: ಆದ್ಯತಿ ಮ್ಯಾಗೇರಿ ಆತ್ಮಹತ್ಯೆ ಪ್ರಕರಣ ನಿವೃತ್ತ ನ್ಯಾಯಾಧೀಶರಿಂದ ತನಿಖೆ ಕೈಗೊಂಡು ತಪ್ಪಿತಸ್ಥರಿಗೆ ಶಿಕ್ಷೆಗೆ ಗುರಿಪಡಿಸಬೇಕು ಎಂದು ಲಿಂಗಾಯತ ಸಮಾಜದ ಮುಖಂಡರು ಆಗ್ರಹಿಸಿದ್ದಾರೆ.

ಲಿಂಗಾಯತ ಭವನದಲ್ಲಿ ಲಿಂಗಾಯತ ಸಮಾಜದ ಸಭೆ ನಡೆಸಿದ ಸಮಾಜದ ಮುಖಂಡರು, ಆದಿತ್ಯ ಮ್ಯಾಗೇರಿ ಮೇಲೆ ಸುಳ್ಳು ಗಾಂಜಾ ಪ್ರಕರಣ ದಾಖಲಿಸಿದ ಪೊಲೀಸರ ಕ್ರಮ ತೀವ್ರವಾಗಿ ಖಂಡಿಸಿದ್ದಾರೆ. ಪೊಲೀಸ್ ಆಯುಕ್ತರು ಸಿಬ್ಬಂದಿ ಅಮಾನತ್ತುಗೊಳಿಸಿದರೆ ಸಾಲದು, ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಲು ಸಭೆ ಒತ್ತಾಯಿಸಿದೆ.

ಪಾರದರ್ಶಕವಾಗಿ ತನಿಖೆ ಕೈಗೊಂಡು, ಆತನ ಸಾವಿಗೆ ಕಾರಣವಾದ ಪೊಲೀಸ್ ಅಧಿಕಾರಿಗಳನ್ನೂ ಸಹ ಕರ್ತವ್ಯದಿಂದ ವಜಾಗೊಳಿಸವ ಕಾರ್ಯ ಮಾಡಬೇಕು ಎಂದು ಸಮಾಜದ ಮುಖಂಡರು ಆಗ್ರಹಿಸಿದ್ದಾರೆ. ಆದಿತ್ಯ ಮ್ಯಾಗೇರಿ ಸಾವಿಗೆ ನ್ಯಾಯ ಸಿಗಬೇಕು. ಅವರ ಕುಟುಂಬಕ್ಕೆ ಸೂಕ್ತವಾದ ಪರಿಹಾರ ನೀಡಬೇಕು. ಆತನ ಸಹೋದರಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿದೆ.

ಮುಖಂಡರಾದ ಶಿವಶರಣ ಕಲಬಶೆಟ್ಟರ, ಮಡಿವಾಳಪ್ಪ ಶಿರಿಯಣ್ಣವರ, ವೀರೇಶ ಕೆಲಗೇರಿ, ಮಂಜುನಾಥ ಮೂಗನವರ, ವಿಜಯಲಕ್ಷ್ಮಿ ಕಲ್ಯಾಣಶೆಟ್ಟರ, ನಿರಂಜನ್ ಕ್ವಾಟಿ, ವೀರಯ್ಯ ಚಿಕ್ಕಮಠ, ಶ್ರೀಶೈಲಗೌಡ ಕಮತರ, ಮಂಜುನಾಥ ಸಂಕನವರ ಸೇರಿದಂತೆ ಅನೇಕರು ಇದ್ದರು.



ಶಿಕ್ಷಣದಿಂದ ಸುಸಂಸ್ಕೃತ ಸಮಾಜ ನಿರ್ಮಾಣ



ಧಾರವಾಡ: ಜಗತ್ತಿನಲ್ಲಿ ಯಾರು ಕಳ್ಳತನ ಮಾಡಲಾಗದ ವಸ್ತು ಅಂದರೆ ಶಿಕ್ಷಣ. ಹೀಗಾಗಿ ಪ್ರತಿಯೊಬ್ಬ ವ್ಯಕ್ತಿಯೂ ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯಬೇಕು ಎಂದು ಗದಗ ಜಿಲ್ಲೆಯ ಹರ್ಲಾಪುರದ ಅಭಿನವ ಡಾ. ಕೊಟ್ಟರೇಶ್ವರ ಸ್ವಾಮೀಜಿ ಹೇಳಿದರು.

ನಗರದ ಹೊರವಲಯದ ಗರಗ ರಸ್ತೆಯಲ್ಲಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಭಾನುವಾರ ನಡೆದ ಪ್ರಥಮ ಪಾಠ ಕಾರ್ಯಕ್ರಮದಲ್ಲಿ ಮಾತನಾಡಿ, ಹೊಲ, ಮನೆ, ಸಂಪತ್ತು ಕಳ್ಳತನ ಮಾಡಬಹುದು. ಶಿಕ್ಷಣ ಕಳವು ಮಾಡುವುದು ಅಸಾಧ್ಯ ಎಂದು ಹೇಳಿದರು.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಾರ್ಯದರ್ಶಿ ರಾಘವೇಂದ್ರ ಅಂಬೇಕರ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯೆ ಪ್ರಕಾಶ ಎಸ್., ಅನಿತಾ ರೈ, ಕೃಷ್ಣ ಜೋಶಿ, ಗುರುರಾಜ ಅಗಡಿ, ರಾಮಕೃಷ್ಣ ಆರ್. ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು. ದೀಪಾ ಕುಲಕರ್ಣಿ ಸ್ವಾಗತಿಸಿದರು. ಪ್ರೇಮಾ ಎಸ್. ನಿರೂಪಿಸಿದರು. ಗಿರಿಜಾ ಜಿ. ವಂದಿಸಿದರು.

> **ಮಕ್ಕಳನ್ನೇ ಸಂಪತ್ತನ್ನಾಗಿಸಿ**
> ಪಾಲಕರು ಸಂಪತ್ತು ಗಳಿಕೆಗೆ ಆದ್ಯತೆ ನೀಡಿದೆ, ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ನೀಡುವ ಮೂಲಕ ಅವರನ್ನೇ ಸಂಪತ್ತಾಗಿ ಬೆಳೆಸಬೇಕು. ಅಂದಾಗಲೇ ಸುಸಂಸ್ಕೃತ ಸಮಾಜ ನಿರ್ಮಿಸಲು ಸಾಧ್ಯವಿದೆ ಎಂದು ಹರ್ಲಾಪುರದ ಅಭಿನವ ಡಾ. ಕೊಟ್ಟರೇಶ್ವರ ಸ್ವಾಮೀಜಿ ಹೇಳಿದರು.

ಶ್ರೇಷ್ಠ ಕಲಾವಿದ ಅಡವಯ್ಯಸ್ವಾಮಿ

ಕಲಘಟಗಿ: ಅಡವಯ್ಯಸ್ವಾಮಿ ಅವರು ದೊಡ್ಡಾಟ ಕಲಾಪ್ರಕಾರದ ಶ್ರೇಷ್ಠ ಕಲಾವಿದರಾಗಿದ್ದರು. ಅವರಿಂದ ಎಷ್ಟೋ ಜನ ಶಿಷ್ಯರು ದೊಡ್ಡಾಟದ ಪರಂಪರೆ ಮುಂದೆ ಕೊಂಡೊಯ್ಯುತ್ತಿದ್ದಾರೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಲಾವಿದ ಶಿವಣ್ಣ ಆದರಗುಂಚಿ ಹೇಳಿದರು.

ಅವರು ಪಟ್ಟಣದ ಹನ್ನೆರಡು ಮಠದಲ್ಲಿ ಆಯೋಜಿಸಲಾಗಿದ್ದ ದೊಡ್ಡಾಟ ಕಲಾವಿದರಾದ ಅಡವಯ್ಯಸ್ವಾಮಿ ಹಿರೇಮಠ ಅವರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿ, ಅಡವಯ್ಯಸ್ವಾಮಿ ಅವರು ಎಂದೂ ಪ್ರಶಸ್ತಿ ಹಿಂದೆ ಹೋಗಿದ್ದಿಲ್ಲ, ಅವರ ಪ್ರತಿಭೆಗೆ ಪ್ರಶಸ್ತಿಗಳು ಸಂದಿವೆ. ಕಲಾವಿದರ ಸೇವೆ ನೆನೆಯಲು ನುಡಿನಮನ ಕಾರ್ಯಕ್ರಮ ಮಾಡಿದ್ದು ಸ್ತುತ್ಯಾರ್ಹ ಎಂದರು.

ಜನಪದ ವಿದ್ವಾಂಸ ಎಂ.ಆರ್. ತೋಟಗಂಟಿ ಮಾತನಾಡಿ, ದೊಡ್ಡಾಟ ಹಿರಿಮೆಯನ್ನು ರಾಜ್ಯದಾದ್ಯಂತ ಪಸರಿಸಿದ ಶ್ರೇಯ ಅಡವಯ್ಯಸ್ವಾಮಿ ಅವರದು, ಬಡತನದಲ್ಲೇ ಕಲಾವಿದ ಕಷ್ಟಪಟ್ಟು ಕಲೆಗೆ ತನ್ನ ಬಾಳನ್ನು ಸಮರ್ಪಣೆ ಮಾಡಿದ್ದಕ್ಕೆ ಇದೊಂದು ಉದಾಹರಣೆ. ಮುಂದಿನ ಪೀಳಿಗೆ ಅಡವಯ್ಯಸ್ವಾಮಿ ಅಂತಹ ಶ್ರೇಷ್ಠ ಕಲಾವಿದರ ಬಗ್ಗೆ, ದೊಡ್ಡಾಟದ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ ಎಂದರು.

ರಂಗಭೂಮಿ ಹಿರಿಯ ಕಲಾವಿದ ಬಸವರಾಜ ದೊಡಮನಿ ಪ್ರಾಸ್ತಾವಿಕವಾಗಿ ಮಾತನಾಡಿ, ದೊಡ್ಡಾಟ ಕಲಾ ಪ್ರಕಾರಕ್ಕೆ ಅಡವಯ್ಯಸ್ವಾಮಿ ಆಲದಮರದಂತೆ ಇದ್ದರು. ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಹಲವಾರು ದೊಡ್ಡಾಟಗಳನ್ನು ಆಡಿಸಿದ ಅವರನ್ನು ಕಳೆದುಕೊಂಡು ಇಂದು ಕಲಾ ಪರಂಪರೆಗೆ ತುಂಬಾ ನಷ್ಟವಾಗಿದೆ. ತಾಲೂಕಿನ ಕಲಾವಿದರು ಹಿರಿಯರ ಮಾರ್ಗದರ್ಶನದಂತೆ ಕಲಾ ಸೇವೆ ಮಾಡೋಣ ಎಂದರು.

ಹಿರಿಯರಾದ ಎಚ್.ಎನ್. ಸುಣಗದ, ವೈ.ಜಿ. ಭಗವತಿ, ಅಶೋಕಕುಮಾರ್ ಅರ್ಕಸಾಲಿ, ಗಂಗಯ್ಯ ಹಿರೇಮಠ, ವೈ.ಡಿ. ಸುಳ್ಳದ, ಕುಬೇರಗೌಡ ಮುರಳ್ಳಿ ಅವರು ಅಡವಯ್ಯಸ್ವಾಮಿ ಅವರಿಗೆ ನುಡಿನಮನ ಸಲ್ಲಿಸಿದರು. ಹನ್ನೆರಡು ಮಠದ ರೇವಣಸಿದ್ಧ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಬಸವರಾಜ ತಿಪ್ಪಣ್ಣವರ ನಿರೂಪಿಸಿದರು. ಸೋಮಲಿಂಗ ಒಡೆಯರ, ಗಿರೀಶ ರೆಡ್ಡಿ, ವೀರಣ್ಣ ಕುಬಸದ, ಸಾತಪ್ಪ ಕುಂಕೂರ, ನಾಗೇಶ್ ಗೌಳಿ ಸೇರಿದಂತೆ ಅಡವಯ್ಯಸ್ವಾಮಿ ಹಿರೇಮಠ ಕುಟುಂಬಸ್ಥರು ಉಪಸ್ಥಿತರಿದ್ದರು.



ಚೆಸ್ ಬುದ್ಧಿಶಕ್ತಿಯ ಆಟ: ನಿತಿನ್ ಟಗರಪುರ

ಧಾರವಾಡ: ಚೆಸ್ ಬುದ್ಧಿಶಕ್ತಿಯ ಆಟ. ಈ ಕ್ರೀಡೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಏರ್ಪಡಿಸಿದ ಮುಕ್ತ ರ‍್ಯಾಪಿಡ್ ಪಂದ್ಯಾವಳಿ ಅವಳಿನಗರದ ಕ್ರೀಡಾ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲಾಗಿದೆ ಎಂದು ಕಾಸ್ಮಸ್ ಕ್ಲಬ್‌ನ ಅಧ್ಯಕ್ಷ ನಿತಿನ್ ಟಗರಪುರ ಹೇಳಿದರು.

ಕಾಸ್ಮಸ್ ಕ್ಲಬ್ ಹಾಗೂ ಅಭಿಜಿತ್ ಬೆಂಗೇರಿ ಫೌಂಡೇಶನ್ ನಗರದ ಕೋರ್ಟ್ ಸರ್ಕಲ್ ಹತ್ತಿರದ ಕಾಸ್ಮಸ್ ಕ್ಲಬ್ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬೃಹತ್ ಮುಕ್ತ ರ‍್ಯಾಪಿಡ್ ಚೆಸ್ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ರಾಜ್ಯ ಚೆಸ್ ಅಸೋಸಿಯೇಷನ್, ಧಾರವಾಡ ಜಿಲ್ಲಾ ಚೆಸ್ ಅಸೋಸಿಯೇಷನ್ ಮಾನ್ಯತೆಯಡಿ ಸ್ಥಳೀಯ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಲು ಮತ್ತು ಕ್ರೀಡಾ ಸಂಸ್ಕೃತಿ ಬೆಳೆಸುವುದು ಕ್ಲಬ್‌ನ ಉದ್ದೇಶವಾಗಿದೆ ಎಂದರು.

ರಾಜ್ಯದ 152ಕ್ಕೂ ಹೆಚ್ಚು ಚೆಸ್ ಪ್ರತಿಭೆಗಳು ಹಾಗೂ ವೃತ್ತಿಪರರು ಭಾಗವಹಿಸಿ ತಮ್ಮ ಚತುರತೆ ಪ್ರದರ್ಶಿಸಿದರು. ಕೇವಲ ಯುವಕರು ಮಾತ್ರವಲ್ಲ, 70 ರಿಂದ 80 ವರ್ಷದ ಹಿರಿಯರು ಉತ್ಸಾಹದಿಂದ ಪಾಲ್ಗೊಂಡು ಯುವ ಪ್ರತಿಭೆಗೆ ಕಠಿಣ ಸವಾಲೊಡ್ಡಿದರು.

ಸಮಾರಂಭದಲ್ಲಿ ಕಾಸ್ಮಸ್ ಕ್ಲಬ್ ಉಪಾಧ್ಯಕ್ಷ ಎಚ್.ಎಫ್. ಹೆಬ್ಬಾಳ, ಕಾರ್ಯದರ್ಶಿ ಅಶೋಕ ಹಿರೇಮಠ, ಅಭಿಜಿತ್ ಬೆಂಗೇರಿ, ಎಂ.ಎಸ್. ಹಾಲಭಾವಿ, ಎ.ಸಿ.ಪುರದ, ಅಜಯ ಗುಡ್ಡದಮಠ, ವಿಜಯ ಸುಣಗಾರ, ಪರಮೇಶ್ವರ ತೇಗೂರ ಅನೇಕರು ಇದ್ದರು.

ಅಲ್ಪಸಂಖ್ಯಾತರ ಓಲೈಕೆ ಸಲ್ಲ

ಹುಬ್ಬಳ್ಳಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂದು ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಆರೋಪಿಸಿದರು.



ಹುಬ್ಬಳ್ಳಿಯ ಹಳೆ ಹುಬ್ಬಳ್ಳಿ ಘಟನೆ ಡಿಜೆ ಹಳ್ಳಿ ಕೇಜಿ ಹಳ್ಳಿ ಇತ್ತೀಚೆಗೆ ಆಳಂದ್ ಕೋಮುಗಲಭೆ ಕೇಸ್‌ನಲ್ಲಿ 53 ಸಮಾಜಘಾತಕ ಶಕ್ತಿಗಳ ವಿರುದ್ಧ ದಾಖಲಾದ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲು ಯೋಚಿಸಿದ್ದು ನೋಡಿದರೆ ಈ ಸರ್ಕಾರ ಸಂಪೂರ್ಣ ಓಲೈಕೆಯಲ್ಲಿ ತೊಡಗಿದೆ. ಇಂತಹ ಸಮಾಜಘಾತುಕ ಶಕ್ತಿಗಳನ್ನು ಹತ್ತಿಕುವುದನ್ನು ಬಿಟ್ಟು ಅವರಿಗೆ ಬೆಂಬಲವಾಗಿ ನಿಂತಿರುವುದು ಸರಿಯಲ್ಲ ಎಂದು ದೂರಿದ್ದಾರೆ.

ಈ ಹಿಂದೆ ವಿಧಾನಸಭಾ ಅಧಿವೇಶನದಲ್ಲಿ ಸದನದಲ್ಲಿ ಹುಬಳ್ಳಿಯಲ್ಲಿ ನಡೆದ ಗಲಭೆ ವಿಚಾರವಾಗಿ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವುದು ಬೇಡ ಎಂದು ಹೇಳಿದ್ದೆ. ಆದರೂ ಸಹ ಪ್ರಕರಣವನ್ನು ಹಿಂದಕ್ಕೆ ತೆಗೆದುಕೊಂಡು ಈಗಾಗಲೇ ನ್ಯಾಯಾಲಯವು ತಡೆಯಜ್ಞೆ ನೀಡಿ ಛೀಮಾರಿ ಹಾಕಿದೆ. ಕಾಂಗ್ರೆಸ್ ಸರ್ಕಾರದ ನಡೆಯನ್ನು ಬಿಜೆಪಿ ತೀವ್ರವಾಗಿ ವಿರೋಧಿಸಿದ್ದು ತಕ್ಷಣ ಸರ್ಕಾರ ತನ್ನ ನಿಲುವನ್ನು ಬದಲಿಸಬೇಕು ಎಂದಿದ್ದಾರೆ.

ಪಕ್ಷ ಸಂಘಟನೆ ಬಗ್ಗೆ ಚರ್ಚೆ ಅಧ್ಯಕ್ಷ ನಿತಿನ್ ನಬಿನ್ ಭೇಟಿಯಾದ ಟೆಂಗಿನಕಾಯಿ

ಹುಬ್ಬಳ್ಳಿ: ಬೆಂಗಳೂರು ಭಾರತೀಯ ಜನತಾ ಪಾರ್ಟಿ ಸಭೆಯಲ್ಲಿಂದು ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಭೇಟಿಯಾಗಿ ಸನ್ಮಾನಿಸಿ ಪಕ್ಷದ ಸಂಘಟನೆ ಹಾಗೂ ಕುಶಲೋಪಹಾರಿ ಕುರಿತು ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕುಂದಗೋಳ ಕ್ಷೇತ್ರದ ಶಾಸಕ ಎಂ.ಆರ್.ಪಾಟೀಲ್ ಮತ್ತಿತರರಿದ್ದರು.



ಸಿದ್ಧಾರೂಢ ಮಠಕ್ಕೆ ಭೇಟಿ



ಹುಬ್ಬಳ್ಳಿ: ರಾಜ್ಯ ಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಎ.ಬಿ.ಎಸ್.ಎಸ್.ಕೆ ಪ್ರಧಾನ ಕಾರ್ಯದರ್ಶಿ ಶಾಮ್ ಕಬಾಡೆ, ರಾಜ್ಯ ಎಸ್.ಎಸ್.ಕೆ.ಸಮಾಜದ ಅಧ್ಯಕ್ಷ ಶಶಿಕುಮಾರ ಮೆಹರವಾಡ, ಹುಬ್ಬಳ್ಳಿ ಧಾರವಾಡ ಕೇಂದ್ರ ಪಂಚಾಯತ್ ಅಧ್ಯಕ್ಷ ಸತೀಶ ಮೆಹರವಾಡೆ ಇವರುಗಳು ಇಲ್ಲಿನ ಸಿದ್ಧಾರೂಢ ಮಠಕ್ಕೆ ಭೇಟಿ ಕೊಟ್ಟು ಉಭಯ ಶ್ರೀಗಳ ದರ್ಶನ ಆಶೀರ್ವಾದ ಪಡೆದುಕೊಂಡರು.

ಈ ಸಂದರ್ಭದಲ್ಲಿ ಗಣ್ಯರನ್ನು ಶ್ರೀಮಠದ ವತಿಯಿಂದ ಫಲಪುಷ್ಪ ನೀಡಿ ಸನ್ಮಾನಿಸಲಾಯಿತು. ಟ್ರಸ್ಟ್ ಕಮಿಟಿಯ ಚೇರ್ಮನ್ ಬಾಳು ಟಿ. ಮಗಜಿಕೊಂಡಿ, ಧರ್ಮದರ್ಶಿ ಡಾ. ಗೋವಿಂದ ಗು. ಮಣ್ಣೂರ, ಭಕ್ತರಾದ ಹಾಗೂ ಶ್ರೀಮಠದ ಸಿಬ್ಬಂದಿ ಮತ್ತು ಭಕ್ತರು ಉಪಸ್ಥಿತರಿದ್ದರು.

ಡಿಜಿಟಲ್ ವಂಚನೆ: ಆರೋಪಿಗಳ ಬಂಧನ

ಬೆಂಗಳೂರು: ರಾಜ್ಯ ಸೈಬರ್ ಕ್ರೈಂ ಇತಿಹಾಸದಲ್ಲೇ ಬೃಹತ್ ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣವೊಂದು ಬೆಳಕಿಗೆ ಬಂದಿದೆ. ನಿವೃತ್ತ ಶಿಕ್ಷಕಿಯೊಬ್ಬರನ್ನು ನಕಲಿ ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಬರೋಬ್ಬರಿ 5 ತಿಂಗಳ ಕಾಲ ಮಾನಸಿಕ ಬಂಧನದಲ್ಲಿಟ್ಟು, ಹಂತ ಹಂತವಾಗಿ 24 ಕೋಟಿ ರೂ.ಗಳನ್ನು ದೋಚಿದ್ದ ಅಂತಾರಾಜ್ಯ ಖದೀಮರ ಜಾಲವನ್ನು ಬೆಂಗಳೂರು ಸಿಸಿಬಿ ಸೈಬರ್ ಕ್ರೈಂ ಪೊಲೀಸರು ಭೇದಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮೂಲದ ಎನ್.ಶಿವಗ್ನಾನಂ, ಮುಂಬೈನ ಅಕ್ಷಿತ್ ಮಲ್ಲಿಕ್, ಗುಜರಾತ್‌ನ ಪಲಕ್ ಭಾಯಿ ಪಟೇಲ್, ಅಮಿತ್ ನರೇಂದ್ರ ಪಟೇಲ್, ದಿಲ್ಲಿಯ ಓಂ ಪ್ರಕಾಶ್ ರಾಜ್‌ಪುತ್ ಹಾಗೂ ಬಿಹಾರದ ಗೌರವ್ ಕುಮಾರ್‌ನನ್ನು ಪೊಲೀಸರು ಬಂಧಿಸಿದ್ದು, ವಂಚಕರು ಬಳಸಿದ್ದ 22 ಬ್ಯಾಂಕ್ ಖಾತೆಗಳಲ್ಲಿದ್ದ 3 ಕೋಟಿ ರೂ.ಗಳನ್ನು ಫ್ರೀಜ್ ಮಾಡಿದ್ದಾರೆ.

ಆಸ್ತಿ ಮಾರಿದ ಹಣದ ಮೇಲೆ ಕಣ್ಣು: ಶಿವಾಜಿನಗರದ ಎಚ್‌ವಿಎಸ್ ಅಪಾರ್ಟ್‌ಮೆಂಟ್ ನಿವಾಸಿ ಲಕ್ಷ್ಮೀ ರಾಮಮೂರ್ತಿ ವಂಚನೆಗೊಳಗಾದ ವೃದ್ಧೆ. ಇವರು ಈ ಹಿಂದೆ ದುಬೈನಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಬೆಂಗಳೂರು ಮತ್ತು ಮುಂಬೈನಲ್ಲಿ ತಮಗಿದ್ದ ಆಸ್ತಿಗಳನ್ನು ಮಾರಾಟ ಮಾಡಿದ್ದ ಅವರು, ಬಂದ ಕೋಟ್ಯಾಂತರ ರೂಪಾಯಿ ಹಣದೊಂದಿಗೆ ಅಮೆರಿಕದಲ್ಲಿರುವ ತಮ್ಮ ಮಕ್ಕಳ ಬಳಿ ಹೋಗಿ ನೆಲೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಆದರೆ, ವೃದ್ಧೆಯ ಬ್ಯಾಂಕ್ ವಹಿವಾಟಿನ ದೊಡ್ಡ ಮೊತ್ತದ ಮಾಹಿತಿ



ತಿಳಿದುಕೊಂಡ ಸೈಬರ್ ದರೋಡೆಕೋರರು ಕಳೆದ ಜನವರಿಯಲ್ಲಿ ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಅವರಿಗೆ ವಿಡಿಯೋ ಕಾಲ್ ಮಾಡಿದ್ದರು.

ನಿಮ್ಮ ಬ್ಯಾಂಕ್ ಖಾತೆಯ ಹಣ ಅಕ್ರಮವಾಗಿ ವರ್ಗಾವಣೆಯಾಗಿದೆ, ನೀವು ಮನಿ ಲ್ಯಾಂಡರಿಂಗ್ ದಂಧೆಯಲ್ಲಿ ಭಾಗಿಯಾಗಿದ್ದೀರಿ ಎಂದು ಹೆದರಿಸಿದ್ದರು. ಅಲ್ಲದೇ ಕಾನೂನುಕ್ರಮದ ಭಯ ಹುಟ್ಟಿಸಿ ವೃದ್ಧೆಯನ್ನು ಡಿಜಿಟಲ್ ಅರೆಸ್ಟ್ ಮಾಡಿದ್ದರು. ಯಾರೊಂದಿಗೂ ವಿಷಯ ಹಂಚಿಕೊಳ್ಳದಂತೆ ತಾಕೀತು ಮಾಡಿ, ಹಣವನ್ನು ವೆರಿಫಿಕೇಶನ್ ಮಾಡಬೇಕು, ಆಮೇಲೆ ವಾಪಸ್ ಕೊಡುತ್ತೇವೆ ಎಂದು ನಂಬಿಸಿ ಆರ್‌ಟಿಜಿಎಸ್ ಮೂಲಕ ಹಂತ ಹಂತವಾಗಿ 24 ಕೋಟಿ ರೂ.ಅನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದರು.

ರಕ್ಷಣೆಗೆ ಬಂದ ಬ್ಯಾಂಕ್ ಮ್ಯಾನೇಜರ್: ಬರೋಬ್ಬರಿ 24 ಕೋಟಿ ರೂ. ದೋಚಿದರೂ ವಂಚಕರ ದುರಾಸೆ ತೀರಿರಲಿಲ್ಲ. ಮತ್ತಷ್ಟು ಹಣಕ್ಕಾಗಿ ಅವರು ವೃದ್ಧೆಗೆ ಬೆದರಿಕೆ ಹಾಕುತ್ತಲೇ ಇದ್ದರು. ಕೊನೆಗೆ ವಿಧಿಯಿಲ್ಲದೆ ಲಕ್ಷ್ಮೀ ಅವರು ತಮ್ಮ ಮನೆಯಲ್ಲಿದ್ದ ಸುಮಾರು 1.300 ಕೆ.ಜಿ. ಚಿನ್ನದ ಒಡವೆಗಳನ್ನು ತೆಗೆದುಕೊಂಡು ಕಂಟೋನ್ಮೆಂಟ್ ಬ್ರಾಂಚ್‌ನ ಐಸಿಐಸಿಐ ಬ್ಯಾಂಕ್‌ಗೆ ಅಡಮಾನ ಇಡಲು ಬಂದಿದ್ದರು. ವೃದ್ಧೆಯೊಬ್ಬರು ಇಷ್ಟೊಂದು ಭಾರಿ ಪ್ರಮಾಣದ ಚಿನ್ನದೊಂದಿಗೆ ಒಂಟಿಯಾಗಿ ಗಾಬರಿಯಿಂದ ಬಂದಿದ್ದನ್ನು ಗಮನಿಸಿದ ಬ್ಯಾಂಕ್ ಮ್ಯಾನೇಜರ್‌ಗೆ ತಕ್ಷಣವೇ ಅನುಮಾನ ಬಂದಿದೆ. ಸಮಯಪ್ರಜ್ಞೆ ಮೆರೆದು ತಡಮಾಡದೆ ಸಿಸಿಬಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಧಾವಿಸಿದ ಸಿಸಿಬಿ ಸೈಬರ್ ಪೊಲೀಸರು ವೃದ್ಧೆಯನ್ನು ವಿಚಾರಣೆಗೆ ಒಳಪಡಿಸಿದಾಗ, ಮೊದಲಿಗೆ ಸೈಬರ್ ಖದೀಮರ ಹೆದರಿಕೆಯಿಂದಾಗಿ ಬಾಯಿ ಬಿಡಲು ಸಿದ್ಧರಿರಲಿಲ್ಲ, ನಂತರ ಪೊಲೀಸರು ಆಪ್ತವಾಗಿ ಕೌನ್ಸೆಲಿಂಗ್ ನಡೆಸಿ ವಿಚಾರಿಸಿದಾಗ, ತಾವು ಕಳೆದ ಜನವರಿಯಿಂದ ಅನುಭವಿಸುತ್ತಿದ್ದ ನರಕಯಾತನೆ ಮತ್ತು ಡಿಜಿಟಲ್ ಅರೆಸ್ಟ್ ಕಥೆಯನ್ನು ವಿವರಿಸಿದ್ದಾರೆ.

ಖಾತೆಗಳು ಫ್ರೀಜ್, ತನಿಖೆ ಚುರುಕು: ವೃದ್ಧೆಯಿಂದ ತಕ್ಷಣವೇ ದೂರು ಪಡೆದ ಸಿಸಿಬಿ ಪೊಲೀಸರ ತಂಡ ದೇಶದ ವಿವಿಧೆಡೆ ಕಾರ್ಯಾಚರಣೆ ನಡೆಸಿ ಐವರು ಆರೋಪಿಗಳನ್ನು ಬೇಟೆಯಾಡಿದೆ. ಇತ್ತ ವೃದ್ಧೆಯ ಅಮೆರಿಕದಲ್ಲಿರುವ ಮಕ್ಕಳಿಗೆ ಸುದ್ದಿ ಮುಟ್ಟಿಸಲಾಗಿದೆ. ಸದ್ಯಕ್ಕೆ 3 ಕೋಟಿ ರೂ. ಗಳನ್ನು ಪೊಲೀಸರು ಫ್ರೀಜ್ ಮಾಡಿದ್ದು, ಉಳಿದ ಹಣದ ರಿಕವರಿಗಾಗಿ ತನಿಖೆ ಮುಂದುವರಿಸಿದ್ದಾರೆ.

ಸಮುದ್ರದ ಅಲೆಗಳ ಅಬ್ಬರ



ಬೇಸಿಗೆ ರಜೆ ಹಿನ್ನೆಲೆಯಲ್ಲಿ ಮಂಗಳೂರು ಬಳಿಯ ಪಣಂಬೂರಿನ ಸಮುದ್ರದ ದಡದಲ್ಲಿ ಭಾನುವಾರ ಪ್ರವಾಸಿಗರು ಸಮುದ್ರದ ಅಲೆಗಳನ್ನು ಕಂಡು ಪುಳಕಿತರಾದರು.

ಕಿರುಸುದ್ದಿ

ವಂಚನೆ: ಹೆಚ್ಚಿನ ಲಾಭ ಪಡೆದವರಿಗೂ ಆತಂಕ

ಬೆಳಗಾವಿ: ಬಹುಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳ ತನಿಖೆ ಮತ್ತಷ್ಟು ಚುರುಕುಗೊಂಡಿದೆ. ಶಿವಾನಂದ ನೀಲಣ್ಣವರ ಮಾಲೀಕತ್ವದ ಶಿವಂ ಅಸೋಸಿಯೇಟ್ಸ್ ಸಂಸ್ಥೆಯಲ್ಲಿ ಸುಮಾರು 35,000 ಜನರು ಹೂಡಿಕೆ ಮಾಡಿದ್ದರು. ಇದೀಗ ಹಣ ಸಂದಾಯದ ಪರಿಶೀಲನೆ ನಡೆಯುತ್ತಿದ್ದು, ಹೂಡಿಕೆಗಿಂತ ಹೆಚ್ಚಿನ ಲಾಭ ಪಡೆದವರಿಗೂ ಇದೀಗ ಆತಂಕ ಪ್ರಾರಂಭವಾಗಿದೆ. ಆರಂಭಿಕ ಹಂತದಲ್ಲಿ, ಹೂಡಿಕೆ ಮಾಡಿದ ಹಲವರು ತಮ್ಮ ಮೂಲ ಹೂಡಿಕೆಗಿಂತ ದುಪ್ಪಟ್ಟು ಲಾಭ ಪಡೆದಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. 50 ಲಕ್ಷ ಹೂಡಿಕೆ ಮಾಡಿದವರು 1 ಕೋಟಿವರೆಗೂ ಲಾಭಾಂಶ ಪಡೆದಿದ್ದಾರೆ. ಸಿಐಡಿ ಡಿಐಜಿ ಭೀಮಶಂಕರ್ ಗುಳೇದ ಮಾರ್ಗದರ್ಶನದಲ್ಲಿ ತನಿಖೆ ನಡೆಸುತ್ತಿರುವ ಸಿಐಡಿ ತಂಡ, ಈ ಹೆಚ್ಚಿನ ಲಾಭ ಪಡೆದ ಹೂಡಿಕೆದಾರರನ್ನು ಪತ್ತೆ ಹಚ್ಚಿ ಅವರಿಂದ ಹೆಚ್ಚುವರಿ ಹಣವನ್ನು ವಾಪಸ್ ಪಡೆಯುವ ಪ್ರಕ್ರಿಯೆ ಆರಂಭಿಸಿದೆ. ಇದರಿಂದ ವಂಚನೆಗೊಳಗಾದ ಉಳಿದ ಹೂಡಿಕೆದಾರರಿಗೆ ನ್ಯಾಯ ಒದಗಿಸುವುದು ಸಿಐಡಿ ಉದ್ದೇಶವಾಗಿದೆ. ಒಟ್ಟಾರೆಯಾಗಿ ಬಹುಕೋಟಿ ವಂಚನೆಯ ಪ್ರಕರಣದ ತನಿಖೆಯಿಂದ ಇನ್ನು ಯಾವೆಲ್ಲ ಮಾಹಿತಿಗಳು ಹೊರ ಬರಲಿವೆ ಎಂದು ಈ ಪ್ರಕರಣವು ಕುತೂಹಲ ಮೂಡಿಸಿದೆ.

600 ಚೀಲ ಯೂರಿಯಾ ವಶ

ಮೈಸೂರು: ವ್ಯಕ್ತಿಯೊಬ್ಬರ ತೋಟವೊಂದರ ಮೇಲೆ ದಾಳಿ ನಡೆಸಿದ ಕೃಷಿ ಇಲಾಖೆ ಅಧಿಕಾರಿಗಳು, ಅಲ್ಲಿ ಅಕ್ರಮವಾಗಿ ದಾಸ್ತಾನು 600 ಚೀಲ ಯೂರಿಯಾ ರಸಗೊಬ್ಬರವನ್ನು ವಶಪಡಿಸಿಕೊಂಡಿರುವ ಘಟನೆ ಜಿಲ್ಲೆಯ ತಿ.ನರಸೀಪುರ ತಾಲೂಕಿನ ಬನ್ನೂರು ಹೋಬಳಿಯ ಕೊಡಗಹಳ್ಳಿ ಗ್ರಾಮದಲ್ಲಿ ನಡೆದಿದೆ. ಇದಾಯತ್ ಉಲ್ಲಾ ಎಂಬುವರು ತಮ್ಮ ತೋಟದಲ್ಲಿ ಕೃಷಿ ಬಳಕೆಗೆಂದು ಮೀಸಲಿಟ್ಟಿದ್ದ ಅಪಾರ ಪ್ರಮಾಣದ ಯೂರಿಯಾವನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದಾರೆ. ಕಾಳಸಂತೆಯಲ್ಲಿ ಕೈಗಾರಿಕೆ ಬಳಕೆಗೆ ಮಾರಲೆಂದು ಸಂಗ್ರಹಿಸಿಟ್ಟಿದ್ದಾರೆಂಬ ಖಚಿತ ಮಾಹಿತಿ ಮೇಲೆ ತಿ. ನರಸೀಪುರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ರೂಪಾ ನೇತೃತ್ವದ ತಂಡವು ದಾಳಿ ನಡೆಸಿ, ಅಕ್ರಮವಾಗಿ ದಾಸ್ತಾನು ಮಾಡಿದ್ದ ಯೂರಿಯಾ ವಶಕ್ಕೆ ಪಡೆಯಿತು. ಈ ಬಗ್ಗೆ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬನ್ನೂರು ಹೋಬಳಿ ಕೃಷಿ ಅಧಿಕಾರಿ ವಿಶಾಲು, ಉಪ ಕೃಷಿ ನಿರ್ದೇಶಕ ರಾಜು, ಚಾರಿದಳ ಜಂಟಿ ಕೃಷಿ ನಿರ್ದೇಶಕ ರಾಮಕೃಷ್ಣ, ಉಪ ಕೃಷಿ ನಿರ್ದೇಶಕಿ ಮಮತಾ, ಸಹಾಯಕ ಕೃಷಿ ನಿರ್ದೇಶಕ ಸತೀಶ್, ಸಹಾಯಕ ತಂತ್ರಿಕ ವ್ಯವಸ್ಥಾಪಕ ಶಿವರಾಮು ದಾಳಿಯಲ್ಲಿ ಪಾಲ್ಗೊಂಡಿದ್ದರು.

ಕಚೇರಿಯಲ್ಲಿ ಮದ್ಯ ಪಾರ್ಟಿ: ಮೂವರ ಅಮಾನತು

ರಾಯಚೂರು: ಜಿಲ್ಲೆಯ ಲಿಂಗಸುಗೂರು ಸರ್ಕಾರಿ ಕಚೇರಿಯಲ್ಲಿ ಗುಂಡು, ತುಂಡು ಪಾರ್ಟಿ ಮಾಡಿದ್ದ ಲಿಂಗಸುಗೂರಿನ ಆರ್‌ಡಿಪಿಆರ್ ಇಲಾಖೆಯ ಎಇಇ ಸೇರಿ ಮೂವರನ್ನು ಅಮಾನತು ಮಾಡಲಾಗಿದೆ. ಎಇಇ ಹನುಮಂತಪ್ಪ ಅದವಾನಿ, ಎಫ್‌ಡಿಎ ರಾಮಣ್ಣ ಪೂಜಾರಿ ಹಾಗೂ ಕಾವಲುಗಾರ ಹನುಮಂತ ಅಮಾನತು ಆದವರು. ಇವರು ಸರ್ಕಾರಿ ಕಚೇರಿಯಲ್ಲಿ ಹೊರಗಿನ ವ್ಯಕ್ತಿಗಳೊಂದಿಗೆ ತುಂಡು, ಗುಂಡಿನ ಪಾರ್ಟಿ ಮಾಡಿದ ಹಿನ್ನೆಲೆಯಲ್ಲಿ ಇಲಾಖೆಯ ವಿಚಾರಣೆ ಬಾಕಿ ಇರಿಸಿ ಇವರನ್ನು ಆರ್‌ಡಿಪಿಆರ್ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಚೇತನ್.ಎಂ ಆದೇಶ ಹೊರಡಿಸಿದ್ದಾರೆ.

ಜನರ ಹಕ್ಕು ಉಳಿಸಲು ಇಂದು ಪಕ್ಷದ ಮುಖಂಡರ ಸಭೆ: ಡಿಕೆಶಿ

ಎಸ್‌ಐಆರ್ ಬಗ್ಗೆ ಜಾಗೃತಿ

ಬೆಂಗಳೂರು: ಜವಾಬ್ದಾರಿಯುತ ಸರ್ಕಾರವಾಗಿ ನಾವು ಜನರಿಗೆ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಜಾಗೃತಿ ಮೂಡಿಸಬೇಕು. ನಾವು ಆ ಕೆಲಸ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ಭಾನುವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಎಸ್‌ಐಆರ್‌ನಿಂದ ಈ ದೇಶದಲ್ಲಿ ಸಾಕಷ್ಟು ಅನಾಹುತಗಳು ನಡೆಯುತ್ತಿವೆ. ಅದಕ್ಕೆ ಇದರ ಬಗ್ಗೆ ನಾವು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಬಡ, ಸಾಮಾನ್ಯರಿಗೆ ಎಸ್‌ಐಆರ್ ಬಗ್ಗೆ ಪರಿಚಯ ಮಾಡಿಕೊಡಬೇಕಿದೆ. ಒಂದೊಂದು ರಾಜ್ಯದಲ್ಲಿ 50, 60 ಹಾಗೂ 90 ಲಕ್ಷದವರೆಗೆ ಮತಗಳನ್ನು ತೆಗೆದು ಹಾಕಲಾಗುತ್ತಿದೆ. ಕರ್ನಾಟಕದಲ್ಲೂ ಎಸ್ ಐಆರ್ ಪ್ರಾರಂಭವಾಗುತ್ತಿದೆ ಎಂದರು.

ರಾಜ್ಯದ ಎಲ್ಲಾ ಜನರ ಹಕ್ಕು ಉಳಿಸಲು ಇಂದು ಪಕ್ಷದ ಮುಖಂಡರ ಸಭೆ ಕರೆಯಲಾಗಿದೆ. ಚುನಾವಣಾ ಆಯೋಗ ನೀಡುವ ಅರ್ಜಿ ತುಂಬಿಸಿ ದಾಖಲೆ ಸಮೇತ ವಾಪಸ್ ನೀಡಿದವರ ಮತ ಮಾತ್ರ ಉಳಿಯುತ್ತದೆ, ಅರ್ಜಿ ವಾಪಸ್ ನೀಡದವರ ಮತದಾನದ ಹಕ್ಕು ನಷ್ಟವಾಗಲಿದೆ. ಈ ಬಗ್ಗೆ ಬಿಎಲ್‌ಒಗಳ ಮೂಲಕ ನಾವು ಇವುಗಳನ್ನು ಖಾತರಿ ಪಡಿಸಬೇಕಾಗಿದೆ ಎಂದರು.

ಜನಕಲ್ಯಾಣ ಯೋಜನೆ ಜಾರಿ

ಬಡವರ ಉಪಯೋಗಕ್ಕೆ ಜನಕಲ್ಯಾಣ ಯೋಜನೆಗಳನ್ನು ನೀಡಲಾಗುತ್ತಿದೆ. ಮತದಾನದ ಹಕ್ಕು ಇಲ್ಲ ಎಂದು ಯೋಜನಾ ಸೌಲಭ್ಯಗಳನ್ನು ನಿರಾಕರಿಸಿದರೆ ಅನಂತರ ಜನರು ನಿಮ್ಮಿಂದಲೇ ಸೌಲಭ್ಯಗಳು ಇಲ್ಲ ಎನ್ನುತ್ತಾರೆ. ಬಿಜೆಪಿಯವರೇ ಎಸ್‌ಐಆರ್ ಮಾಡಿರಬಹುದು. ಆದರೆ ಜನ ನಮ್ಮನ್ನು ಪ್ರಶ್ನೆ ಮಾಡುತ್ತಾರೆ ಎಂದು ಹೇಳಿದರು.

ಮತದಾನದ ಹಕ್ಕನ್ನು ಕಳೆದುಕೊಂಡರೆ ಯಾವುದೇ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ, ಗೃಹಲಕ್ಷ್ಮೀ ಯೋಜನೆ ಹಣ, ಪಿಂಚಣಿ, ಮನೆ, ಜಮೀನು ಸೇರಿದಂತೆ ಸರ್ಕಾರದ ಎಲ್ಲಾ ಯೋಜನೆಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ಜನರಿಗೆ ಬೇಕಾದ ದಾಖಲೆಗಳನ್ನು ಒದಗಿಸಿ ಕೊಡಬೇಕು. ಇದು ಜವಾಬ್ದಾರಿಯುತ ಸರ್ಕಾರದ ಕೆಲಸ. ಕೇರಳದಲ್ಲಿ ಇದೇ ರೀತಿ ಮಾಡಲಾಗಿದೆ ಎಂದು ತಿಳಿಸಿದರು.

ಮತದಾರರು ಅರ್ಜಿ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಮತದಾನದ ಹಕ್ಕನ್ನು ಕಳೆದುಕೊಳ್ಳಲಿದ್ದಾರೆ. ಕಾಂಗ್ರೆಸ್, ಬಿಜೆಪಿ, ದಳ ಸೇರಿದಂತೆ ಎಲ್ಲಾ ಪಕ್ಷಗಳು ಬಿಎಲ್‌ಒಗಳಿಗೆ ತರಬೇತಿ ನೀಡುತ್ತಿವೆ. ನಮ್ಮಿಂದ ಹಾಗೂ ಸರ್ಕಾರದಿಂದ ಏನೂ ತೊಂದರೆಯಾಗಬಾರದು, ಎಲ್ಲರಿಗೂ ನ್ಯಾಯ ಒದಗಿಸಿಕೊಡಬೇಕು ಎಂಬುದು ನನ್ನ ಆಶಯ. ಚುನಾವಣೆ ಗೆಲ್ಲುವುದು, ಬಿಡುವುದು ಬೇರೆ ವಿಚಾರ. ಮತದಾನ ಕಳೆದುಕೊಳ್ಳಬೇಡಿ ಎಂದು ನಾವು ಹೇಳಬೇಕು ಎಂದರು.

ಮತಪಟ್ಟಿ ಪರಿಷ್ಕರಣೆ ವಿರುದ್ಧ ಅಪಪ್ರಚಾರ: ಕುಮಾರಸ್ವಾಮಿ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಬಗ್ಗೆ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ ಹಾಗೂ ತನ್ನ ವೈಫಲ್ಯಗಳನ್ನು ಮುಚ್ಚಿಟ್ಟುಕೊಳ್ಳಲು ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಕೃತ್ಯ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಆರೋಪ ಮಾಡಿದ್ದಾರೆ.



ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಭಾನುವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಯಾವುದೋ ಒಂದು ವಿಷಯ ಇಟ್ಟುಕೊಂಡು ಸುದ್ದಿಯಲ್ಲಿರುವುದಕ್ಕೆ ಕಾಂಗ್ರೆಸ್‌ನವರು ಪ್ರಯತ್ನ ಮಾಡುತ್ತಲೇ ಇರುತ್ತಾರೆ. ಸ್ವಲ್ಪ ದಿನ ಮನರೇಗಾ ಬಗ್ಗೆ ಮಾತನಾಡಿದ್ದೆ ಮಾತನಾಡಿದ್ದು, ಈಗ ಎಸ್ ಐಆರ್ ಎಂದು ಹೊರಟಿದ್ದಾರೆ ಎಂದು ಕಿಡಿಕಾರಿದರು.

ಮೊದಲು ಬಿಡದಿ ಟೌನ್‌ಶಿಪ್ ಬಗ್ಗೆ ಚರ್ಚೆಗೆ ಆಹ್ವಾನ ಕೊಟ್ಟಿದ್ದು ಅವರು. ಅದಕ್ಕೆ ನಾನು ಸಿದ್ಧ ಎಂದು ಹೇಳಿದ್ದೇನೆ. ಪಾಪ ಅವರು ತುಂಬಾ ಬ್ಯುಸಿ ಇದ್ದಾರೆ. ದಿನವೂ ಇಷ್ಟು ಅಂತ ವಸೂಲಿ ಆಗಲೇಬೇಕು ಅಂತ ಅವರು ಬ್ಯುಸಿ ಇದ್ದಾರೆ. ಮೀಟರ್ ಲೆಕ್ಕ ಹಾಕೋದು, ರೇಟ್ ಫಿಕ್ಸ್ ಮಾಡೋದು ಅವರ ಕೆಲಸ. ಆ ಬ್ಯುಸಿನಲ್ಲಿ ನಾನಿಲ್ಲ.

ರಾಜ್ಯಸಭೆ ಆಯ್ಕೆ ಬಿಜೆಪಿ ನಿರ್ಧಾರ: ನಾವು ಯಾರನ್ನೂ ರಾಜ್ಯಸಭೆಗೆ ಮರು ಆಯ್ಕೆ ಬಗ್ಗೆ ಕೇಳಿಲ್ಲ, ನಮ್ಮ ಮಿತ್ರಪಕ್ಷಕ್ಕೆ ವಿಧಾನಸಭೆಯಲ್ಲಿ 63 ಸ್ಥಾನಗಳಿವೆ. ಹೀಗಾಗಿ ಬಿಜೆಪಿ ಅವರೇ ನಿರ್ಧರಿಸುತ್ತಾರೆ. ನಾನಾಗಲಿ, ದೇವೇಗೌಡರಾಗಲಿ ಈ ಬಗ್ಗೆ ಪ್ರಸ್ತಾಪ ಮಾಡಿಲ್ಲ, ಚರ್ಚೆ ಮಾಡೋಕೂ ಹೋಗಿಲ್ಲ, ದೇವೇಗೌಡರ ಅವಶ್ಯಕತೆ ಬಗ್ಗೆ ದಿಲ್ಲಿ ಮಟ್ಟದಲ್ಲಿ ತೀರ್ಮಾನ ಮಾಡಲಿ. ನಾವು ಇನ್ನೊಬ್ಬರಿಗೆ ತಪ್ಪಿಸಿ ನಮಗೆ ಕೊಡಿ ಎಂದು ಕೇಳಿಲ್ಲ ಎಂದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸಲಹೆ

ಜನಹಿತದ ಕೆಲಸ, ಕಾರ್ಯಕ್ಕೆ ಮುಂದಾಗಿ



ಬೆಂಗಳೂರು: ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಇಲ್ಲಿನ ಜನರಿಗೆ ಕಳೆದ 3 ವರ್ಷಗಳಲ್ಲಿ ವಿಶ್ವಾಸಘಾತ ಮಾಡಿದೆ. ಜನರನ್ನು ವಂಚಿಸುವ ಕೆಲಸ ಮಾಡಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ವಾಗ್ದಾಳಿ ನಡೆಸಿದ್ದಾರೆ.

ಮೊದಲ ಬಾರಿಗೆ ಕರ್ನಾಟಕಕ್ಕೆ ಭೇಟಿ ನೀಡಿದ ಅವರು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ವಿಶೇಷ ಸಂಘಟನಾ ಸಭೆ ಮತ್ತು ರಾಜ್ಯ ಕೋರ್ ಕಮಿಟಿ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಜನತೆಗೆ ಕೊಟ್ಟ ಭರವಸೆಗಳನ್ನು ಈಡೇರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಅಭಿವೃದ್ಧಿ ಕಾರ್ಯಗಳಲ್ಲಿಯೂ ಸಂಪೂರ್ಣ ವಿಫಲಗೊಂಡಿದೆ. ಕಾಂಗ್ರೆಸ್ ಒಳಜಗಳದಿಂದ ಜನಹಿತದ ಕೆಲಸಗಳನ್ನು ಕಡೆಗಣಿಸಿದೆ. ಜನಹಿತಕ್ಕೂ ತಮಗೂ ಸಂಬಂಧವೇ ಇಲ್ಲದಂತೆ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸುತ್ತಿದೆ ಎಂದು ಆರೋಪಿಸಿದರು. ಸರ್ಕಾರ ನಡೆಸುತ್ತಿರುವ ನಾಯಕರು ಸರ್ಕಾರವನ್ನು ತಮಗಾಗಿ ಬಳಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಜನರನ್ನೂ ಅಧಿಕಾರವನ್ನೂ ಗುಲಾಮಗಿರಿ ಮಾಡಿಕೊಂಡಿದೆ. ಅಲ್ಲದೇ ಇಲ್ಲಿನ ಸರ್ಕಾರ ದಿಲ್ಲಿ ಕಾಂಗ್ರೆಸ್ಸಿನ ಎಟಿಎಂ ಆಗಿದೆ ಎಂದು ದೂರಿದರು.

ಕಾರ್ಯಾಲಯಕ್ಕೆ ನಿತಿನ್ ಭೇಟಿ

ಪ್ರಸಕ್ತ ದೇಶದಲ್ಲೆಡೆ ನಮ್ಮ ಪಕ್ಷದ ಜಿಲ್ಲಾ ಪ್ರಶಿಕ್ಷಣ ಶಿಬಿರಗಳು ನಡೆಯುತ್ತಿವೆ. ಕರ್ನಾಟಕದಲ್ಲಿ ಎರಡು ದಿನಗಳ ಪ್ರವಾಸದಲ್ಲಿದ್ದೇನೆ. ಇಲ್ಲಿ ಜಿಲ್ಲಾ ಪ್ರಶಿಕ್ಷಣ ಶಿಬಿರದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿದೆ. ರಾಜ್ಯ ಬಿಜೆಪಿ ಕಾರ್ಯಾಲಯಕ್ಕೆ ಭೇಟಿ ನೀಡಿ, ಕರ್ನಾಟಕದಲ್ಲಿ ಪಕ್ಷದ ಚಟುವಟಿಕೆ, ಸಕ್ರಿಯ ಸಂಘಟನೆ ಎಂಬುದನ್ನು ತಿಳಿದುಕೊಂಡಿದ್ದಾಗಿ ನಿತಿನ್ ನವೀನ್ ತಿಳಿಸಿದರು.

ಯೋಗ ದಿನ ಯಶಸ್ಸಿಗೆ ಸಂಕಲ್ಪ

ಮೈಸೂರು: ಬರೋಬ್ಬರಿ 1.20 ಲಕ್ಷ ಜನರನ್ನು ಸೇರಿಸಿ ಸಾಮೂಹಿಕವಾಗಿ ಯೋಗಾಭ್ಯಾಸ ಮಾಡುವ ಮೂಲಕ ಪ್ರಸಕ್ತ ಸಾಲಿನ ವಿಶ್ವ ಯೋಗ ದಿನವನ್ನು ಯಶಸ್ವಿಯಾಗಿಸಲು ಭಾನುವಾರ ಸಂಕಲ್ಪ ಮಾಡಲಾಯಿತು.

ಯೋಗ ಫೆಡರೇಷನ್ ಆಫ್ ಮೈಸೂರು ವತಿಯಿಂದ ನಗರದ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಸಂಕಲ್ಪ ದಿವಸ್- 2026 ಕಾರ್ಯಕ್ರಮದಲ್ಲಿ ನೂರಾರು ಯೋಗಪಟುಗಳು ಹಾಗೂ ಯೋಗ ಶಿಕ್ಷಕರು ಪ್ರಮಾಣದ ವಚನ ಸ್ವೀಕರಿಸಿದರು.

ಪತ್ರಕರ್ತ ಸಿ.ಕೆ.ಮಹೇಂದ್ರ ಮಾತನಾಡಿ, ಮೈಸೂರು ಜಾಗತಿಕ ಮಟ್ಟದಲ್ಲಿ ಯೋಗ ನಗರವಾಗಿ ಪ್ರಸಿದ್ಧಿ ಗಳಿಸಿದೆ. ಹೀಗಾಗಿಯೇ ವಿಶ್ವ ಯೋಗ ದಿನ ಪರಿಕಲ್ಪನೆ ಘೋಷಣೆಯಾದ ವರ್ಷದಿಂದಲೂ ದೊಡ್ಡ ಮಟ್ಟದಲ್ಲಿ ಯೋಗ ಕಾರ್ಯಕ್ರಮಗಳನ್ನು ಸಂಘಟಿಸಿ ದಾಖಲೆ ನಿರ್ಮಿಸಿದೆ ಎಂದು ಸ್ಮರಿಸಿದರು.



ಮೈಸೂರಿನಲ್ಲೀಗ ಬೆಳಗಿನ ಜಾವದಲ್ಲಿ ಯೋಗಪಟುಗಳು ಕಾಣಸಿಗುತ್ತಾರೆ. ಮನೆ, ಉದ್ಯಾನ, ಸಂಘ- ಸಂಸ್ಥೆಗಳಲ್ಲಿ ಯೋಗಾಭ್ಯಾಸಕ್ಕೆ ಬರುವ ಅಥವಾ ಹೋಗುವ ಜನ ರಸ್ತೆಗಳಲ್ಲಿ ಕಾಣಿಸುತ್ತಾರೆ. ಅಂದರೆ, ಜನರಿಗೆ ಆರೋಗ್ಯ ಮತ್ತು ಯೋಗದ ಮಹತ್ವ ಅರಿವಾಗಿದೆ. ಇದನ್ನು ನಾವು ಇನ್ನಷ್ಟು ವಿಸ್ತರಿಸೋಣ. ಮುಂಬರುವ ಯೋಗ ದಿನವನ್ನು ಯಶಸ್ವಿಗೊಳಿಸೋಣ. ಇದಕ್ಕೆ ಎಲ್ಲ ಯೋಗಪಟುಗಳು, ಯೋಗ ಶಿಕ್ಷಕರು, ಸಂಘ- ಸಂಸ್ಥೆಗಳು, ಶಾಲಾ- ಕಾಲೇಜುಗಳು, ನಾಗರಿಕರು ಕೈಜೋಡಿಸಬೇಕೆಂದು ಮನವಿ ಮಾಡಿದರು. ಮೈಸೂರು ಯೋಗ ಒಕ್ಕೂಟ, ಜಿಎಸ್‌ಎಸ್ ಯೋಗ, ಭಾರತ್ ಸ್ವಾಭಿಮಾನ್ ಟ್ರಸ್ಟ್, ಮೈಸೂರು ಯೋಗ ಅಸೋಸಿಯೇಷನ್, ಯೋಗ ಸ್ಪೋರ್ಟ್ಸ್ ಫೌಂಡೇಶನ್, ಎಸ್‌ಪಿವೈಎಸ್‌ಎಸ್ ಮುಂತಾದ ಸಂಘಟನೆಗಳ ಸದಸ್ಯರು ಯೋಗ ಶಿಷ್ಟಾಚಾರದ ಅನ್ವಯ ಯೋಗಾಭ್ಯಾಸ ಮಾಡಿದರು. ಜಿಎಸ್‌ಎಸ್ ಯೋಗ ಸಂಸ್ಥೆಯ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್, ರಂಗನಾಥ್, ಸರಳ, ವಿವಿಧ ಸಂಘಟನೆಗಳ ಶಶಿಕುಮಾರ್, ದೇವರಾಜು, ಜಲೇಂದ್ರ, ಬಿ.ಪಿ.ಮೂರ್ತಿ, ಶ್ರೀನಿವಾಸ ನಾಯ್ಡು, ಕಿರಣ್ ಮುಂತಾದವರು ಪಾಲ್ಗೊಂಡಿದ್ದರು.

ನಾಯಕರೊಂದಿಗೆ ನಿತಿನ್ ನಿರಂತರ ಸಭೆ

ಬೆಂಗಳೂರು: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಕರ್ನಾಟಕ ಭೇಟಿ ಪಕ್ಷದಲ್ಲಿ ಸಂಚಲನ ಮೂಡಿಸಿದೆ. ರಾಜ್ಯದ ಪ್ರಮುಖ ನಾಯಕರೊಂದಿಗೆ ನಿರಂತರ ಸಭೆಗಳು ಚೈತನ್ಯ ತುಂಬಿವೆ.

ಬೆಳಗ್ಗೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಅಧಿಕೃತ ನಿವಾಸ ಧವಳಗಿರಿಗೆ ಭೇಟಿ ನೀಡಿದ ನಿತಿನ್ ನವೀನ್ ಅಲ್ಲಿಯೇ ಉಪಾಹಾರ ಸೇವಿಸಿದರು. ಈ ಉಪಾಹಾರ ಕೂಟದಲ್ಲಿ ಮಾಜಿ ಸಿಎಂ ಜಗದೀಶ್ ಶೆಟ್ಟರ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಪ್ರತಿಪಕ್ಷ ನಾಯಕ ಆರ್. ಅಶೋಕ, ಸಂಸದ ಗೋವಿಂದ ಕಾರಜೋಳ, ಮುಖಂಡರಾದ ಶ್ರೀರಾಮುಲು, ಡಾ.ಸಿ.ಎನ್.ಅಶ್ವತ್ಥ್‌ನಾರಾಯಣ, ಅರವಿಂದ್ ಲಿಂಬಾವಳಿ ಸೇರಿದಂತೆ ಹಲವು ಹಿರಿಯ ನಾಯಕರು ಭಾಗಿಯಾಗಿದ್ದರು. ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಶ್ರೀರಾಮಚರಿತಾ ಮಾನಸ ಪುಸ್ತಕವನ್ನು ನೀಡಿ ಗೌರವಿಸಿದರು.

ಕಾಡುಮಲ್ಲೇಶ್ವರನ ದರ್ಶನ ಪಡೆದ ನಿತಿನ್: ರಾಜಕೀಯ ಸಭೆಗಳಿಗೂ ಮುನ್ನ ಮಲ್ಲೇಶ್ವರಂನಲ್ಲಿರುವ ಪ್ರಸಿದ್ಧ ಇತಿಹಾಸ ಪ್ರಸಿದ್ಧ ಕಾಡುಮಲ್ಲೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದರು. ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಹಾಗೂ ದರ್ಶನ ಪಡೆದರು. ಬಳಿಕ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸರಣಿ ಸಭೆಗಳನ್ನು ನಡೆಸಿದರು. ತರುವಾಯ ಯಲಹಂಕದ ರಮಡಾ ರೆಸಾರ್ಟ್‌ನಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಪ್ರಶಿಕ್ಷಣ ವರ್ಗದಲ್ಲಿ ಪಾಲ್ಗೊಂಡರು. ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಯ ಕುರಿತಾಗಿ ಪಕ್ಷದ ಪ್ರಮುಖರೊಂದಿಗೆ ಸಮಾಲೋಚನೆ ನಡೆಸಿದರು.



ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ಭೇಟಿಯಾದ ನಿತಿನ್ ನವೀನ್ ರಾತ್ರಿ ಬೆಂಗಳೂರಿನಿಂದ ದಿಲ್ಲಿಗೆ ವಾಪಸ್ಸಾದರು. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಸಂಘಟನಾ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗ್ರವಾಲ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಪ್ರತಿಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ರಾಜ್ಯ ಸಹ-ಉಸ್ತುವಾರಿ ಸುಧಾಕರ್ ರೆಡ್ಡಿ, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ರಾಜ್ಯ ಸಮಿತಿ ಸದಸ್ಯರು, ಮೋರ್ಚಾಗಳ ರಾಜ್ಯ ಅಧ್ಯಕ್ಷರು, ರಾಜ್ಯ ಮಾಧ್ಯಮ ತಂಡ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ವಿಭಾಗ ಪ್ರಭಾರಿಗಳು, ಸಹ ಪ್ರಭಾರಿಗಳು, ಜಿಲ್ಲಾ ಅಧ್ಯಕ್ಷರು ಭಾಗವಹಿಸಿದ್ದರು.

ಈ ಅಂಗಳದಲ್ಲಿ ಪುಟ್ಟ ಜೀವಗಳ ಜೀವನ ಅರಳುತ್ತದೆ

ಸುಬ್ರಾಯ ನಂದೋಡಿ

ಹಳದಿ, ನೀಲಿ, ಕೆಂಪು, ಬಣ್ಣಗಳು ನಾಲ್ದೆಸೆಗಳಲ್ಲಿ ಯೂಹರಡಿಕೊಂಡಿತ್ತು. ಬಾಲಗೋಪಾಲರು ಬಣ್ಣಗಳನ್ನು ಕೈಯಲ್ಲಿ ಹಿಡಿದು ಯಶೋದೆಯರ ಜೊತೆಗೆ ಹೋಳಿ ಹಬ್ಬದ ಆನಂದವನ್ನು ಸವಿಯುತ್ತಿದ್ದರು. ಎಲ್ಲಾ ಕಡೆಯ ಸಂತೋಷವೂ ಮಾತೃಛಾಯಾದ ಅಂಗಳದಲ್ಲಿಯೇ ನೆಲೆಸಿದೆಯೇನೊ ಎಂಬಂತೆ ತೋರುತ್ತಿತ್ತು. ಆಗ ಆ ಮಕ್ಕಳೊಂದಿಗೆ ಹೋಳಿ ಆಚರಿಸಲು ಬಂದ ಸೇವಾ ಭಾರತಿ ಮಾತೃಮಂಡಳಿಯ ಸಹೋದರಿಯರ ದೃಷ್ಟಿ ಬಾಗಿಲಲ್ಲಿ ಇರಿಸಲಾಗಿರುವ ವಾರಸುದಾರರಿಲ್ಲದ ಚೀಲದ ಮೇಲೆ ಬಿತ್ತು. ಅದರಲ್ಲಿ ಯಾವುದೇ ಬಾಂಬ್ ಇರಲಾರದಲ್ಲವೇ ಎಂಬ ಸಂಶಯ ಕಾಡುತ್ತಿರುವಾಗ, ಅವರಲ್ಲಿ ಒಬ್ಬರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಆ ಚೀಲವನ್ನು ಆವರಣದಿಂದ ಹೊರಗೆಸೆಯಲು ಓಡಲಾರಂಭಿಸಿದಾಗ ಚೀಲದೊಳಗಿನಿಂದ ಮುಗ್ಧ ಅಳು ಕೇಳಿ ಎಲ್ಲರ ಕಾಲು ಹಿಂದೆ ಸರಿಯಿತು.

ಇದೇನಿದು? ಆ ಸಂಶಯಿಸಲ್ಪಟ್ಟ ಚೀಲದಲ್ಲಿ, ಅಸಹಾಯಕ ತಾಯಿಯ ಪುಟ್ಟದೊಂದು ಜೀವ ಇತ್ತು. ಎರಡು ದಿನಗಳ ಈ ಪುಟ್ಟ ದೇವತೆಯ ಜೊತೆಗೆ ಹಾಲಿನ ಬಾಟಲಿಯೂ ಇತ್ತು. ಅಂದು ಮಾತೃಛಾಯಾ ಕುಟುಂಬಕ್ಕೆ ಹೊಸ ಸದಸ್ಯರ ಸೇರ್ಪಡೆಯಿಂದಾಗಿ ಎಲ್ಲರ ಹೋಳಿಯ ಸಂತೋಷ ದ್ವಿಗುಣಗೊಂಡಿತು. ಭೋಪಾಲದಲ್ಲಿ ನಿರಾಶ್ರಿತ ಮಕ್ಕಳಿಗಾಗಿ ಸೇವಾ ಭಾರತಿ ನಡೆಸುತ್ತಿರುವ ಈ ಶಿಶುಪಾಲನಾ ಕೇಂದ್ರಕ್ಕೆ ಬಂದ ಆ



ಪುಟ್ಟಹುಡುಗಿ ಈಗ ಅಲ್ಲಿಯವಳೇ ಆದಳು. ಇಲ್ಲಿಂದ ಅವಳು ಹೊಸ ಜೀವನವನ್ನು ಪಡೆಯುವವಳಿದ್ದಳು.

ಈ ಪ್ರಕಲ್ಪವು 1997ರಲ್ಲಿ ಸಂಘದ ಪ್ರಚಾರಕರೂ ಮತ್ತು ಸೇವಾ ಭಾರತಿಯ ಸ್ಥಾಪಕರೂ ಆದ ದಿವಂಗತ ವಿಷ್ಣು ಕುಮಾರ್ಜೀಯವರ ಪ್ರೇರಣೆಯಿಂದ ಪ್ರಾರಂಭವಾಯಿತು. ಇದು ಮಧ್ಯಪ್ರದೇಶದಲ್ಲಿ ಮಾನ್ಯತೆ ಪಡೆದ ಮೊದಲ ಅಂತಾರಾಷ್ಟ್ರೀಯ ದತ್ತು ಸ್ವೀಕಾರ ಕೇಂದ್ರವಾಗಿದೆ. ಅಂಕಿ ಅಂಶಗಳ ಪ್ರಕಾರ, ಕೇಂದ್ರಕ್ಕೆ ಭೇಟಿ ನೀಡುವ 400 ಮಕ್ಕಳ ಪೈಕಿ 350 ಮಕ್ಕಳು ಈಗ ದೇಶದ ವಿವಿಧ ಭಾಗಗಳಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಸಂತೋಷ ಮತ್ತು ಸಮೃದ್ಧ ಜೀವನವನ್ನು ನಡೆಸುತ್ತಿದ್ದಾರೆ. ಸಮರ್ಪಿತ ಭಾವದಿಂದ ಮಗುವಿನ ಆರೈಕೆಗಾಗಿ ಇಲ್ಲಿ ಯಶೋದೆಯರು (ಆಯಾ) ಇದ್ದಾರೆ. ಈ ಕೇಂದ್ರದಲ್ಲಿರುವ ಜನರು ಮತ್ತು ಸೇವಾ ಭಾರತಿ ಮಾತೃ ಮಂಡಳಿಯ ಸಹೋದರಿಯರೂ ಸಹ ಈ ಮಕ್ಕಳೊಂದಿಗೆ ಉತ್ತಮ ಆತ್ಮೀಯ ಸಂಬಂಧ ಹೊಂದಿದ್ದಾರೆ. ಕೆಲವರು ಚಿಕ್ಕಮ್ಮರಾಗಿ, ಕೆಲವರು ದೊಡ್ಡಮ್ಮರಾಗಿ ಈ ಪುಟ್ಟಮಕ್ಕಳೊಂದಿಗೆ ಆತ್ಮೀಯಸಂಬಂಧವನ್ನು ಬೆಸೆದುಕೊಂಡಿದ್ದಾರೆ. ಒಂದೆಡೆ ಈ ಮಕ್ಕಳ ಸುಂದರ ಭವಿಷ್ಯವನ್ನು ಕಲ್ಪಿಸಿಕೊಂಡು ಸಂತೋಷಪಟ್ಟರೆ ಮತ್ತೊಂದೆಡೆ ಅವರನ್ನು ಬೀಳ್ಕೊಡುವ ದುಃಖದಲ್ಲಿ ಕಣ್ಣುಗಳು ಒದ್ದೆಯಾಗುತ್ತಿದ್ದವು.

ಸುಧಾತಾಯಿ ತಮ್ಮ ನೆನಪುಗಳನ್ನು ಹಂಚಿಕೊಳ್ಳುತ್ತಾ, ಮೂರು ವರ್ಷದ ಅವಿನಾಶ್ ತನ್ನ ಪೋಷಕರೊಂದಿಗೆ ಆಸ್ಟ್ರೇಲಿಯಾಕ್ಕೆ ಹೊರಟಾಗ ಆತನ ಸಂತೋಷಕ್ಕೆ ಪಾರವೇ ಇರಲಿಲ್ಲ ಎಂದು ಹೇಳುತ್ತಾರೆ. ಅವನು ಪ್ರತಿ ಮಗು ವಿಗೂ ತನ್ನ ಕೋಣೆಯ ಫೋಟೋಗಳನ್ನು ತೋರಿಸುತ್ತಿದ್ದನು. ಇನ್ನು ಕಾವೇರಿಯ ವಿಷಯಕ್ಕೆ ಬಂದರೆ, ಅವಳಂತೂ ತನ್ನ ಪೋಷಕರಿಗೆ ಸ್ಪ್ಯಾನಿಷ್ ಭಾಷೆಯಲ್ಲೇ ನಮಸ್ಕರಿಸಿ ಎಲ್ಲರನ್ನೂ ಆಶ್ಚರ್ಯ ಚಕಿತಗೊಳಿಸಿದ್ದಳು. ಕಾವೇರಿ ಸ್ಪೇನ್‌ನಲ್ಲಿ ಸುಲಭವಾಗಿ ಹೊಂದಿಕೊಳ್ಳಲಿ ಎಂಬ ಕಾರಣಕ್ಕೆ, ದತ್ತು ಪ್ರಕ್ರಿಯೆ ಮುಗಿಯುವವರೆಗೆ ಐದು ವರ್ಷದ ಈ ಮಗುವಿಗೆ ಎರಡು ತಿಂಗಳಿನಿಂದ ಸ್ಪ್ಯಾನಿಷ್ ಕಲಿಸಲಾಗುತ್ತಿತ್ತು. ಅತೀತದ ದಿನಗಳನ್ನು ತಿರುವಿ ಹಾಕಿದರೆ, ಹಮೀದಿಯಾ ಆಸ್ಪತ್ರೆಯ ಕಸದ ತೊಟ್ಟಿಯಿಂದ ಕೇವಲ 2 ದಿನದ ಮಗುವಾಗಿದ್ದ ಅವಿನಾಶ್‌ನನ್ನು ಇಲ್ಲಿಗೆ ಕರೆತಂದಿದ್ದ ಆ ರಾತ್ರಿ ಮಾತೃಛಾಯಾ ಆಡಳಿತ ಮಂಡಳಿಗೆ ಇಂದಿಗೂ ನೆನಪಿದೆ. ಎಷ್ಟು ಜತನದಿಂದ, ಸತತ ಪ್ರಯತ್ನದ ನಂತರ ಈ ಪ್ರಿಮೆಚ್ಯೂರ್ ಮಗುವಿನ ಜೀವವನ್ನು ಉಳಿಸಲು ಸಾಧ್ಯವಾಗಿತ್ತು ಎಂದು.

ಸೇವಾಗಾಥ
ಕಥೆ-7

ಮಧ್ಯಪ್ರದೇಶದ ಮೊದಲ ಲೀಗಲ್ ಅಡಾಪ್ಷನ್ ಸೆಂಟರ್ ಆಗಿರುವ ಮಾತೃಛಾಯಾ ಕೇವಲ ಒಂದು ಶಿಶುಗೃಹ ಮಾತ್ರವಲ್ಲ, ಅದು ಹಿಂದೂ ಸಂಸ್ಕೃತಿಗೆ ಅನುಗುಣವಾಗಿ ಮಗುವಿನ ಎಲ್ಲಾ ಸಂಸ್ಕಾರಗಳನ್ನು ನೆರವೇರಿಸುವ ಒಂದು ಕುಟುಂಬವಾಗಿದೆ. ಮಗುವಿನ ಅನ್ನಪ್ರಾಶನದಿಂದ ಹಿಡಿದು ಕಿವಿ ಚುಚ್ಚುವುದು ಮತ್ತು ನಾಮಕರಣದ ಸಂಸ್ಕಾರಗಳನ್ನು ಇಲ್ಲಿ ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಗುತ್ತದೆ. ಸುರಕ್ಷತೆಯ ದೃಷ್ಟಿಯಿಂದ ಇಡೀ ಆವರಣದ ಪ್ರತಿಯೊಂದು ಜಾಗದಲ್ಲೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

ಮಾತೃಛಾಯಾ ಸಮಿತಿಯ ಉಪಾಧ್ಯಕ್ಷೆ ಹಾಗೂ ಸೇವಾ ಭಾರತಿಯ ರಾಷ್ಟ್ರೀಯ ಉಪಾಧ್ಯಕ್ಷೆಯಾಗಿರುವ ಅಮಿತಾ ಜೈನ್ ಅವರು ತಿಳಿಸುವಂತೆ, ಇಲ್ಲಿ ಮಕ್ಕಳ ಎಲ್ಲಾ ರೀತಿಯ ಅಗತ್ಯತೆಗಳ ಬಗ್ಗೆ ಸಂಪೂರ್ಣ ಗಮನ ಹರಿಸಲಾಗುತ್ತದೆ. ಚಿಕ್ಕ ಮಕ್ಕಳಿಗೆ ನಿಯಮಿತವಾಗಿ ಮಸಾಜ್ ಮಾಡಲಾಗುತ್ತದೆ ಮತ್ತು ಅವರಿಗೆ ಸೂಕ್ತವಾದ ಪೌಷ್ಟಿಕ ಆಹಾರವನ್ನು ನೀಡಲಾಗುತ್ತದೆ ಎಂದು ಹಾಗೂ, ದೊಡ್ಡ ಮಕ್ಕಳಿಗೆ ಶಾಲೆಯ ನಂತರ ಪಾಠ ಹೇಳಿ ಕೊಡಲು ಶಿಕ್ಷಕರನ್ನು ನೇಮಿಸಲಾಗಿದೆ. ಸಂಜೆಯ ಸಮಯದಲ್ಲಿ ಇವರಿಗೆ ಚಿತ್ರಕಲೆ, ಕಾರ್ಡ್ ಮೇಕಿಂಗ್ ಮತ್ತು ಸಂಗೀತವನ್ನು ಸಹ ಕಲಿಸಲಾಗುತ್ತದೆ. ಇಲ್ಲಿಗೆ ಬರುವ ವಿಶೇಷ ಚೇತನ (ದಿವ್ಯಾಂಗ) ಮಕ್ಕಳ ಪ್ರತಿಯೊಂದು ಅಗತ್ಯವನ್ನೂ ಸಹ ಇಲ್ಲಿ ಈಡೇರಿಸಲಾಗುತ್ತದೆ.

ಮಕ್ಕಳೊಂದಿಗೆ ಪ್ರತಿಯೊಂದು ಹಬ್ಬವನ್ನು ಆಚರಿಸಲು ಸೇವಾಭಾರತಿ ಪರಿವಾರವು ಮಾತೃಛಾಯಾದ ಅಂಗಳಕ್ಕೆ ಧಾವಿಸುತ್ತದೆ. ತಿಂಗಳಿಗೊಮ್ಮೆ ಮಕ್ಕಳನ್ನು ನಗರದ ಮೃಗಾಲಯ, ವಸ್ತುಸಂಗ್ರಹಾಲಯ (ಮ್ಯೂಸಿಯಂ) ಅಥವಾ ಶಾಪಿಂಗ್ ಮಾಲ್‌ಗಳಂತಹ ವಿವಿಧ ಸ್ಥಳಗಳಿಗೆ ಪ್ರವಾಸಕ್ಕೆ ಕರೆದೊಯ್ಯಲಾಗುತ್ತದೆ. ಇಲ್ಲಿಂದ ದತ್ತು ಹೋಗಿ ಬೇರೆಡೆಗೆ ನೆಲೆಸಿದ ಮೇಲೂ, ಪ್ರತಿ ಮಗುವಿನ 'ಫಾಲೋ-ಅಪ್' (ಮುಂದಿನ ಯೋಗಕ್ಷೇಮದ ಪರಿಶೀಲನೆ) ಅನ್ನು ಸಮಿತಿಯ ಪದಾಧಿಕಾರಿಗಳು ನಿರಂತರವಾಗಿ ಮಾಡುತ್ತಾಬಂದಿದ್ದಾರೆ.

ಇಲ್ಲಿ ಹೊರಗಡೆ ಇಡಲಾಗಿರುವ ತೊಟ್ಟಿಲಿನಲ್ಲಿ ಪ್ರತಿಯೊಂದು ಮಗುವಿಗೂ ಮುಕ್ತ ಸ್ವಾಗತವಿದೆ. ಆದರೂ, ಕೆಲವರು ಮಕ್ಕಳನ್ನು ಆವರಣದ ಒಳಗಿರುವ ಪೊದೆಗಳಲ್ಲೋ ಅಥವಾ ಯಾವುದೋ ಬ್ಯಾಗ್‌ಗಳಲ್ಲೋ ಹಾಕಿ ಯಾಕೆ ಬಿಟ್ಟು ಹೋಗುತ್ತಾರೋ ತಿಳಿಯದು. ಇದರಿಂದಾಗಿ ಕೆಲವೊಮ್ಮೆ ಆ ಮಗುವಿನ ಜೀವ ಉಳಿಸುವುದೇ ಕಷ್ಟವಾಗಿಬಿಡುತ್ತದೆ. ಮಾತೃಛಾಯಾ ಪರಿವಾರದ ಈ ಪ್ರಶ್ನೆಯು ಇಂದಿನ ಸಮಾಜದ ಸಾಮಾಜಿಕ ವೈಪರೀತ್ಯಕ್ಕೆ ಕನ್ನಡಿ ಹಿಡಿದಂತಿದೆ.

ಸಂಪಾದಕೀಯ

ದುಡಿಮೆಗೆ ಗೌರವದ ನಿರ್ಧಾರ

ಕರ್ನಾಟಕ ಸರ್ಕಾರ ಕನಿಷ್ಠ ವೇತನವನ್ನು ಶೇ.60ರಷ್ಟು ಹೆಚ್ಚಿಸಿರುವುದು ಕಾರ್ಮಿಕ ವರ್ಗದ ಬದುಕಿಗೆ ಮಹತ್ವದ ನೆರವಾಗಲಿದೆ. ಹೊಸ ಪರಿಷ್ಕರಣೆಯಂತೆ ಬೆಂಗಳೂರಿನಲ್ಲಿ ಅಪ್ರಶಿಕ್ಷಿತ ಕಾರ್ಮಿಕನಿಗೂ ತಿಂಗಳಿಗೆ 23 ಸಾವಿರ ರೂ.ಗಿಂತ ಹೆಚ್ಚು ವೇತನ ದೊರೆಯಲಿದ್ದು, ಇದು ದುಡಿಮೆ ಮಾಡುವ ವರ್ಗಕ್ಕೆ ಸರ್ಕಾರ ನೀಡಿರುವ ಗೌರವದ ಸೂಚಕವಾಗಿದೆ. ಇದನ್ನು ವಲಯವಾರು ಲೆಕ್ಕಾಚಾರದಲ್ಲಿ ಮಾಡಿರುವುದರಿಂದ ಎಲ್ಲರಿಗೂ ಸಮಾನ ವೇತನ ಗೌರವ ಸಿಗಲಿದೆ.

ಬೆಲೆ ಏರಿಕೆ, ಮನೆ ಬಾಡಿಗೆ, ಆರೋಗ್ಯ ಮತ್ತು ಶಿಕ್ಷಣ ವೆಚ್ಚಗಳ ನಡುವೆ ಕಡಿಮೆ ಆದಾಯದ ಕುಟುಂಬಗಳು ಸಂಕಷ್ಟ ಅನುಭವಿಸುತ್ತಿದ್ದವು. ಇಂತಹ ಸಂದರ್ಭದಲ್ಲಿ ಕನಿಷ್ಠ ವೇತನ ಹೆಚ್ಚಳ ಕಾರ್ಮಿಕರ ಜೀವನಮಟ್ಟ ಸುಧಾರಣೆಗೆ ಸಹಕಾರಿಯಾಗಲಿದೆ. ವಿಶೇಷವಾಗಿ ನಿರ್ಮಾಣ, ಕೈಗಾರಿಕೆ, ಸೇವಾ ವಲಯ ಮತ್ತು ಅಸಂಘಟಿತ ಕ್ಷೇತ್ರದ ಸಾವಿರಾರು ಕಾರ್ಮಿಕರಿಗೆ ಇದು ನೇರ ಲಾಭ ತರುತ್ತದೆ. ಆದರೆ, ಕೇವಲ ಅಧಿಸೂಚನೆ ಹೊರಡಿಸುವುದರಿಂದ ಉದ್ದೇಶ ಸಫಲವಾಗುವುದಿಲ್ಲ. ನಿಯಮ ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಅನೇಕ ಕಡೆಗಳಲ್ಲಿ ಕಾರ್ಮಿಕರಿಗೆ ಕಾನೂನಿನ ಪ್ರಕಾರ ವೇತನ ಸಿಗದೆ ಇರುವುದೂ ವಾಸ್ತವ. ಆದ್ದರಿಂದ ಕಾರ್ಮಿಕ ಇಲಾಖೆ ತಪಾಸಣೆಗಳನ್ನು ಬಲಪಡಿಸಿ, ಗುತ್ತಿಗೆದಾರರ ಮೂಲಕ ನಡೆಯುವ ಶೋಷಣೆಗೆ ಕಡಿವಾಣ ಹಾಕಬೇಕಿದೆ. ಡಿಜಿಟಲ್ ವೇತನ ಪಾವತಿ ವ್ಯವಸ್ಥೆ ಜಾರಿಗೆ ತಂದರೆ ಪಾರದರ್ಶಕತೆ ಹೆಚ್ಚುತ್ತದೆ.

ಇದರಿಂದ ರಾಜ್ಯದ ಆರ್ಥಿಕತೆಯ ಮೇಲೂ ಉತ್ತಮ ಪರಿಣಾಮ ಬೀಳುವ ಸಾಧ್ಯತೆ ಇದೆ. ಕಾರ್ಮಿಕರ ಕೈಯಲ್ಲಿ ಹೆಚ್ಚು ಹಣ ಹರಿದಾಡಿದರೆ ಮಾರುಕಟ್ಟೆಯಲ್ಲಿ ಖರೀದಿ ಚಟುವಟಿಕೆ ಹೆಚ್ಚುತ್ತದೆ. ಸಣ್ಣ ವ್ಯಾಪಾರ, ಸೇವಾ ವಲಯ ಮತ್ತು ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೆ ಇದು ಉತ್ತೇಜನ ನೀಡಬಹುದು. ಹೀಗಾಗಿ ಕಾರ್ಮಿಕರ ವೇತನ ಹೆಚ್ಚಳವನ್ನು ವೆಚ್ಚವೆಂದು ಮಾತ್ರ ನೋಡುವುದು ಸರಿಯಲ್ಲ.

ಇನ್ನೊಂದು ಪ್ರಮುಖ ಅಂಶವೆಂದರೆ ಕಾರ್ಮಿಕರಲ್ಲಿ ಕೆಲಸದ ಭದ್ರತೆ ಮತ್ತು ಆತ್ಮವಿಶ್ವಾಸ ಹೆಚ್ಚುವುದು. ನ್ಯಾಯಸಮ್ಮತ ವೇತನ ದೊರೆತಾಗ ಉತ್ಪಾದಕತೆ ಕೂಡ ಉತ್ತಮವಾಗುತ್ತದೆ. ಕೈಗಾರಿಕೆಗಳು ಮತ್ತು ಸಂಸ್ಥೆಗಳಿಗೂ ಸ್ಥಿರ ಹಾಗೂ ಸಮರ್ಥ ಕಾರ್ಮಿಕ ಶಕ್ತಿ ದೊರೆಯಲು ಇದು ನೆರವಾಗುತ್ತದೆ. ಗ್ರಾಮೀಣ ಭಾಗಗಳಿಂದ ನಗರಗಳಿಗೆ ಬರುವ ಕಾರ್ಮಿಕರ ಬದುಕಿನ ಮೇಲೂ ಈ ನಿರ್ಧಾರ ಸಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ. ಕನಿಷ್ಠ ವೇತನದಲ್ಲಿ ಏರಿಕೆಯಿಂದ ಅವರ ಕುಟುಂಬಗಳ ಶಿಕ್ಷಣ, ಆರೋಗ್ಯ ಮತ್ತು ಮೂಲಭೂತ ಅಗತ್ಯಗಳಿಗೆ ಹೆಚ್ಚು ಹಣ ಮೀಸಲಿಡಲು ಸಾಧ್ಯವಾಗುತ್ತದೆ. ಇದರಿಂದ ಸಾಮಾಜಿಕ ಭದ್ರತೆಯೂ ಬಲವಾಗುತ್ತದೆ. ಕಾರ್ಮಿಕ ಸಂಘಟನೆಗಳು ಹಾಗೂ ಕೈಗಾರಿಕೆಗಳ ನಡುವೆ ಸಮನ್ವಯವೂ ಅಗತ್ಯವಾಗಿದೆ. ಸರ್ಕಾರ ಈ ನಿರ್ಧಾರ ಜಾರಿಗೆ ತಂದಿರುವಾಗ ಕೈಗಾರಿಕೆಗಳಿಗೂ ಅಗತ್ಯ ಮಾರ್ಗದರ್ಶನ ಮತ್ತು ನೆರವು ಒದಗಿಸಬೇಕು. ಪರಸ್ಪರ ಸಹಕಾರದಿಂದ ಮಾತ್ರ ಕಾರ್ಮಿಕ ಕಲ್ಯಾಣ ಮತ್ತು ಕೈಗಾರಿಕಾ ಬೆಳವಣಿಗೆ ಎರಡನ್ನೂ ಸಮತೋಲನದಲ್ಲಿ ಕೊಂಡೊಯ್ಯಲು ಸಾಧ್ಯ. ರಾಜ್ಯದ ಅಭಿವೃದ್ಧಿ ಎಂದರೆ ಕೇವಲ ಕೈಗಾರಿಕೆಗಳ ಬೆಳವಣಿಗೆಯಲ್ಲ, ದುಡಿಯುವ ಕೈಗಳ ಬದುಕು ಸುಧಾರಿಸುವುದೂ ಆಗಿದೆ. ಸರ್ಕಾರದ ಈ ನಿರ್ಧಾರ ಕಾರ್ಮಿಕ ಕಲ್ಯಾಣ ಮತ್ತು ಆರ್ಥಿಕ ಪ್ರಗತಿ ಎರಡನ್ನೂ ಸಮತೋಲನದಲ್ಲಿ ಕೊಂಡೊಯ್ಯುವ ದೂರದೃಷ್ಟಿಯ ಹೆಜ್ಜೆಯಾಗಲಿ.

ಮೋದಿಯ ಬೆನ್ನು ಹತ್ತಿರುವ ಜಿರಳೆಗಳು!

ಆನ್‌ಲೈನ್ ಅಭಿಯಾನವೇ ಬೇರೆ. ಅದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತವಾಗಿ ಪರಿವರ್ತಿಸುವುದೇ ಬೇರೆ.



ನೇರ ನೋಟ
ದು.ಗು. ಲಕ್ಷ್ಮಣ
dugulakshman@yahoo.com

ಯುಎಇ, ನೆದರ್‌ಲ್ಯಾಂಡ್, ಸ್ವೀಡನ್, ನಾರ್ವೆ ಮತ್ತು ಇಟಲಿ ದೇಶಗಳಿಗೆ ಈಚೆಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿ ವಾಪಸ್ ಭಾರತಕ್ಕೆ ಮರಳುವುದರೊಳಗೆ ಸಾಮಾಜಿಕ ಜಾಲತಾಣ ಮತ್ತು ಕೆಲವು ಸುದ್ದಿ ವಾಹಿನಿಗಳಲ್ಲಿ ಮೋದಿ ವಿರುದ್ಧ ಭಯಂಕರ ಅಪಪ್ರಚಾರದ ಸದ್ದು ಕೇಳಿಬಂದಿತ್ತು. ನಾರ್ವೆಯಲ್ಲಿ ಪತ್ರಕರ್ತೆಯೊಬ್ಬಳ ಪ್ರಶ್ನೆಗೆ ಉತ್ತರಿಸದೆ ದೇಶದ ಮಾನ ಹರಾಜು ಹಾಕಿದರು, ಇಟಲಿಯಲ್ಲಿ ಅಲ್ಲಿನ ಪ್ರಧಾನಿ ಮೆಲೋನಿಗೆ ಮೆಲೋಡಿ ಚಾಕಲೇಟ್ ನೀಡಿ ದೇಶದ ಘನತೆಗೆ ಕುಂದು ತಂದರು ಎಂಬಿತ್ಯಾದಿ ಅಪಪ್ರಚಾರಗಳು ಮೊಳಗಿದವು. ನಾರ್ವೆ ಭೇಟಿ ವೇಳೆ ಪತ್ರಕರ್ತರು ಮೊದಲೇ ಪ್ರಶ್ನೆ ಸಿದ್ಧಪಡಿಸಿ ಕಳಿಸಬೇಕಿತ್ತು. ಇನ್ನೇನು ವೇದಿಕೆ ಇಳಿದು ಹೊರಟಾಗಲೇ ಪತ್ರಕರ್ತೆ ಪ್ರಶ್ನೆ ಕೇಳಿದ್ದು ಮೋದಿಗೆ, ತನ್ಮೂಲಕ ಭಾರತಕ್ಕೆ ಮುಜುಗರ ತರಲೆಂದೇ ಎಂಬುದು ವಿವೇಕ ಇರುವವರಿಗೆಲ್ಲ ಅರ್ಥವಾಗುವ ಸಂಗತಿ. ಇನ್ನು ಇಟಲಿ ಪ್ರಧಾನಿ ಮೆಲೋನಿಗೆ ಮೆಲೋಡಿ ಚಾಕಲೇಟ್ ಉಡುಗೊರೆಯಾಗಿ ನೀಡಿದ್ದು ಕೂಡ ರಂಧ್ರಾನ್ವೇಷಿ ಮಾಧ್ಯಮಗಳಿಗೆ 'ಅಪರಾಧ'ವಾಗಿ ಕಂಡಿದ್ದು ವಿಪರ್ಯಾಸ! ಯಾವುದೇ ದೇಶಕ್ಕೆ ಪ್ರಧಾನಿಯೊಬ್ಬರು ತೆರಳಿದಾಗ ಭೇಟಿಯ ವೇಳೆ ಭಾರತದ ವಸ್ತುವನ್ನು ಉಡುಗೊರೆಯಾಗಿ ನೀಡುವುದು ಸಂಪ್ರದಾಯ. ಭಾರತದ ಪಾರ್ಲೆಜಿ ಕಂಪನಿಯ ಉತ್ಪನ್ನವಾದ ಚಾಕಲೇಟ್ ನೀಡಿದ್ದನ್ನೇ ಕುಹಕದಿಂದ, ವಿಕೃತಾರ್ಥದಲ್ಲಿ ಲೇವಡಿ ಮಾಡುವುದು, ಬೌದ್ಧಿಕ ದಿವಾಳಿತನದ ಪ್ರದರ್ಶನವಾಗಬಹುದಷ್ಟೆ.

ಪ್ರಧಾನಿ ಮೋದಿ ಪ್ರವಾಸ ಮುಗಿಸಿ ದೆಹಲಿಗೆ ಬರುತ್ತಿದ್ದಂತೆ, ಇತ್ತ ವಿಪಕ್ಷ ನಾಯಕ ರಾಹುಲ್ ಗಾಂಧಿ ರಾಯ್ ಬರೇಲಿ ಮತ್ತು ಅಮೇಥಿಯ ಸಭೆಗಳಲ್ಲಿ ಮಾತನಾಡುತ್ತಾ 'ನಿತ್ಯವೂ ಸಂವಿಧಾನದ ಮೇಲೆ ದಾಳಿ ನಡೆಸುವ ಮತ್ತು ದೇಶದ ಹಿತಾಸಕ್ತಿಯನ್ನು ಆಯ್ದ ಉದ್ಯಮಿಗಳಿಗೆ ಮಾರಾಟ ಮಾಡುವ ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಆರೆಸ್ಸೆಸ್ ದೇಶದ್ರೋಹಿಗಳು' ಎಂದು ಗರ್ಜಿಸಿದ್ದಾರೆ. ಉಗ್ರರ ಭಾಷೆಯಲ್ಲಿ ಮಾತನಾಡಿದ ಅವರು, 'ಹೀಗೆ ಹೇಳಿದ್ದಕ್ಕಾಗಿ ಕ್ಷಮೆ ಕೇಳುವುದಿಲ್ಲ, ನಾನು ಯಾರಿಗೂ ಹೆದರುವುದಿಲ್ಲ' ಎಂದು ಎಂದಿನಂತೆ ಕೂಗಾಡಿದರು. ಸಂವಿಧಾನದ ಮೇಲೆ ಮೋದಿ ದಾಳಿ ಮಾಡಿದ್ದಕ್ಕೆ ಮತ್ತು ದೇಶದ ಹಿತಾಸಕ್ತಿಯನ್ನು ಆಯ್ದ ಉದ್ಯಮಿಗಳಿಗೆ ಮಾರಾಟ ಮಾಡಿದ್ದಕ್ಕೆ ಯಾವುದೇ ದಾಖಲೆಯನ್ನು ಮಾತ್ರ ರಾಹುಲ್ ಗಾಂಧಿ ಒದಗಿಸಲಿಲ್ಲ. ಅವರದೇನಿದ್ದರೂ ಬರಿದೇ ಆರೋಪ ಮತ್ತು ಪಲಾಯನ. ತಮ್ಮ ಆರೋಪಗಳಿಗೆ ಸಾಕ್ಷ್ಯ ಒದಗಿಸುವ ಉತ್ತರದಾಯಿತ್ವವನ್ನು ಲೋಕಸಭೆಯೊಳಗೆ ಮತ್ತು ಹೊರಗೆ ಎಂದೂ ಪ್ರದರ್ಶಿಸಿದ್ದಿಲ್ಲ. ವಿಪಕ್ಷ ನಾಯಕನೆಂದರೆ ಬೇಜವಾಬ್ದಾರಿಯ ಇಂತಹ ಹೇಳಿಕೆಗಳನ್ನು ಎಗ್ಗಿಲ್ಲದೆ ಕೊಡಬಹುದು ಎಂದು ಭಾವಿಸಿ ಬಿಟ್ಟಿದ್ದಾರೆ.

ಪ್ರಧಾನಿ ಮೋದಿಯವರ ವಿರುದ್ಧ ಇಂತಹ ಕುತ್ಸಿತ ಟೀಕೆಗಳು ವ್ಯಕ್ತವಾಗುತ್ತಿರುವುದು ಇದೇ ಮೊದಲನೆಯ ಸಲವಲ್ಲ. ಇದೇ ಕೊನೆಯದೂ ಖಂಡಿತ ಆಗಲಿಕ್ಕಿಲ್ಲ. ಮೋದಿ ಒಬ್ಬ ಚಾಯ್‌ವಾಲಾ, ದೇಶದ ಪ್ರಧಾನಿಯಾಗಲು ಅನರ್ಹ ಎಂದರು. ಗುಜರಾತ್ ಹತ್ಯಾಕಾಂಡದ ಹಿನ್ನೆಲೆಯಲ್ಲಿ ಯಾವುದೇ ಸಾಕ್ಷ್ಯ ಇಲ್ಲದಿದ್ದರೂ ಮೋದಿ 'ಸಾವಿನ ವ್ಯಾಪಾರಿ' ಎಂದು ಆಗ ಸೋನಿಯಾ ಗಾಂಧಿ ನಿಂದಿಸಿದ್ದರು. ಈ ತೆರನ ಇನ್ನೂ ಅದೆಷ್ಟೋ ನಿಂದನೆಯ ನುಡಿಗಳನ್ನು ಮೋದಿ ಪ್ರತಿನಿತ್ಯ ಕೇಳಿಸಿಕೊಳ್ಳುತ್ತಲೇ ಇದ್ದಾರೆ. ಆದರೆ ಅದಕ್ಕೆಲ್ಲ ಅವರೇನೂ ತಲೆಕೆಡಿಸಿಕೊಂಡಿಲ್ಲ.

ಒಮ್ಮೆ 'ಆಪ್ ಕೀ ಅದಾಲತ್' ಟಿವಿ ಕಾರ್ಯಕ್ರಮದಲ್ಲಿ ನಿರೂಪಕ ರಜತ್ ಶರ್ಮಾ 'ನೀವು ದಿನದ 24 ಗಂಟೆ ಕಾರ್ಯನಿರ್ವಹಿಸಿದರೂ ಎನರ್ಜೆಟಿಕ್ ಆಗಿಯೇ ಕಾಣಿಸುತ್ತೀರಲ್ಲ, ಇದರ ಹಿಂದಿನ ಗುಟ್ಟೇನು?' ಎಂದು ಪ್ರಶ್ನಿಸಿದ್ದರು. ಆಗ ಮೋದಿ ನಗುತ್ತಾ 'ಗುಟ್ಟೇನಿಲ್ಲ, ಪ್ರತಿನಿತ್ಯ ವಿರೋಧಿಗಳ ಕಡೆಯಿಂದ ಕನಿಷ್ಠ 10 ಕಿಲೋಗ್ರಾಂನಷ್ಟು ಬೈಗುಳ, ನಿಂದನೆ ಕೇಳಿಸಿಕೊಳ್ಳುತ್ತಲೇ ಇರುತ್ತೇನೆ. ನಾನು ಸಕ್ರಿಯತೆಯಿಂದ ಕಾರ್ಯನಿರ್ವಹಿಸಲು ಆ ಬೈಗುಳವೇ ಟಾನಿಕ್' ಎಂದಿದ್ದರು!

ಐದು ದೇಶಗಳ ಪ್ರವಾಸ ಮುಗಿಸಿ ಮೋದಿ ಭಾರತಕ್ಕೆ ಬರುವ ವೇಳೆಗೆ ಇನ್ನೊಂದು ರಾಜಕೀಯ ಸಂಚಲನ. ಕೆಲವು ದಿನಗಳ ಹಿಂದೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರು ಕೆಲವು ನಿರುದ್ಯೋಗಿಗಳು ಜಿರಳೆಗಳಿದ್ದಂತೆ ಎಂದು ಹೇಳಿದ್ದರು. ಅವರ ಈ ಹೇಳಿಕೆ ಹಾಗೂ ದೇಶದ ರಾಜಕೀಯ ವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಲು ಹುಟ್ಟುಹಾಕಲಾದ 'ಕಾಕ್ರೋಚ್ ಜನತಾ ಪಾರ್ಟಿ' (ಸಿಜೆಪಿ) ಆನ್‌ಲೈನ್ ಅಭಿಯಾನ ಸಾಮಾಜಿಕ ಮಾಧ್ಯಮದಲ್ಲಿ ಸುನಾಮಿಯನ್ನೇ ಎಬ್ಬಿಸಿತು. ಸಾಮಾಜಿಕ ಮಾಧ್ಯಮದಲ್ಲಿ ಆರಂಭವಾದ ಈ ಪಾರ್ಟಿಗೆ ಕೇವಲ ಒಂದೇ ವಾರದಲ್ಲಿ ಎಕ್ಸ್ ಖಾತೆಯಲ್ಲಿ 16,800 ಸದಸ್ಯತ್ವ ಹಾಗೂ ಎರಡು ಕೋಟಿಗೂ ಅಧಿಕ ಫಾಲೋವರ್ಸ್. ಬಿಜೆಪಿ ಫಾಲೋವರ್‌ಗಳ ಸಂಖ್ಯೆಯಾದ 88 ಲಕ್ಷಕ್ಕಿಂತ ಇದು ಅಧಿಕ. ಈ ಪಕ್ಷದ ಸಂಸ್ಥಾಪಕ ಅಧ್ಯಕ್ಷ ಎಂದು ಕರೆದುಕೊಂಡಿರುವ ಅಭಿಜಿತ್ ದಿಪ್ಕೆ ಪುಣೆ ಮೂಲದ, ಈ ಹಿಂದೆ ಅರವಿಂದ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷದ ಸಾಮಾಜಿಕ ಮಾಧ್ಯಮ ನಿರ್ವಹಿಸುತ್ತಿದ್ದ ಆಸಾಮಿ. ಅಮೆರಿಕದ ಬೋಸ್ಟನ್‌ನಲ್ಲಿ ಕುಳಿತೇ ಆತ ಈ ಪಕ್ಷ ಹುಟ್ಟುಹಾಕಿ, ಹಾದಿ ತಪ್ಪಿರುವ ಜೆನ್‌ಝೀಗಳ (ಹಾದಿ ತಪ್ಪದ ಜೆನ್‌ಝೀಗಳ ಸಂಖ್ಯೆ ಅದಕ್ಕಿಂತಲೂ ದೊಡ್ಡದಿದೆ) ಗಮನ ಸೆಳೆಯುವಲ್ಲಿ ಯಶಸ್ವಿ ಆಗಿರುವುದಂತೂ ನಿಜ.



ಆದರೆ ಭಾರತದಲ್ಲಿ ಈ ಎಕ್ಸ್ ಖಾತೆಗೆ ನಿರ್ಬಂಧ ಹೇರಿದಾಗ 'ಕಾಕ್ರೋಚ್ ಈಸ್ ಬ್ಯಾಕ್' ಎಂಬ ಮತ್ತೊಂದು ಖಾತೆ ಆರಂಭಿಸಲಾಗಿದೆ. ಅಭಿಜಿತ್ ಜೊತೆಗೆ ಕೈಜೋಡಿಸಿರುವ ಇನ್ನೊಬ್ಬ ಯುವಕ ಅರ್ಪಿತ ಶರ್ಮಾ. 2024ರ ಲೋಕಸಭಾ ಚುನಾವಣೆ ವೇಳೆ ಇವರಿಬ್ಬರೂ ಕೇಜ್ರಿವಾಲರ ಪಕ್ಷದ ಪೂರ್ಣಾವಧಿ ಕಮ್ಯುನಿಕೇಷನ್ ಅಡ್ವೈಸರ್ ಆಗಿದ್ದರು. ಆದರೆ ಆ ಚುನಾವಣೆಯಲ್ಲಿ ಭಾರತದ ಪ್ರಜ್ಞಾವಂತ ಜನತೆ ಕೇಜ್ರಿವಾಲ್ ಮತ್ತು ರಾಹುಲ್ ಗಾಂಧಿಯವರ ಸುಳ್ಳುಗಳನ್ನು ಕಸದ ಬುಟ್ಟಿಗೆ ಎಸೆದಾಗ ಈ ಮಹಾಶಯರು ನೇರವಾಗಿ ಹಾರಿದ್ದು ಅಮೆರಿಕೆಗೆ. ಅಲ್ಲಿ ಕುಳಿತು ವೈ-ಫೈ ಬಳಸಿಕೊಂಡು ಈ 'ಜಿರಳೆ' ನಾಟಕ ಆಡುತ್ತಿದ್ದಾರೆ. ಈ ಜಿರಳೆ ಪಾರ್ಟಿಗೆ ಸೇರಲು ನೀಡಿರುವ ಗೂಗಲ್ ಫಾರ್ಮ್ ಲಿಂಕ್‌ಗೆ ಮುಗ್ಧ ಯುವಕರು ಇದೇನೋ ಹೊಸ ಕ್ರಾಂತಿ ಎಂದು ಭ್ರಮಿಸಿ ತಮ್ಮ ಹೆಸರು, ಫೋನ್ ನಂಬರ್, ಇಮೇಲ್ ಎಲ್ಲವನ್ನು ತುಂಬುತ್ತಾರೆ . ಆದರೆ ನಿಜ ಸಂಗತಿ ಏನೆಂದರೆ ಯುವಕರ ಎಲ್ಲಾ ಡೇಟಾ ನೇರವಾಗಿ ಹೋಗುವುದು ಆಮ್ ಆದ್ಮಿ ಪಾರ್ಟಿಯ ಡೇಟಾಬೇಸ್‌ಗೆ! ಅಂದರೆ ಯುವ ಜನತೆಯ ವೈಯಕ್ತಿಕ ಮಾಹಿತಿಯನ್ನು ಕದ್ದು ಮುಂದೆ ಚುನಾವಣೆಗಳಲ್ಲಿ ಯುವಕರಿಗೆ ಸುಳ್ಳು ಪ್ರಚಾರದ ಮೆಸೇಜ್‌ಗಳನ್ನು ಕಳಿಸಲು ಹೂಡಿರುವ ದೊಡ್ಡ ಷಡ್ಯಂತ್ರ ಇದು! ಇದು ಕ್ರಾಂತಿಯಲ್ಲ, ಬದಲಿಗೆ ಹಣ ಕೊಟ್ಟು ರಾತ್ರೋರಾತ್ರಿ ವೈರಲ್ ಮಾಡುವ ಹುನ್ನಾರ. ಇದರ ಹಿಂದಿರುವವರು ಭಾರತದ ಪ್ರಗತಿಯನ್ನು ಸಹಿಸದ, ಹಿಂದು ಧರ್ಮ ಮತ್ತು ರಾಷ್ಟ್ರೀಯತೆಯನ್ನು ಸದಾ ದ್ವೇಷಿಸುವ ಕಾಂಗ್ರೆಸ್ ಮತ್ತು ಎಎಪಿ ಕೂಲಿ ಕೆಲಸಗಾರರು. ಹಾಗೆಂದೇ ಕಾಂಗ್ರೆಸ್, ಎಐಪಿ ಸೇರಿದಂತೆ ವಿಪಕ್ಷಗಳು ಜಿರಳೆ ಪಾರ್ಟಿಯನ್ನು ಬೆಂಬಲಿಸಿವೆ.

ಆದರೆ ಇದಾವುದನ್ನು ಪರಿಗಣಿಸದೆ ಕನಿಷ್ಠ ಫ್ಯಾಕ್ಟ್‌ಚೆಕ್ ಕೂಡ ಮಾಡದೆ ಕೆಲವು ಪತ್ರಿಕೆಗಳು ಮತ್ತು ಸುದ್ದಿ ವಾಹಿನಿಗಳು ಜಿರಳೆ ಪಾರ್ಟಿಗೆ ಭಾರಿ ಪ್ರಚಾರ ಒದಗಿಸಿರುವುದು ದೇಶವಿರೋಧಿ ನಡೆಯಲ್ಲದೆ ಮತ್ತೇನು?

ತಮಿಳುನಾಡು ಚುನಾವಣೆಯಲ್ಲಿ ಎಲ್ಲ ವರ್ಗದವರ ಮತ ಪಡೆದು ಅಧಿಕಾರಕ್ಕೇರಿದ ಟಿವಿಕೆ ಮುಖ್ಯಸ್ಥ ತನ್ನ ವಿಜಯೋತ್ಸವ ಮೆರವಣಿಗೆಯಲ್ಲಿ ಪ್ರದರ್ಶಿಸಿದ್ದು ಭಾರತ ಮಾತೆಯ ಚಿತ್ರವಲ್ಲ, ಏಸುಕ್ರಿಸ್ತನ ಚಿತ್ರವನ್ನು! ಅದನ್ನು ಎಡಪಂಥೀಯ ನಿಲುವಿನ ಯಾವ ಮಾಧ್ಯಮಗಳೂ ಟೀಕಿಸಲಿಲ್ಲ. ಡಿಎಂಕೆ ಮೈತ್ರಿಕೂಟದ ಭಾಗವಾಗಿದ್ದ ಕಾಂಗ್ರೆಸ್ ವಿಜಯ್ ಸರ್ಕಾರಕ್ಕೆ ಬೆಂಬಲ ನೀಡಿದ್ದು ಅನೈತಿಕ ನಡೆ ಎಂದು ಇದೇ ಮಾಧ್ಯಮಗಳು ಹೇಳಲೇ ಇಲ್ಲ . ಕೇರಳದಲ್ಲಿ ನೂತನ ಯುಡಿಎಫ್ ಸರ್ಕಾರದ ಪ್ರಮಾಣ ವಚನದ ವೇಳೆ 'ವಂದೇ ಮಾತರಂ'ಗಾಯನ ಮೊಳಗಿದಾಗ ಮುಖ್ಯಮಂತ್ರಿ ಸತೀಶನ್ ಎದ್ದುನಿಂತು ಗೌರವ ಸಲ್ಲಿಸದೆ ಅವಮಾನಿಸಿದಾಗ ಇದೇ ಮಾಧ್ಯಮಗಳು ಚಕಾರ ಕೂಡ ಎತ್ತಲಿಲ್ಲ. ಅದು 'ವಂದೇ ಮಾತರಂ' ಗೀತೆಗೆ ಮಾಡಿದ ಅಪಚಾರ ಎಂದು ಅವುಗಳಿಗೆ ಅನ್ನಿಸಲೇ ಇಲ್ಲ. ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಡದೆ ಹಠ ಹಿಡಿದಾಗ ಅದೊಂದು ಅಸಂವಿಧಾನಿಕ ನಡೆ ಎಂದು ಅನ್ನಿಸಲೇ ಇಲ್ಲ. ಆದರೆ ಭಾರತದಲ್ಲಿ ಅರಾಜಕತೆ ಸೃಷ್ಟಿಸಲು ಕೆಲವು ಎಡಬಿಡಂಗಿಗಳು ಜಿರಳೆ ಪಾರ್ಟಿ ಕಟ್ಟಿ ಪ್ರಚಾರಗಿಟ್ಟಿಸಿದರೆ ಈ ಮಾಧ್ಯಮಗಳಿಗೆ ಬ್ರೇಕಿಂಗ್ ನ್ಯೂಸ್!

ಜಿರಳೆ ಪಾರ್ಟಿಯ ಉದ್ದೇಶ ಬಲು ಸ್ಪಷ್ಟ. ಮೋದಿಯ ಪದಚ್ಯುತಿ, ಮತ್ತೆ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟದ ಮರುಸ್ಥಾಪನೆ. ಬಾಂಗ್ಲಾದೇಶ, ನೇಪಾಳದಂತೆ ಜೆನ್‌ಝೀ ದಂಗೆಯ ಮಾದರಿಯಲ್ಲಿ ಭಾರತದಲ್ಲಿ ದಂಗೆ ಎಬ್ಬಿಸುವ ಒಂದು ವಿಫಲ ಪ್ರಯತ್ನ ಇದು. ಆದರೆ ಭಾರತ ಬಾಂಗ್ಲಾದೇಶವೂ ಅಲ್ಲ, ನೇಪಾಳವೂ ಅಲ್ಲ. ಭಾರತ ಭಾರತವಾಗಿಯೇ ಇರುತ್ತದೆ. ಮೊಘಲರು, ಆಂಗ್ಲರು, ಹೂಣರನ್ನೇ ಬಗ್ಗುಬಡಿದ ನೆಲ ಇದು. ನಕಲಿ ಆನ್‌ಲೈನ್ ಕ್ರಾಂತಿಕಾರಿಗಳ ಅಗ್ಗದ ಆಟವನ್ನು ನಂಬುವಷ್ಟು ನವ ಭಾರತದ ಪ್ರಜ್ಞಾವಂತ ಯುವಕರು ದಡ್ಡಶಿಖಾಮಣಿಗಳೆ? ದೇಶ ಮೊದಲು ಎಂದು ನಂಬಿರುವ ಈ ಪ್ರಜ್ಞಾವಂತ ತರುಣರು ಇಂತಹ ಮೋಸದಾಟಗಳಿಗೆ ಖಂಡಿತ ಬಲಿಯಾಗಲಾರರು.

ಆನ್‌ಲೈನ್ ಅಭಿಯಾನವೇ ಬೇರೆ. ಅದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತವಾಗಿ ಪರಿವರ್ತಿಸುವುದೇ ಬೇರೆ. ಆನ್‌ಲೈನ್ ಮೂಲಕ ವ್ಯಕ್ತವಾಗುತ್ತಿರುವ ಬೆಂಬಲದ ಕಾವನ್ನು ಜಿರಳೆ ಜನತಾ ಪಾರ್ಟಿ ಆರದಂತೆ ಉಳಿಸಿಕೊಳ್ಳುತ್ತಾ? ಅಥವಾ ಸುನಾಮಿಯಾಗಿ ಎದ್ದ ಈ ಅಲೆ ಅಷ್ಟೇ ಬೇಗ ತಣ್ಣಗಾಗಿ ಹೋಗುತ್ತಾ? ಕಾದು ನೋಡಬೇಕಷ್ಟೆ. 'ಜಿರಳೆ' ಎಂದು ಸಿಜೆಐ ಬಣ್ಣಿಸಿದ್ದಕ್ಕೆ ಸಿಟ್ಟಾಗಿದ್ದ ಯುವಕರಿಗೆ ''ಜಿರಳೆ ಜನತಾ ಪಾರ್ಟಿ'' ಆಕರ್ಷಕವಾಗಿ ಕಂಡಿರಬಹುದು. ಹೀಗಾಗಿ ಬೆಂಬಲ ಕೊಟ್ಟಿರಬಹುದು.

ಈ ನಡುವೆ ಆ್ಯಕ್ಸಿಸ್ ಮೈ ಇಂಡಿಯಾ ಸಂಸ್ಥೆಯ ಮುಖ್ಯಸ್ಥರಾಗಿರುವ ಪ್ರದೀಪ್ ಗುಪ್ತಾ ''2014ರಲ್ಲಿ ದೇಶಾದ್ಯಂತ ಶುರುವಾದ ಬಿಜೆಪಿಯ ರಾಜಕೀಯ ಪ್ರಾಬಲ್ಯ 2034ರ ವರೆಗೂ ಮುಂದುವರೆಯಲಿದೆ. ಬಿಜೆಪಿ ಸರ್ಕಾರದ ಸಾಧನೆ ದುರ್ಬಲ ಆಗುವವರೆಗೂ ಅದು ಅಧಿಕಾರದಲ್ಲಿರುತ್ತದೆ' ಎಂದು ಭವಿಷ್ಯ ನುಡಿದಿದ್ದಾರೆ. ಈ ಹೇಳಿಕೆಗೆ ಮಾತ್ರ ನಿರೀಕ್ಷಿತ ಪ್ರಚಾರ ಸಿಕ್ಕಿಲ್ಲ!

ಜಿರಳೆ ಜನತಾ ಪಾರ್ಟಿಗೆ ನಾ ಮುಂದು ತಾ ಮುಂದು ಎಂದು ಬೆಂಬಲಿಸುತ್ತಿರುವ, ತಾವಾಗಿಯೇ ಜೋತು ಬೀಳುತ್ತಿರುವ ಪಕ್ಷಗಳನ್ನು ನೋಡಿದರೆ, ಅವುಗಳಿಗೆ ಇದುವರೆಗೆ ಸ್ವಸಾಮರ್ಥ್ಯವೇ ಇರಲಿಲ್ಲ ಎಂಬುದಂತೂ ಸಾಬೀತಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರೆಯದವರು

ಹರೆಯದವರು ದಿನಕ್ಕೆ ಎರಡು ಗಂಟೆಗಿಂತ ಹೆಚ್ಚು ಸ್ಕ್ರೀನ್ ಟೈಮ್‌ನ್ನು ಉಪಯೋಗಿಸುವುದು ಒಳ್ಳೆಯದಲ್ಲ.



ತಾರುಣ್ಯ ತಲ್ಲಣ
ಡಾ.ಕೆ.ಆರ್. ಶ್ರೀಧರ್
drkrsridhar208@gmail.com

ಇದು ಮಾಹಿತಿ ತಂತ್ರಜ್ಞಾನದ ಯುಗ. ಮನೆಯಲ್ಲೇ ಕೂತು ಕ್ಷಣಮಾತ್ರದಲ್ಲಿ ನಮ್ಮ ಅನಿಸಿಕೆಗಳನ್ನು ಇತರರೊಂದಿಗೆ ಹಂಚಿಕೊಳ್ಳಬಹುದು. ಅವರಿಂದ ಮಾಹಿತಿಯನ್ನು ಸಂಗ್ರಹಿಸಲೂ ಬಹುದು. ಇದಕ್ಕೆ ಅವಶ್ಯವಿರುವುದು ಎಲ್ಲಾ ರೀತಿಯ ಸೌಲಭ್ಯಗಳನ್ನು ಹೊಂದಿರುವ ಸ್ಮಾರ್ಟ್ ಫೋನ್, ಲ್ಯಾಪ್‌ಟಾಪ್ ಮತ್ತು ಇಂಟರ್‌ನೆಟ್. ನಮ್ಮ ಯೋಚನೆಗಳನ್ನು ಹಂಚಿಕೊಳ್ಳಲು, ಕಳುಹಿಸಲು, ಬೇರೆಯವರಿಂದ ಮಾಹಿತಿ ಪಡೆಯಲು ಇರುವ ಮಾರ್ಗಗಳು ಎಂದರೆ ಇಂಟರ್‌ನೆಟ್, ವಾಟ್ಸ್ ಆಪ್, ಯೂಟ್ಯೂಬ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟ್ವಿಟರ್, ಟಿಕ್‌ಟಾಕ್, ಸ್ನ್ಯಾಪ್ ಛಾಟ್ ಹೀಗೆ ಹಲವಾರು ಇವೆ. ಇವಕ್ಕೆ ಸಾಮಾಜಿಕ ಜಾಲತಾಣಗಳು ಎಂದು ಕರೆಯುತ್ತಾರೆ. ನಮ್ಮ ದೇಶದಲ್ಲಿ ಪ್ರತಿಶತ ತೊಂಭತ್ತಕ್ಕಿಂತ ಹೆಚ್ಚು ಮಂದಿ ಹರೆಯದವರು ಇವುಗಳಲ್ಲಿ ಒಂದಕ್ಕಿಂತ ಹೆಚ್ಚು ಜಾಲತಾಣಗಳನ್ನು ಉಪಯೋಗಿಸುತ್ತಾರೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ.

ಸಾಮಾಜಿಕ ಜಾಲತಾಣಗಳನ್ನು ಸರಿಯಾಗಿ ಉಪಯೋಗಿಸಿದಾಗ ಅದು ಒಂದು ವರ ಎಂಬುದರಲ್ಲಿ ಎರಡು ಮಾತಿಲ್ಲ ಆದರೆ ಎರ್‍ರಾಬಿರ್‍ರಿಯಾಗಿ ಉಪಯೋಗಿಸಿದಾಗ ಅದು ನಮ್ಮ ಭವಿಷ್ಯಕ್ಕೆ ಕುತ್ತು ತರಬಹುದು ಎಂಬುದನ್ನು ತಿಳಿದಿರಬೇಕು. ವಿಶೇಷವಾಗಿ ಹರೆಯದವರು ಜಾಲತಾಣಗಳನ್ನು ಮತ್ತು ಅದರ ಸಾಧಕ ಬಾಧಕಗಳು ಗೊತ್ತಿಲ್ಲದೇ, ಅವಕ್ಕೆ ಮಾರು ಹೋದಾಗ, ಅವರ ಭವಿಷ್ಯ ಹಾಳಾಗಿ ಅದರಿಂದ ಇಡೀ ಕುಟುಂಬವೇ ಅಧೋಗತಿಗೆ ತಲುಪಬಹುದು. ಅದಕ್ಕಾಗಿ ಈ ಲೇಖನ.

ಎರಡನೇ ಪಿಯುಸಿಯ ವಿದ್ಯಾರ್ಥಿ ಅರುಣ್. ಹತ್ತನೇ ತರಗತಿಯಲ್ಲಿ ಜಿಲ್ಲೆಗೆ ಮೊದಲ ಸ್ಥಾನ ಗಳಿಸಿ ಎಲ್ಲರಿಂದಲೂ ಹೊಗಳಿಸಿಕೊಂಡಿದ್ದ. ಅದಕ್ಕಾಗಿ ಅರುಣ್‌ಗೆ ಪುರಸ್ಕಾರಗಳು ಬಂದಿದ್ದವು. ಪಿಯುಸಿ ಓದಲು ಬೆಂಗಳೂರು ಸೇರಿದ. ಅಲ್ಲಿ ಹಾಸ್ಟೆಲ್‌ಗೆ ಸೇರಿಸಿದರು. ಅರುಣ್‌ಗೆ ಚೆನ್ನಾಗಿ ಓದಲು ಒಂದು ಸ್ಮಾರ್ಟ್ ಫೋನ್ ಬೇಕೆಂದ. ಅದನ್ನು ತಂದೆ ರವಿ ಕೊಡಿಸಿದರು. ಪಿಯುಸಿಯಲ್ಲಿ ಅರುಣ್‌ನ ಓದು ಮುಂದುವರೆದಿತ್ತು. ಆದರೆ ಮೊದಲ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದವು. ಸ್ಥಳ ಬದಲಾವಣೆ, ಹೊಂದಿಕೊಳ್ಳುವ ಸಮಸ್ಯೆ ಎಂದು ತಂದೆ ರವಿ ಭಾವಿಸಿದರು. ಎರಡನೇ ಪಿಯುಸಿ ಪರೀಕ್ಷೆಯಲ್ಲಿ ಅರುಣ್ ತಾನು ಚೆನ್ನಾಗಿ ಬರೆದಿದ್ದೇನೆ. ಈ ಬಾರಿ ಫಸ್ಟ್ ಬರಬಹುದು ಎಂದು ಅಪ್ಪ ಅಮ್ಮನೊಂದಿಗೆ ಹೇಳಿದ್ದ. ಆದರೆ ಫಲಿತಾಂಶ ಬಂದಾಗ ಎರಡು ವಿಷಯಗಳಲ್ಲಿ ಫೇಲಾಗಿದ್ದ. ಇದನ್ನು ಕಂಡ ತಂದೆ ರವಿ ಯಾಕೆ ಹೀಗಾಯಿತು ಎಂದು ಖಡಕ್ಕಾಗಿ ಮಗನನ್ನು ಕೇಳಿದಾಗ, ತಾನು ತನ್ನ ಫೋನಿನಲ್ಲಿ ಕೆಲವು ವೀಡಿಯೋಗಳನ್ನು ಮತ್ತು ರೀಲ್ಸ್‌ಗಳನ್ನು ನೋಡುತ್ತಾ ರಾತ್ರಿ ಎರಡು ಗಂಟೆಯಾದರೂ ತಿಳಿಯುತ್ತಿರಲಿಲ್ಲ. ನಂತರ ನಿದ್ದೆ ಬಂದು ಮಲಗುತ್ತಿದ್ದೆ. ಇದರಿಂದ ಓದಿನಲ್ಲಿ ನಿರಾಸಕ್ತಿ ಉಂಟಾಯಿತು. ಅದರ ಕಾರಣ ತಾನು ಫೇಲಾದೆ ಎಂಬ ಸತ್ಯವನ್ನು ಹೊರಗೆಡಹಿದ.

ಉಮಾ ತಂದೆಗೆ ಒಬ್ಬಳೇ ಮಗಳು. ಪಿಯುಸಿ ಓದುತ್ತಿದ್ದಾಳೆ. ಚೆನ್ನಾಗಿ ಓದುತ್ತಿದ್ದ ಉಮಾ ಒಂದು ದಿನ ಮುಖ ಪೆಚ್ಚು ಹಾಕಿಕೊಂಡು ತರಗತಿಯಿಂದ ಮನೆಗೆ ಬಂದಳು. ಇದನ್ನು ಗಮನಿಸಿದ ತಾಯಿ ಸರೂ, ಕಾರಣ ಏನೆಂದು ಕೇಳಿದಾಗ ಉಮಾ ಒಂದೇ ಸಮನೆ ಮುಖ ಮುಚ್ಚಿಕೊಂಡು ಅಳಲು ಪ್ರಾರಂಭಿಸಿದಳು. ಕಾರಣ ಕೇಳಿದಾಗ ಫೇಸ್‌ಬುಕ್‌ನಲ್ಲಿ ತನ್ನ ಗೆಳತಿಯಿಂದ ಬಂದ ಮೆಸೇಜ್‌ಗಳನ್ನು ತೋರಿಸಿದಳು. ಅವಳ ಗೆಳತಿ ಅವಾಚ್ಯ ಶಬ್ದಗಳಿಂದ ಉಮಾಳಿಗೆ ಬೈಯ್ದ ಸಂದೇಶವಾಗಿತ್ತು. ಇದಕ್ಕೆ ಅವಳ ಗೆಳತಿಯರು ಕೆಲವರು ತಮ್ಮ ತಮ್ಮ ಹೌದು-ಇಲ್ಲ ಎಂಬ ಪ್ರತಿಕ್ರಿಯೆಯನ್ನು, ಕೆಲವರು ಈಮೋಜಿ ಮೂಲಕ ತಮ್ಮ ಅಭಿಪ್ರಾಯವನ್ನು ನಮೂದಿಸಿದ್ದರು. ಇದನ್ನು ನೋಡಿದ ಉಮಾ ಅವಮಾನದಿಂದ ತತ್ತರಿಸಿ ಹೋಗಿದ್ದಳು. ತಾನು ಇನ್ನು ಕಾಲೇಜಿಗೇ ಹೋಗುವುದಿಲ್ಲ ಎಂದು ಹಠ ಹಿಡಿದಳು. ಇಂತಹ ಬೈಯ್ಗುಳಗಳಿಗೆ ಇಂಗ್ಲೀಷಿನಲ್ಲಿ ''Cyber bullying''(ಸೈಬರ್ ಬುಲ್ಲೀಯಿಂಗ್) ಎಂದು ಕರೆಯುತ್ತಾರೆ.

ಮೂರನೆಯ ಘಟನೆಯಲ್ಲಿ, ಸಂದೀಪ್ ಎಂಬ ಪಿಯುಸಿ ವಿದ್ಯಾರ್ಥಿ ಓದುವುದರಲ್ಲಿ ಸರಾಸರಿಗಿಂತ ಹೆಚ್ಚು ಬುದ್ಧಿವಂತ. ಅವನಿಗೆ ತಾನು ಹೇಗಾದರೂ ಮಾಡಿ ಈ ಬಾರಿ ನೀಟ್ ಪರೀಕ್ಷೆಯಲ್ಲಿ ವೈದ್ಯಕೀಯ ಸೀಟ್ ಗಿಟ್ಟಿಸಲೇ ಬೇಕು ಎಂದು ತನ್ನ ಉಪಾಧ್ಯಾಯರ ಹತ್ತಿರ ಹೋದ. ಅವರು ನೀಟ್ ಸ್ಪೆಷಲ್ ಕೋಚಿಂಗ್ ಜೊತೆಗೆ ಸ್ಮಾರ್ಟ್ ಫೋನ್ ಇದ್ದರೆ ಒಳ್ಳೆಯದು. ಆದರೆ ಅದನ್ನು ಸರಿಯಾಗಿ ಉಪಯೋಗಿಸಬೇಕೆಂದು ಹೇಳಿದರು. ಕೂಡಲೇ ಸ್ಮಾರ್ಟ್ ಫೋನ್ ಬೇಕೆಂದು ತಂದೆಗೆ ಹೇಳಿದ. ಅವರೂ ಅದನ್ನು ಕೊಡಿಸಿದರು. ಅಂತೂ ಇಂತೂ ಸ್ಪೆಷಲ್ ಕೋಚಿಂಗ್ ಪಡೆದು, ಸ್ಮಾರ್ಟ್ ಫೋನ್ ಸಹಾಯದಿಂದ ನೀಟ್‌ನಲ್ಲಿ ಚೆನ್ನಾಗಿ ಬರೆದು ವೈದ್ಯಕೀಯ ಸೀಟ್ ಗಿಟ್ಟಿಸಿಕೊಂಡ. ಅದು ಸಂದೀಪನಿಗೆ ವರವಾಗಿ ಪರಿಣಮಿಸಿತು. ಆದರೆ ಮೊದಲಿನ ಎರಡು ಉದಾಹರಣೆಗಳಲ್ಲಿ (ಅರುಣ್ ಮತ್ತು ಉಮಾ) ಸಾಮಾಜಿಕ ಜಾಲತಾಣವು ಶಾಪವಾಯಿತು.

ಸಾಮಾಜಿಕ ಜಾಲತಾಣಗಳಿಂದ ಶಿಕ್ಷಣದ ಮಾಹಿತಿ, ಸೃಜನಶೀಲತೆ, ವೈವಿಧ್ಯಮಯವಾದ ಕಲಿಕೆ ಮತ್ತು ಆಳವಾದ ಜ್ಞಾನವನ್ನು ಪಡೆಯಬಹುದು. ಹರೆಯದವರು ಸಹಪಾಠಿಗಳೊಂದಿಗೆ ಗೆಳೆತನ ಸಾಧಿಸಬಹುದು. ಅದೇ ರೀತಿ ಜಾಲತಾಣಗಳ ಮೂಲಕವೇ ತಮ್ಮ ಸಂದೇಹಗಳ ಕುರಿತು ಚರ್ಚಿಸಿ ವಿಷಯಗಳನ್ನು ಸ್ಪಷ್ಟ ಮಾಡಿಕೊಳ್ಳಬಹುದು. ಒಂಟಿ ಎನಿಸಿದರೆ ಗೆಳೆಯರೊಂದಿಗೆ ಸ್ವಲ್ಪ ಹೊತ್ತು ಮಾತನಾಡಿ ಮನಸ್ಸನ್ನು ಹಗುರ ಮಾಡಿಕೊಳ್ಳಬಹುದು. ಗೆಳೆಯರ ಗುಂಪಿನೊಂದಿಗೆ ಬೆರೆತಾಗ ಒಂಟಿತನ ಮಾಯವಾಗಿ ಮನಸ್ಸು ನಿರಾಳವೆನಿಸುತ್ತದೆ. ಮನಸ್ಸಿಗೆ ಆಹ್ಲಾದಕರವೆನಿಸುತ್ತದೆ. ಸೃಜನಶೀಲತೆಯನ್ನು ಬೆಳೆಸಿಕೊಳ್ಳಬಹುದು. ಹೀಗೆ ಹಲವಾರು ವಿಷಯಗಳ ಕುರಿತು ಜ್ಞಾನವೃದ್ಧಿಗೊಳಿಸಿಕೊಳ್ಳಬಹುದು. ಇದು ಜಾಲತಾಣಗಳಿಂದ ನಾವು ಪಡೆಯುವ ಉಪಯೋಗ.

ಜಾಲತಾಣಗಳನ್ನು ಸರಿಯಾಗಿ ಉಪಯೋಗಿಸದಿದ್ದರೆ ಅದು ಒಂದು ಶಾಪವಾಗಬಹುದು. ಇದಕ್ಕೆ ಉದಾಹರಣೆ ಮೇಲೆ ತಿಳಿಸಿದ ಅರುಣ್‌ನ ಉದಾಹರಣೆ. ಜಾಲತಾಣಗಳಲ್ಲಿ ನಮಗೆ ಉಪಯೋಗಕ್ಕೆ ಬರುವುದು ಮತ್ತು ಉಪಯೋಗಕ್ಕೆ ಬಾರದೇ ನಮ್ಮನ್ನು ಅಡ್ಡದಾರಿಗೆಳೆಸುವ ವಿಷಯಗಳು ಮತ್ತು ದೃಶ್ಯಗಳು ಇರುತ್ತವೆ. ಯಾರು ಅವಶ್ಯವಾದವುಗಳನ್ನು ಆರಿಸಿಕೊಳ್ಳುತ್ತಾರೋ, ಅವರಿಗೆ ಅದು ವರವಾಗುತ್ತದೆ. ಇಲ್ಲಿ ಅರುಣ್ ತನಗೆ ಉಪಯೋಗವಿಲ್ಲದ ವೀಡಿಯೋಗಳು, ರೀಲ್ಸ್‌ಗಳಿಂದ ಆಕರ್ಷಿತನಾಗಿ ಅವುಗಳನ್ನು ಮಧ್ಯ ರಾತ್ರಿವರೆಗೆ ನೋಡುತ್ತಾ ಕಾಲಕಳೆದ. ನಂತರ ನಿದ್ರೆ ಬರುತ್ತಿತ್ತು. ಓದುವುದರಲ್ಲಿ ಆಸಕ್ತಿ ಕಡಿಮೆಯಾಯಿತು. ಗೆಳೆಯರೂ ದೂರವಾದರು. ಒಂಟಿತನ ಕಾಡತೊಡಗಿತು. ಕೆಲವು ದಿನ ಕ್ಲಾಸಿಗೆ ಹೋಗಲಾಗದೇ ರೂಮಿನಲ್ಲೇ ಉಳಿಯುತ್ತಿದ್ದ. ಹಾಗಾಗಿ ಕಲಿಕೆಯಲ್ಲಿ ಹಿಂದುಳಿದ.

ಉಮಾ ಒಳ್ಳೆಯ ಹುಡುಗಿ. ಯಾವುದೋ ಕಾರಣಕ್ಕೆ ಅವಳ ಗೆಳತಿಯೊಂದಿಗೆ ಜಗಳವಾಯಿತು. ಉಮಾಳನ್ನು ಮುಖತಃ ಎದುರಿಸಲಾಗದೇ ಫೇಸ್‌ಬುಕ್ ಮೂಲಕ ವಾಚಾಮಗೋಚರವಾಗಿ ಸಂದೇಶ ಕಳುಹಿಸಿದಾಗ ಅದು ಅವಳ ಉಳಿದ ಗೆಳತಿಯರಿಗೆ ತಿಳಿದು ಅವರೆಲ್ಲರೂ ಪ್ರತಿಕ್ರಿಯಿಸಿದಾಗ ಉಮಾಗೆ ಅವಮಾನವಾದಂತಾಯಿತು. ಅದರಿಂದ ಖಿನ್ನತೆಗೊಳಗಾಗಿ ಕಾಲೇಜಿಗೆ ಹೋಗಲಾರೆನೆಂದು ಹಠ ಹಿಡಿದಳು. ಇವರೆಡೂ ಉದಾಹರಣೆಗಳು ಸಾಮಾಜಿಕ ಜಾಲತಾಣಗಳು ಹರೆಯದವರಿಗೆ ಹೇಗೆ ಶಾಪವಾಗಿ ಪರಿಣಮಿಸಬಹುದೆಂಬುಕ್ಕೆ ಸಾಕ್ಷಿ.

ಹಾಗಾದರೆ ಇದಕ್ಕೆ ಪರಿಹಾರ ಏನು? ಮೊದಲನೆಯದಾಗಿ ಪೋಷಕರು ಹರೆಯದ ಮಕ್ಕಳಿಗೆ ಸ್ಮಾರ್ಟ್‌ಫೋನ್ ಕೊಡಿಸುವಾಗ ಅದರ ಸಾಧಕ ಬಾಧಕಗಳನ್ನು ವಿವರಿಸಬೇಕು. ಸ್ಮಾರ್ಟ್ ಫೋನ್‌ಗಳಲ್ಲಿ ಇಂಟರ್‌ನೆಟ್ ನಲ್ಲಿ ನೋಡುವ ಅವಧಿಗೆ ಸ್ಕ್ರೀನ್ ಟೈಮ್ (Screen time) ಎಂದು ಕರೆಯುತ್ತಾರೆ. ದಿನಕ್ಕೆ ಎರಡು ಗಂಟೆಗಿಂತ ಹೆಚ್ಚು ಸ್ಕ್ರೀನ್ ಟೈಮ್‌ನ್ನು ಉಪಯೋಗಿಸುವುದು ಒಳ್ಳೆಯದಲ್ಲ ಎಂದು ಹರೆಯದವರಿಗೆ ಮನವರಿಕೆ ಮಾಡಿಕೊಡಬೇಕು. ದಿನಕ್ಕೆ ಎರಡು ಗಂಟೆಗಿಂತ ಹೆಚ್ಚಿಗೆ ಅದನ್ನು ಉಪಯೋಗಿಸಬಾರದು. ಕೆಲವು ಆ್ಯಪ್‌ಗಳು ಒಳ್ಳೆಯದಲ್ಲ, ಅವುಗಳನ್ನು ಉಪಯೋಗಿಸುವುದರಿಂದ ದುಷ್ಪರಿಣಾಮಗಳೇ ಹೆಚ್ಚು ಎಂಬುದನ್ನು ತಿಳಿಸಬೇಕು. ಅವುಗಳನ್ನು ತೆಗೆಯುವುದೇ ಒಳ್ಳೆಯದು. ಎಲ್ಲಕ್ಕೂ ಮಿಗಿಲಾಗಿ ಸ್ಮಾರ್ಟ್ ಫೋನ್‌ಗಳನ್ನು ಮಾಹಿತಿ ಸಂಗ್ರಹಣೆಗಾಗಿ, ಜ್ಞಾನವೃದ್ಧಿ ಗಳಿಸಲು ಮತ್ತು ಸಾಮಾಜಿಕ ಪ್ರಜ್ಞೆ ಹೆಚ್ಚಿಸಿಕೊಳ್ಳಲು ಮಿತವಾಗಿ ಉಪಯೋಗಿಸಬೇಕೇ ವಿನಃ, ಭಾವನಾತ್ಮಕವಾಗಿ ಅದರೊಂದಿಗೆ ಅವಲಂಬಿತರಾಗಬಾರದು ಎಂಬ ಸಕಾರಾತ್ಮಕ ಮಾರ್ಗದರ್ಶನ ಮಾಡಿದಾಗ ಹರೆಯದವರಿಗೆ ಸಾಮಾಜಿಕ ಜಾಲತಾಣಗಳು ವರವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ.

'ಜಿರಳೆ' ಪಾಲಿಟಿಕ್ಸ್!



ವಾರದ ವರಸೆ
ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com

ರಾಜಕೀಯ ಎಂದರೆ ಸಾಮಾನ್ಯವಾಗಿ ರಣರೋಚಕವಾಗಿಯೇ ಇರುತ್ತದೆ. ಟಿಕೆಟ್ ಸಿಕ್ಕಿಲ್ಲ ಎಂದು ಅಳು(ರೋ)ವುದರಿಂದ ಹಿಡಿದು, ತನಗೆ ಗೌರವ, ಮರ್ಯಾದೆ ಸಿಕ್ಕಿಲ್ಲ ಎಂದು ಪಕ್ಷವನ್ನು ಚಕ ಚಕನೇ ಬದಲಾಯಿಸುವ ಚಾಕಚಕ್ಯತೆಯವರೆಗೆ ಅದರ ರೋಚಕತೆಯ ಹತ್ತು ಹಲವು ತಿರುವುಗಳನ್ನು ಅದೆಷ್ಟು ಹೇಳಿದರೂ ಕಡಿಮೆಯೇ. ಆದರೆ ಇನ್ನು ಮೇಲೆ, ಅದು ಕೇವಲ ರೋಚಕತೆಯಷ್ಟೇ ಅಲ್ಲ 'ಕಾಕ್ರೋಚ್'ಕತೆಯೂ ಹೌದು ಎಂದು ಯಾರಾದರೂ ಹೇಳಿದರೆ ಒಪ್ಪಲೇ ಬೇಕು. ಪಾಲಿಟಿಕ್ಸ್‌ನ ಪಾಲಾಗಿ, ಬೇರೆ ಬೇರೆ ರೀತಿಯಲ್ಲಿ ಅದರ ಫಲಾನುಭವಿಗಳಾಗಿ, ಫಲವುಣ್ಣುವವರ ಪೈಕಿ ಮನುಷ್ಯರೇ ಸದಾ ಮುಂದೆ. ಹಾಗೂ ಆಗೀಗ ಯಾರನ್ನೋ ಬೈಯ್ಯಲೋ, ಹೊಗಳಲೋ, ಯಾವುದರ ವಿರುದ್ಧವೋ ಪ್ರತಿಭಟನೆ ಮಾಡಲೆಂದೋ ಕುರಿ, ನಾಯಿ, ಕತ್ತೆ, ಮೇಕೆ, ಆನೆ, ಹುಲಿ, ಕೋತಿ ಇನ್ನಿತ್ಯಾದಿ ಪ್ರಾಣಿಗಳ ಮೊರೆಹೋಗಿದ್ದರೂ ಹೋಗಿರಬಹುದು. ಅವುಗಳನ್ನು ಆಯಾ ಸಮಯ, ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಬಳಸಿರಲಿಕ್ಕೂ ಸಾಕು. ಪಾಲಿಟಿಕ್ಸ್‌ನಲ್ಲಿ ಅವುಗಳ ಪಾತ್ರ ಅಷ್ಟಕ್ಕೇ ಸೀಮಿತವಾಗಿತ್ತು. ಆದರೆ ಇದಕ್ಕೂ ಮೀರಿ ಜಿರಳೆಗಳೇನಾದರೂ ತಮ್ಮ ಮೀಸೆಯನ್ನು ರಾಜಕೀಯಕ್ಷೇತ್ರದ ಸಂಧಿ-ಗೊಂದಿಯಲ್ಲೂ ತೂರಿಸಿವೆಯೇ ಎಂಬ ಅನುಮಾನವೊಂದು ಹುಟ್ಟುವಂತೆ ಪಾಲಿಟಿಕ್ಸ್‌ನಲ್ಲಿ ಜಿರಳೆಗಳ ತರಲೆ ತರಹೇವಾರಿ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದೆ.

ಜಾತಿ ರಾಜಕಾರಣ, ಧರ್ಮ ರಾಜಕಾರಣ, ಓಲೈಕೆ ರಾಜಕಾರಣ ಇನ್ನೂ ಯಾವ್ಯಾವುದೋ ಬಗೆಬಗೆಯ ರಾಜಕಾರಣಗಳನ್ನು ನೋಡಿಕೊಂಡು ಬೆಳೆದ ಜನರು ಇದೀಗ 'ಜಿರಳೆ ರಾಜಕಾರಣ'ಕ್ಕೂ ಸಾಕ್ಷಿಯಾಗಬೇಕಿದೆ. ಬರೀ ಸಾಕ್ಷಿಯಲ್ಲ, ಮೂಕ ಸಾಕ್ಷಿ. ಮತ್ತೆ ರಾಜಕಾರಣಕ್ಕಿಳಿದ ಈ ಜಿರಳೆಗಳ ಜೊತೆಗೆ ಮಾತನಾಡುವುದಾದರೂ ಹೇಗೆ ಅಲ್ಲವೇ? ಅದಕ್ಕಾಗಿ ಮೂಕರಂತೆ ನಿಂತು ನೋಡ ಬೇಕಷ್ಟೇ. ಹೇಗೆ ಗೊತ್ತೇ? ಹೀಗೆ... 'ಇಡೀ ಮನೆಯಲ್ಲಿರುವ ಜಿರಳೆಗಳ ಸಂತತಿಯನ್ನೇ ಸಂಪೂರ್ಣವಾಗಿ ಸಂಹಾರ ಮಾಡಬೇಕೆಂದು ಏನೇನೋ ಸಿಂಪಡಿಸಿ, ಔಷಧಿಯಿಟ್ಟು, ಗೆರೆ ಎಳೆದು, ಇನ್ನೇನು ಅವುಗಳ ಮೂಲೋತ್ಪಾಟನೆ ಯಶಸ್ವಿಯಾಗಿ ನಡೆದೇ ಬಿಟ್ಟಿತೆಂದು ಖುಷಿ ಖುಷಿಯಿಂದ ಹಿರಿ ಹಿರಿ ಹಿಗ್ಗುತ್ತಾ ಪರಮ ತೃಪ್ತಿ, ಸಂತೃಪ್ತಿ ಹಾಗೂ ಸಮಾಧಾನದಿಂದ ಇದ್ದು ಮಧ್ಯೆ, ರಾತ್ರಿ ನೀರು ಕುಡಿಯಲೆಂದು ಅಡುಗೆ ಮನೆಗೆ ಕಾಲಿಟ್ಟರೆ, ಅಲ್ಲೆಲ್ಲೋ ಮೂಲೆಯಲ್ಲಿ ಮೀಸೆ ಎತ್ತರಿಸಿ, ನಮ್ಮನ್ನೇ ನೋಡುತ್ತಾ ಮುಸಿ ಮುಸಿ ನಕ್ಕಂತೆ ಕಾಣಿಸಿಕೊಳ್ಳುತ್ತಲ್ಲ ಆ ಒಂದು ಜಿರಳೆ, ಆಗ ಪರಮ ಬೇಸರ ಹಾಗೂ ಅಸಹಾಯಕತೆಯ ಮಡುವಿಗೆ ಜಾರಿದಂತೆ ಆವರಿಸಿಕೊಳ್ಳುತ್ತದಲ್ಲ ಮೌನ, ಅಂಥದ್ದೇ ಮೌನ. ಇಷ್ಟು ದಿನ ಜಿರಳೆಯನ್ನು ನೋಡಿ ಹುಡುಗಿಯರು ಹೆದರುತ್ತಿದ್ದರಂತೆ, ಮೈ ಮೇಲೆ ಅವು ನೆಗೆದರೆ ಹೆಂಗಸರು ಕಿಟಾರನೇ ಕಿರುಚಿಕೊಳ್ಳುತ್ತಿದ್ದರಂತೆ, ಹಾಗೆಯೇ ಇನ್ನು ಮುಂದೆ ಜಿರಳೆಗಳ ವಿಷಯದಲ್ಲಿ ವಿರೋಧ ಪಕ್ಷಗಳು/ಆಡಳಿತ ಪಕ್ಷಗಳು ಬೇರೆ ಬೇರೆ ಕಾರಣಗಳಿಗೆ ಹೆದರುವಂತಾಗಿದೆ.

ಈಗ ಹೀಗೊಂದು ಜಿರಳೆ ಪಕ್ಷದ ವಿಚಾರ ಮುನ್ನೆಲೆ ಬಂದಿತ್ತೆಂದಲ್ಲ, ಸುಮ್ಮನೇ ಆಲೋಚಿಸಿದರೆ ಈ ಜಿರಳೆಗಳಿಗೂ ಪಾಲಿಟಿಕ್ಸ್ ಹಾಗೂ ಪಾಲಿಟೀಷಿಯನ್ಸ್‌ಗೂ ಸಾಕಷ್ಟು ಸಾಮ್ಯತೆಗಳಂತೂ ಖಂಡಿತಾ ಇವೆ. ನೋಡಿ ಜಿರಳೆಗಳು ಹಗಲಿಗಿಂತಲೂ ರಾತ್ರಿಯ ಸಮಯದಲ್ಲಿಯೇ ಹೆಚ್ಚು ಆ್ಯಕ್ಟಿವ್ ಆಗಿರುತ್ತವೆ. ಲೈಟ್ ಆಫ್ ಆದ ತಕ್ಷಣ ಅವುಗಳ ಕಾರುಬಾರು ಆನ್ ಆಗುವುದೇ ಹೆಚ್ಚು. ಹೇಯ್ ಇಲ್ಲ, ಸುತ್ತಮುತ್ತ ಜಿರಳೆ ಏನಿಲ್ಲ ಎಂದುಕೊಂಡ ಅದೆಷ್ಟೋ ಸಂದರ್ಭಗಳಲ್ಲಿ ಅವು ರಾತ್ರೋರಾತ್ರಿ ''ನಾವಿಲ್ಲಿದ್ದೀವಿ ನೋಡ್ರಪಾ ವಸಿ...'' ಎಂದು ದರ್ಶನ ನೀಡುತ್ತವೆ. ಅಂದರೆ ಇವೆಲ್ಲವೂ ರಾಜಕಾರಣಿಗಳಿಗೂ ಹೋಲಿಕೆಯಾಗುವಂಥ ಲಕ್ಷಣಗಳೇ ಆಗಿವೆಯಲ್ಲ. ಅಲ್ಲವೇ ಮತ್ತೆ? ರಾತೋರಾತ್ರಿ ನಡೆಯುವ ಪಾರ್ಟಿ ಮೀಟಿಂಗ್‌ಗಳು, ನೈಟ್-ಔಟ್‌ಗಳು, ಹೆಣೆಯುವ ತಂತ್ರ-ಪ್ರತಿತಂತ್ರಗಳು, ಮೇಲಾಗಿ ಕುತಂತ್ರಗಳು ರೂಪುಗೊಳ್ಳುವುದೂ ರಾತ್ರಿಯಲ್ಲೇ! ಇನ್ನು ರಾತೋರಾತ್ರಿ ರಾಜೀನಾಮೆ, ರೆಸಾರ್ಟ್ ವಾಸ, ಪಕ್ಷಾಂತರ, ಮತ್ತೇನೋ ಹೊಂದಾಣಿಕೆ, ಮತ್ತಾವುದೋ ಡೀಲ್ ಇದೆಲ್ಲವೂ ರೂಪುಗೊಳ್ಳುವುದೂ ಇರುಳಿನಲ್ಲೇ. ನಮ್ಮ ಸುತ್ತಮುತ್ತ ಅಂತವರಾರೂ ಇಲ್ಲ ಎಂದು ಜನರು ಅದೆಷ್ಟೇ ಸಮಾಧಾನ ಮಾಡಿಕೊಂಡರೂ ಕೂಡಾ, ಕೊನೆಗೆ ಚುನಾವಣಾ ಮುನ್ನ ಹಣವನ್ನೋ ಹೆಂಡವನ್ನೋ ಹಂಚಲಾದರೂ ರಾತ್ರಿಯ ಹೊತ್ತಲ್ಲಿ ಮನೆ ಬಾಗಿಲಿಗೆ ಎಡತಾಕುವ ಸಾಧ್ಯತೆ ಇಲ್ಲದಿಲ್ಲ, ಬೆಳಕು ಬಿದ್ದಾಕ್ಷಣ, ಜಿರಳೆಗಳು ಒಮ್ಮಿಂದೊಮ್ಮೆಗೇ ನಾಪತ್ತೆಯಾಗುತ್ತಾವಲ್ಲ, ಹಾಗೆಯೇ ಇವರೂ ಕೂಡಾ ಪ್ರಶ್ನೆ ಕೇಳುವ ಮೀಡಿಯಾ ಕ್ಯಾಮೆರಾಗಳ ಬೆಳಕು, ಆರ್‌ಟಿಐ ಪ್ರಶ್ನೆ ಇನ್ನಿತ್ಯಾದಿ ಕಂಡ ಅಥವಾ ಕೇಳಿದಾಕ್ಷಣ ಕಣ್ಮರೆಯಾಗುತ್ತಾರೆ.

ಜಿರಳೆಗಳಿಗೆ ಇದೇ ಜಾಗ, ಅದೇ ಜಾಗ ಅಂತಲೇನೂ ಇಲ್ಲ, ಅವು ಎಲ್ಲಿಯೇ ಇದ್ದರೂ ಅಲ್ಲಿಯೇ ಬದುಕುಳಿಯುತ್ತವೆ. ಅವುಗಳು ಇರುವ ಜಾಗಕ್ಕಿಂತಲೂ, ಇಲ್ಲದಿರುವ ಜಾಗಗಳೇ ಕಡಿಮೆ. ಇಂದು ಅಡುಗೆ ಮನೆಯಲ್ಲಿ ದರ್ಶನ ನೀಡಿದರೆ, ನಾಳೆ ಗಾರ್ಡನ್‌ನ ಪಾಟ್‌ನ ಸಂಧಿಯಲ್ಲಿ ಇಣಕುತ್ತವೆ. ಮತ್ತೊಂದು ದಿನ ವಾಶ್‌ಬೇಸಿನ್‌ನ ಇಕ್ಕೆಲದಲ್ಲಿ ಸರಿದಾಡಿದರೆ ಮಗದೊಂದು ದಿನ ಬುಕ್ ರ್‍ಯಾಕ್‌ನ ನಡುವಿನಿಂದ ಹೊರ ಜಿಗಿಯುತ್ತವೆ. ಇದೆಲ್ಲ ವಿವರ ನೋಡುತ್ತಿದ್ದಂತೆ ರಾಜಕಾರಣಿಗಳೂ ಎಲ್ಲಾ ಕಡೆಯಲ್ಲೂ ಸಲ್ಲುವವರೇ ಆಗಿದ್ದಾರಲ್ಲ ಎಂಬೊಂದು ಅಭಿಪ್ರಾಯ ಮೂಡದೇ ಇರುವುದಿಲ್ಲ. ಯಾವುದೇ ಪಾರ್ಟಿ, ಸಿದ್ಧಾಂತ ಹಾಗೂ ತತ್ವ ಆದರೂ ಅದಕ್ಕೆ ಹೊಂದಿಕೊಂಡು ಬಚಾವಾಗುಳಿಯುವ ಗುಣವೇ ಅಲ್ಲಿ ಮುಖ್ಯ. ಅಂದ ಮೇಲೆ ಜಿರಳೆಗಳು ತಮ್ಮ ಪಾಲಿಟಿಕ್ಸ್ ತಂತ್ರಗಳಲ್ಲಿ ಅದನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿಕೊಂಡು ಹೋಗಬಲ್ಲವು ಎನ್ನುವುದು ನಿಸ್ಸಂಶಯವಾದ ಸಂಗತಿ.

ಜಿರಳೆಗಳ ಮೂತಿಯ ಮೇಲೆ ಆ್ಯಂಟೆನಾ ರೀತಿಯ ರಚನೆ ಇರುತ್ತದೆ. ಅದು ಮುಂದೊದಗುವ ಅಪಾಯದ ಪರಿಸ್ಥಿತಿಗಳನ್ನು ಗ್ರಹಿಸಲು ನೆರವಿಗೆ ಬರುತ್ತದಂತೆ. ಇವರಿಗೋ ಪಾರ್ಟಿ ವರ್ಕರ್ಸ್, ಮೀಡಿಯಾ ಮಹನೀಯರು, ಹಿಡನ್ ಕ್ಯಾಮೆರಾಗಳು, ನಿಗೂಢ ಗೂಢಾಚಾರರು, ವಾಟ್ಸಾಪ್ ಗ್ರೂಪ್‌ಗಳು, ಸೋಷಿಯಲ್ ಮೀಡಿಯಾಗಳು, ಪೋಸ್ಟ್‌ಗಳು, ಸ್ಟೇಟಸ್‌ಗಳು ಅರರ್ರೇ.. ಎಷ್ಟೊಂದು ಇಂಥ ಆ್ಯಂಟೆನಾಗಳಿವೆಯಲ್ಲ, ಅವುಗಳಿಂದಲೆಲ್ಲ ಸಾಕಷ್ಟು ಸಿಗ್ನಲ್‌ಗಳನ್ನು ನಿರಂತರವಾಗಿ ಸ್ವೀಕರಿಸುವ ವ್ಯವಸ್ಥೆಯೊಂದು ಸದಾ ಸಕ್ರಿಯವಾಗಿರುತ್ತದೆ ಎನ್ನುವುದು ಗಮನೀಯ. ಜಿರಳೆಗಳ ಹೊರಕವಚ ಗಡುಸಾಗಿರುತ್ತವೆಯಂತೆ. ಹ್ಞಾಂ.. ಮತ್ತೆ ಇಲ್ಲಿನ ಈ ಟೀಕೆ, ಟಿಪ್ಪಣಿ, ಟ್ರೋಲ್, ಕೇಸ್, ಆರೋಪ, ಪ್ರತ್ಯಾರೋಪ ಮತ್ತೊಂದು ಮಗದೊಂದನ್ನು ನಿರಂತರವಾಗಿ ಎದುರಿಸಿಕೊಂಡು ಬರುತ್ತಲೇ ''ಅಯ್ಯೋ ಏನೇನೋ ಆಗೇ ಇಲ್ಲ..'' ಎಂಬ ಪರಮ ನಿರಾಳತೆಯಿಂದ ಬದುಕುತ್ತಿರುವವರನ್ನು ಕಂಡರೆ ಈ ಗಡಸುತನ ರಾಜಕಾರಣಕ್ಕೆ ಅದೆಷ್ಟು ಅಗತ್ಯ, ಅವಶ್ಯ ಹಾಗೂ ಅನಿವಾರ್ಯ ಎನ್ನುವುದು ಸ್ಪಷ್ಟವಾಗುತ್ತದೆ.

ಸಣ್ಣ ಸಣ್ಣ ಬಿರುಕುಗಳು, ಮೂಲೆ ಮೂಲೆಗಳನ್ನೆಲ್ಲ ಸದ್ದಿಲ್ಲದೇ ಆವಾಸ ಸ್ಥಾನವಾಗಿಸಿಕೊಂಡು ಅಲ್ಲಿಯೇ ತಮ್ಮ ಅಸ್ತಿತ್ವವನ್ನು ಬೆಳೆಸಿಕೊಳ್ಳುವಲ್ಲಿ ಜಿರಳೆಗಳನ್ನು ಮೀರಿಸಲು ಸಾಧ್ಯವೇ ಇಲ್ಲವೆನ್ನಿ. ರಾಜಕೀಯದಲ್ಲಾದರೂ ಹಾಗೆಯೇ ತಾನೇ? ಕಾಲೂರಿ ನಿಲ್ಲಲು, ನಿಂತು ಹೇಗೋ ಒಂದು ನೆಲೆ ಕಂಡುಕೊಳ್ಳಲು ಹೇಳಹೆಸರಿಲ್ಲದ ಸಮಿತಿ, ಆಯೋಗ, ನಿಗಮ-ಮಂಡಳಿಗಳೆಂದು ಸಿಕ್ಕ ಸಿಕ್ಕಲ್ಲಿ ಹೇಗೋ ತಮ್ಮ ಮಂಡೆಯನ್ನು ತೂರಿಸಿಕೊಂಡು ಮುಂದೆ ಸಾಗಿಯೇ ಸಾಗುತ್ತಾರೆ. ಅಲ್ಲಿ ಹಾಗೊಂದು ಸ್ಥಳಾವಕಾಶ ಇದೆಯೆನ್ನುವುದನ್ನು ಜಿರಳೆಗಳು ಅಲ್ಲಿ ಕಂಡುಕೊಂಡಂತೆ ಇವರು ಇಲ್ಲೆಲ್ಲ ಕಂಡುಕೊಳ್ಳುತ್ತಾರೆ. ಜಿರಳೆಗಳಿಗೆ ಸಂಬಂಧಿಸಿದಂತೆ ಇನ್ನೊಂದು ಬಹಳ ಇಂಟರೆಸ್ಟಿಂಗ್ ವಿಚಾರವಿದೆ.

ಅದೇನೆಂದರೆ, ಅವುಗಳು ತಮ್ಮ ಸಂಖ್ಯೆಯನ್ನು ಬಹಳ ವೇಗವಾಗಿ ವೃದ್ಧಿಸಿಕೊಳ್ಳುತ್ತವಂತೆ. ಹ್ಞೂಂ ಮತ್ತೆ ರಾಜಕೀಯಕ್ಕೆ ಕಾಲಿಡಬೇಕು ಎಂದರೆ ಅದಂತೂ ಅತ್ಯಗತ್ಯ. ಅದಷ್ಟು ಬೇಗ ತಮ್ಮ ಸಂಬಂಧಿಕರು, ಪರಿವಾರದವರ ಸಂಖ್ಯೆಯನ್ನು ವೃದ್ಧಿಸಿಕೊಂಡು, ಅವರಿಗೆಲ್ಲ ರಾಜಕೀಯ ಸ್ಥಾನ-ಮಾನ, ಹುದ್ದೆಗಳನ್ನು ನೀಡುತ್ತಾ ಸಾಗುವ ವ್ಯವಸ್ಥೆ ಆದಾಗಲಷ್ಟೇ ರಾಜಕೀಯವಾಗಿ ಬಹುಬೇಗ ಬೇರೂರಲು ಸಾಧ್ಯ ಹಾಗೂ ಬೇರೆ ಬೇರೆ ಊರುಗಳಲ್ಲಿ ಬೇನಾಮಿ ಹೆಸರಲ್ಲಿ ಆಸ್ತಿ-ಪಾಸ್ತಿ ಮಾಡಿಡಲೂ ಕೂಡಾ ಸಾಧ್ಯ.

ಏನನ್ನು ಬೇಕಾದರೂ ತಿಂದು ಜೀರ್ಣಿಸಿಕೊಳ್ಳುವ ಜಿರಳೆಗಳ ಈ ಗುಣ ರಾಜಕೀಯವಾಗಿ ಬಹಳ ಉಪಯೋಗಕ್ಕೆ ಬರುವಂಥದ್ದು. ಮೋರಿ, ಸಂಕ, ಕಟ್ಟಡ, ರಸ್ತೆ, ಸಭಾಂಗಣ, ಸಬ್ಸಿಡಿ ಹೀಗೆ ಎಲ್ಲವನ್ನೂ ತಿಂದು ಜೀರ್ಣಿಸಿಕೊಳ್ಳುವುದನ್ನು ರೂಢಿಸಿಕೊಳ್ಳುವುದು ಕಷ್ಟವಾಗಬಾರದಲ್ಲ. ಹೀಗೆ ಜಿರಳೆ ಪಕ್ಷ ನಿಧಾನಕ್ಕೆ ಕೈ ಕಾಲು ಆಡಿಸಿ ರೆಕ್ಕೆ ಬಡಿಯುತ್ತಿದ್ದರೆ, ಅತ್ತ 'ಹಿಟ್', 'ಲಕ್ಷ್ಮಣ್ ರೇಖಾ' ಇನ್ನಿತ್ಯಾದಿಗಳು, 'ಹಾಗಾದರೆ ಇನ್ನು ನಾವೂ ಧುಮುಕುತ್ತೇವೆ. ನಮ್ಮದೂ ಕೂಡಾ ಪಾಲಿಟಿಕ್ಸ್' ಎಂದು ಹೇಳುತ್ತಿವೆಯಂತೆ.'ಹಾಗಾದರೆ ನಿಮ್ಮದು ಯಾವ ಪಾರ್ಟಿ?' ಎಂದು ಪ್ರಶ್ನಿಸಿದ್ದಕ್ಕೆ, ಅವು ಪರಸ್ಪರ ಕೈ ಕೈ ಹಿಡಿದು ಮೇಲಕ್ಕೆತ್ತಿ ಒಗ್ಗಟ್ಟು ಪ್ರದರ್ಶಿಸುತ್ತಾ 'ನಮ್ಮದು ಅಪೋಸಿಷನ್ ಪಾರ್ಟಿ' ಎಂದುತ್ತರಿಸಿದವಂತೆ! ಅಂದರೆ ಜಿರಳೆಗಳಿಗೊಂದು ಕಾಲ, ಹಿಟ್ ಸ್ಪ್ರೇಗಳಿಗೊಂದು ಕಾಲ ಎಂದೆನ್ನಬಹುದಲ್ಲವೇ?!

ಓವರ್‌ಡೋಸ್: ಜಿರಳೆಗಳನ್ನು ಕಂಡರೆ ಕೆಲವರಿಗೆ ಹೇಸಿಗೆಯಾಗುತ್ತದೆ. ಆದರೆ ಈ ವಿಷಯದಲ್ಲಿ ಜಿರಳೆಗಳನ್ನೇ ಮೀರಿಸುವವರೂ ಪಾಲಿಟಿಕ್ಸ್‌ನಲ್ಲಿ ಇದ್ದಾರೆ ಎನ್ನುವುದನ್ನು ಮರೆಯುವಂತಿಲ್ಲ!

ಇರಾನ್ ಒಪ್ಪಂದಕ್ಕೆ ಅಮೆರಿಕ ಅಂತಿಮ ಸಿದ್ಧತೆ

ಹಾರ್ಮುಜ್ ಮಾರ್ಗ ಪುನರಾರಂಭ ಸನ್ನಿಹಿತ



ಕೈರೋ: ಯುದ್ಧ ಕೊನೆಗೊಳಿಸಲು, ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಮತ್ತು ಇರಾನ್‌ನ ಸಮೃದ್ಧ ಯುರೇನಿಯಂ ದಾಸ್ತಾನನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಮೆರಿಕ ಇರಾನ್‌ನೊಂದಿಗೆ ಒಪ್ಪಂದಕ್ಕೆ ಹತ್ತಿರದಲ್ಲಿದೆ ಎಂದು ಪ್ರಾದೇಶಿಕ ಅಧಿಕಾರಿಗಳು ತಿಳಿಸಿದ್ದಾರೆ. ಪ್ರಾದೇಶಿಕ ಅಧಿಕಾರಿಗಳ ಪ್ರಕಾರ, ಪ್ರಸ್ತಾಪಿತ ಒಪ್ಪಂದದಲ್ಲಿ ಇರಾನ್ ತನ್ನ ಶೇ.60 ರಷ್ಟು ಶುದ್ಧತೆಯ ಸಂಪೂರ್ಣ ಸಮೃದ್ಧಗೊಳಿಸಿದ 440.9 ಕೆಜಿ ಯುರೇನಿಯಂ ದಾಸ್ತಾನನ್ನು ತ್ಯಜಿಸಲು ಒಪ್ಪಿಕೊಳ್ಳಲಿದೆ. ಇದರ ನಿರ್ದಿಷ್ಟ ಅನುಷ್ಠಾನದ ವಿವರಗಳನ್ನು ಮುಂದಿನ 60 ದಿನಗಳ ಮಾತುಕತೆಯ ಅವಧಿಯಲ್ಲಿ ಅಂತಿಮಗೊಳಿಸಲಾಗುವುದು. ಈ ಯುರೇನಿಯಂ ಅನ್ನು ದುರ್ಬಲಗೊಳಿಸಬಹುದು ಅಥವಾ ರಷ್ಯಾದಂತಹ ಮೂರನೇ ದೇಶಕ್ಕೆ ವರ್ಗಾಯಿಸಬಹುದು ಎನ್ನಲಾಗಿದೆ.

ಪ್ರಾದೇಶಿಕ ಹಸ್ತಕ್ಷೇಪಕ್ಕೆ ತೆರೆ?: ಇದಕ್ಕೆ ಪೂರಕವಾಗಿ, ಇರಾನ್ ಬಂದರುಗಳ ಮೇಲಿನ ಯುಎಸ್ ದಿಗ್ಬಂಧನವನ್ನು ಕೊನೆಗೊಳಿಸುವುದರೊಂದಿಗೆ ಹಾರ್ಮುಜ್ ಜಲಸಂಧಿಯನ್ನು ಹಂತಹಂತವಾಗಿ ಪುನಃ ತೆರೆಯಲಾಗುವುದು. ಇರಾನ್ ತನ್ನ ತೈಲವನ್ನು ಮಾರಾಟ ಮಾಡಲು ಯುಎಸ್ ಅನುಮತಿ ನೀಡಲಿದ್ದು, ನಿರ್ಬಂಧಗಳ ಸಡಿಲಿಕೆ ಮತ್ತು ಸ್ಥಗಿತಗೊಂಡಿರುವ ಇರಾನ್ ನಿಧಿಗಳ ಬಿಡುಗಡೆ ಕುರಿತು 60 ದಿನಗಳಲ್ಲಿ ಮಾತುಕತೆ ನಡೆಯಲಿದೆ. ಈ ಕರಡು ಒಪ್ಪಂದ, ಇಸ್ರೇಲ್ ಮತ್ತು ಲೆಬನಾನ್‌ನ ಹೆಜ್ಬೊಲ್ಲಾ ನಡುವಿನ ಯುದ್ಧದ ಮುಕ್ತಾಯ ಹಾಗೂ ಪ್ರಾದೇಶಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದಿರುವ ಒಪ್ಪಂದಗಳನ್ನೂ ಒಳಗೊಂಡಿದೆ ಎನ್ನಲಾಗಿದೆ.

ರಾಜತಾಂತ್ರಿಕ ಪ್ರಗತಿ: ಒಪ್ಪಂದದ ಬಹುತೇಕ ಮಾತುಕತೆಗಳು ಮುಗಿದಿವೆ ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದು, ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಕೂಡ ಭಾರತ ಪ್ರವಾಸದ ಸಂದರ್ಭದಲ್ಲಿ ಮಹತ್ವದ ಪ್ರಗತಿಯನ್ನು ಉಲ್ಲೇಖಿಸಿದ್ದಾರೆ. ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೇಯ್ ಭಿನ್ನಾಭಿಪ್ರಾಯಗಳು ಕಡಿಮೆಯಾಗುತ್ತಿರುವುದನ್ನು ದೃಢಪಡಿಸಿದ್ದಾರಾದರೂ, ಕಳೆದ ವರ್ಷ ನಡೆದ ದಾಳಿಗಳ ಹಿನ್ನೆಲೆಯಲ್ಲಿ ಎಚ್ಚರಿಕೆ ವ್ಯಕ್ತಪಡಿಸಿದ್ದಾರೆ. ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್, ತಾವು ಪರಮಾಣು ಅಸ್ತ್ರದ ಹಿಂದೆ ಬಿದ್ದಿಲ್ಲ ಎಂದು ಹೇಳಿದ್ದಾರೆ.

ಪ್ರಾದೇಶಿಕ ಆತಂಕಗಳು: ಫೆ.28 ರಂದು ಇರಾನ್ ಮೇಲೆ ಯುಎಸ್ ಮತ್ತು ಇಸ್ರೇಲ್ ನಡೆಸಿದ ಬಾಂಬ್ ದಾಳಿಯ ನಂತರ ಜಾಗತಿಕ ಇಂಧನ ಬಿಕ್ಕಟ್ಟು ಸೃಷ್ಟಿಯಾಗಿದೆ. ಇರಾನ್ ನೊಂದಿಗೆ ಏ.7ರಿಂದ ಕದನ ವಿರಾಮ ಜಾರಿಯಲ್ಲಿದ್ದರೂ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಹೆಜ್ಬೊಲ್ಲಾ ಬೆದರಿಕೆಗಳ ವಿರುದ್ಧ ಇಸ್ರೇಲ್ ಯಾವುದೇ ಕ್ರಮ ಕೈಗೊಳ್ಳುವ ಸ್ವಾತಂತ್ರ್ಯವನ್ನು ಕಾಯ್ದುಕೊಂಡಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಲೆಬನಾನ್ ಯುದ್ಧದಲ್ಲೂ ಅಪಾರ ನಷ್ಟ: ಲೆಬನಾನ್ ಆರೋಗ್ಯ ಸಚಿವಾಲಯದ ಪ್ರಕಾರ, ಇತ್ತೀಚಿನ ಹೋರಾಟದಲ್ಲಿ 3,000ಕ್ಕೂ ಹೆಚ್ಚು ಜನರು ಅಸುನೀಗಿದ್ದಾರೆ. ಇದರೊಂದಿಗೆ, ದಕ್ಷಿಣ ಲೆಬನಾನ್‌ನಲ್ಲಿ ಅಥವಾ ಅದರ ಆಸುಪಾಸಿನಲ್ಲಿ ಇಸ್ರೇಲ್‌ನ 22 ಸೈನಿಕರು ಮತ್ತು ಒಬ್ಬ ರಕ್ಷಣಾ ಅಧಿಕಾರಿ ಮೃತಪಟ್ಟಿದ್ದಾರೆ. ಉತ್ತರ ಇಸ್ರೇಲ್‌ನಲ್ಲಿ ಇಬ್ಬರು ನಾಗರಿಕರು ಮೃತರಾದ್ದಾರೆ ಎಂದು ನೆತನ್ಯಾಹು ಕಚೇರಿ ತಿಳಿಸಿದೆ.

ಕೀವ್ ಮೇಲೆ ಭಾರೀ ದಾಳಿ

ಕೀವ್: ಉಕ್ರೇನ್‌ನ ಕೀವ್ ನಗರದ ಮೇಲೆ ರಷ್ಯಾ ಭಾನುವಾರ ನಡೆಸಿದ ಭಾರಿ ಡ್ರೋನ್ ಮತ್ತು ಕ್ಷಿಪಣಿ ದಾಳಿಯಲ್ಲಿ ಒರೆಶ್ನಿಕ್ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಬಳಸಿದ್ದು, ಕನಿಷ್ಠ ಇಬ್ಬರು ಮೃತಪಟ್ಟಿದ್ದಾರೆ. ಇತರೆ 83 ಜನರು ಗಾಯಗೊಂಡಿದ್ದಾರೆ.



ಕನಿಷ್ಠ 600 ಸ್ಟ್ರೈಕ್ ಡ್ರೋನ್‌ಗಳು ಮತ್ತು 90 ಕ್ಷಿಪಣಿಗಳನ್ನು ಬಳಸಿ ದಾಳಿ ನಡೆಸಲಾಗಿದೆ ಎನ್ನಲಾಗಿದೆ. ಉಕ್ರೇನ್ ವಾಯುಪಡೆ, 549 ಡ್ರೋನ್‌ಗಳು ಮತ್ತು 55 ಕ್ಷಿಪಣಿಗಳನ್ನು ಹೊಡೆದುರುಳಿಸಿದೆ ಅಥವಾ ತಡೆದಿದೆ ಹಾಗೂ 19 ಕ್ಷಿಪಣಿಗಳು ಗುರಿ ತಲುಪಲು ವಿಫಲವಾಗಿವೆ ಎಂದು ತಿಳಿಸಿದೆ. ಒರೆಶ್ನಿಕ್ ಕ್ಷಿಪಣಿ, ಬಿಲಾ ತೆರ್ಕ್ವಾ ನಗರಕ್ಕೆ ಅಪ್ಪಳಿಸಿದೆ. ವಸತಿ ಕಟ್ಟಡಗಳು, ಶಾಲೆಗಳು, ಮಾರುಕಟ್ಟೆ ಮತ್ತು ಅಲ್ಬೇನಿಯನ್ ರಾಯಭಾರಿಯ ನಿವಾಸ ಸೇರಿದಂತೆ 50 ಸ್ಥಳಗಳಲ್ಲಿ ಹಾನಿ ದಾಖಲಾಗಿದೆ.

ಅಮೆರಿಕದ ಪೇಟ್ರಿಯಾಟ್ ವ್ಯವಸ್ಥೆಗಳಂತಹ ವಾಯು ರಕ್ಷಣಾ ಕ್ಷಿಪಣಿಗಳ ತೀವ್ರ ಕೊರತೆಯಿಂದಾಗಿ ಎಲ್ಲಾ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ತಡೆಯಲು ಸಾಧ್ಯವಾಗಿಲ್ಲ ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಹೇಳಿದ್ದಾರೆ.

ಉಕ್ರೇನ್‌ನ ಮಿಲಿಟರಿ ನಿಯಂತ್ರಣ ಕೇಂದ್ರಗಳು ಮತ್ತು ವಾಯು ನೆಲೆಗಳ ಮೇಲೆ ದಾಳಿ ನಡೆಸಿರುವುದನ್ನು ರಷ್ಯಾ ರಕ್ಷಣಾ ಸಚಿವಾಲಯ ದೃಢಪಡಿಸಿದೆ. ಲುಹಾನ್ಸ್ಕ್‌ನ ಕಾಲೇಜು ನಿಲಯದ ಮೇಲೆ ಉಕ್ರೇನ್ ನಡೆಸಿದ ದಾಳಿಯಲ್ಲಿ 21 ಜನರು ಮೃತಪಟ್ಟಿದ್ದಕ್ಕೆ ಪ್ರತೀಕಾರವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಸ್ಕೋ ತಿಳಿಸಿದೆ.

ಯುರೋಪಿಯನ್ ಯೂನಿಯನ್ ನಾಯಕರು ಈ ದಾಳಿಯನ್ನು ಖಂಡಿಸಿದ್ದಾರೆ. ಇದೇ ವೇಳೆ, ಭಾನುವಾರ ಬೆಳಗ್ಗೆ ಉಕ್ರೇನ್‌ನ ಡ್ರೋನ್ ದಾಳಿಯಿಂದ ಗ್ರೇವರನ್‌ನಲ್ಲಿ ಒಬ್ಬ ನಾಗರಿಕ ಮೃತಪಟ್ಟಿದ್ದಾನೆ ಎಂದು ರಷ್ಯಾ ತಿಳಿಸಿದೆ. ಹಾಗೆಯೇ ಉಕ್ರೇನ್‌ನ 33 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ರಷ್ಯಾ ರಕ್ಷಣಾ ಸಚಿವಾಲಯ ವರದಿ ಮಾಡಿದೆ.

ಪಂಚ ರಾಷ್ಟ್ರ ಪ್ರವಾಸದಿಂದ ಇಂಧನ ಮೂಲಸೌಕರ್ಯ, ಆರ್ಥಿಕ ಸಹಯೋಗ, ದೇಶೀಯ ರಕ್ಷಣಾ ಉತ್ಪಾದನೆ ಪ್ರಗತಿ

ಭಾರತದ ಭದ್ರತಾ ಗುರಾಣಿ ಹಿಡಿದ ಬಾಹುಬಲಿ ಮೋದಿ

ಪ್ರಧಾನಿ ನರೇಂದ್ರ ಮೋದಿ ಐದು ಯುರೋಪಿಯನ್ ಮತ್ತು ಪಶ್ಚಿಮ ಏಷ್ಯಾ ರಾಷ್ಟ್ರಗಳ ಆರು ದಿನಗಳ ರಾಜತಾಂತ್ರಿಕ ಪ್ರವಾಸ ಯಶಸ್ವಿಯಾಗಿ ಮುಕ್ತಾಯಗೊಳಿಸಿದ್ದು, ಜಾಗತಿಕ ಅಸ್ಥಿರತೆಯ ವಿರುದ್ಧ ದೇಶವನ್ನು ರಕ್ಷಿಸಲು ಬಲವಾದ ವ್ಯವಸ್ಥೆಗಳನ್ನು ಸ್ಥಾಪಿಸಿದ್ದಾರೆ. ಈ ಮಿಷನ್ ಇಂಧನ ಮೂಲಸೌಕರ್ಯ, ಆರ್ಥಿಕ ಸಹಯೋಗಗಳು ಮತ್ತು ದೇಶೀಯ ರಕ್ಷಣಾ ಉತ್ಪಾದನೆಯಲ್ಲಿ ನಿರ್ಣಾಯಕ ಪ್ರಗತಿಯನ್ನು ಭದ್ರಪಡಿಸಿದೆ.



ಜಾಗತಿಕ ಅಸ್ಥಿರತೆ ಮತ್ತು ಮಧ್ಯಸ್ಥಿಕೆ

ಹೆಚ್ಚುತ್ತಿರುವ ಕಚ್ಚಾ ತೈಲ ಬೆಲೆಗಳು, ಹಾರ್ಮುಜ್ ಜಲಸಂಧಿಯ ಸುತ್ತಲಿನ ಹಡಗು ಮಾರ್ಗಗಳ ಬದಲಾವಣೆ ಮತ್ತು ಜಾಗತಿಕ ಸರಕುಗಳ ವೆಚ್ಚದ ಏರಿಕೆಯಿಂದ ಆದ ತೀವ್ರ ಅಂತಾರಾಷ್ಟ್ರೀಯ ಅಸ್ಥಿರತೆಯ ನಡುವೆ ಈ ರಾಜತಾಂತ್ರಿಕ ಪ್ರವಾಸ ನಡೆದಿದೆ. ಪಶ್ಚಿಮ ಏಷ್ಯಾ ಮತ್ತು ಯುರೋಪ್‌ನಲ್ಲಿ ನಡೆಯುತ್ತಿರುವ ಸಂಘರ್ಷಗಳು ಇಂಧನ ಮಾರುಕಟ್ಟೆಗಳು, ಧಾನ್ಯದ ಪೂರೈಕೆ ಮತ್ತು ಬಂಡವಾಳದ ಹರಿವನ್ನು ತೀವ್ರವಾಗಿ ಅಡ್ಡಿಪಡಿಸಿವೆ. ಈ ಆರ್ಥಿಕ ಅಡೆತಡೆಗಳ ಸಮಯದಲ್ಲಿ ವಿವಿಧ ಜಾಗತಿಕ ಸರ್ಕಾರಗಳು ನಿಷ್ಕ್ರಿಯವಾಗಿದ್ದರೆ, ಭಾರತ ದೇಶೀಯ ದುರ್ಬಲತೆಗಳನ್ನು ವಿಶ್ಲೇಷಿಸಿ, ದೀರ್ಘಕಾಲೀನ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಲು ಐದು ಪ್ರಮುಖ ದೇಶಗಳೊಂದಿಗೆ ನೇರವಾಗಿ ತೊಡಗಿಸಿಕೊಂಡಿತು.

- **ಯುಎಇ ಹೂಡಿಕೆ:** ಸಂಸ್ಕರಣಾ ಗಾರಗಳಿಗಾಗಿ 5 ಶತಕೋಟಿ ಡಾಲರ್ ಒಪ್ಪಂದ.
- **ವ್ಯಾಪಾರ ಗುರಿ:** ಇಟಲಿ ಜೊತೆ 20 ಶತಕೋಟಿ ಯೂರೋ ವ್ಯಾಪಾರ ಒಪ್ಪಂದ.
- **ಚಿಪ್ ಉತ್ಪಾದನೆ:** ಧೋಲೇರಾ ಘಟಕಕ್ಕಾಗಿ ಎಎಸ್‌ಎಂಎಲ್ ತಂತ್ರಜ್ಞಾನ ಭದ್ರ.
- **ಜಾಗತಿಕ ಗೌರವ:** ಆಹಾರ ಭದ್ರತೆಗಾಗಿ ಪ್ರಧಾನಿಗೆ ಒಲಿದ ಅಗ್ರಿಕೋಲಾ ಪದಕ.
- **ರಕ್ಷಣಾ ಸ್ವಾವಲಂಬನೆ:** ಜಜ್ಜರ್‌ನಲ್ಲಿ ಸಾಬ್‌ನಿಂದ ಶೇ.100 ವಿದೇಶಿ ಹೂಡಿಕೆಯ ಘಟಕ.
- **ಹಸಿರು ಇಂಧನ:** ನಾರ್ವೆ ಜೊತೆ ಹಸಿರು ಕಾರ್ಯತಂತ್ರದ ಪಾಲುದಾರಿಕೆ ಸ್ಥಾಪನೆ.

ಆರ್ಥಿಕ ಸಹಭಾಗಿತ್ವದ ವೇಗವರ್ಧನೆ

ಉನ್ನತ ತಂತ್ರಜ್ಞಾನ ಮತ್ತು ಮೂಲಸೌಕರ್ಯ ಒಪ್ಪಂದಗಳ ಮೂಲಕ ಆರ್ಥಿಕ ಸದೃಢತೆಯ ಕಡೆಗೆ ಗಮನಹರಿಸಲಾಯಿತು. ದಿ ಹೇಗ್‌ನಲ್ಲಿ, ಟಾಟಾ ಎಲೆಕ್ಟ್ರಾನಿಕ್ಸ್ ಡಚ್ ಸಂಸ್ಥೆ ಎಎಸ್‌ಎಂಎಲ್‌ನೊಂದಿಗೆ ಅತ್ಯಾಧುನಿಕ ಅಲ್ಟ್ರಾವೈಲೆಟ್ ಲಿಥೋಗ್ರಫಿ ಉಪಕರಣಗಳನ್ನು ಸ್ವಾಧೀನಪಡಿಸಿಕೊಳ್ಳಲು ಔಪಚಾರಿಕ ಒಪ್ಪಂದ ಮಾಡಿಕೊಂಡಿತು. ಈ ಪಾಲುದಾರಿಕೆ, ಧೋಲೇರಾದಲ್ಲಿ 91,000 ಕೋಟಿ ರೂ.ಗಳ ಸೆಮಿಕಂಡಕ್ಟರ್ ಫ್ಯಾಬ್ರಿಕೇಶನ್ ಸೌಲಭ್ಯವನ್ನು ಸ್ಥಾಪಿಸಲು ಅನುಕೂಲ ಮಾಡಿಕೊಡುತ್ತದೆ ಹಾಗೂ ಜಾಗತಿಕ ಮುಂದುವರಿದ ಚಿಪ್ ಉತ್ಪಾದನಾ ವಲಯದಲ್ಲಿ ಭಾರತವೂ ಸೇರುತ್ತದೆ. ಇದೇ ವೇಳೆ, ಸ್ವೀಡನ್‌ನೊಂದಿಗಿನ ಸಹಯೋಗವು ಬ್ಯಾಟರಿ ಮತ್ತು ಸೆಮಿಕಂಡಕ್ಟರ್ ಉತ್ಪಾದನೆಗೆ ಅಗತ್ಯವಾದ ನಿರ್ಣಾಯಕ ಖನಿಜ ಪೂರೈಕೆಗಳನ್ನು ಭದ್ರಪಡಿಸುವುದರ ಮೇಲೆ ಕೇಂದ್ರೀಕರಿಸಿತು. ಜೊತೆಗೆ ದ್ವಿಪಕ್ಷೀಯ ಚೌಕಟ್ಟಿನಲ್ಲಿ 6ಜಿ, ಕೃತಕ ಬುದ್ಧಿಮತ್ತೆ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್‌ನಂತಹ ಸುಧಾರಿತ ತಂತ್ರಜ್ಞಾನಗಳನ್ನು ಸಂಯೋಜಿಸಿತು. ರೋಮ್‌ನಲ್ಲಿ, ಇಟಲಿಯೊಂದಿಗಿನ ಸಂಬಂಧವನ್ನು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಲಾಯಿತು ಮತ್ತು 2029ರ ವೇಳೆಗೆ 20 ಶತಕೋಟಿ ಯೂರೋಗಳ ದ್ವಿಪಕ್ಷೀಯ ವ್ಯಾಪಾರ ಗುರಿಯನ್ನು ಸ್ಥಾಪಿಸಲಾಯಿತು. ಈ ಒಪ್ಪಂದವು ಭಾರತೀಯ ಸರಕುಗಳನ್ನು ಯುರೋಪ್‌ಗೆ ಸಾಗಿಸುವ ಆರ್ಥಿಕ ಕಾರಿಡಾರ್ ಯೋಜನೆಯಲ್ಲಾದ ಪ್ರಗತಿಯಾಗಿದೆ.

ನಾರ್ವೆ ಭೇಟಿಯ ಮಹತ್ವ

ನಾಲ್ಕು ದಶಕಗಳಿಗೂ ಹೆಚ್ಚು ಅವಧಿಯಲ್ಲಿ ಭಾರತದ ಪ್ರಧಾನಮಂತ್ರಿಯೊಬ್ಬರು ಓಸ್ಲೋಗೆ ನೀಡಿದ ಮೊದಲ ಭೇಟಿಯಲ್ಲಿ, ದ್ವಿಪಕ್ಷೀಯ ಚರ್ಚೆಗಳು ಭವಿಷ್ಯದ ಇಂಧನ ತಂತ್ರಜ್ಞಾನಗಳ ಮೇಲೆ ಕೇಂದ್ರೀಕೃತವಾಗಿದ್ದವು. ಭಾರತ ಮತ್ತು ನಾರ್ವೆ ಹಸಿರು ಕಾರ್ಯತಂತ್ರದ ಪಾಲುದಾರಿಕೆ ಸ್ಥಾಪಿಸಿದವು. ಇದನ್ನು ಎಲ್ಲಾ ನಾರ್ಡಿಕ್ ರಾಷ್ಟ್ರಗಳಾದ್ಯಂತ ಹಸಿರು ತಂತ್ರಜ್ಞಾನವನ್ನು ಒಳಗೊಂಡಿರುವ ಭಾರತ-ನಾರ್ಡಿಕ್ ಶೃಂಗಸಭೆಯ ಮೂಲಕ ವಿಸ್ತರಿಸಲಾಯಿತು. ಈ ಚೌಕಟ್ಟು ಏಕರೂಪದ ಕಡಲ ಮಾರ್ಗಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ಜಾಗತಿಕ ಹಸಿರು ಹೈಡ್ರೋಜನ್ ಮತ್ತು ಇಂಧನ ಪರಿವರ್ತನೆಯಲ್ಲಿ ಭಾರತಕ್ಕೆ ಜಾಗತಿಕ ಸಹಕಾರ ಒದಗಿಸುತ್ತದೆ.

ಇಂಧನ ಮೂಲ ಸೌಕರ್ಯಗಳ ರಕ್ಷಣೆ

ಪೂರೈಕೆಯಲ್ಲಾಗುವ ಕೊರತೆಯಿಂದ ದೇಶೀಯ ಆರ್ಥಿಕತೆಯನ್ನು ರಕ್ಷಿಸಲು, ಪ್ರಮುಖ ಜಾಗತಿಕ ಇಂಧನ ಉತ್ಪಾದಕರೊಂದಿಗೆ ಒಪ್ಪಂದಗಳಿಗೆ ಆದ್ಯತೆ ನೀಡಲಾಯಿತು. ಅಂತರರಾಷ್ಟ್ರೀಯ ಪೂರೈಕೆ ಮಾರ್ಗಗಳನ್ನು ಬಲಪಡಿಸುವವರೆಗೆ ದೇಶೀಯ ಕಾರ್ಯಾಚರಣೆಗೆ ಸಮಯಾವಕಾಶ ಒದಗಿಸಲು ಇಂಧನ ಬಳಕೆಯನ್ನು ಅತ್ಯುತ್ತಮವಾಗಿಸಲು ಸರ್ಕಾರ ಈ ಹಿಂದೆ ನಾಗರಿಕರಿಗೆ ಸಲಹೆ ನೀಡಿತ್ತು. ಅಬುಧಾಬಿಯಲ್ಲಿ, ಯುನೈಟೆಡ್ ಅರಬ್ ಎಮಿರೇಟ್ಸ್, ದೇಶೀಯ ಸಂಸ್ಕರಣಾಗಾರಗಳಿಗೆ ನಿರಂತರ ಕಚ್ಚಾ ತೈಲ ಪೂರೈಕೆಯನ್ನು ಖಾತರಿಪಡಿಸುವುದರ ಜೊತೆಗೆ ಭಾರತಕ್ಕೆ 5 ಶತಕೋಟಿ ಡಾಲರ್ ಹೊಸ ಹೂಡಿಕೆಯನ್ನು ನೀಡಲು ಬದ್ಧವಾಗಿದೆ.

ರಕ್ಷಣಾ ಸ್ವಾವಲಂಬನೆ

ರಾಷ್ಟ್ರೀಯ ಭದ್ರತಾ ಚೌಕಟ್ಟುಗಳನ್ನು ಆಮದು ಅವಲಂಬನೆಯಿಂದ ಸ್ಥಳೀಯ ಉತ್ಪಾದನಾ ಸರಪಳಿಗಳ ಕಡೆಗೆ ನವೀಕರಿಸಲಾಯಿತು. ಯುಎಇ ಜೊತೆ ಸಮಗ್ರ ರಕ್ಷಣಾ ಸಹಕಾರ ಚೌಕಟ್ಟನ್ನು ರೂಪಿಸಲಾಗಿದೆ. ಸ್ವೀಡನ್‌ನಲ್ಲಿ, ರಕ್ಷಣಾ ತಯಾರಕ ಸಾಬ್ ಸಂಸ್ಥೆ, ಜಜ್ಜರ್‌ನಲ್ಲಿ ತನ್ನ ಮೊದಲ ಸಾಗರೋತ್ತರ ಮಿಲಿಟರಿ ಉಪಕರಣಗಳ ಉತ್ಪಾದನಾ ಸೌಲಭ್ಯದ ನಿರ್ಮಾಣವನ್ನು ಪ್ರಾರಂಭಿಸಿತು. ಇದು ಭಾರತದಲ್ಲಿ ಮೊದಲ 100 ಪ್ರತಿಶತ ವಿದೇಶಿ ಅನುದಾನಿತ ರಕ್ಷಣಾ ಉತ್ಪಾದನಾ ಯೋಜನೆಯಾಗಿದೆ. ಇದಲ್ಲದೆ, ನೆದರ್ಲ್ಯಾಂಡ್ ತಯಾರಕರು ಮತ್ತು ಸಂಶೋಧನಾ ಕೇಂದ್ರಗಳನ್ನು ಸಂಪರ್ಕಿಸುವ ಸಮಗ್ರ ರಕ್ಷಣಾ ಕೈಗಾರಿಕಾ ಮಾರ್ಗಸೂಚಿಗೆ ಒಪ್ಪಿಕೊಂಡಿದ್ದು, ಸ್ಥಳೀಯ ಉತ್ಪಾದನೆಯ ಮೂಲಕ ದೇಶೀಯ ರಕ್ಷಣಾ ಪೂರೈಕೆ ಸರಪಳಿ ವಿಸ್ತರಿಸಿದ



ಅಂತಾರಾಷ್ಟ್ರೀಯ ಮನ್ನಣೆ ಮತ್ತು ರಾಜಕೀಯ

ರಾಜತಾಂತ್ರಿಕ ಪ್ರವಾಸದ ಸಂದರ್ಭದಲ್ಲಿ ಪ್ರಧಾನಮಂತ್ರಿಗೆ ಸ್ವೀಡನ್‌ನ ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್ ಮತ್ತು ನಾರ್ವೆಯ ಗ್ರಾಂಡ್ ಕ್ರಾಸ್ ಗೌರವಗಳನ್ನು ನೀಡಲಾಯಿತು. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯು 800 ಮಿಲಿಯನ್ ನಾಗರಿಕರನ್ನು ಬೆಂಬಲಿಸುವ ಭಾರತದ ಆಹಾರ ಭದ್ರತಾ ಜಾಲವನ್ನು ಗುರುತಿಸಿ ಅಗ್ರಿಕೋಲಾ ಪದಕ ನೀಡಿತು. ವಿರೋಧ ಪಕ್ಷಗಳು ಈ ಪ್ರವಾಸವನ್ನು ಟೀಕಿಸಿವೆ, ಅವು ಸೆಮಿಕಂಡಕ್ಟರ್ ಪ್ರಗತಿ ಹಾಗೂ ರಕ್ಷಣಾ ಸೌಲಭ್ಯಗಳನ್ನು ಕಡೆಗಣಿಸಿವೆ. 1948 ರಲ್ಲಿ ನೆಹರು ಅವರು ಯುರೋಪ್ ಪ್ರವಾಸದ ಬಳಿಕ ದೇಶದ ಜನರ ಬಗ್ಗೆಯೇ ಅಸಮಾಧಾನ ವ್ಯಕ್ತಪಡಿಸಿದ್ದರು. ಆದರೆ ಪ್ರಸ್ತುತ ಸರ್ಕಾರ, ದೇಶದ ಪ್ರಗತಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಭದ್ರಪಡಿಸಲು ರಾಜತಾಂತ್ರಿಕತೆಯನ್ನು ಬಳಸಿಕೊಳ್ಳುತ್ತಿದೆ.

ಕಿರುಸುದ್ದಿ

ಮೋದಿ ಆತ್ಮೀಯ ಸ್ನೇಹಿತ, ನನ್ನ ನಂಬಿ ಎಂದ ಟ್ರಂಪ್

ಹೊಸದಿಲ್ಲಿ: ಭಾರತದಲ್ಲಿನ ಅಮೆರಿಕ ರಾಯಭಾರಿ ಸೆರ್ಜಿಯೋ ಗೋರ್ ವೇದಿಕೆಯಲ್ಲಿದ್ದಾಗ ಭಾನುವಾರ ಅಚ್ಚರಿಯ ದೂರವಾಣಿ ಕರೆ ಮಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರಧಾನಿ ಮೋದಿ ನನಗೆ ಪ್ರೀತಿಪಾತ್ರರು, ಮೋದಿ ಅವರು ಒಬ್ಬ ಶ್ರೇಷ್ಠ ವ್ಯಕ್ತಿ ಮತ್ತು ನನ್ನ ಆತ್ಮೀಯ ಸ್ನೇಹಿತರೆಂದು ಪುನರುಚ್ಚರಿಸಿದ್ದಾರೆ. ಹೊಸದಿಲ್ಲಿಯ ಅಮೆರಿಕ ರಾಯಭಾರ ಕಚೇರಿಯಲ್ಲಿ ನಡೆಯುತ್ತಿದ್ದ ಅಮೆರಿಕದ 250ನೇ ಸ್ವಾತಂತ್ರ್ಯ ದಿನಾಚರಣೆ (ಜು.4ರಂದು) ಸಂಬಂಧಿತ ಕಾರ್ಯಕ್ರಮದಲ್ಲಿ ಗೋರ್ ವೇದಿಕೆಯಲ್ಲಿದ್ದಾಗ ಕರೆ ಮಾಡಿದ್ದ ಟ್ರಂಪ್ ಭಾರತವನ್ನೂ ಮೋದಿಯವರನ್ನು ಹೊಗಳಲು ಪ್ರಾರಂಭಿಸಿದರು. ನಾನು ಭಾರತವನ್ನು ಪ್ರೀತಿಸುತ್ತೇನೆ. ಎಲ್ಲರಿಗೂ ನನ್ನ ಹಲೋ (ನಮಸ್ಕಾರ) ಹೇಳಬಯಸುತ್ತೇನೆ. ನಾವು ಭಾರತದೊಂದಿಗೆ ಹಿಂದೆಂದೂ ಇಷ್ಟೊಂದು ಸ್ನೇಹದಿಂದ ಇರಲಿಲ್ಲ. ಆದರೆ ನನ್ನ ಮೇಲೆ ಭಾರತೀಯರು ಶೇ.100ರಷ್ಟು ನಂಬಿಕೆ ಇಡಬಹುದು. ನಿಮಗೆ ಯಾವುದೇ ಸಹಾಯ ಬೇಕಿದ್ದರೂ, ಯಾರಿಗೆ ದೂರವಾಣಿ ಕರೆ ಮಾಡಬೇಕೆಂದು ನಿಮಗೆ ಗೊತ್ತಿದೆ. ಇಲ್ಲಿಗೆ ನೇರ ಕರೆ ಮಾಡಿ. ನಾವು ಜತೆಗೂಡಿ ಹಲವು ದಾಖಲೆಗಳನ್ನು ಬರೆಯುತ್ತೇವೆ ಎಂದು ಟ್ರಂಪ್ ಹೇಳಿಕೊಂಡಿದ್ದಾರೆ.



ಕೆನಡಾಕ್ಕೆ ಪಿಯೂಷ್ ಗೋಯೆಲ್ ಇಂದು

ಹೊಸದಿಲ್ಲಿ: ಭಾರತ ಮತ್ತು ಕೆನಡಾ ದೇಶಗಳು ಪ್ರಸ್ತಾವಿತ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದಕ್ಕಾಗಿ (ಸಿಇಪಿಎ) ಮಾತುಕತೆ ಮುಂದುವರಿಸುತ್ತಿದ್ದು, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮೇ 25 ರಿಂದ 27ರವರೆಗೆ ಕೆನಡಾಕ್ಕೆ ಪ್ರಯಾಣಿಸಲಿದ್ದಾರೆ. ಎರಡೂ ದೇಶಗಳ ನಡುವಿನ ಆರ್ಥಿಕ ಸಂಬಂಧಗಳನ್ನು ಪುನರುಜ್ಜೀವನಗೊಳಿಸುವಲ್ಲಿ ಸಚಿವರ ಭೇಟಿ ಪ್ರಮುಖ ಹೆಜ್ಜೆಯಾಗಿದೆ. ಇಂಧನ, ಲೋಹಗಳು ಮತ್ತು ಗಣಿಗಾರಿಕೆ, ಏರೋಸ್ಪೇಸ್, ಟೆಲಿಕಾಂ, ಔಷಧೀಯ ವಸ್ತುಗಳು, ಕೃಷಿ, ಪ್ರವಾಸೋದ್ಯಮ, ಜವಳಿ, ಆಟೋಮೋಟಿವ್ ಮತ್ತು ಬಂಡವಾಳ ಸರಕುಗಳಂತಹ ಕ್ಷೇತ್ರಗಳನ್ನು ಪ್ರತಿನಿಧಿಸುವ 100ಕ್ಕೂ ಹೆಚ್ಚು ಭಾರತೀಯ ಕಂಪನಿಗಳ ಹಿರಿಯ ಕಾರ್ಯನಿರ್ವಾಹಕರು ಗೋಯಲ್ ಅವರೊಂದಿಗೆ ಇರುತ್ತಾರೆ. ಭೇಟಿಯ ಸಮಯದಲ್ಲಿ, ಗೋಯಲ್ ಕೆನಡಾದ ಅಂತಾರಾಷ್ಟ್ರೀಯ ವ್ಯಾಪಾರ ಸಚಿವ ಮಣೀಂದರ್ ಸಿಧು ಅವರನ್ನು ಭೇಟಿ ಮಾಡಿ ಸಿಇಪಿಎ ಮಾತುಕತೆಗಳ ಪ್ರಗತಿಯನ್ನು ನಿರ್ಣಯಿಸಲು ಮತ್ತು ಎರಡೂ ರಾಷ್ಟ್ರಗಳ ನಡುವಿನ ವ್ಯಾಪಾರ ಮತ್ತು ಹೂಡಿಕೆ ಅವಕಾಶಗಳನ್ನು ವಿಸ್ತರಿಸುವ ಮಾರ್ಗಗಳನ್ನು ಚರ್ಚಿಸಲಿದ್ದಾರೆ.

ಏನಾಸಂ: ಬುಡಕಟ್ಟು ಜನರಿಗಿಲ್ಲ ತೊಂದರೆ

ಹೊಸದಿಲ್ಲಿ: ಪ್ರಸ್ತಾವಿತ ಏಕರೂಪ ನಾಗರಿಕ ಸಂಹಿತೆ(ಏನಾಸಂ) ಬುಡಕಟ್ಟು ಸಮುದಾಯಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಸ್ಪಷ್ಟಪಡಿಸಿದ್ದಾರೆ. ಈ ವಿಷಯದಲ್ಲಿ ಹರಡುತ್ತಿರುವ ಅಪಪ್ರಚಾರ ಮತ್ತು ಪಿತೂರಿಗಳಿಗೆ ಬಲಿಯಾಗದಂತೆ ಅವರು ಮನವಿ ಮಾಡಿದ್ದಾರೆ. ಬಿರ್ಸಾ ಮುಂಡಾ ಅವರ 150ನೇ ಜನ್ಮ ಜಯಂತ್ಯುತ್ಸವದ ಅಂಗವಾಗಿ ರೆಡ್‌ಫೋರ್ಟ್ ಮೈದಾನದಲ್ಲಿ ಆಯೋಜಿಸಿದ್ದ ಜನಜಾತಿ ಸಾಂಸ್ಕೃತಿಕ ಸಮಾಗಮ ಸಮಾವೇಶದಲ್ಲಿ ಮಾತನಾಡಿದ ಅವರು, ಏನಾಸಂ ಜಾರಿಗೊಳಿಸುತ್ತಿರುವ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಬುಡಕಟ್ಟು ಜನಾಂಗದವರನ್ನು ಇದರ ವ್ಯಾಪ್ತಿಯಿಂದ ಹೊರಗಿಡಲು ವಿಶೇಷ ನಿಬಂಧನೆಗಳನ್ನು ಮಾಡಲಾಗಿದೆ ಎಂದರು. ಬುಡಕಟ್ಟು ಸಮುದಾಯಗಳ ಸಂಪ್ರದಾಯಗಳಿಗೆ ಯಾವುದೇ ಧಕ್ಕೆ ಬರುವುದಿಲ್ಲ ಎಂದು ಭರವಸೆ ನೀಡಿದರು. ಇದೇ ವೇಳೆ ನಕ್ಸಲಿಸಂ ಬಗ್ಗೆ ಮಾತನಾಡಿದ ಶಾ, ದೇಶವು ನಕ್ಸಲ್ ಮುಕ್ತವಾಗುವತ್ತ ಮುನ್ನಡೆಯುತ್ತಿದೆ ಮತ್ತು ಹಿಂಸಾಚಾರದಿಂದಾಗಿ ದಶಕಗಳಿಂದ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿ ಕುಂಠಿತಗೊಂಡಿತ್ತು ಎಂದರು. ಮೋದಿ ಸರ್ಕಾರವು ಅವರ ಅಭಿವೃದ್ಧಿಗೆ ಬದ್ಧವಾಗಿದೆ ಎಂದು ತಿಳಿಸಿದರು. ಬಲವಂತದ ಧಾರ್ಮಿಕ ಮತಾಂತರದ ವಿರುದ್ಧ ಮಾತನಾಡಿದ ಅವರು, ಯಾವುದೇ ಆಮಿಷಗಳಿಗೆ ಒಳಗಾಗಿ ಧರ್ಮ ಬದಲಾಯಿಸಬಾರದು ಮತ್ತು ನಮ್ಮ ಸಂವಿಧಾನವು ಪ್ರತಿಯೊಬ್ಬರಿಗೂ ತಮ್ಮ ಮೂಲ ನಂಬಿಕೆಗಳೊಂದಿಗೆ ಬದುಕುವ ಹಕ್ಕನ್ನು ನೀಡಿದೆ ಎಂದರು. ಅಲ್ಲದೆ ಬುಡಕಟ್ಟು ಕಲ್ಯಾಣ ಬಜೆಟ್ ಅನ್ನು 28,000 ಕೋಟಿ ರೂ.ನಿಂದ 1.54 ಲಕ್ಷ ಕೋಟಿ ರೂ.ಗೆ ಹೆಚ್ಚಿಸಿದೆ ಎಂದು ಮಾಹಿತಿ ನೀಡಿದರು.

ಬಲೂಚಿಸ್ತಾನದಲ್ಲಿ ರೈಲು ಸ್ಫೋಟಕ್ಕೆ 24 ಜನ ಸಾವು

ಕರಾಚಿ: ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಭಾನುವಾರ ಪ್ರಯಾಣಿ ರೈಲೊಂದರಲ್ಲಿ ಸಂಭವಿಸಿದ ಭೀಕರ ಸ್ಫೋಟದಲ್ಲಿ ಕನಿಷ್ಠ 24 ಜನರು ಮೃತಪಟ್ಟಿದ್ದಾರೆ. ಕ್ವೆಟ್ಟಾ ಕಂಟೋನ್ಮೆಂಟ್‌ನಿಂದ ಚಮನ್ ಫಾಟಕ್ ಬಳಿಯ ಸಿಟಿ ರೈಲ್ವೆ ನಿಲ್ದಾಣಕ್ಕೆ ಪ್ರಯಾಣಿಸುತ್ತಿದ್ದ ರೈಲನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ ಎಂದು ಅಸೋಸಿಯೇಟೆಡ್ ಪ್ರೆಸ್ ಆಫ್ ಪಾಕಿಸ್ತಾನ್ ವರದಿ ಮಾಡಿದೆ.



ನಿಷೇಧಿತ ಬಲೂಚ್ ಲಿಬರೇಷನ್ ಆರ್ಮಿ(ಬಿಎಲ್‌ಎ) ಈ ದಾಳಿಯ ಹೊಣೆ ಹೊತ್ತಿದ್ದು, ರೈಲಿನಲ್ಲಿ ಮಿಲಿಟರಿ ಸಿಬ್ಬಂದಿ ಪ್ರಯಾಣಿಸುತ್ತಿದ್ದರು ಎಂದು ಹೇಳಿಕೊಂಡಿದೆ. ಸ್ಫೋಟದ ತೀವ್ರತೆಗೆ ರೈಲಿನ ಇಂಜಿನ್ ಮತ್ತು ಮೂರು ಬೋಗಿಗಳು ಜಖಂಗೊಂಡಿದ್ದು, ಸಮೀಪದ ಕಟ್ಟಡಗಳ ಕಿಟಕಿ ಗಾಜುಗಳು ಪುಡಿಯಾಗಿವೆ. ರೈಲ್ವೆ ಸಚಿವ ಹನೀಫ್ ಅಬ್ಬಾಸಿ, ರೈಲಿನಲ್ಲಿ ಸಾಮಾನ್ಯ ನಾಗರಿಕರೂ ಇದ್ದರು ಎಂದು ತಿಳಿಸಿದ್ದಾರೆ. ಸ್ಫೋಟದಲ್ಲಿ ಮೂವರು ಫ್ರಾಂಟಿಯರ್ ಕಾರ್ಪ್ಸ್ ಸಿಬ್ಬಂದಿ ಸೇರಿದಂತೆ 14 ಸಾವುಗಳು ಅಧಿಕೃತವಾಗಿ ದೃಢಪಟ್ಟಿದ್ದರೂ, ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ.

ಘಟನೆಯನ್ನು ಪ್ರಧಾನಿ ಶೆಹಬಾಜ್ ಷರೀಫ್ ಖಂಡಿಸಿದ್ದು, ಪೆಶಾವರಕ್ಕೆ ಹೊರಟಿದ್ದ ಜಾಫರ್ ಎಕ್ಸ್‌ಪ್ರೆಸ್ ರೈಲನ್ನು ಸ್ಥಗಿತಗೊಳಿಸಿ, ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ. ಈ ಹಿಂದೆ ನವೆಂಬರ್ 2024ರಲ್ಲಿ ಕ್ವೆಟ್ಟಾ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಲ್ಲಿ ನಡೆದಿದ್ದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ 32 ಜನರು ಮೃತಪಟ್ಟಿದ್ದರು.

ಅಯ್ಯಪ್ಪನ ಚಿನ್ನ ಕದ್ದವರ ರಕ್ಷಿಸುವ ಪ್ರಶ್ನೆಯೇ ಇಲ್ಲ

ತಿರುವನಂತಪುರ: ಶಬರಿಮಲೆ ಕ್ಷೇತ್ರದ ಬಂಗಾರ ಕಳವು ಪ್ರಕರಣದಲ್ಲಿ ಶಾಮೀಲಾಗಿರುವ ಯಾರನ್ನೂ, ಆತ ಯಾವುದೇ ಪಕ್ಷದವರಾದರೂ ಸುಮ್ಮನೆ ಬಿಡುವುದಿಲ್ಲ ಎಂದು ಕೇರಳ ದೇವಸ್ವಂ ಸಚಿವ ಕೆ.ಮುರಳೀಧರನ್ ಹೇಳಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ವಿಶೇಷ ತನಿಖಾ ತಂಡದ ವರದಿಗಾಗಿ ಕಾಯುತ್ತಿದ್ದೇನೆ. ವರದಿ ಸಿಕ್ಕ ಕೂಡಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ದೇವರ ಬಂಗಾರ ಕದ್ದವರು ಯಾರೇ ಆಗಿರಲಿ, ಯಾವುದೇ ಪಕ್ಷಕ್ಕೆ ಸೇರಿದವರಿರಲಿ, ಅವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದವರು ಸುದ್ದಿಗಾರರಿಗೆ ತಿಳಿಸಿದರು. ಜಗತ್ತಿನ ಇತರ ಭಾಗಗಳಲ್ಲಿ ಕಾಣಿಸಿಕೊಂಡಿರುವ ಎಬೋಲಾ ಪ್ರಕರಣಗಳು ಭಾರತದಲ್ಲಿ ವರದಿಯಾಗಿಲ್ಲ, ಆದರೂ ವಿದೇಶದಿಂದ ಆಗಮಿಸುವವರಲ್ಲಿ ಪ್ರಕರಣ ಸಾಧ್ಯತೆ ಪತ್ತೆಗಾಗಿ ವಿಮಾನ ನಿಲ್ದಾಣಗಳು ಮತ್ತು ಬಂದರುಗಳಲ್ಲಿ ಕಡ್ಡಾಯವಾಗಿ ಸ್ಕ್ರೀನಿಂಗ್ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಆರೋಗ್ಯ ಇಲಾಖಾ ಹೊಣೆಯನ್ನೂ ಹೊಂದಿರುವ ಸಚಿವ ಮುರಳೀಧರನ್ ತಿಳಿಸಿದರು. ವಿದೇಶದಿಂದ ಬಂದು ಬೇರೆ ರಾಜ್ಯಗಳ ವಿಮಾನ ನಿಲ್ದಾಣಗಳಲ್ಲಿ ಇಳಿದ ಪ್ರಯಾಣಿಕರು ರೈಲುಗಳ ಮುಖೇನ ಕೇರಳ ಪ್ರವೇಶಿಸುವ ಕಾರಣ, ಕೇರಳದ ಪ್ರಮುಖ ರೈಲು ನಿಲ್ದಾಣಗಳಲ್ಲೂ ಸ್ಕ್ರೀನ್ ಸಿಸ್ಟಮ್‌ಗಳನ್ನು ರೂಪಿಸಲು ನಿರ್ದೇಶನ ನೀಡಲಾಗಿದೆ. ತಿರುವನಂತಪುರ, ಕೊಚ್ಚಿ, ಕೋಯಿಕ್ಕೋಡ್ ಮತ್ತು ಕಣ್ಣೂರಿನ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಐಸೊಲೇಶನ್ ವಾರ್ಡ್‌ಗಳನ್ನು ತೆರೆಯಲಾಗಿದೆ.

ಐಎಸ್‌ಐ ಸಂಪರ್ಕಿತ ಯುವಕನ ಬಂಧನ

ಹೈದರಾಬಾದ್: ಪಾಕ್‌ನ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಬೆಂಬಲಿತ ಕ್ರೈಮ್ ಸಿಂಡಿಕೇಟ್‌ಗೆ ಸೇರಲು ಮತ್ತು ಐಎಸ್‌ಐ ನೆರವಿನಿಂದ ಶಸ್ತ್ರಾಸ್ತ್ರ ವಿಕ್ರಯಿಸಲು ಪ್ರಯತ್ನಿಸುತ್ತಿದ್ದ 22 ವರ್ಷದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

ಉತ್ತರಪ್ರದೇಶದ ಜಾವೇದ್ ಖಾನ್ ಬಂಧಿತ ಆರೋಪಿ. 2 ತಿಂಗಳ ಹಿಂದೆ ಹೈದರಾಬಾದ್‌ಗೆ ಬಂದಿದ್ದ ಈತ ಹೋಟೆಲ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ಆನ್‌ಲೈನ್‌ನಲ್ಲಿ, ಪಾಕ್ ಮೂಲದ ವ್ಯಕ್ತಿ ಹಾಗೂ ಆತನ ಗ್ಯಾಂಗ್ ಜತೆ ಸಂಪರ್ಕದಲ್ಲಿದ್ದ. ಪಾಕ್ ವ್ಯಕ್ತಿ ಹಾಗೂ ಆತನ ಸಹವರ್ತಿಗಳು ಸಂಘಟಿತ ಅಪರಾಧಿಗಳ ಗ್ಯಾಂಗ್ ನಿರ್ವಹಿಸುತ್ತಿದ್ದು, ಇದಕ್ಕೆ ಐಎಸ್‌ಐ ಬೆಂಬಲವಿತ್ತು. ಜಾವೇದ್ ಈ ಗುಂಪಿಗೆ ಸೇರ್ಪಡೆಯಾಗಲು ಬಯಸಿದ್ದ.

ಜಾವೇದ್ ಸಾಮಾಜಿಕ ಜಾಲತಾಣ ಮುಖೇನ ಪಾಕ್‌ನ ಪ್ರಸ್ತುತ ಗ್ಯಾಂಗ್ ಸದಸ್ಯರೊಂದಿಗೆ ವ್ಯವಹರಿಸುತ್ತಿದ್ದ, ಕ್ರೈಮ್ ಸಿಂಡಿಕೇಟ್‌ಗೆ ಸೇರಲು ಯತ್ನಿಸಿದ್ದ. ಬಂಧಿತನಿಂದ ಎರಡು ನಕಲಿ ಪಿಸ್ತೂಲ್‌ಗಳು ಮತ್ತು ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳಲ್ಲಿ ಜಾವೇದ್ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಜನಸಂಖ್ಯೆ–ಆರ್ಥಿಕ ಬದಲಾವಣೆ | ಶೇ.13.8 ನಿವಾಸ ಖಾಲಿ

ಜಪಾನ್‌ನಲ್ಲಿವೆ 90 ಲಕ್ಷ ಖಾಲಿ ಮನೆ!

ಟೋಕಿಯೋ: ಜಪಾನ್‌ನಲ್ಲಿ ಸುಮಾರು 90 ಲಕ್ಷ ಖಾಲಿ ಮನೆಗಳು(ಗೋಸ್ಟ್ ಹೋಮ್ಸ್) ಇವೆಯೆಂದು ವರದಿಯಾಗಿದೆ. ಇವು ಅಪೂರ್ಣ ಕಟ್ಟಡಗಳು ಅಥವಾ ಬಿಟ್ಟುಹೋದ ನಿರ್ಮಾಣ ಯೋಜನೆಗಳಲ್ಲ, ಬದಲಾಗಿ ಯಾರೂ ವಾಸಿಸದ ಮನೆಗಳು ಮತ್ತು ಅಪಾರ್ಟ್‌ಮೆಂಟ್‌ಗಳು. ಕೆಲವು ಮನೆಗಳ ಕಿಟಕಿಗಳಲ್ಲಿ ಇನ್ನೂ ಪರದೆಗಳು ಕಾಣುತ್ತವೆ. ಆದರೆ ತೋಟಗಳು ಕಾಡಿನಂತಾಗಿವೆ. ಮೇಲ್ಛಾವಣಿಗಳು ನಿಧಾನವಾಗಿ ಕುಸಿಯುತ್ತಿವೆ ಮತ್ತು ಇಡೀ ನೆರೆಹೊರೆ ಪ್ರದೇಶಗಳು ವರ್ಷದಿಂದ ವರ್ಷಕ್ಕೆ ನಿಶ್ಶಬ್ದವಾಗುತ್ತಿವೆ. ಹೆಚ್ಚುತ್ತಿರುವ ಖಾಲಿ ಮನೆಗಳನ್ನು ಅಕಿಯಾ ಎಂದು ಕರೆಯಲಾಗುತ್ತದೆ. ಇದು ದೇಶದ ಅತಿದೊಡ್ಡ ಜನಸಂಖ್ಯಾ ಮತ್ತು ಆರ್ಥಿಕ ಬದಲಾವಣೆಗಳಲ್ಲಿ ಒಂದಾಗಿ ಪರಿಣಮಿಸಿದೆ. 2023ರ ಗೃಹ ಸಮೀಕ್ಷೆಯ ಪ್ರಕಾರ, ಜಪಾನ್‌ನ ಒಟ್ಟು ಮನೆಗಳ ಪೈಕಿ ಶೇ.13.8ರಷ್ಟು ಮನೆಗಳು ಖಾಲಿಯಾಗಿವೆ. ಇದು ಈವರೆಗೆ ದಾಖಲಾದ ಅತ್ಯಧಿಕ ಮಟ್ಟವಾಗಿದೆ.

ನಗರಗಳತ್ತ ಹೆಚ್ಚುತ್ತಿರುವ ವಲಸೆ: ಕೆಲವು ಮನೆಗಳು ಕುಟುಂಬದವರಿಂದ ವಾರಸುದಾರರಾಗಿ ದೊರಕಿದ ನಂತರ ಖಾಲಿಯಾಗುತ್ತವೆ. ಕೆಲಸ, ಜೀವನಶೈಲಿ ಅಥವಾ ಬೇರೆ ಕಾರಣಗಳಿಂದ ಜನರು ಬೇರೆ ನಗರಗಳಿಗೆ ಸ್ಥಳಾಂತರವಾದಾಗ, ಕಾಲಕ್ರಮೇಣ ಆ ಆಸ್ತಿಯೊಂದಿಗೆ ಅವರ ಸಂಪರ್ಕ ಕಡಿಮೆಯಾಗುತ್ತದೆ ಅಥವಾ ಅದನ್ನು ನಿರ್ವಹಿಸುವುದು ಕಷ್ಟಕರ ಹಾಗೂ ದುಬಾರಿಯಾಗುತ್ತದೆ. ಜಪಾನ್‌ನ ಆಸ್ತಿ ತೆರಿಗೆ ವ್ಯವಸ್ಥೆಯೂ ಖಾಲಿ ಮನೆಗಳ ಸಮಸ್ಯೆಗೆ ಒಂದು ಕಾರಣವಾಗಿದೆ.



ಪ್ರಮುಖ ಕಾರಣಗಳು

- ಜನಸಂಖ್ಯಾ ಕುಸಿತ
- ವಯೋವೃದ್ಧ ಸಮುದಾಯಗಳ ಹೆಚ್ಚಳ
- ವಾರಸುದಾರಿಕೆ ಸಂಬಂಧಿತ ಜಟಿಲತೆಗಳು
- ಗ್ರಾಮೀಣ ಪ್ರದೇಶಗಳಿಂದ ಜನರ ವಲಸೆ

ಬಕ್ರೀದ್‌ಗೂ ಮುನ್ನ ಮುಸ್ಲಿಮ್ ಸಂಘಟನೆಯ ಬೇಡಿಕೆ

ಗೋವಿಗೆ ರಾಷ್ಟ್ರೀಯ ಪ್ರಾಣಿ ಗೌರವ ನೀಡಿ

ಲಖನೌ: ಮುಸ್ಲಿಮರ ಈದ್ ಉಲ್ ಅಝ್ಹಾಗೆ(ಬಕ್ರೀದ್) ಕೆಲವು ದಿನಗಳ ಮೊದಲು ಉತ್ತರಪ್ರದೇಶದ ಜೇಮಿಯತ್ ಉಲೇಮಾ ಎ ಹಿಂದ್ ಮುಸ್ಲಿಂ ಸಂಘಟನೆ ಅಧ್ಯಕ್ಷ ಮೌಲಾನಾ ಅರ್ಷದ್ ಮದನಿ ಅವರು ಗೋಮಾತೆಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡಬೇಕೆಂಬ ಬೇಡಿಕೆ ಮುಂದಿಟ್ಟಿದ್ದಾರೆ. ಹಲವು ಮುಸ್ಲಿಂ ಸಂಘಟನೆಗಳು ಮದನಿ ಬೇಡಿಕೆಗೆ ಬೆಂಬಲ ಸೂಚಿಸಿವೆ. ಗೋಹತ್ಯೆ ವಿಚಾರ ರಾಜಕೀಯ ದುರುಪಯೋಗ ಆಗುವುದನ್ನು ತಡೆಯಲು ಈ ಕ್ರಮ ಸಹಕಾರಿಯಾಗಬಹುದು ಎಂಬ ನಿರೀಕ್ಷೆಯನ್ನು ಕೆಲವು ಮುಸ್ಲಿಂ ಸಂಘಟನೆಗಳು ವ್ಯಕ್ತಪಡಿಸಿವೆ.



ಪ್ರಧಾನಿ, ಮುಖ್ಯಮಂತ್ರಿ ಭೇಟಿ ಸಾಧ್ಯತೆ: ಈ ವಿಷಯದಲ್ಲಿ ಸಮುದಾಯದೊಳಗೆ ಒಮ್ಮತ ರೂಪಿಸಲು ಹಲವು ಸಂಘಟನೆಗಳು ಪ್ರಯತ್ನಿಸುತ್ತಿದ್ದು, ಕೆಲವರು ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಭೇಟಿ ಮಾಡುವ ಉದ್ದೇಶವನ್ನೂ ಹೊಂದಿದ್ದಾರೆ. ಮುಸ್ಲಿಮರೇ ಇಂತಹದ್ದೊಂದು ಬೇಡಿಕೆ ಇಟ್ಟಿರುವುದು ಗೋಮಾತೆಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡಬೇಕೆಂಬ ಹಿಂದುಗಳ ರಾಷ್ಟ್ರೀಯ ಉಪಕ್ರಮಕ್ಕೆ ವಿಶೇಷ ಮಹತ್ವ ಸಿಕ್ಕಂತಾಗಿದೆ. ಏಕೆಂದರೆ ದೇಶದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಉತ್ತರಪ್ರದೇಶ ರಾಜ್ಯದಲ್ಲಿ, ಗಣನೀಯ ಮುಸ್ಲಿಂ ಜನಸಂಖ್ಯೆಯೂ ಇದೆ. ಇಂತಹ ಬೇಡಿಕೆಗಳು ಇಲ್ಲಿಯವರೆಗೆ ಸಾಮಾನ್ಯವಾಗಿ ಹಿಂದೂ ಸಂಘಟನೆಗಳಿಂದಲೇ ಕೇಳಿಬರುತ್ತಿದ್ದವು. ಆದರೆ ಇದೀಗ ಕೆಲವು ಮುಸ್ಲಿಂ ಸಂಘಟನೆಗಳೂ ತಮ್ಮದೂ ಧ್ವನಿಗೂಡಿಸಿದ್ದಾರೆ.

2027ರ ಚುನಾವಣೆಗೂ ಮುನ್ನ ಕೊನೆಯ ಬಕ್ರೀದ್: ಈ ಬೇಡಿಕೆ 2027ರ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗೂ ಮುನ್ನ ಮೇ 28ರಂದು ಕೊನೆಯ ಬಕ್ರೀದ್ ಹಿನ್ನೆಲೆ ಮುಸ್ಲಿಮರಿಂದ ಬಂದ ಈ ಧ್ವನಿಗೆ ತನ್ನದೇ ವಿಶೇಷ ರಾಜಕೀಯ ಹಾಗೂ ಸಾಮಾಜಿಕ ಮಹತ್ವವಿದೆ.

ಮೌಲಾನಾ ರಿಝ್ವಿ ಬೆಂಬಲ: ಗೋವಿಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡಬೇಕೆಂಬ ಮೌಲಾನಾ ಮದನಿ ಬೇಡಿಕೆಗೆ ಮೌಲಾನಾ ಶಹಬುದ್ದೀನ್ ರಿಝ್ವಿ ಸಂಪೂರ್ಣ ಬೆಂಬಲಿಸಿದ್ದಾರೆ.

ನರೇಂದ್ರ ಮೋದಿ ಸರ್ಕಾರ ಅಸ್ಥಿರಗೊಳಿಸಲು ಷಡ್ಯಂತ್ರ

ಪುಟ ೧➜ ಆದರೆ ಈ ದೇಶದ ಜನತೆ ವಿವೇಚನಾಶೀಲರು, ರಾಹುಲ್ ಗಾಂಧಿಯ ನೈಜ ಮುಖದ ಜತೆ ಜತೆಗೆ ಟೂಲ್‌ಕಿಟ್ ಗ್ಯಾಂಗ್ ಅಥವಾ ವಿಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿ ವಿರುದ್ಧ ಕೆಲಸ ಮಾಡುತ್ತಿರುವುದನ್ನು ದೇಶದ ಜನರು ಸಂಪೂರ್ಣ ಅರ್ಥಮಾಡಿಕೊಂಡಿದ್ದಾರೆ. ಹಾಗಾಗಿಯೇ ಈ ಬಾರಿಯೂ ಈ ಶಕ್ತಿಗಳಿಗೆ ತಕ್ಕ ಪಾಠ ಕಲಿಸಿದ್ದಾರೆ ಎಂದು ಹೇಳಿರುವ ಸಚಿವ ಗೋಯಲ್, ಭಾರತವನ್ನು ಅಸ್ಥಿರಗೊಳಿಸುವ, ದೇಶಕ್ಕೆ ಕಿಚ್ಚಿಡುವ ಇಂಡಿ ಕೂಟದ ಷಡ್ಯಂತ್ರ ಎಂದಿಗೂ ಫಲಿಸದು ಎಂದು ಎಚ್ಚರಿಸಿದ್ದಾರೆ.

ಅಪಾಯಕಾರಿ ಚಿಂತನೆ ಬಹಿರಂಗ: ರಾಹುಲ್ ಹೇಳಿಕೆ ಬರೇ ರಾಜಕೀಯ ಹತಾಶೆಯನ್ನಷ್ಟೇ ಅಲ್ಲ, ಬದಲಾಗಿ ಭಾರತವನ್ನು ಅಸ್ಥಿರಗೊಳಿಸುವ ಗಂಡಾಂತರಕಾರಿ ಚಿಂತನೆಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿದೆ. ಯಾವಾಗ ಭಾರತವು ಜಾಗತಿಕ ವೇದಿಕೆಯಲ್ಲಿ ತನ್ನ ಸ್ಥಾನಮಾನವನ್ನು ಬಲಿಷ್ಠಗೊಳಿಸುವುದೋ ಆಗೆಲ್ಲ ದೇಶದ ಆರ್ಥಿಕತೆ ನವಶೃಂಗ ತಲುಪಿದೆ ಮತ್ತು ಪ್ರಧಾನಿ ಮೋದಿಯವರ ನಾಯಕತ್ವವನ್ನು ಇಡೀ ಜಗತ್ತು ಅರ್ಥೈಸಿಕೊಂಡಿದೆ ಎಂದು ಬಿಜೆಪಿ ರಾಜ್ಯಸಭಾ ಸಂಸದ ಸುಧಾಂಶು ತ್ರಿವೇದಿ ಹೇಳಿದ್ದಾರೆ. ಭಾರತ ವಿರೋಧಿ ಅಂತಾರಾಷ್ಟ್ರೀಯ ಶಕ್ತಿಗಳು ಭಾರತದ ಹೆಸರು ಕೆಡಿಸಲು ಅಭಿಯಾನ ನಡೆಸುತ್ತಿದ್ದು, ಈ ಶಕ್ತಿಗಳಿಗೆ ಕಾಂಗ್ರೆಸ್ ಬೆಂಬಲ ನೀಡುತ್ತಿರುವುದು ದುರಂತವೆಂದು ಬಿಜೆಪಿ ರಾಷ್ಟ್ರೀಯ ವಕ್ತಾರರಾಗಿರುವ ತ್ರಿವೇದಿ ಟೀಕಿಸಿದ್ದಾರೆ.


ಲೆಕ್ಕಾಚಾರದ ರಾಜನೀತಿ ಭಾಗ: ಈಚಿನ ವಿಧಾನಸಭಾ ಚುನಾವಣೆಗಳ ಸಂದರ್ಭ ವಿದೇಶ ಪ್ರವಾಸ ಕೈಗೊಂಡಿದ್ದ ರಾಹುಲ್, ಚುನಾವಣೆ ನಡೆಯುವ ರಾಜ್ಯಗಳ ಬೆರಳೆಣಿಕೆಯ ರ‍್ಯಾಲಿಗಳಲ್ಲಿ ಪಾಲ್ಗೊಂಡಿದ್ದರು ಎಂದು ಗಮನ ಸೆಳೆದಿರುವ ತ್ರಿವೇದಿ, ವಿದೇಶದಲ್ಲಿದ್ದುಕೊಂಡು ಭಾರತದ ಸಂಸ್ಥೆಗಳನ್ನು ಅಪಮಾನಿಸುವುದು ಅಥವಾ ಇಕ್ಕಟ್ಟಿಗೆ ಸಿಲುಕಿಸುವುದು, ಭಾರತ ವಿರೋಧಿ ಹೇಳಿಕೆಗಳಿಗೆ ಪ್ರಚೋದನೆ ಮತ್ತು ಭಾರತದಲ್ಲಿ ಅಸ್ಥಿರತೆಯಾಗುವುದೆಂದು ಭವಿಷ್ಯ ಹೇಳುವುದು ಇವೆಲ್ಲ ಕಾಕತಾಳೀಯವಲ್ಲ, ಬದಲಾಗಿ ಟೂಲ್‌ಕಿಟ್ ಗ್ಯಾಂಗ್‌ನ ತೀರಾ ಲೆಕ್ಕಾಚಾರದ ರಾಜನೀತಿ ಭಾಗವಾಗಿದೆ ಎಂದು ತ್ರಿವೇದಿ ಎಕ್ಸ್‌ಗೆ ಹಿಂದಿಯಲ್ಲಿ ಹಾಕಿರುವ ಪೋಸ್ಟ್‌ನಲ್ಲಿ ಆರೋಪಿಸಿದ್ದಾರೆ.

ದೇಶದಲ್ಲಿ ದೊಂಬಿ, ಹಿಂಸೆಗೆ ರಾಹುಲ್ ಸಂಚು: ದೇಶದಲ್ಲಿ ದೊಂಬಿಗೆ ಪ್ರಚೋದಿಸುವ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಮೋದಿ ಸರಕಾರವನ್ನು ಪದಚ್ಯುತಗೊಳಿಸುವ ಸಂಚು ನಡೆಸಿದ್ದಾರೆ. ರಾಹುಲ್ ಗಾಂಧಿ ಮಗದೊಮ್ಮೆ ಉದ್ಧಟತನ ಮೆರೆದಿದ್ದಾರೆ. ಮೋದಿ ಸರಕಾರ ವರ್ಷದೊಳಗೆ ಬೀಳುವುದೆಂದು ಶನಿವಾರದ ಸಭೆಯೊಂದರಲ್ಲಿ ಘೋಷಿಸಿರುವುದು ಇದೇ ಷಡ್ಯಂತ್ರದ ಹಿನ್ನೆಲೆಯಲ್ಲಿ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ವಿಡಿಯೋ ಸಂದೇಶದಲ್ಲಿ ರಾಹುಲ್‌ಗೆ ಛೀಮಾರಿ ಹಾಕಿದ್ದಾರೆ.

ಭಾರತದ ಪ್ರಜಾಸತ್ತೆಯನ್ನು ಅಂತ್ಯಗೊಳಿಸುವ ದುರುದ್ದೇಶದಿಂದ, ತನ್ನ ವಿದೇಶ ಪ್ರವಾಸಗಳಿಗೆ ಹಣ ನೀಡುತ್ತಿರುವ ವಿದೇಶಿ ಕಂಪನಿಗಳು ಮತ್ತು ಜಾರ್ಜ್ ಸೊರೊಸ್‌ನಂತಹ ಈತನ 'ಗುರು'ಗಳ ಕುಮ್ಮಕ್ಕಿನ ಮೇರೆಗೆ ರಾಹುಲ್ ವಿದೇಶಿ ಅಜೆಂಡಾವನ್ನು ಕಾರ್ಯಗತಗೊಳಿಸಲು ಯತ್ನಿಸುತ್ತಿದ್ದಾರೆಂಬುದು ರಾಹುಲ್ ಹೇಳಿಕೆಯಿಂದಲೇ ದೃಢಪಟ್ಟಿದೆ. ಆದರೆ ದೇಶದ ಜನತೆ ಬುದ್ಧಿವಂತರು. ಭಾರತೀಯರಲ್ಲಿ ಆಧ್ಯಾತ್ಮಿಕ ಪ್ರಜ್ಞೆ ಗಾಢವಾಗಿದೆ. ಭಾರತದ ಜನರನ್ನು ಉದ್ರೇಕಿಸಿ ದೊಂಬಿ ಹುಟ್ಟುಹಾಕಲು ನಿಮಗೆ ಸಾಧ್ಯವಾಗುವುದೇ? ಅಸ್ಸಾಂ, ಪ.ಬಂಗಾಳದಲ್ಲಿ ಏನಾಯಿತೆಂಬುದನ್ನು ಕಂಡಿದ್ದೀರಾ. ಭಾರತದಲ್ಲಿ ಸಂವಿಧಾನವು ಶಾಶ್ವತ ಮತ್ತು ಪ್ರಜಾಸತ್ತೆಗೆ ಎಂದಿಗೂ ವಿಜಯವಾಗುತ್ತದೆ. ಇದು ಭಾರತದ 140ಕೋಟಿ ಜನತೆಯ ಸರಕಾರ. ಸೊರೊಸ್ ಸಹಿತ ನಿಮ್ಮ ವಿದೇಶಿ ಮಾಸ್ಟರ್‌ಗಳು ದೇಶಕ್ಕೆ ಯಾವುದೇ ಹಾನಿಯೊಡ್ಡಲಾಗದು ಎಂದು ಸಂಬಿತ್ ಪಾತ್ರಾ ಎಚ್ಚರಿಸಿದ್ದಾರೆ.

ಜಗತ್ತಿನ ಹಲವು ಭಾಗಗಳಲ್ಲಿನ ಸಂಘರ್ಷದಿಂದಾಗಿ ಹಲವಾರು ದೇಶಗಳಿಂದು ಸಮಸ್ಯೆಗಳಲ್ಲಿ ತೊಳಲಾಡುತ್ತಿವೆ. ಆದರೆ ಭಾರತವು ಪ್ರಧಾನಿ ಮೋದಿ ನಾಯಕತ್ವದಲ್ಲಿ ದಿನೇ ದಿನೇ ಪ್ರಗತಿ ಸಾಧಿಸುತ್ತಿದೆ. ಈ ಸರಕಾರಕ್ಕೆ ದೇಶವಾಸಿ ಜನರ ಆಶೀರ್ವಾದ ಬಲ ಇರುವವವರೆಗೂ ಸರಕಾರ ನಿರಂತರವಾಗಿ ದೇಶಸೇವೆ ಮಾಡಲಿದೆ ಎಂಬ ಕಟು ವಾಸ್ತವವನ್ನು ಸಂಬಿತ್ ಪಾತ್ರಾ, ರಾಹುಲ್‌ಗೆ ಮನವರಿಕೆ ಮಾಡಿದ್ದಾರೆ.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕಿನೇಜಿ

ಇಡಿಯಾಗಿದ್ದುದನ್ನು ಒಡೆಯುವುದೇ ಎಡ ಪಂಥೀಯರ ವಾದ - ಚಕ್ರವರ್ತಿ ಸೂಲಿಬೆಲೆ
- ಒಡೆಯನಾಗಲು ಒಡೆದು ಆಳುವುದಕ್ಕಿಂತ ಸುಲಭದ ದಾರಿ ಬೇರೇನಿದೆ?

ದಿನ ಭವಿಷ್ಯ

ಮೇಷ
ಹರುಷದ ದಿನ. ಮನೆಯಲ್ಲಿ, ವೃತ್ತಿಯಲ್ಲಿ ಪೂರಕ ವಾತಾವರಣ. ಎಲ್ಲರ ಜತೆ ತಾಳ್ಮೆಯಿಂದ ವ್ಯವಹರಿಸಿ. ಕೋಪತಾಪ ನಿಯಂತ್ರಿಸಿಕೊಳ್ಳಿ.

ವೃಷಭ
ಸಮಸ್ಯೆ ಬಗ್ಗೆ ಮುಕ್ತವಾಗಿ ಚಿಂತಿಸಿ. ನಿಮ್ಮ ಲೋಪವಿದ್ದರೆ ಸರಿ ಮಾಡಿಕೊಳ್ಳಿ. ಖರ್ಚು ಹೆಚ್ಚಿದರೂ ಅದು ಅವಶ್ಯ ಕಾರ್ಯವಾಗಲಿದೆ.

ಮಿಥುನ
ಕೈಗೊಂಡ ಕಾರ್ಯ ಸಫಲ. ಸಮಸ್ಯೆಯನ್ನು ಜಾಣ್ಮೆಯಿಂದ ಪರಿಹರಿಸಿ. ಸಂಘರ್ಷ ತಪ್ಪಿಸಿ. ಹಳೆಯ ಕಹಿನೆನಪು ಮರೆತು ಮುಂದೆ ನೋಟ ಹರಿಸಿ.

ಕಟಕ
ಹಣ ಗಳಿಕೆಯ ಹಾದಿ ಸುಗಮ. ಉದ್ಯಮ ದಲ್ಲಿ ಯಶಸ್ಸು. ವೃತ್ತಿಯಲ್ಲಿ ಮೂಡಿದ್ದ ಕಿರಿಕಿರಿ ನಿವಾರಣೆ. ಮನೆಯವರ ಸಹಕಾರ, ಸಾಮರಸ್ಯ.

ಸಿಂಹ
ನಿಮಗೋ ಪೂರಕ ದಿನ. ಗುರಿ ಈಡೇರಿಕೆ. ಪ್ರೀತಿಪಾತ್ರರ ಜತೆ ಕಾಲಕ್ಷೇಪ. ಖರ್ಚು ಹೆಚ್ಚಿದರೂ ಹಣದ ಕೊರತೆ ಕಾಡದು. ಮಿತ್ರ ಸಂಗಮ.

ಕನ್ಯಾ
ವೃತ್ತಿಯಲ್ಲಿ ಪೂರಕ ಬೆಳವಣಿಗೆ. ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿದೆ. ಆಪ್ತರ ಜತೆ ಹರ್ಷದ ಕೂಟ. ಆದಾಯ ಹೆಚ್ಚಳ, ಖರ್ಚೂ ಅಧಿಕವೆ.

ತುಲಾ
ಒತ್ತಡದ ದಿನ. ಅದನ್ನು ಸಂಭಾಳಿಸುವುದೇ ಮುಖ್ಯವಾಗಲಿದೆ. ಆಪ್ತರ ಜತೆ ಭಿನ್ನಮತ ನಿವಾರಿಸಿ. ಸ್ನೇಹಿತರಿಂದ ಅನವಶ್ಯ ಕಿರಿಕಿರಿ ಉಂಟಾದೀತು.

ವೃಶ್ಚಿಕ
ಮುಖ್ಯ ಕೆಲಸ ಇಂದೇ ಪೂರೈಸಿಕೊಳ್ಳಿ. ನಾಳೆಗೆ ಬಾಕಿ ಇಡದಿರಿ. ಸಂಗಾತಿ ಜತೆಗೆ ಸಾಮರಸ್ಯ. ಆರ್ಥಿಕ ಗಳಿಕೆ ಹೆಚ್ಚಳ. ಬಂಧುಗಳ ನೆರವು.

ಧನು
ಅನವಶ್ಯ ಚಿಂತೆ ನಿಮ್ಮ ಕೆಲಸ ಕೆಡಿಸಬಹುದು. ಭಾವನೆ ನಿಯಂತ್ರಿಸಿ. ಕುಟುಂಬ ಸದಸ್ಯರ ಜತೆ ಸಮಯ ಕಳೆದು ಚಿಂತೆ ಮರೆಯಿರಿ.

ಮಕರ
ಕಠಿಣ ಶ್ರಮದ ಬಳಿಕವಷ್ಟೇ ಉತ್ತಮ ಫಲ ದೊರಕೀತು. ಸುಲಭ ದಾರಿ ಹುಡುಕುವುದು ವ್ಯರ್ಥ. ಅನವಶ್ಯ ವಾಗ್ವಾದ ದಲ್ಲಿ ತೊಡಗಬೇಡಿ.

ಕುಂಭ
ಏಕತಾನತೆ ಬಿಟ್ಟು ಹೊಸದರತ್ತ ಮುಖ ಮಾಡಿ. ಇದ್ದ ಹಣವೆಲ್ಲ ಖರ್ಚು ಮಾಡುವ ಬದಲು ಉಳಿತಾಯಕ್ಕೆ ಗಮನ ಕೊಡಿ.

ಮೀನ
ಖಾಸಗಿ ಬದುಕಲ್ಲಿ ಸಂವಹನದ ಕೊರತೆ. ಗೊಂದಲ ಏರ್ಪಡ ಬಹುದು. ಹಣದ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ಖರ್ಚು ಅಧಿಕ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 6,2,7,1

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್‌ರಿಂದ ಸಲಹೆ: ಸಿಟಿ ರವಿ

ಬಿಜೆಪಿ ಅಧಿಕಾರಕ್ಕೆ ತರಲು ಯತ್ನ

• **ಬೆಂಗಳೂರು:** ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ವಹಿಸಬೇಕಾದ ಕ್ರಮಗಳ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಸಲಹೆ ಮತ್ತು ಸೂಚನೆಗಳನ್ನು ನೀಡಿದರು ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದ್ದಾರೆ.



ನಿತಿನ್ ನವೀನ್ ಅವರೊಂದಿಗೆ ನಡೆದ ಸಭೆಯ ನಂತರ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸಭೆಯ ಕುರಿತು ಮಾಧ್ಯಮಗಳಿಗೆ ವಿವರಿಸಿದರು. ನಿತಿನ್ ನವೀನ್ ಅವರು ಅಧ್ಯಕ್ಷರಾದ ನಂತರ ಕರ್ನಾಟಕಕ್ಕೆ ಅಧಿಕೃತ ಭೇಟಿ ನೀಡಿದ್ದಾರೆ. ಪಕ್ಷದ ಸಂಸದರು, ಶಾಸಕರು, ಜಿಲ್ಲಾಧ್ಯಕ್ಷರ ಮಟ್ಟದ ಮೇಲಿನವರೊಂದಿಗೆ ಸಂವಾದ ನಡೆಸಿದರು.

ಪಕ್ಷದ ಪರಿಶ್ರಮದಿಂದಾಗಿ ಇಂದು 22ಕ್ಕೂ ಹೆಚ್ಚು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. 400ಕ್ಕೂ ಹೆಚ್ಚು ಸಂಸದರಿದ್ದಾರೆ, 2000ಕ್ಕೂ ಹೆಚ್ಚು ಶಾಸಕರಿದ್ದಾರೆ. ಇದು ಪಕ್ಷದ ಮೇಲೆ ಜನರು ಇಟ್ಟು ವಿಶ್ವಾಸದಿಂದ ಸಾಧ್ಯವಾಗಿದೆ. ಇದೇ ನಂಬಿಕೆಯನ್ನು ಮುಂದಿನ ಚುನಾವಣೆಗಳಲ್ಲಿ ಉಳಿಸಿಕೊಳ್ಳಬೇಕು. ಪ್ರತಿಯೊಬ್ಬ ಮುಖಂಡರು, ಶಾಸಕರು ಕಾರ್ಯಕರ್ತರೊಂದಿಗೆ ಆತ್ಮೀಯ ಸಂಬಂಧ ಇಟ್ಟುಕೊಳ್ಳಬೇಕು. ಜನರೊಟ್ಟಿಗೆ ಸಂವಾದ ನಡೆಸಬೇಕು, ಜನಪರ ಕಾರ್ಯಗಳ ಮೂಲಕವೇ ಗೆಲ್ಲಬೇಕು, ಜನಪರ ಹೋರಾಟಗಳ ಮೂಲಕ ಸಮಸ್ಯೆಗಳ ನಿವಾರಣೆಗೆ ಪರಿಹಾರ ಕೊಡಬೇಕು ಎಂಬ ಮಾತನ್ನು ಹೇಳಿದರು ಎಂದು ತಿಳಿಸಿದರು.

ಕಾಂಗ್ರೆಸ್ ವೈಫಲ್ಯದಿಂದ ಬಿಜೆಪಿ ಅಧಿಕಾರಕ್ಕೇರುವ ಭ್ರಮೆ ಬೇಡ: ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜನರಿಗೆ ಯಾವ ವಿಶ್ವಾಸವನ್ನು ಮೂಡಿಸಿ ಹೇಗೆ ಅಧಿಕಾರಕ್ಕೆ ಬಂದಿತ್ತೋ ಆ ವಿಶ್ವಾಸ ಉಳಿಸಿಕೊಳ್ಳಲು ವಿಫಲವಾಗಿದೆ. ಭ್ರಷ್ಟಾಚಾರದ ವಿರುದ್ಧ ಮಾತನಾಡಿದವರು ಈಗ ಎಲ್ಲ ಸಚಿವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಹೆಚ್ಚಿನ ಸಚಿವರ ಮೇಲೆ ಭ್ರಷ್ಟಾಚಾರ ಆರೋಪಗಳಿವೆ, ಮುಖ್ಯಮಂತ್ರಿಗಳೂ ಭ್ರಷ್ಟಾಚಾರ ಆರೋಪದಿಂದ ಮುಕ್ತರಾಗಿಲ್ಲ, ಯುವಕರು ಹತಾಶರಾಗಿದ್ದಾರೆ. ಅತಿ ಹೆಚ್ಚು ಮಹಿಳೆಯರ ನಾಪತ್ತೆ ಪ್ರಕರಣ ಆಗಿದೆ. ಹೀಗೆ ಎಲ್ಲದರಲ್ಲೂ ಕಾಂಗ್ರೆಸ್ ವಿಫಲವಾಗಿದೆ. ಇದೊಂದೇ ಬಿಜೆಪಿ ಅಧಿಕಾರಕ್ಕೆ ಬರಲು ಸಹಾಯ ಮಾಡದು. ಮುಂದೆ ನಾವೇ ಅಧಿಕಾರಕ್ಕೆ ಬರುವ ಭ್ರಮೆಯಲ್ಲಿ ಇರಬೇಡಿ ಎಂದು ಎಚ್ಚರಿಕೆ ನೀಡಿದರು ಎಂದು ಹೇಳಿದರು.

ಮುಂದಿನ ಚುನಾವಣೆಗೆ ಗಮನ ನೀಡಲು ಸಲಹೆ

ಮುಂದಿನ ಮೂರು ದಿನಗಳ ಪ್ರವಾಸದ ವೇಳೆ ವಿವರವಾಗಿ ಚರ್ಚೆ ಮಾಡಲಾಗುವುದು. ವಿಧಾನ ಪರಿಷತ್, ವಿಧಾನಸಭೆ ಉಪ ಚುನಾವಣೆ, ಜಿಬಿಎ ಚುನಾವಣೆ ಕಡೆಗೆ ಗಮನಕೊಡಿ. ಗೆಲ್ಲಲು ಕಾರ್ಯಯೋಜನೆ ತಯಾರಿಸಿ. ಕೋರ್ ಕಮಿಟಿ ಈ ಬಗ್ಗೆ ಅವಲೋಕನ ಮಾಡಲಿ ಎಂದು ರಾಷ್ಟ್ರೀಯ ಅಧ್ಯಕ್ಷರು ತಿಳಿಸಿದ್ದಾರೆ ಎಂದು ಸಿ.ಟಿ ರವಿ ಹೇಳಿದರು.

ತಮಿಳುನಾಡಿನಲ್ಲಿ ಡಿಎಂಕೆ ವೈಫಲ್ಯ ಎದ್ದು ಕಾಣುತ್ತಿತ್ತು. ಇದೊಂದೇ ಎಐಡಿಎಂಕೆ ಅಧಿಕಾರಕ್ಕೆ ಬರಲು ಸಹಾಯ ಮಾಡಬಹುದು ಎಂದು ಭಾವಿಸಲಾಗಿತ್ತು. ಆದರೆ, ಟಿವಿಕೆ ಪಕ್ಷ ಮಧ್ಯೆ ಬಂದು ಅಧಿಕಾರ ಪಡೆಯಿತು. ಕರ್ನಾಟಕದಲ್ಲೂ ಬಿಜೆಪಿ ನಾಯಕರು ಮುಂದೆ ನಮ್ಮದೇ ಅಧಿಕಾರ ಎಂದು ಸುಮ್ಮನೆ ಕೂರಬೇಡಿ. ದೇಶದಲ್ಲಿ ಕಾಂಗ್ರೆಸ್‌ಗೆ ಮೋದಿ ಅವರು ಒಳ್ಳೆಯ ಪರ್ಯಾಯ ಹೇಗೆ ಕೊಟ್ಟರೋ ಅದೇ ರೀತಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬಿಜೆಪಿ ಉತ್ತಮ ಪರ್ಯಾಯ ಎಂದು ಜನ ಭಾವಿಸುವ ರೀತಿ ಅಧಿಕಾರಕ್ಕೆ ಬರಬೇಕು ಎಂದರು.

> ಕರ್ನಾಟಕದ ಅಸ್ಮಿತೆ ಜೊತೆಗೆ ರಾಷ್ಟ್ರದ ಗೌರವ ಉಳಿಸಿ ನಾವು ಕೆಲಸ ಮಾಡಬೇಕಾಗಿದೆ. ದೇಶದ ಸಮಗ್ರತೆಗೆ ಅಡ್ಡಿಯಾಗದಂತೆ ಎಲ್ಲಾ ರಾಜ್ಯಗಳಲ್ಲಿ ಪ್ರಾದೇಶಿಕ ಅಸ್ಮಿತೆ ಉಳಿಸಿಕೊಂಡು ರಾಷ್ಟ್ರದ ಸಮಗ್ರತೆ ಕಾಪಾಡಿ ಎಂದು ನಿತಿನ್ ನವೀನ್ ಸಲಹೆ ನೀಡಿದ್ದಾರೆ.
> ■ ಸಿ.ಟಿ. ರವಿ, ವಿಧಾನಪರಿಷತ್ ಸದಸ್ಯ

ಕಾಂಗ್ರೆಸ್ ವೈಫಲ್ಯ ಇಟ್ಟುಕೊಂಡು ನಿರಂತರವಾಗಿ ಹೋರಾಟದ ಮೂಲಕ ತಂಡವಾಗಿ ಕೆಲಸ ಮಾಡಬೇಕು. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮೂರು ವರ್ಷಗಳ ಆಡಳಿತ ವೈಫಲ್ಯ ಕುರಿತು ಆರೋಪಪಟ್ಟಿ ತಯಾರಿಸಿ ಜನರ ಮುಂದಿಡಲು ಯೋಜನೆ ರೂಪಿಸಿ. ಕರ್ನಾಟಕವು ಕೇವಲ ದಕ್ಷಿಣ ಭಾರತದಲ್ಲಿ ಮಾತ್ರವಲ್ಲ ದೇಶದಲ್ಲೇ ಬಲವಾದ ಸಂಘಟನೆ ಹೊಂದಿರುವ ರಾಜ್ಯವಾಗಿದೆ. ಇಲ್ಲಿ ಜನಪರ ಹೋರಾಟ ಮಾಡಿದರೆ ಜನರೇ ಅಧಿಕಾರಕ್ಕೆ ಬರುವ ಶಕ್ತಿ ಕೊಡುತ್ತಾರೆಂಬುದನ್ನು ಅರಿಯಿರಿ. ವ್ಯಕ್ತಿ ಹಿತಕ್ಕಾಗಿ ಕೆಲಸ ಮಾಡದೇ ಜನರ ಮತ್ತು ಪಕ್ಷದ ಹಿತ ರಕ್ಷಿಸುವ ಕೆಲಸ ಮಾಡಿ. ರಾಜ್ಯದಲ್ಲಿನ ಅರಾಜಕ ಶಕ್ತಿ ಬಗ್ಗೆಯೂ ಎಚ್ಚರ ವಹಿಸಿ ಎಂದು ಸಲಹೆ ನೀಡಿದರು ಎಂದು ತಿಳಿಸಿದರು.

84 ಸಾವಿರ ಜನರ ಪಿಂಚಣಿ ರದ್ದು

ಪುಟ ೧➜ **1.20 ಲಕ್ಷಕ್ಕೆ ಆದಾಯ ಮಿತಿ ನಿಗದಿ:** ಸಾಮಾಜಿಕ ಭದ್ರತಾ ಯೋಜನೆಗಳ ಸವಲತ್ತು ಪಡೆಯಲು ಆದಾಯ ಮಿತಿಯನ್ನು 2021ರ ಫೆ.10ರ ಆದೇಶದಂತೆ 32,000 ರೂ.ಗಳಿಗೆ ನಿಗದಿಪಡಿಸಲಾಗಿದೆ. ಆದರೆ, ಬಡತನ ರೇಖೆಗಿಂತ ಕೆಳಗಿರುವ ವರ್ಗಗಳ ಕುಟುಂಬಗಳು ಪಡೆಯುವ ಪಡಿತರ ಚೀಟಿಗಳಿಗಾಗಿ ಆದಾಯ ಮಿತಿಯನ್ನು 1,20,000 ರೂ.ಗಳಿಗೆ ನಿಗದಿಪಡಿಸಿರುವಂತೆ, ಸಾಮಾಜಿಕ ಭದ್ರತಾ ಯೋಜನೆಗಳ ಪಿಂಚಣಿಗಳಿಗಾಗಿಯೂ ಇದೇ ಆದಾಯ ಮಿತಿಯನ್ನು ನಿಗದಿಪಡಿಸಲು ಅನೇಕ ಸಂಘ ಸಂಸ್ಥೆಗಳು ಮನವಿ ಸಲ್ಲಿಸಿವೆ.

ಬಡತನ ರೇಖೆಗಿಂತ ಕೆಳಗಿರುವ ಸಾರ್ವಜನಿಕರೂ ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ವಿಚಾರದಲ್ಲಿ ನ್ಯಾಯಾಲಯವೂ ಸಹ ನಿರ್ದೇಶನ ನೀಡಿರುವುದರಿಂದ 1,20,000 ರೂ. ಗಳಿಗೆ ನಿಗದಿಪಡಿಸಲು ಸಚಿವ ಸಂಪುಟದ ಅನುಮೋದನೆಗೆ ಸಲ್ಲಿಸಲು ಕ್ರಮ ವಹಿಸಲಾಗಿದೆ.

ದಾಖಲೆ ಒದಗಿಸಿದರೆ ಕ್ರಮ

ಒಟ್ಟು 14,68,723 ಸಂದೇಹಾಸ್ಪದ ಫಲಾನುಭವಿಗಳ ಪಿಂಚಣಿಗಳನ್ನು ಸ್ಥಗಿತಗೊಳಿಸಿ ಅವರ ಮೊಬೈಲ್ ದೂರವಾಣಿ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಸಂದೇಶ ಕಳುಹಿಸಿ ಆದಾಯ ದೃಢೀಕರಣ ಪತ್ರ ಅಥವಾ ಇತರೆ ದಾಖಲಾತಿಗಳನ್ನು ಸಂಬಂಧಪಟ್ಟ ತಹಸೀಲ್ದಾರ್ ಕಚೇರಿಯಲ್ಲಿ 30 ದಿನಗಳೊಳಗಾಗಿ ಹಾಜರುಪಡಿಸಿ ನಿಯಮಾನುಸಾರ ಪಿಂಚಣಿ ಪಡೆಯಬಹುದಾಗಿದೆ. ರದ್ದುಗೊಳಿಸಲು ತೀರ್ಮಾನಿಸಿರುವ 84,211 ಪ್ರಕರಣಗಳು ಮತ್ತು ಸ್ಥಗಿತಗೊಳಿಸಲು ತೀರ್ಮಾನಿಸಿರುವ 14,68,723 ಪ್ರಕರಣಗಳು ಭೌತಿಕ ಪರಿಶೀಲನೆಗೆ ಬಾಕಿ ಇರುವ 3,89,834 ಪ್ರಕರಣಗಳನ್ನು ಹೊರತುಪಡಿಸಿ ಉಳಿಕೆ ಎಲ್ಲಾ ಪಿಂಚಣಿದಾರರಿಗೆ ಪಿಂಚಣಿಗಳನ್ನು ಪಾವತಿಸಲು ತೀರ್ಮಾನಿಸಲಾಗಿದ್ದು, ಕ್ರಮ ವಹಿಸಲಾಗುತ್ತಿದೆ.

- ಒಟ್ಟು ಪಿಂಚಣಿದಾರರು 82.98 ಲಕ್ಷ
- ಸಂದೇಹಾಸ್ಪದ ಪಿಂಚಣಿದಾರರು 23.12 ಲಕ್ಷ
- ರದ್ದುಗೊಳಿಸಲು ತೀರ್ಮಾನಿಸಿರುವ ಪಿಂಚಣಿದಾರರು 84,211
- ಪಿಂಚಣಿ ಸ್ಥಗಿತಗೊಳ್ಳಲಿರುವ ಫಲಾನುಭವಿಗಳು 14,68,723
- ಭೌತಿಕವಾಗಿ ಪರಿಶೀಲನೆ ಕೈಗೊಂಡಿರುವ ಪ್ರಕರಣಗಳು 19,22,833
- ಭೌತಿಕ ಪರಿಶೀಲನೆಗೆ ಬಾಕಿ ಇರುವ ಪ್ರಕರಣಗಳು 3,89,834

ವೈಟ್‌ಹೌಸ್ ಬಳಿ ಮತ್ತೆ ಗುಂಡಿನ ಸದ್ದು

ಪುಟ ೧➜ ಶನಿವಾರ ಸಂಜೆ 6 ಗಂಟೆಯ ಸುಮಾರಿಗೆ 17ನೇ ಸ್ಟ್ರೀಟ್ ಮತ್ತು ಪೆನ್ಸಿಲ್ವೇನಿಯಾ ಅವೆನ್ಯೂ ಪ್ರದೇಶದಲ್ಲಿದ್ದ ವ್ಯಕ್ತಿ, ತನ್ನ ಬ್ಯಾಗ್‌ನಿಂದ ಶಸ್ತ್ರಾಸ್ತ್ರ ಹೊರತೆಗೆದು ಏಕಾಏಕಿ ಗುಂಡಿನ ದಾಳಿ ಆರಂಭಿಸಿದ್ದಾನೆ. ತಕ್ಷಣ ಕಾರ್ಯಪ್ರವೃತ್ತರಾದ ಭದ್ರತಾ ಅಧಿಕಾರಿಗಳು ಆತನ ಮೇಲೆ ಪ್ರತಿಯಾಗಿ ಗುಂಡು ಹಾರಿಸಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಆತನನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಆತ ಮೃತಪಟ್ಟಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತನನ್ನು 21 ವರ್ಷದ ನಸಿರೆ ಬೆಸ್ಟ್ ಎಂದು ಗುರುತಿಸಲಾಗಿದೆ. ಈತ 2025ರ ಜುಲೈನಲ್ಲೂ ವೈಟ್ ಹೌಸ್‌ಗೆ ಅಕ್ರಮವಾಗಿ ನುಗ್ಗಲು ಯತ್ನಿಸಿ ಬಂಧನಕ್ಕೊಳಗಾಗಿದ್ದ. ಕೋರ್ಟ್ ಆದೇಶ ಉಲ್ಲಂಘಿಸಿ ತಲೆಮರೆಸಿಕೊಂಡಿದ್ದ ಈತ, ಈಗ ನೇರವಾಗಿ ಗುಂಡಿನ ದಾಳಿಗೆ ಇಳಿದಿರುವುದು ತೀವ್ರ ಆತಂಕ ಮೂಡಿಸಿದೆ. ಪ್ರಕರಣದ ತನಿಖೆ ಮುಂದುವರಿದಿದೆ.

ಪಕ್ಷ ಸಂಘಟನೆಗೆ ಈಗಲೇ ಸಜ್ಜಾಗಿ: ನಿತಿನ್ ಸೂಚನೆ

ಪುಟ ೧➜ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನಕ್ಕೆ ಆಗಮಿಸಿದ ನಿತಿನ್ ನವೀನ್ ಅವರಿಗೆ ಪಕ್ಷದ ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ಭರ್ಜರಿ ಸ್ವಾಗತ ನೀಡಿದರು. ಬಳಿಕ ವಿಶೇಷ ಸಂಘಟನಾ ಸಭೆ ಆಯೋಜಿಸಲಾಗಿತ್ತು. ಇದರಲ್ಲಿ ರಾಜ್ಯಾಧ್ಯಕ್ಷರು, ರಾಜ್ಯ ಪದಾಧಿಕಾರಿಗಳು, ಪ್ರತಿಪಕ್ಷ ನಾಯಕರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾಧ್ಯಕ್ಷರನ್ನೊಳಗೊಂಡಂತೆ ಸುಮಾರು ಎರಡು ಗಂಟೆ ಸಭೆ ನಡೆಸಿದ್ದಾರೆ. ಈ ವೇಳೆ ವೈಯಕ್ತಿಕ ವಿಚಾರಗಳನ್ನು ಬದಿಗಿಟ್ಟು ಪಕ್ಷ ಸಂಘಟನೆಗೆ ಒತ್ತು ನೀಡುವಂತೆ ನಿತಿನ್ ನವೀನ್ ಸೂಚನೆ ನೀಡಿದ್ದಾರೆ. ವ್ಯಕ್ತಿಗಿಂತ ಪಕ್ಷ ಮೊದಲು, ಪಕ್ಷಕ್ಕಿಂತ ದೇಶ ಮೊದಲು ಎಂಬ ಸಂದೇಶ ಪುನರುಚ್ಚರಿಸಿದ್ದಾರೆ.

ಜನಪ್ರತಿನಿಧಿಗಳು ಕೂಡ ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವುದಷ್ಟೇ ಅಲ್ಲದೇ ಸಂಘಟನೆಗೆ ಶ್ರಮಿಸುವಂತೆ ಸೂಚಿಸಿದ್ದಾರೆ. ರಾಜ್ಯದಲ್ಲೀಗ ಆಡಳಿತ ನಡೆಸುತ್ತಿರುವ ಕಾಂಗ್ರೆಸ್‌ನ ವೈಫಲ್ಯಗಳನ್ನು ಜನರಿಗೆ ಎತ್ತಿತೋರಿಸಿ ಬಿಜೆಪಿ ವಿಶ್ವಾಸಾರ್ಹ ಪಕ್ಷ ಎಂಬುದನ್ನು ಮನವರಿಕೆ ಮಾಡಿಕೊಡಲು ಎಲ್ಲರೂ ಸಂಘಟನಾತ್ಮಕವಾಗಿ ಶ್ರಮಿಸಬೇಕು. ಪಕ್ಷಕ್ಕಾಗಿ ಕಟಿಬದ್ಧರಾಗಿ ದುಡಿಯಬೇಕು ಎಂದು ಸಲಹೆ ನೀಡಿದ್ದಾರೆ.

ಕೋರ್ ಕಮಿಟಿ ಸಭೆ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಅಧ್ಯಕ್ಷತೆಯಲ್ಲಿ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಭಾನುವಾರ ಪಕ್ಷದ ರಾಜ್ಯ ಕೋರ್ ಕಮಿಟಿ ಸಭೆ ನಡೆಯಿತು. ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ನಿಕಟಪೂರ್ವ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಂಸದ ಗೋವಿಂದ ಕಾರಜೋಳ, ಪ್ರತಿಪಕ್ಷ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ, ಮಾಜಿ ಸಚಿವ ಬಿ.ಶ್ರೀರಾಮುಲು, ಪುದುಚೇರಿ ರಾಜ್ಯ ಉಸ್ತುವಾರಿ ನಿರ್ಮಲ್ ಕುಮಾರ್ ಸುರಾಣಾ, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ-ಉಸ್ತುವಾರಿ ಸುಧಾಕರ್ ರೆಡ್ಡಿ, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಭಾಗವಹಿಸಿದ್ದರು.

ಫಾಲ್ಟಾದಲ್ಲಿ ಬಿಜೆಪಿ ಜಯಭೇರಿ

ಪುಟ ೧➜ ಪಂಡಾ ಅವರನ್ನು 1ಲಕ್ಷ ಮತಗಳಿಂದ ಗೆಲ್ಲಿಸುವಂತೆ ತಾನು ಮನವಿ ಮಾಡಿದ್ದೆ. ಆದರೆ ಜನರು ನನ್ನ ಟಾರ್ಗೆಟ್ ಮೀರಿ ಮತ ನೀಡಿದ್ದಾರೆ ಎಂದು ಪೋಸ್ಟ್‌ನಲ್ಲಿ ಸಿಎಂ ಸಂತಸ ಹಂಚಿಕೊಂಡಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಮೂಲಕ, ಚೆನ್ನದ ಫಾಲ್ಟಾ ನಿರ್ಮಾಣ ಮುಖೇನ ಫಾಲ್ಟಾ ಜನತೆಯ ಋಣವನ್ನು ತಾನು ಸಂದಾಯ ಮಾಡುವೆ ಎಂದು ಸಿಎಂ ಅಧಿಕಾರಿ ಜನರಿಗೆ ಭರವಸೆ ನೀಡಿದ್ದಾರೆ.

ಟಿಎಂಸಿಯನ್ನು ಕಟುವಾಗಿ ತರಾಟೆಗೆತ್ತಿಕೊಂಡ ಸಿಎಂ ಅಧಿಕಾರಿ, ಟಿಎಂಸಿ ವರ್ಷಗಟ್ಟಲೆ ಅಧಿಕಾರದಲ್ಲಿದ್ದಾಗ ಪಕ್ಷವನ್ನೇ ಮಾಫಿಯಾ ಕಂಪೆನಿಯಾಗಿ ಮಾರ್ಪಡಿಸಿ ರಾಜ್ಯದ ಸಮಸ್ತ ರಂಗಗಳನ್ನು ದುರ್ಬಳಸಿತ್ತು. ಸಾರ್ವಜನಿಕರ ಹಣ ಸುಲಿಗೆ, ಸಿಂಡಿಕೇಟ್ ಸಂಸ್ಕೃತಿಯನ್ನು ಪೋಷಿಸಿತ್ತು ಮತ್ತು ಬೆದರಿಕೆ ತಂತ್ರಗಳನ್ನು ಅನುಸರಿಸಿತ್ತು. ಟಿಎಂಸಿ ಆಡಳಿತದಲ್ಲಿ ಪ್ರಜಾಸತ್ತೆಯನ್ನು ಹೊಸಕಿ ಹಾಕಲಾಗಿತ್ತು, ಹಿಂದಿನ ಚುನಾವಣೆಗಳೆಲ್ಲವು ಬರೇ ಪ್ರಹಸನವಾಗಿತ್ತು ಎಂದವರು ಪರೋಕ್ಷವಾಗಿ ಟಿಎಂಸಿ ಪ್ರಧಾನ ಕಾರ್ಯದರ್ಶಿ ಡೈಮಂಡ್ ಹಾರ್ಬರ್ ಸಂಸದ ಅಭಿಷೇಕ್ ಬ್ಯಾನರ್ಜಿ ಉಲ್ಲೇಖಿಸಿ ಆರೋಪಿಸಿದರು. ಫಾಲ್ಟಾ ಕ್ಷೇತ್ರದ ಮತದಾರರು ಬರೋಬ್ಬರಿ 15 ವರ್ಷಗಳ ನಂತರ ಮತದಾನದ ಸ್ವಾತಂತ್ರ್ಯವನ್ನು ಮರಳಿ ಪಡೆದಿದ್ದಾರೆ. ಟಿಎಂಸಿ ಬೃಹದಾಗಿ ರಾಜಕೀಯ ತಿರಸ್ಕಾರಕ್ಕೀಡಾದ ಸನ್ನಿವೇಶದ ಆರಂಭವಿದಷ್ಟೆ, ಮುಂದಿನ ಚುನಾವಣೆಗಳಲ್ಲಿ ನೋಟಾ ವಿರುದ್ಧವೂ ಹೋರಾಟ ಮಾಡುವಂತಹ ಸನ್ನಿವೇಶ ಟಿಎಂಸಿ ನಾಯಕತ್ವಕ್ಕೆ ಎದುರಾಗಲಿದೆ. ಅಂತಹ ಸ್ಪರ್ಧೆಗೆ ಸಾಕ್ಷಿಯಾಗಲು ಪ.ಬಂಗಾಳದ ಜನತೆ ಕಾಯುತ್ತಿದ್ದಾರೆಂದು ಸಿಎಂ ಅಧಿಕಾರಿ ಹೇಳಿದರು.

ಫಾಲ್ಟಾ ತನಗೇ ಎಂದಿತ್ತು ಟಿಎಂಸಿ: ಡೈಮಂಡ್ ಹಾರ್ಬರ್ ವಲಯದಲ್ಲಿ ಟಿಎಂಸಿಯ ಸಂಘಟನಾತ್ಮಕ ಅಧಿಪತ್ಯಕ್ಕೊಂದು ದ್ಯೋತಕವಾಗಿದೆ ಫಾಲ್ಟಾ ಎಂದು ಟಿಎಂಸಿ ಪಾಳಯದಲ್ಲಿ ಬಣ್ಣಿಸಲಾಗಿತ್ತು ಮತ್ತು ಇದೇ ಹಿನ್ನೆಲೆಯಲ್ಲಿ ಚುನಾವಣೆ ಮುನ್ನ ಇಲ್ಲಿ ರಾಜಕೀಯ ಚಟುವಟಿಕೆಗಳು ಬಲು ತುರುಸಿನಿಂದ ಸಾಗಿದ್ದವು. ಪ್ರಚಾರ ಸಂದರ್ಭ ಬಿಜೆಪಿ ಮತ್ತು ಟಿಎಂಸಿ ನಾಯಕರ ಮಧ್ಯೆ ಸಾಕಷ್ಟು ವಾಗ್ಯುದ್ಧಗಳೂ ನಡೆದಿದ್ದವು. ಆದರೆ ಮತದಾನದ ಫಲಿತಾಂಶ ಟಿಎಂಸಿಯ ಎಲ್ಲಾ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿದೆ. ಸ್ಪರ್ಧಿಗಳ ಪೈಕಿ ಹೆಚ್ಚು ತೂಕ ಕಾಯ್ದುಕೊಂಡಿದ್ದ ಮತ್ತು ಪುಷ್ಪಾ ಸ್ಟೈಲ್‌ನಲ್ಲಿ ಮಿಂಚಿದ್ದ ಜಹಂಗೀರ್ ಖಾನ್, ಮರು ಮತದಾನಕ್ಕೆ ಎರಡು ದಿನ ಮುನ್ನ ಪ್ಲೇಟ್ ಬದಲಾಯಿಸಿ, ಫಾಲ್ಟಾದ ಹಿತದೃಷ್ಟಿಯಿಂದ ತಾನು ಸ್ಪರ್ಧಿಸಲ್ಲ ಎಂದು ಘೋಷಿಸಿದ್ದರು. ಫಾಲ್ಟಾಗೆ ಸಂಬಂಧಿಸಿ ವಿಶೇಷ ಅಭಿವೃದ್ಧಿ ಪ್ಯಾಕೇಜ್‌ನ ಭರವಸೆಯನ್ನು ಸುವೇಂದು ಅಧಿಕಾರಿ ನೀಡಿರುವ ಕಾರಣ, ತಾನು ಸ್ಪರ್ಧಾಕಣದಿಂದ ಹಿಂದೆ ಸರಿಯುತ್ತಿರುವುದಾಗಿ ಖಾನ್ ಘೋಷಿಸಿದ್ದರು.

ಪ್ರಧಾನಿ ಮೋದಿ ಸಂತಾಪ, ತಲಾ 2 ಲಕ್ಷ ಪರಿಹಾರ

• **ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಇಂದು, ಸಮುದ್ರಕ್ಕೆ ಕಪ್ಪೆ ಚಿಪ್ಪು ಹಿಡಿಯಲು ಹೋಗಿದ್ದ ಮೀನುಗಾರರು ಮೃತಪಟ್ಟ ದುರಂತ ತಿಳಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತೀವ್ರ ಆಘಾತ ಮತ್ತು ಸಂತಾಪ ವ್ಯಕ್ತಪಡಿಸಿದ್ದಾರೆ. ಸಂತ್ರಸ್ತರ ಕಷ್ಟಕ್ಕೆ ತಕ್ಷಣವೇ ಸ್ಪಂದಿಸಿರುವ ಅವರು, ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ (PM-NRF) ತುರ್ತು ಆರ್ಥಿಕ ನೆರವನ್ನು ಘೋಷಿಸಿದ್ದಾರೆ. ದುರಂತದಲ್ಲಿ ಮೃತಪಟ್ಟವರ ವಾರಸುದಾರರಿಗೆ ತಲಾ 2 ಲಕ್ಷ ರೂಪಾಯಿ ಹಾಗೂ ತೀವ್ರವಾಗಿ ಗಾಯಗೊಂಡವರಿಗೆ ತಲಾ 50 ಸಾವಿರ ರೂಪಾಯಿಗಳ ಪರಿಹಾರ ಧನವನ್ನು ಪ್ರಧಾನಿ ಕಾರ್ಯಾಲಯ (PMO) ಪ್ರಕಟಿಸಿದೆ. ಈ ಕುರಿತು ಕಂಬನಿ ಮಿಡಿದಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಭವಿಸಿದ ದುರಂತದ ಬಗ್ಗೆ ಕೇಳಿ ತೀವ್ರ ಆಘಾತವಾಯಿತು. ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡ ಕುಟುಂಬಗಳ ದುಃಖದಲ್ಲಿ ನಾನು ಭಾಗಿಯಾಗಿದ್ದೇನೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ. ದುರಂತ ನಡೆದ ಬೆನ್ನಲ್ಲೇ ಪರಿಸ್ಥಿತಿಯನ್ನು ಅವಲೋಕಿಸಿ, ಸಂತ್ರಸ್ತರ ನೋವಿಗೆ ಸ್ಪಂದಿಸಿ ತಕ್ಷಣವೇ ಪರಿಹಾರ ಘೋಷಿಸಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಕೃತಜ್ಞತೆ ಸಲ್ಲಿಸಿದ್ದಾರೆ.



ಭಟ್ಕಳ: ಕಪ್ಪೆಚಿಪ್ಪಿಗಾಗಿ ನದಿಗಿಳಿದ 10 ಮಂದಿ ಸಾವು

ಪುಟ ೧➜ ಮೃತಪಟ್ಟವರನ್ನು ಲಕ್ಷ್ಮೀ ಮಾದೇವ ನಾಯ್ಕ ಮಳುಮನೆ (38), ಮಾಲತಿ ಜಟ್ಟಪ್ಪ ನಾಯ್ಕ (38), ಲಕ್ಷ್ಮಿ ಅಣ್ಣಪ್ಪ ನಾಯ್ಕ (44), ಮಾಸ್ತಮ್ಮ ಮಂಜುನಾಥ ನಾಯ್ಕ (43), ಉಮೇಶ್ ಮಂಜುನಾಥ ನಾಯ್ಕ(42), ಲಕ್ಷ್ಮೀ ಶಿವರಾಮ ನಾಯ್ಕ (39), ಜ್ಯೋತಿ ನಾಗಪ್ಪ ನಾಯ್ಕ (37), ಲಕ್ಷ್ಮೀ ಮಹಾದೇವ ನಾಯ್ಕ ಎಂದು ಗುರುತಿಸಲಾಗಿದೆ. ನೀರಿನಲ್ಲಿ ಕೊಚ್ಚಿ ಹೋಗಿದ್ದ ಮೂವರಲ್ಲಿ ಮಂಜಮ್ಮ ಗೋಯ್ದ ನಾಯ್ಕ (45), ನಾಗರತ್ನ ಪರಮೇಶ್ವರ ನಾಯ್ಕ (40) ಅವರ ಶವ ಪತ್ತೆಯಾಗಿದ್ದು, ಮಾದೇವ ಭೈರಪ್ಪ ನಾಯ್ಕ (40) ಶೋಧ ಕಾರ್ಯ ಭರದಿಂದ ಸಾಗಿದೆ.

ನೀರಿನ ಸೆಳೆತಕ್ಕೆ ಸಿಲುಕಿದ್ದ ಮಾದೇವಿ ಮಂಜುನಾಥ ನಾಯ್ಕ (60), ಲತಾ ಜಗದೀಶ ನಾಯ್ಕ (38), ನಾಗರತ್ನ ಈಶ್ವರ ನಾಯ್ಕ (40) ಎನ್ನುವವರನ್ನು ರಕ್ಷಣೆ ಮಾಡಲಾಗಿದ್ದು ಮಣಿಪಾಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಆಸ್ಪತ್ರೆಗೆ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯ, ಎಸ್ಪಿ ದೀಪನ್ ಭೇಟಿ ನೀಡಿದ್ದು ಪರಿಹಾರ ಕಾರ್ಯ ಸಾಗಿದೆ.

> ಭಟ್ಕಳ ಸಮೀಪದ ತಟ್ಟೆಹಕ್ಕಲು ಕಡಲ ತೀರದಲ್ಲಿ ಕಪ್ಪೆಚಿಪ್ಪು ಸಂಗ್ರಹಿಸಲು ಹೋದ 10 ಮಂದಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿರುವ ಘಟನೆ ಅತ್ಯಂತ ದುಃಖಕರ ಮತ್ತು ಹೃದಯವಿದ್ರಾವಕವಾಗಿದೆ. ಸಂತ್ರಸ್ತ ಕುಟುಂಬಗಳಿಗೆ ಆಸರೆಯಾಗಲು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ (PM-NRF) ಸೂಕ್ತ ಮತ್ತು ಗರಿಷ್ಠ ಪ್ರಮಾಣದ ಆರ್ಥಿಕ ಪರಿಹಾರವನ್ನು ಒದಗಿಸಿಕೊಡಲು ಸಂಬಂಧಪಟ್ಟ ಸಚಿವಾಲಯ ಹಾಗೂ ಅಧಿಕಾರಿಗಳೊಂದಿಗೆ ತಕ್ಷಣವೇ ಮಾತುಕತೆ ನಡೆಸಲಾಗುವುದು.
> ■ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ

ಭಾರತವೇ ಮಹಾಶಕ್ತಿ

ಪುಟ ೧➜ ಜಾಗತಿಕ ಬೆಳವಣಿಗೆಗಾಗಿ ಇಂಧನ ಮಾರುಕಟ್ಟೆಯನ್ನು ಸಂಕುಚಿತಗೊಳಿಸಬಾರದು ಮತ್ತು ತೈಲ ಬೆಲೆಗಳನ್ನು ನಿಯಂತ್ರಣದಲ್ಲಿಡಬೇಕು ಎಂದರು. ಭಾರತವು ಅಮೆರಿಕದಿಂದ ಇಂಧನ ಆಮದನ್ನು ಗಣನೀಯವಾಗಿ ಹೆಚ್ಚಿಸಿದೆ ಎಂದು ಉಲ್ಲೇಖಿಸಿದರು. ಭಾರತವು ಅಮೆರಿಕ, ಇಸ್ರೇಲ್, ಇರಾನ್ ಮತ್ತು ಗಲ್ಫ್ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಕೆಲವೇ ದೇಶಗಳಲ್ಲಿ ಒಂದಾಗಿದೆ. ನಾವು ಇದನ್ನು ಸ್ಪರ್ಧಾತ್ಮಕ ಎಂದು ನೋಡುವುದಿಲ್ಲ. ದೇಶಗಳೊಂದಿಗೆ ಸಂಬಂಧವನ್ನು ಸಮತೋಲನದಲ್ಲಿ ಕಾಯ್ದುಕೊಳ್ಳುವುದು ನಮ್ಮ ಗುರಿ ಎಂದು ಜೈಶಂಕರ್ ವಿವರಿಸಿದರು.

ಬಾಂಬ್ ತಯಾರಿಕೆಗೆ ಎಐ ಬಳಕೆ

ಪುಟ ೧➜ ತನಿಖೆಯ ಪ್ರಕಾರ, ಜಾಗತಿಕ ಭಯೋತ್ಪಾದಕ ಸಂಘಟನೆ ಅಲ್-ಖೈದಾ ಜತೆ ಸಂಪರ್ಕ ಹೊಂದಿದ್ದ ಆರೋಪಿಗಳು ತಂತ್ರಜ್ಞಾನವನ್ನು ದುರುಪಯೋಗಪಡಿಸಿಕೊಂಡು ದಾಳಿಯ ಸಂಚು ರೂಪಿಸಿದ್ದರು.

ಜಾಸಿರ್ ಇನ್-ಹೌಸ್ ಎಂಜಿನಿಯರ್: ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖವಾಗಿರುವ ಪ್ರಮುಖ ಆರೋಪಿಗಳಲ್ಲಿ ಜಾಸಿರ್ ಬಿಲಾಲ್ ವಾನಿ ಎಂಬಾತ 'ಇನ್-ಹೌಸ್ ಎಂಜಿನಿಯರ್' ಆಗಿ ಕಾರ್ಯನಿರ್ವಹಿಸುತ್ತಿದ್ದ ಎಂದು ತಿಳಿದುಬಂದಿದೆ. ಆತ ಭಾರತದಲ್ಲಿ ಅಲ್-ಖೈದಾ ಸಂಪರ್ಕಿತ ಸಂಘಟನೆ ಅನ್ಸಾರ್ ಘಜ್ವತ್-ಉಲ್-ಹಿಂದ್ (ಜಿಯುಎಚ್) ಪರವಾಗಿ ತಾಂತ್ರಿಕ ನೆರವು ನೀಡುತ್ತಿದ್ದನೆಂದು ಎನ್‌ಐಎ ಹೇಳಿದೆ.

2024-25ರ ಅವಧಿಯಲ್ಲಿ ಹರ್ಯಾಣದ ಫರಿದಾಬಾದ್‌ನ ಅಲ್‌ಫಲಾಹ್ ವಿಶ್ವವಿದ್ಯಾಲಯದಲ್ಲಿ ಆತ ಹಲವು ಬಾರಿ ತಂಗಿದ್ದಾನೆ ಎಂಬ ಮಾಹಿತಿ ದೊರೆತಿದ್ದು, ಬಳಿಕ ವಿಶ್ವವಿದ್ಯಾಲಯದ ಆವರಣದಲ್ಲಿ ಶೋಧ ಕಾರ್ಯಾಚರಣೆ ಕೂಡ ನಡೆಸಲಾಗಿತ್ತು. ಈ ಪ್ರಕರಣದಲ್ಲಿ ವಿಶ್ವವಿದ್ಯಾಲಯದ ಮೂವರು ವೈದ್ಯರ ಹೆಸರುಗಳು ಕೇಳಿಬಂದಿರುವುದು ಮತ್ತಷ್ಟು ಸಂಚಲನ ಮೂಡಿಸಿದೆ. ತನಿಖೆ ವೇಳೆ ಸ್ಫೋಟಕ ತಯಾರಿಕೆಯ ವಿಧಾನಗಳೂ ಬಹಿರಂಗಗೊಂಡಿವೆ. ಅಮೋನಿಯಂ ನೈಟ್ರೇಟ್‌ಗೆ ಇಂಧನ ತೈಲ ಹಾಗೂ ಟ್ರಾನ್ಸ್‌ಫಾರ್ಮರ್ ಆಯಿಲ್ ಬೆರೆಸಿ ಪ್ರಬಲ ಐಇಡಿ ತಯಾರಿಸಲಾಗಿತ್ತು. ಇದನ್ನು ಬ್ಯಾಟರಿ ಆಧಾರಿತ ಟೈಮಿಂಗ್ ಸಾಧನಕ್ಕೆ ಕೇಬಲ್ ಮೂಲಕ ಸಂಪರ್ಕಿಸಲಾಗಿದ್ದು, ಮನೆಯ ಸ್ವಿಚ್ ಮಾದರಿಯ ಕೈಚಾಲಿತ ವ್ಯವಸ್ಥೆಯಿಂದ ಸ್ಫೋಟ ನಡೆಸಲಾಗುತ್ತಿತ್ತು. ಆರೋಪಿಗಳು ಕೇವಲ 5ರಿಂದ 10 ನಿಮಿಷಗಳಲ್ಲಿ ಬಾಂಬ್ ಜೋಡಣೆ ಪೂರ್ಣಗೊಳಿಸುತ್ತಿದ್ದರು ಎಂದು ಎನ್‌ಐಎ ತಿಳಿಸಿದೆ.

ಕಾಶ್ಮೀರದಲ್ಲಿ ಐಇಡಿ ಪರೀಕ್ಷೆ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಖಾಜಿಗುಂಡ್ ಕಾಡು ಪ್ರದೇಶದಲ್ಲಿ ಆರೋಪಿಗಳು ಐಇಡಿ ಪರೀಕ್ಷೆ ನಡೆಸಿದ್ದರೆಂದು ತನಿಖೆಯಲ್ಲಿ ಬಹಿರಂಗವಾಗಿದೆ. ಸ್ಫೋಟಕ್ಕೆ ಬೇಕಾದ ಡಿಟೋನೇಟರ್‌ಗಳನ್ನು ಸಾಮಾನ್ಯ ಕಲ್ಲಿದ್ದಲು ಗಣಿಗಳಿಂದಲೇ ಸುಲಭವಾಗಿ ಪಡೆಯಲಾಗುತ್ತಿತ್ತು ಎಂಬ ಮಾಹಿತಿಯೂ ತನಿಖಾ ಸಂಸ್ಥೆಗೆ ಲಭ್ಯವಾಗಿದೆ.

ಏನಿದು ಪ್ರಕರಣ?: ಕಳೆದ ನವೆಂಬರ್ 10ರಂದು ಕೆಂಪುಕೋಟೆ ಸಮೀಪ ಸಂಭವಿಸಿದ್ದ ಸ್ಫೋಟದಲ್ಲಿ 11 ಮಂದಿ ಮೃತಪಟ್ಟಿದ್ದರು. ಇತರೆ ಹಲವರು ಗಂಭೀರವಾಗಿ ಗಾಯಗೊಂಡಿದ್ದರು. ಸ್ಫೋಟದ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಬಾಂಬ್ ಸ್ಫೋಟಗೊಂಡ ಕ್ಷಣದಲ್ಲಿ ಮೆಟ್ರೋ ನಿಲ್ದಾಣವೇ ನಡುಗಿದಂತಾಗಿತ್ತು. ಈ ಪ್ರಕರಣ ದೇಶದ ಭದ್ರತಾ ವ್ಯವಸ್ಥೆಗೆ ದೊಡ್ಡ ಎಚ್ಚರಿಕೆಯಾಗಿ ಪರಿಣಮಿಸಿದ್ದು, ಎಐ ತಂತ್ರಜ್ಞಾನದ ದುರುಪಯೋಗದ ಭೀತಿಯನ್ನೂ ಮತ್ತೊಮ್ಮೆ ಬೆಳಕಿಗೆ ತಂದಿದೆ.

- ಸಂಚಿನಲ್ಲಿ ಜಾಗತಿಕ ಉಗ್ರ ಸಂಘಟನೆ ಅಲ್-ಖೈದಾ ಸಂಪರ್ಕಿತ ಘಟಕ ಭಾಗಿ
- 'ಇನ್-ಹೌಸ್ ಎಂಜಿನಿಯರ್' ಆಗಿ ಕಾರ್ಯನಿರ್ವಹಿಸಿದ್ದ ಜಾಸಿರ್ ಬಿಲಾಲ್ ವಾನಿ
- ಪ್ರಕರಣದಲ್ಲಿ ವಿವಿಯ 3 ವೈದ್ಯರ ಹೆಸರು ಕೇಳಿಬಂದಿದ್ದರಿಂದ ಮತ್ತಷ್ಟು ಸಂಚಲನ
- ಐಇಡಿಗೆ ಅಮೋನಿಯಂ ನೈಟ್ರೇಟ್, ಇಂಧನ ತೈಲ ಮತ್ತು ಟ್ರಾನ್ಸ್‌ಫಾರ್ಮರ್ ಆಯಿಲ್ ಬಳಕೆ

ಕಿರುಸುದ್ದಿ

ಕವಿತೆ ಸರಳ, ಅರ್ಥವಾಗುವಂತಿರಲಿ

•**ಮುಂಡರಗಿ:** ಕವಿತೆಗಳು ಸರಳ ಹಾಗೂ ಅರ್ಥವಾಗುವಂತೆ ಇರಬೇಕು. ಇವು ಅನುಭವದ ಮೂಸೆಯಲ್ಲಿ ಪರಿಣಾಮಕಾರಿಯಾಗಿ ಬಂದಾಗ ಅವೇ ನಿಜವಾದ ಕಾವ್ಯಗಳು ಎಂದು ಸಾಹಿತಿ ಶೋಭಾ ಮೇಟಿ ಹೇಳಿದರು.

ಪಟ್ಟಣದ ಜ.ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ್ದ ಮಹಿಳಾ ಸಾಹಿತ್ಯ ಸಮಾವೇಶದಲ್ಲಿ ಮಹಿಳಾ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಓದಿನ ಹವ್ಯಾಸ, ಸತತ ಕಾವ್ಯ ಕಟ್ಟುವ ಕೆಲಸಕ್ಕೆ ಮುನ್ನಡಿ ಬರೆಯುತ್ತದೆ, ಸ್ವತ: ಅನುಭವದಿಂದ ಹೊರಹೊಮ್ಮುವ ಕವನಗಳೇ ಬೇರೆ, ಬೇರೊಬ್ಬರ ಅನುಭವದ ಪರಿಣಾಮದ ಕಾವ್ಯ ಸೃಸ್ಟಿಸುವ ಪರಿಯೇ ಬೇರೆ. ಹೀಗಾಗಿ ಕಾವ್ಯ ಹೊಮ್ಮುವದಕ್ಕೆ ಕಾಲ, ಸಂದರ್ಭದ ಮೇಲೆ ಅವಲಂಬಿತವಾಗಿರುತ್ತದೆ ಎಂದರು.

ಕವಿಗೋಷ್ಠಿಯಲ್ಲಿ ಈರಮ್ಮ ಕುಂದಗೋಳ, ಮಧುಮತಿ ಇಳಕಲ್, ಮೇಘಾ ಗೋಡಖಿಂಡಿ, ಪಾರ್ವತಿ ಕುಬಸದ, ಜ್ಯೋತಿ ಗಿರಾಗತಿ, ಜಯಶ್ರೀ ಅಳವಂಡಿ, ಉಮಾ ಕಲ್ಮಠ, ಭಾಗ್ಯಶ್ರೀ ಹಳ್ಳಿಕೇರಿಮಠ, ಪ್ರತಿಭಾ ಹೊಸಮನಿ, ಗಿರಿಜಾ ಸೂಡಿ, ಗಿರಿಜಾ ಕಡ್ಡಿ, ವಿಶಾಲಾಕ್ಷಿ ಬಿಟ್ನಾಳಿ, ಜ್ಯೋತಿ ಗಣಪ್ಪನವರ ತಮ್ಮ ಕವನಗಳಲ್ಲಿ ತಾಯಿ ಮಮತೆ ಪ್ರೀತಿ, ಕರುಣೆ ತ್ಯಾಗ, ಸಾಧನೆ, ಆಶೆ ಪ್ರಕೃತಿ ಹೀಗೆ ವಿವಿಧ ಪ್ರಕಾರದ ಕಾವ್ಯಗಳನ್ನು ಸಾದರಪಡಿಸಿದರು.

ಪುಲಿಗೆರೆ ಕೊಡುಗೆ ಅಪಾರ



•**ಲಕ್ಷ್ಮೇಶ್ವರ:** ಪುಲಿಗೆರೆಯು ತಿರುಳ್ಗನ್ನಡದ ಕನ್ನಡಿಯಂತಿದ್ದು, ಕರ್ನಾಟಕದ ಚರಿತ್ರೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಪುಲಿಗೆರೆಯ ನೆಲದ ಕೊಡುಗೆ ಅಪಾರವಾದದ್ದು. 6ನೇ ಶತಮಾನದಿಂದ 16ನೇ ಶತಮಾನದವರೆಗೆ ತನ್ನ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹೆಜ್ಜೆ ಗುರುತುಗಳನ್ನು ಇಂದಿಗೂ ಇಲ್ಲಿ ಕಾಣಬಹುದಾಗಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಾಸನ ಶಾಸ್ತ್ರ ವಿಭಾಗದ ಮುಖ್ಯಸ್ಥ ಅಮರೇಶ್ ಯತಗಲ್ ಅಭಿಪ್ರಾಯಪಟ್ಟರು. ಅವರು ಪಟ್ಟಣದ ರಂಭಾಪುರಿ ಕಲ್ಯಾಣಮಂಟಪದಲ್ಲಿ ನಡೆದಿರುವ ಪುಲಿಗೆರೆ ಪರಿಸರದ ಪ್ರಾಚೀನ ಕನ್ನಡ ಸಾಹಿತ್ಯ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಮೂರನೇ ದಿನದ ಕಾರ್ಯಕ್ರಮದಲ್ಲಿ ಪುಲಿಗೆರೆಯ ಐತಿಹಾಸಿಕ ಹಿನ್ನೆಲೆ ಕುರಿತು ಸಂಶೋಧನಾ ವಿಷಯ ಮಂಡಿಸಿ ಮಾತನಾಡಿದರು. ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ಯಾದವರು, ವಿಜಯನಗರದ ಅರಸರು ಮುಂತಾದ ರಾಜ ಮನೆತನಗಳು ಹಾಗೂ ಮಾಂಡಳಿಕರು ಈ ನೆಲದಲ್ಲಿ ಕನ್ನಡದ ಶ್ರೇಷ್ಠತೆಯನ್ನು ಶ್ರೀಮಂತಗೊಳಿಸಿದ್ದಾರೆ. ಪುಲಿಗೆರೆ ಮುನ್ನೂರರ ಪ್ರತಿಯೊಂದು ಕಣಗಳು ಗತವೈಭವದ ಪ್ರತೀಕವಾಗಿವೆ ಎಂದರು.

ಶ್ರೇಷ್ಠತೆ ಎತ್ತಿ ಹಿಡಿದ ಪುಲಿಗೆರೆ



•**ಲಕ್ಷ್ಮೇಶ್ವರ:** ರಾಜ್ಯಮಟ್ಟದ ಮೂರು ದಿನಗಳ ಈ ವಿಚಾರ ಸಂಕಿರಣದ ಕೊನೆಯ ಹಾಗೂ ಎಂಟನೇ ಉಪನ್ಯಾಸದಲ್ಲಿ ಪುಲಿಗೆರೆಯ ತಿರುಳ್ಗನ್ನಡ ಕುರಿತು ಮಾತನಾಡಿದ ಸಂಶೋಧಕ ದೇವರಡ್ಡಿ ಹಡ್ಲಿ, ಪುಲಿಗೆರೆಯ ಕನ್ನಡ ಕೇವಲ ತಿರುಳ್ಗನ್ನಡ, ಕವಿರಾಜಮಾರ್ಗ ಕಾರರ ಕನ್ನಡಕ್ಕೆ ಮಾತ್ರ ಸೀಮಿತವಾಗಿಲ್ಲ, ಅದಕ್ಕಿಂತ ಮೊದಲೂ ಕೂಡ ಇಲ್ಲಿ ಕನ್ನಡದ ಶ್ರೇಷ್ಠತೆಯನ್ನು ಹೊಂದಿದ್ದ ಭಾಷಾ ಶ್ರೀಮಂತಿಕೆ ಇತ್ತು. ಪ್ರಾಕೃತ ಭಾಷೆ ಹಾಗೂ ಸಂಸ್ಕೃತ ಭಾಷೆಗಳ ನಡುವೆಯೂ ಕೂಡ ಕನ್ನಡದ ಶ್ರೇಷ್ಠತೆಯನ್ನು ಎತ್ತಿ ಹಿಡಿದ ನೆಲ ಅದು ಪುಲಿಗೆರೆಯ ನೆಲವಾಗಿತ್ತು ಎಂದರು. ಹಿರಿಯ ಸಾಹಿತಿ ಎಸ್.ಎಫ್.ಆದಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ, ಲಕ್ಷ್ಮೇಶ್ವರ ತಾಲೂಕು ಅಧ್ಯಕ್ಷ ಈಶ್ವರ ಮೆಡ್ಲೇರಿ ಉಪಸ್ಥಿತರಿದ್ದರು.ಯಶವಂತ ದುರಗಣ್ಣವರ ವಚನ ಗಾಯನ ನಡೆಸಿಕೊಟ್ಟರು.

ಯೂರಿಯಾ ವಿತರಣಾ ತರಬೇತಿ

• **ಮುಂಡರಗಿ:** ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಮುಂಡರಗಿ ತಾಲೂಕು ಕೃಷಿ ಪರಿಕರ ಮಾರಾಟಗಾರರಿಗೆ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಿಗೆ ಕೆ ಕಿಸಾನ್ ತಂತ್ರಾಂಶದಲ್ಲಿ ಯೂರಿಯಾ ಗೊಬ್ಬರ ವಿತರಣೆ ಕುರಿತು ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಜಿಲ್ಲಾ ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಮಾರಾಟಮಾಡಲು ಸೂಚಿಸಿದರು ಹಾಗೂ ಕೃಷಿ ಪರಿಕರಗಳನ್ನು ನಿಗದಿತ ಬೆಲೆಗೆ ಮಾರಾಟ ಮಾಡವುದು, ರಶೀದಿ ನೀಡುವುದು, ಕೃತಕ ಅಭಾವ ಸೃಷ್ಟಿಸದೇ ರೈತ ಸ್ನೇಹಿ ವ್ಯವಹಾರಗಳನ್ನು ಕೈಗೊಳ್ಳಲು ಸೂಚಿಸಿದರು. ವ್ಯಾಪಾರಸ್ಥರು ನಿಗದಿಗಿಂತ ಹೆಚ್ಚಿನ ದರದಲ್ಲಿ ಗೊಬ್ಬರ ಮಾರಾಟ ಮಾಡಿದರೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಎಚ್ಚರಿಸಿದರು. ಸಹಾಯಕ ಕೃಷಿ ನಿರ್ದೇಶಕ ಪ್ರಾಣೇಶ ಮಾತನಾಡಿ, ತಾಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ ರೈತರು ರಸಗೊಬ್ಬರ ಖರೀದಿಸಲು ಇನ್ನು ಮುಂದೆ ಎಫ್.ಐ.ಡಿ ಯನ್ನು ಹೊಂದಿರಬೇಕು. ಈ ಕುರಿತು ರಾಜ್ಯ ಸರ್ಕಾರ ಕೃಷಿ ಇಲಾಖೆಗೆ ಕಟ್ಟು ನಿಟ್ಟಿನ ಸೂಚನೆ ನೀಡಿದೆ. ಈ ಆಧಾರದ ಮೇಲೆ ಕೆ ಕಿಸಾನ್ ತಂತ್ರಜ್ಞಾನ ಹಾಗೂ ಪಿಒಎಸ್ ಮಷಿನ್ ಮೂಲಕ ರಸಗೊಬ್ಬರ ವಿತರಣೆ ಮಾಡಲಾಗುವುದು. ರೈತರಿಗೆ ಕೇವಲ ಗೊಬ್ಬರವಷ್ಟೇ ಅಲ್ಲದೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ಪೂರೈಸಲು ಆದ್ಯತೆ ನೀಡಲಾಗುತ್ತದೆ ಎಂದರು.



ಮುಂಡರಗಿ: ಪಟ್ಟಣದ ಜ.ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ಮಹಿಳಾ ಸಾಹಿತ್ಯ ಸಮಾವೇಶದಲ್ಲಿ ಮಹಿಳಾ ಕವಿಗೋಷ್ಠಿ ನಡೆಯಿತು. ಕಸಾಪ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ,ಕಸಾಪ ಗೌ ಕಾರ್ಯದರ್ಶಿ ವೀಣಾ ಪಾಟೀಲ, ಕಾರ್ಯಕಾರಣಿ ಸದಸ್ಯರು ಪಾಲ್ಗೊಂಡಿದ್ದರು. ಮಧುಮತಿ ಇಳಕಲ್ ಸ್ವಾಗತಿಸಿದರು. ಮಂಜುಳಾ ಇಟಗಿ ನಿರೂಪಿಸಿದರು. ಕವಿಗೋಷ್ಠಿಯಲ್ಲಿ ಅನೇಕರು ವಿವಿಧ ಪ್ರಕಾರದ ಕಾವ್ಯಗಳನ್ನು ಸಾದರಪಡಿಸಿದರು.

ರೋಗದ ಲಕ್ಷಣ ಕಂಡುಕೊಳ್ಳಿ: ವೈಕುಂಠೆ

•**ಗದಗ:** ಆರೋಗ್ಯದಲ್ಲಿ ರೋಗ ಉಲ್ಬಣಗೊಳ್ಳುವ ಮುನ್ನ ಮುಂಜಾಗ್ರತಾ ಕ್ರಮವಾಗಿ ಕೈಗೊಳ್ಳುವ ಪ್ರಾರಂಭಿಕ ಹಂತದಲ್ಲೇ ಹಲವು ಪರೀಕ್ಷಾ ವಿಧಾನಗಳಿಂದ ಕಂಡುಕೊಳ್ಳುವುದರಿಂದ ರೋಗ ನಿಧಾನಗೊಳಿಸಿ ಅಗತ್ಯ ಚಿಕಿತ್ಸೆ ಪಡೆಯುವುದು ಅಗತ್ಯ ಎಂದು ಭಾವಸಾರ ವ್ಹಿಜನ್ ಇಂಡಿಯಾ ಘಟಕದ ಅಧ್ಯಕ್ಷ ಶ್ರೀಪಾದ ವೈಕುಂಠೆ ಹೇಳಿದರು. ನಗರದ ಲಯನ್ಸ್ ಸಭಾಂಗಣದಲ್ಲಿ ಭಾವಸಾರ ವ್ಹಿಜನ್ ಇಂಡಿಯಾ ಹಾಗೂ ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಲಿವರ್ ಫೈಬ್ರೊ ಸ್ಕ್ಯಾನಿಂಗ್ ಪರೀಕ್ಷಾ ಶಿಬಿರ ಉದ್ಘಾಟಿಸಿ ಮಾತನಾಡಿದರು. ಲಿವರ್ ಫೈಬ್ರೋಸ್ಕ್ಯಾನ್ ಪರೀಕ್ಷೆ ಯಕೃತ್ತಿನ ಆರೋಗ್ಯವನ್ನು ಸರಳ, ನೋವಿಲ್ಲದ ಉಪಕರಣದ ಮೂಲಕ ಪರೀಕ್ಷಿಸುವ ವಿಧಾನ. ಯಕೃತ್ತಿನ ಬಿಗಿತ ಮತ್ತು ಕೊಬ್ಬಿನ ಪ್ರಮಾಣವನ್ನು ಅಳೆದು, ಸೈರೋಸಿಸ್, ಫ್ಯಾಟಿ ಲಿವರ್, ಫೈಬ್ರೋಸಿಸ್ ಮುಂತಾದ ಸಮಸ್ಯೆಗಳ ಪ್ರಾರಂಭ ಹಂತದಲ್ಲೇ ಗುರುತಿಸುವ ಕ್ರಮವಾಗಿದೆ ಎಂದರು. ಲಯನ್ಸ್ ಕ್ಲಬ್ ಅಧ್ಯಕ್ಷ ರಾಜು ವೇರ್ಣೇಕರ ಹಾಗೂ ಲಿವರ್ ಫೈಬ್ರೊ ಸ್ಕ್ಯಾನಿಂಗ್ ತಾಂತ್ರಿಕ ತಜ್ಞ ಉಮರ್‌ಫಾರೂಕ್ ಮುಲ್ಲಾ ಮಾತನಾಡಿದರು.ಜೆ.ಡಿ.ಉತ್ತರಕರ ನಿರೂಪಿಸಿದರು. ವಿಜನ್ ಕಾರ್ಯದರ್ಶಿ ಸುಧಾ ವೈಕುಂಠೆ ವಂದಿಸಿದರು. ಶಿಬಿರದ ಯಶಸ್ವಿಗೆ ಡಾ.ಹರೀಶ್ ವೈಕುಂಠೆ, ಷಣ್ಮುಖಿ ಸುಲಾಖೆ, ವೀಣಾ ಸುಲಾಖೆ ಸಾಥ್ ನೀಡಿದರು. ಲಯನ್ಸ್ ಕ್ಲಬ್ ಕಾರ್ಯದರ್ಶಿ ರಾಜಣ್ಣ ಮಲ್ಲಾಡದ, ಅಶ್ವಥ್ ಸುಲಾಖೆ, ರಮೇಶ ಶಿಗ್ಲಿ, ಗಣಪತರಾವ್ ಬೆಳಮಕರ, ಪರಶುರಾಮ ಮಹೇಂದ್ರಕರ, ತುಕಾರಾಮ ಬೇದ್ರೆ, ಪರಶುರಾಮ ನವಲೆ, ರಾಜೇಂದ್ರ ತ್ರಿಮಲ್ಲೆ, ನಾಗರಾಜ ವಾದೋನೆ, ಈರಣ್ಣ ಬೆಳಮಕರ, ರೇಣುಕಪ್ರಸಾದ ಹಿರೇಮಠ, ದತ್ತಣ್ಣ ಬೇವಿನಕಟ್ಟಿ, ಡಾ.ದತ್ತಾತ್ರೇಯ ವೈಕುಂಠೆ ಇತರರಿದ್ದರು.



ಗದಗ: ನಗರದ ಲಯನ್ಸ್ ಸಭಾಂಗಣದಲ್ಲಿ ಭಾವಸಾರ ವ್ಹಿಜನ್ ಇಂಡಿಯಾ ಹಾಗೂ ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಲಿವರ್ ಫೈ ಬ್ರೊ ಸ್ಕ್ಯಾನಿಂಗ್ ಪರೀಕ್ಷಾ ಶಿಬಿರವನ್ನು ಭಾವಸಾರ ವ್ಹಿಜನ್ ಇಂಡಿಯಾ ಘಟಕದ ಅಧ್ಯಕ್ಷ ಶ್ರೀಪಾದ ವೈಕುಂಠೆ ಉದ್ಘಾಟಿಸಿದರು. ಶಿಬಿರದಲ್ಲಿ 110ಕ್ಕೂ ಹೆಚ್ಚು ಜನರನ್ನು ಉಚಿತವಾಗಿ ಪರೀಕ್ಷಿಸಿ ಸಲಹೆ ನೀಡಲಾಯಿತು.

ದಾಖಲೆ ಸರಿಯಿದ್ದರೂ ಅರ್ಜಿ ತಿರಸ್ಕಾರ | ಪಾಲಕರಿಗೆ ತಪ್ಪದ ಅಲೆದಾಟ

ಜಾತಿ-ಆದಾಯ ಪತ್ರಕ್ಕಾಗಿ ಪರದಾಟ



▸ರುದ್ರಗೌಡ ಪಾಟೀಲ

ದಿಗಂತ ವಿಶೇಷ

•**ಗದಗ:** ಪ್ರಸಕ್ತ ವರ್ಷದ ಶಾಲಾ-ಕಾಲೇಜುಗಳ ಪ್ರವೇಶ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆಯೇ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆಯಲು ಪಾಲಕರು ನಾಡಕಚೇರಿ ಹಾಗೂ ಸೇವಾಸಿಂಧು ಕೇಂದ್ರಗಳ ಮುಂದೆ ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಅಗತ್ಯ ದಾಖಲೆಗಳನ್ನೆಲ್ಲ ಸಲ್ಲಿಸಿದರೂ ಸಣ್ಣಪುಟ್ಟ ಕಾರಣ ನೀಡಿ ಅರ್ಜಿಗಳನ್ನು ರಿಜೆಕ್ಟ್ ಮಾಡುತ್ತಿರುವುದರಿಂದ ಸಾರ್ವಜನಿಕರು ಪರದಾಡುವಂತಾಗಿದೆ.

ಪ್ರಥಮ ಪಿಯುಸಿ, ಪದವಿ ಹಾಗೂ ವಸತಿ ಶಾಲೆಗಳ ದಾಖಲಾತಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗಗಳಿಂದಲೂ ನೂರಾರು ಜನರು ಪ್ರತಿದಿನ ಕಚೇರಿಗಳಿಗೆ ಆಗಮಿಸುತ್ತಿದ್ದಾರೆ. ಬೆಳಗ್ಗೆಯಿಂದ ಸಂಜೆವರೆಗೂ ಕಾಯುತ್ತಿದ್ದರೂ ಕೆಲಸ ಆಗದೇ ಮತ್ತೆ ಅಲೆದಾಡಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ಪಾಲಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

» ಶಾಲಾ ದಾಖಲಾತಿ ಅವಧಿಯಲ್ಲಿ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ

» ಅರ್ಜಿಗಳ ಶೀಘ್ರ ವಿಲೇವಾರಿ ಅಗತ್ಯ

» ಸರಿಯಾದ ದಾಖಲೆಗಳಿದ್ದರೂ ಅನಗತ್ಯವಾಗಿ ಅರ್ಜಿಗಳನ್ನು ರಿಜೆಕ್ಟ್ ಮಾಡುವುದನ್ನು ಅಧಿಕಾರಿಗಳು ತಡೆಯಬೇಕು ಎಂಬುದು ಸಾರ್ವಜನಿಕರ ಆಗ್ರಹ

ಸಮಯ, ಹಣ ವ್ಯರ್ಥ

ಹೆಸರು ಸ್ಪೆಲ್ಲಿಂಗ್ ವ್ಯತ್ಯಾಸ, ಆಧಾರ್ ಲಿಂಕ್ ಸಮಸ್ಯೆ, ಹಳೆಯ ದಾಖಲೆ ಅಪ್‌ಡೇಟ್ ಇಲ್ಲ, ಸರ್ವರ್ ಸಮಸ್ಯೆ ಸೇರಿದಂತೆ ಹಲವು ಕಾರಣಗಳನ್ನು ನೀಡಿ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ ಎಂಬುದು ಸಾರ್ವಜನಿಕರ ಆರೋಪವಾಗಿದೆ. ಕೆಲವರು ಮೂರು-ನಾಲ್ಕು ಬಾರಿ ಅರ್ಜಿ ಸಲ್ಲಿಸಿದರೂ ಇನ್ನೂ ಪ್ರಮಾಣ ಪತ್ರ ಸಿಗದೇ ಮಕ್ಕಳ ಪ್ರವೇಶಕ್ಕೆ ತೊಂದರೆ ಆಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸೇವಾ ಸಿಂಧು ಕೇಂದ್ರಗಳ ಮುಂದೆ ಬೆಳಗ್ಗೆಯೇ ಜನರು ಸಾಲಿನಲ್ಲಿ ನಿಲ್ಲುವ ದೃಶ್ಯ ಸಾಮಾನ್ಯವಾಗಿದ್ದು, ಮಹಿಳೆಯರು ಹಾಗೂ ವೃದ್ಧರು ಹೆಚ್ಚು ಪರದಾಡುತ್ತಿದ್ದಾರೆ. ಒಂದು ದಾಖಲೆ ತಿದ್ದುಪಡಿಗೆ ಬೇರೆ ಕಚೇರಿಗೆ ಹೋಗುವಂತೆ ಸೂಚಿಸುತ್ತಿರುವುದರಿಂದ ಜನರಿಗೆ ಸಮಯ ಮತ್ತು ಹಣ ಎರಡೂ ವ್ಯರ್ಥವಾಗುತ್ತಿದೆ.

ನಿಗದಿಗಿಂತ ಹೆಚ್ಚುವರಿ ಶುಲ್ಕ ವಸೂಲಿ

ಜಾತಿ ಮತ್ತು ಆದಾಯ ಪ್ರಮಾಣ ಪತ್ರಕ್ಕೆ ಸರ್ಕಾರದಿಂದ 40 ರೂ. ಮಾತ್ರ ಶುಲ್ಕವನ್ನು ನಿಗದಿ ಮಾಡಿದ್ದರು. ನಾಡ ಕಚೇರಿ ಸಿಬ್ಬಂದಿ ಚಿಲ್ಲರೆ ಇಲ್ಲ ಎಂದು ನೆಪ ಹೇಳಿ 50-60 ರೂ. ಗಳನ್ನು ವಸೂಲಿ ಮಾಡುತ್ತಿದ್ದಾರೆ. ಇದರ ವಿರುದ್ಧ ಧ್ವನಿ ಎತ್ತಿದ್ದರೆ ಎಲ್ಲಿ ತಮ್ಮ ಅರ್ಜಿ ರಿಜೆಕ್ಟ್ ಮಾಡುತ್ತಾರೆ ಎಂಬ ಭಯದಲ್ಲಿ ಮೂಕ ಮೌನಕ್ಕೆ ಶರಣಾಗಿರುವ ಉದಾಹರಣೆಗಳು ಕಂಡು ಬರುತ್ತಿದೆ ಎಂಬುದು ಪಾಲಕರ ಆರೋಪ.

ಮೇ 25 ರಿಂದ ಶಾಲಾ ಕಾಲೇಜು ದಾಖಲಾತಿ ಪ್ರಾರಂಭ ವಾಗುವ ಹಿನ್ನೆಲೆಯಲ್ಲಿ ಮಕ್ಕಳ ಜಾತಿ ಆದಾಯಕ್ಕೆ ಅರ್ಜಿ ಹಾಕಿ ಹಲವು ದಿನಗಳು ಕಳೆದರೂ ಇನ್ನೂ ಪ್ರಮಾಣ ಪತ್ರ ಬಂದಿಲ್ಲ. ಹೀಗೆ ವಿಳಂಬವಾದರೆ ಮಕ್ಕಳ ದಾಖಲಾತಿಗೆ ತೊಂದರೆ ಆಗಲಿದೆ. ಆದಷ್ಟು ಬೇಗ ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ಬಗೆಹರಿಸಬೇಕು.
■ **ವೀರೇಶ, ಪಾಲಕ**

ಜಾತಿ ಮತ್ತು ಆದಾಯ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಿದ ನಂತರ 21 ದಿನಗಳ ಕಾಲಾವಕಾಶ ಇರುತ್ತದೆ. ಆ ಅವಧಿಯ ಒಳಗಡೆ ಪ್ರಮಾಣ ಪತ್ರ ನೀಡುವ ಕಾರ್ಯ ಆಗುತ್ತಿದೆ ಮತ್ತು ಸರ್ಕಾರ ನಿಗದಿ ಪಡಿಸಿದ ಶುಲ್ಕವನ್ನು ಮಾತ್ರ ತೆಗೆದುಕೊಳ್ಳಲಾಗುತ್ತಿದೆ.
■ **ಶ್ರೀನಿವಾಸ ಕುಲಕರ್ಣಿ,** ತಹಶೀಲ್ದಾರ್, ಗದಗ

ಡೀಸೆಲ್ ದೊರೆಯದೆ ರೈತರು ಕಂಗಾಲು!

•**ಲಕ್ಷ್ಮೇಶ್ವರ:** ಕಳೆದ 2-3 ತಿಂಗಳಿಂದ ನಡೆಯುತ್ತಿರುವ ಮಧ್ಯಪ್ರಾಚ್ಯ ರಾಷ್ಟ್ರಗಳ ಯುದ್ಧದ ಪರಿಣಾಮ ದೇಶದ ಮೇಲೆ ಪರಿಣಾಮ ಬೀರುತ್ತಿದ್ದು, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಏರಿಕೆ ನಡುವೆ ಡೀಸೆಲ್ ದೊರೆಯದೆ ರೈತರು ಕಂಗಾಲಾಗುತ್ತಿದ್ದಾರೆ. ಪಟ್ಟಣದಲ್ಲಿ ಶನಿವಾರದಿಂದಲೇ ಪೆಟ್ರೋಲ್ ಬಂಕ್‌ಗಳಲ್ಲಿ ಜನರು ಡೀಸೆಲ್‌ಗಾಗಿ ಮುಗಿಬಿದ್ದಿದ್ದು, ಬಹುತೇಕ ಬಂಕ್‌ಗಳಲ್ಲಿ ಡೀಸೇಲ್ ಖಾಲಿಯಾಗಿದ್ದು, ಮುಂದೆ ಡೀಸೆಲ್ ಬರುವವರೆಗೂ ಜನರು ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಎಲ್ಲೆಡೆ ಡೀಸೆಲ್ ಹಾಹಾಕಾರ ಕಂಡುಬಂದಿದೆ.

ಈ ಬಾರಿ ಮುಂಗಾರು ಪೂರ್ವ ಮಳೆ ಉತ್ತಮವಾಗಿ ಆಗಿದ್ದು, ರೈತರು ಭೂಮಿಗಳನ್ನು ಸಜ್ಜುಗೊಳಿಸಲು ಮುಂದಾಗುತ್ತಿದ್ದಾರೆ. ಬಹುತೇಕ ಎಲ್ಲ ರೈತರು ಟ್ರ್ಯಾಕ್ಟರ್‌ನಲ್ಲಿ ಉಳಿಮೆ ಮಾಡುವುದರಿಂದ ಡೀಸೆಲ್ ಅಭಾವ ಕಂಡು ಬರುತ್ತಿದೆ. ಶನಿವಾರ ಮತ್ತು ಭಾನುವಾರ ಡೀಸೆಲ್ ಲಭ್ಯವಿದ್ದ ಎಲ್ಲ ಬಂಕ್‌ಗಳ ಮುಂದೆ ರೈತರ ವಾಹನಗಳು ಮತ್ತು ಕ್ಯಾನುಗಳೊಂದಿಗೆ ಸರದಿ ಸಾಲಿನಲ್ಲಿ ನಿಲ್ಲುವಂತಾಗಿದೆ. ಪಟ್ಟಣದಲ್ಲಿ ಸುಮಾರು 8-10 ಪೆಟ್ರೊಲ್ ಬಂಕ್‌ಗಳಿದ್ದು ಎಲ್ಲ ಬಂಕ್‌ಗಳಲ್ಲಿ ಭಾನುವಾರ ಮಧ್ಯಾಹ್ನದೊಳಗಾಗಿ ಡೀಸೆಲ್ ಖಾಲಿಯಾಗಿದ್ದು, ರೈತರು ಬರಿಗೈಯಲ್ಲಿ ಮರಳುವಂತಾಗಿದೆ. ಶನಿವಾರ ಸಂಜೆಯಿಂದ ಭಾನುವಾರ ಮಧ್ಯಾಹ್ನದೊಳಗಾಗಿ ಸುಮಾರು ಸಾವಿರಾರು ಲೀಟರ್ ಡೀಸೆಲ್ ಖಾಲಿಯಾಗಿದೆ. ಶನಿವಾರ ಕೆಲವೊಂದು ಬಂಕ್‌ಗಳ ಮುಂದೆ ಟ್ರ್ಯಾಕ್ಟರ್‌ಗಳ ಸರದಿ ಸಾಲು ಕಿ.ಮೀ ವರೆಗೂ ತಲುಪಿತ್ತು. ಕೆಲವು ಬಂಕ್‌ಗಳಲ್ಲಿ ಶನಿವಾರವೇ ಡೀಸೆಲ್ ಖಾಲಿಯಾಗಿತ್ತು. ಭಾನುವಾರಮುಂಜಾನೆ ಬಂಕ್‌ಗಳ ಮುಂದೆ ನೂರಾರು ಕ್ಯಾನ್‌ಗಳೊಂದಿಗೆ ಜನರು ಮತ್ತು ವಾಹನಗಳು ಸರದಿ ಸಾಲಿಗಳು ಕಂಡು ಬಂದವು. ಕ್ಯಾನ್‌ಗಳಿಗೆ ಕೇವಲ ಎರಡು ಸಾವಿರ ರೂ.ಗಳ ಡೀಸೆಲ್ ಒಯ್ಯಲು ಅವಕಾಶ ಕಲ್ಪಿಸಲಾಗಿತ್ತು, ಹೀಗಾಗಿ ರೈತರು 3-4 ಕ್ಯಾನುಗಳನ್ನು ಹೊತ್ತು ತಂದಿದ್ದರು. ರೈತರಿಗೆ ಬಿಸಿ ತಟ್ಟಿದೆ.

ಡೀಸೆಲ್ ಅವಶ್ಯ

ಕೃಷಿ ಚಟುವಟಿಕೆಗಳಿಗೆ ವಾಹನಗಳಿಗೆ ಡೀಸೆಲ್ ಅವಶ್ಯ. ಜಿಲ್ಲಾಡಳಿತ ಪಟ್ಟಣದ ಬಂಕ್‌ಗಳಲ್ಲಿ ಡೀಸೆಲ್ ಸಮರ್ಪಕ ದೊರೆಯುವಂತೆ ಕ್ರಮ ವಹಿಸಬೇಕು ಎಂದು ರೈತ ಬಸವರಾಜ ಬಿಂಕದಕಟ್ಟಿ ಆಗ್ರಹಿಸಿದರು.



ರಾಜೇಂದ್ರಸಿಂಗಗೆ ಮಾನವತಾವಾದಿ ಶ್ರೀ ಬಸವೇಶ್ವರ ಪ್ರಶಸ್ತಿ

•**ಗದಗ:** ಲಕ್ಷ್ಮೇಶ್ವರದ ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದಿಂದ ಕೊಡಮಾಡುವ ಮಾನವತಾವಾದಿ ಶ್ರೀ ಬಸವೇಶ್ವರ ಪ್ರಶಸ್ತಿಗೆ ರಾಜಸ್ಥಾನದ ಜಲಸಂರಕ್ಷಕ ರಾಜೇಂದ್ರಸಿಂಗ ಅವರು ಆಯ್ಕೆಯಾಗಿದ್ದು, ಮೇ 25ರಂದು ನಗರದ ತೋಂಟದಾರ್ಯ ಮಠದಲ್ಲಿ ಜರುಗುವ 2,799ನೇ ಶಿವಾನುಭವದಲ್ಲಿ ಪ್ರಶಸ್ತಿ ಪ್ರದಾನ ಜರುಗಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರಕಾಶ ಲಿಂಬಯ್ಯಸ್ವಾಮಿಮಠ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿವರ್ಷ ವಿಕಲಾಂಗ ಸಾಧಕರಿಗೆ, ಸಾಧಕ ದಂಪತಿಗಳಿಗೆ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಮಾನವೀಯತೆ ಮೆರೆದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಿಕೊಂಡು ಬರಲಾಗುತ್ತಿದೆ ಎಂದರು.

ಮೇ 25ರಂದು ಸಂಜೆ 7ಕ್ಕೆ ನಗರದ ತೋಂಟದಾರ್ಯ ಮಠದಲ್ಲಿ ಜರುಗುವ ಶಿವಾನುಭವದಲ್ಲಿ ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಕಾನೂನು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಪ್ರಶಸ್ತಿ ಪ್ರದಾನ ಮಾಡುವರು. ಸಾಹಿತಿ ಜೆ.ಕೆ. ಜಮಾದಾರ ಉಪನ್ಯಾಸ ನೀಡುವರು. ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ, ಮಾಜಿ ಸಚಿವ ಎಚ್.ಎಸ್. ಪಾಟೀಲ, ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ, ಮಾಜಿ ವಿಪ ಸದಸ್ಯ ಮೋಹನ ಲಿಂಬಿಕಾಯಿ ಪಾಲ್ಗೊಳ್ಳುವರು ಎಂದರು.

ಪ್ರತಿಷ್ಠಾನದ ಮಹೇಶ ಲಿಂಬಯ್ಯಸ್ವಾಮಿಮಠ ಮಾತನಾಡಿ, ಜಲಸಂರಕ್ಷಕ ರಾಜೇಂದ್ರಸಿಂಗ ಅವರು ರಾಜಸ್ಥಾನದ ನೆಲದಲ್ಲಿ ಜಲಕ್ರಾಂತಿಯನ್ನೇ ಮಾಡಿದ್ದಾರೆ. ಮರಭೂಮಿಯಂತಹ ಪ್ರದೇಶದಲ್ಲಿ 8,600ಕ್ಕೂ ಅಧಿಕ ನೀರಿನ ಒಡ್ಡುಗಳನ್ನು ಮತ್ತು ನೀರಿನ ಸಂರಕ್ಷಣೆ ರಚನೆಗಳನ್ನು ನಿರ್ಮಿಸಿ 1,000ಕ್ಕೂ ಅಧಿಕ ಹಳ್ಳಿಗಳ ಅಂತರ್ಜಲವನ್ನು ಹೆಚ್ಚಿಸಿದ್ದಾರೆ. ಬರಿದಾದ 5 ನದಿಗಳನ್ನು ಪುನಶ್ಚೇತನಗೊಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ 2025-26ನೇ ಸಾಲಿನ ಮಾನವತಾವಾದಿ ಶ್ರೀ ಬಸವೇಶ್ವರ ಪ್ರಶಸ್ತಿಗೆ ರಾಜೇಂದ್ರಸಿಂಗ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಪ್ರತಿಷ್ಠಾನದ ಕಾರ್ಯದರ್ಶಿ ಈಶ್ವರ ಮೆಡ್ಲೇರಿ ಮಾತನಾಡಿದರು. ತೋಂಟದಾರ್ಯ ಜಾತ್ರಾ ಕಮಿಟಿ ಅಧ್ಯಕ್ಷ ವಿನಾಯಕ ಮಾನ್ವಿ, ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಡಾ. ಉಮೇಶ ಪುರದ, ಸಂತೋಷ ಗಾರಗಿ, ಬಸಣ್ಣ ಗಾಂಜಿ, ಸಿದ್ರಾಮೇಶ ಪಟ್ಟೇದ, ಸುರೇಖಾ ಪಿಳ್ಳೆ ಇತರರಿದ್ದರು.



ಮೇ 31ರಂದು ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶ: ಖಾನಪ್ಪನವರ

•**ಶಿರಹಟ್ಟಿ:** ಹಿಂದೂ ಸರ್ವ ಸಮಾಜಗಳ ಒಕ್ಕೂಟದ ವತಿಯಿಂದ ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶ ಮೇ 31ರಂದು ಗದಗ ನಗರದ ವಿಡಿಎಸ್ಟಿ ಮೈದಾನದಲ್ಲಿ ನಡೆಯಲಿದೆ ಎಂದು ಸಮಾವೇಶದ ಸಂಚಾಲಕ ರಾಜು ಖಾನಪ್ಪನವರ ಹೇಳಿದರು.

ಸ್ಥಳೀಯ ಫಕೀರೇಶ್ವರ ನಗರದ ಟೀಚರ್ ಸೊಸೈಟಿಯಲ್ಲಿ ಸಮಾವೇಶದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೃಹತ್ ಹಿಂದೂ ಸಮಾವೇಶದಲ್ಲಿ ಹಿಂದೂಗಳನ್ನು ಜಾಗೃತಿಗೊಳಿಸಲು ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳು ಆಗಮಿಸಲಿದ್ದಾರೆ. ಸನಾತನ ಹಿಂದೂ ಧರ್ಮವನ್ನು ಹತ್ತಿಕ್ಕುವ ಹುನ್ನಾರ ನಡೆಸುತ್ತಿರುವ ಕೆಲ ಪಟ್ಟಭದ್ರ ಹಿತಾಸಕ್ತಿಗಳಿಗೆ ತಕ್ಕ ಪಾಠ ಕಲಿಸಲು ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಅಲ್ಲದೇ ಸಾವಯವ ಕೃಷಿ ಬಗ್ಗೆ ರೈತರಿಗೆ ಸಲಹೆ ನೀಡಲು ಆಗಮಿಸುತ್ತಿದ್ದು, ಹಿಂದೂಗಳು ಹಾಗೂ ರೈತರು ಈ ಸಮಾವೇಶದ ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು.



ಹಿಂದೂ ಸಂಘಟನೆಯ ಮುಖಂಡ ಸಂತೋಷ ಕುರಿ ಮಾತನಾಡಿ, ಮೇ 31ರಂದು ಮಧ್ಯಾಹ್ನ 3.30ಕ್ಕೆ ಭೂಮರಡ್ಡಿ ಸರ್ಕಲ್‌ನಿಂದ ಕುಂಭ ಮೆರವಣಿಗೆ ಆರಂಭವಾಗಲಿದ್ದು, ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಂಚರಿಸಿ ಸಂಜೆ 5.30ಕ್ಕೆ ವಿಡಿಎಸ್ಟಿ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಯಲಿದೆ. 300ಕ್ಕೂ ಹೆಚ್ಚು ವಿವಿಧ ಮಠಗಳ ಮಠಾಧೀಶರು ಸಮಾವೇಶಕ್ಕೆ ಆಗಮಿಸಲಿದ್ದಾರೆ ಎಂದರು. ಶ್ರೀಧರ್ ಕುಲಕರ್ಣಿ, ರಾಜೀವರಡ್ಡಿ ಬೊಮ್ಮನಕಟ್ಟಿ, ವೆಂಕಟೇಶ ಕುಲಕರ್ಣಿ, ತಿಪ್ಪಣ್ಣ ಕೊಂಚಗೇರಿ, ಯಲ್ಲಪ್ಪಗೌಡ ಅಣ್ಣಿಗೇರಿ , ರಾಮಣ್ಣ ಕಂಬಳಿ, ಬಸವರಾಜ್ ತುಳಿ, ಗೂಳಪ್ಪ ಕರಿಗಾರ, ಪರಶುರಾಮ್ ಡೊಂಕಬಳ್ಳಿ, ನೀಲಪ್ಪ ಖಾನಾಪುರ , ನಾಗರಾಜ್ ಇಂಗಳಗಿ, ಫಕೀರೇಶ ಕರಿಗಾರ್, ಸಂತೋಷ ಸೊಂಟನೂರ, ವಿರೂಪಾಕ್ಷಿ ಹಿರೇಮಠ, ದೇವು ಪೂಜಾರ ಮುಂತಾದವರಿದ್ದರು.

ಮನೆಯಲ್ಲಿ ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಕಲಿಸಿ: ಪ್ರೊ.ಕೆ.ಎಚ್.ಬೇಲೂರ

•**ಮುಂಡರಗಿ:** ಮನೆಗಳು ನೆಮ್ಮದಿಯಾಗಿರುವುದೇ ಮಹಿಳೆಯರಿಂದ. ಮಹಿಳೆಯರು ಮನಸ್ಸು ಮಾಡಿದರೆ ಜಗತ್ತೇ ಉದ್ಧಾರವಾಗುತ್ತದೆ. ನಮ್ಮ ಜೊತೆಗೆ ಯಾವುದೇ ಆಸ್ತಿ ಪಾಸ್ತಿ ಬರುವುದಿಲ್ಲ, ನಮ್ಮ ಜೊತೆಗೆ ಬರುವುದು ವಿದ್ಯ ಮಾತ್ರ. ಹೀಗಾಗಿ ತಾಯಂದಿರು ಮನೆಯಲ್ಲಿ ಮಕ್ಕಳಿಗೆ ಚೆನ್ನಾಗಿ ವಿದ್ಯೆ ಕಲಿಸುವುದರ ಜೊತೆಗೆ ಸಂಸ್ಕಾರ, ಸಂಸ್ಕೃತಿಯನ್ನು ಕಲಿಸಬೇಕು ಎಂದು ಗದುಗಿನ ಚಿಂತಕ ಪ್ರೊ.ಕೆ.ಎಚ್.ಬೇಲೂರ ಹೇಳಿದರು.

ಅವರು ಪಟ್ಟಣದ ಅನ್ನದಾನೀಶ್ವರ ತಾಲೂಕು ಕನ್ನಡ ಸಾಹಿತ್ಯ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಆಶ್ರಯದಲ್ಲಿ ಜರುಗಿದ ತಾಲೂಕು ಮಹಿಳಾ ಸಾಹಿತ್ಯ ಸಮಾವೇಶ-2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶ್ರೀ ಜ.ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಆಶೀರ್ವಚನ ನೀಡಿ, ಹೆಣ್ಣಿನ ಬಗ್ಗೆ ಸಮಾಜದಲ್ಲಿ ಸ್ವಲ್ಪ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಬಹಳಷ್ಟು ವಿಪರೀತವಾಗಿ ಭಾವಿಸುವಂತಹ ಭಾವ ಜನರಿಂದ, ಸಮಾಜದಿಂದ ಕಂಡುಬರುತ್ತಿದ್ದು, ಅದು ಹೋಗಬೇಕು. ಕೇವಲ ಕೆಟ್ಟ ದೃಷ್ಟಿಯಿಂದ, ಕೆಟ್ಟ ಭಾವನೆಯಿಂದ ನೋಡದೆ ಪ್ರತ್ಯಕ್ಷವಾಗಿ ಏನು ನಡೆದಿದೆ ಎಂದು ಯೋಚಿಸಿ ಮಾತನಾಡಬೇಕು ಎಂದರು.

ಸವಣೂರಿನ ಕರ್ನಾಟಕ ರಾಜ್ಯ ಮಹಿಳಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷೆ ಗಿರಿಜಾ ಹಿರೇಮಠ ಮಾತನಾಡಿ, ನಮ್ಮ ಮಕ್ಕಳು ಪುಸ್ತಕಗಳನ್ನು ಓದುವ ಮೂಲಕ ಮೌಲ್ಯವನ್ನು ಬೆಳೆಸಿಕೊಳ್ಳಬೇಕು ಎಂದರು. ಜಿಲ್ಲಾ ಜಂಟಿ ನಿರ್ದೇಶಕಿ ಚೇತನಾ ಪಾಟೀಲ ಹಾಗೂ ಪ್ರೊ.ಎ.ಬಿ.ಹಿರೇಮಠ, ಸೀತಾ ಬಸಾಪೂರ, ಅನ್ನದಾನಿ ಹಿರೇಮಠ ಮಾತನಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಆರ್.ಎಲ್.ಪೊಲೀಸ್‌ಪಾಟೀಲ ಅವರ ಜೇಂಗೊಡು ಕೃತಿಯನ್ನು ಶ್ರೀಗಳು ಬಿಡುಗಡೆಗೊಳಿಸಿದರು. ಕಲ್ಪನಾ ಕಡ್ಡಿ, ಸುಕನ್ಯಾ ಕಬ್ಬೂರಮಠ, ಶೋಭಾ ಹೊಟ್ಟೀನ, ತಾಲೂಕು ಕಸಾಪ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ, ಶಂಕರ ಕುಕನೂರ, ಸಿ.ಕೆ.ಗಣಪ್ಪನವರ, ಕೆ.ಕೆ.ಬಿಳಿಮಗ್ಗದ, ಕೃಷ್ಣಾ ಸಾಹುಕಾರ, ಸುರೇಶ ಭಾವಿಹಳ್ಳಿ, ಮಂಜು ಮುಧೋಳ ಇತರರಿದ್ದರು. ಕಸಾಪ ಗೌ.ಕಾ.ವೀಣಾ ಪಾಟೀಲ ಆಶಯ ನುಡಿಗಳನ್ನಾಡಿದರು. ಶಶಿಕಲಾ ಕುಕನೂರ ಸ್ವಾಗತಿಸಿದರು. ಅರುಣಾ ಗುಜ್ಜರಿ ನಿರೂಪಿಸಿದರು. ರಮೇಶಗೌಡ ಪಾಟೀಲ ವಂದಿಸಿದರು.



ವರುಣಾರ್ಭಟಕ್ಕೆ ಜಮೀನುಗಳು ಜಲಾವೃತ



•**ರೋಣ:** ಶನಿವಾರ ಸಂಜೆ ಆರಂಭಗೊಂಡ ವರುಣಾರ್ಭಟಕ್ಕೆ ತಾಲೂಕಿನಾದ್ಯಂತ ನೂರಾರು ಹೆಕ್ಟೆರ್ ಪ್ರದೇಶದ ಜಮೀನುಗಳು ಜಲಾವೃತಗೊಂಡಿದ್ದು, ರಾತ್ರಿಯಿಡೀ ಸುರಿದ ಭಾರೀ ಮಳೆಗೆ ಹಳ್ಳಕೊಳ್ಳಗಳು ಭರ್ತಿಯಾಗಿ ಹರಿಯತೊಡಗಿದ್ದು, ರೈತರ ಜಮೀನುಗಳಲ್ಲಿನ ಕೃಷಿ ಹೊಂಡಗಳು ಭರ್ತಿಯಾಗಿರುವ ಪರಿಣಾಮ ರೈತರ ಮೊಗದಲ್ಲಿ ಮಂದಹಾಸ ಮೂಡುವಂತೆ ಮಾಡಿದೆ. ತಾಲೂಕಿನಾದ್ಯಂತ ರೈತರು ಮುಂಗಾರು ಹಂಗಾಮಿನ ಬೆಳೆಗಳನ್ನು ಬಿತ್ತನೆ ಮಾಡಲು ಜಮೀನು ಹಸನುಗೊಳಿಸಿ ಮಳೆಗಾಗಿ ಕಾಯ್ದು ಕುಳಿತಿದ್ದರು. ರೈತರು ಭಾನುವಾರ ನಸುಕಿನ ಜಾವಾ ತಮ್ಮ ಜಮೀನುಗಳಿಗೆ ತೆರಳಿ ಮಳೆಯಾದ ಪ್ರಮಾಣವನ್ನು ವೀಕ್ಷಿಸಿ ಸಂತಸಗೊಂಡರು. ಇತ್ತೀಚಿಗೆ ಮುಂಗಾರು ಪೂರ್ವ ಮಳೆ ಸುರಿದರೂ ರೈತರ ಜಮೀನುಗಳು ಹುಸಿಗೊಂಡಿರಲಿಲ್ಲ, ಹೀಗಾಗಿ ರೈತರು ಉತ್ತಮ ಮಳೆಗಾಗಿ ಕಾಯುತ್ತಿದ್ದರು. ಆದರೆ ಶನಿವಾರ ಸುರಿದ ಮಳೆಯಿಂದ ರೈತ ಬಿತ್ತನೆಗೈಯಲು ಬೀಜ ಗೊಬ್ಬರದ ತಯಾರಿ ನಡೆಸಿದ್ದಾನೆ. ರೋಹಿಣಿ ಮಳೆಯಾಗುತ್ತಿದ್ದಂತೆ ಮುಂಗಾರು ಬಿತ್ತನೆಯ ಕಾಯಕದಲ್ಲಿ ರೈತರು ಮಗ್ನರಾಗಲಿದ್ದಾರೆ. ಭಾರೀ ಪ್ರಮಾಣದಲ್ಲಿ ಸುರಿದ ಮಳೆಯಿಂದ ತಾಲೂಕಿನ ಅನೇಕ ಗ್ರಾಮಗಳಲ್ಲಿನ ನೂರಾರು ಹೆಕ್ಟೆರ್ ಪ್ರದೇಶದ ಜಮೀನುಗಳು ಜಲಾವೃತಗೊಂಡಿವೆ. ಇನ್ನು ಕೆಲ ಜಮೀನುಗಳಲ್ಲಿನ ವಡ್ಡು ವಳಗಟ್ಟಿಗಳು ಒಡೆದು ಹೊಗಿದೆ.

ಕೃಷಿ ಹೊಂಡ ನಿರ್ಮಾಣ

ಜಮೀನುಗಳಲ್ಲಿ ಮಳೆ ನೀರು ಸಂಗ್ರಹವಾಗಿರುವ ಪರಿಣಾಮ ರೈತರು ನೀರು ಹರಿ ಬಿಡಲು ಹರಸಾಹಸ ಪಡುವಂತೆ ಮಾಡಿದೆ. ರೈತರು ತಮ್ಮ ಜಮೀನುಗಳಲ್ಲಿ ನಿರ್ಮಿಸಿಕೊಂಡಿರುವ ಕೃಷಿ ಹೊಂಡಗಳು ಮಳೆ ನೀರಿನಿಂದ ಭರ್ತಿಯಾಗಿದ್ದು, ಹಳ್ಳಕೊಳ್ಳಗಳು ತುಂಬಿ ಹರಿದಿವೆ. ಬೇಸಿಗೆ ಸಂಧರ್ಭದಲ್ಲಿ ಮೂಕ ಪ್ರಾಣಿಗಳಿಗೆ ಕುಡಿಯುವ ನೀರಿನ ತೊಂದರೆಯಿತ್ತಾದರೂ ಈಗ ಸುರಿದ ಮಳೆಯಿಂದ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಸ್ವಲ್ಪ ಮಟ್ಟಿಗೆ ತಗ್ಗಿದಂತಾಗಿದೆ. ಕೃಷಿ ಹೊಂಡಗಳು ಭರ್ತಿಯಾದ ಪರಿಣಾಮ ರೈತರು ಹನಿ ನೀರಾವರಿ ಮಾಡಿಕೊಳ್ಳಲು ಸಹಕಾರಿಯಾಗಿದೆ.

ಉರುಳಿದ ಮರ

ಶನಿವಾರ ರಾತ್ರಿ ಸುರಿದ ಮಳೆಯಿಂದ ತಾಲೂಕಿನಲ್ಲಿ ಹತ್ತಾರು ಗಿಡಮರಗಳು ನೆಲಕ್ಕುರುಳಿವೆ. ರೋಣ ಜಕ್ಕಲಿ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಮರವೊಂದು ಬಿದ್ದ ಪರಿಣಾಮ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿದೆ. ಇದೇ ಮಾರ್ಗದ ಜಕ್ಕಲಿ ಹಳ್ಳದಲ್ಲಿ ಭಾರೀ ಗಾತ್ರದ ಮುಳ್ಳಿನ ಪೊದೆ ಅಡ್ಡಲಾಗಿ ಬಿದ್ದ ಪರಿಣಾಮ ಬೆಳಗಿನ ಜಾವದವರೆಗೂ ವಾಹನಗಳ ಸಂಚಾರಕ್ಕೆ ತಡೆ ಉಂಟಾಯಿತು. ಇದರಿಂದ ಜನರು ಪರದಾಡುವಂತಾಯಿತು.



ಉದ್ಯೋಗ ಖಾತ್ರಿಯಲ್ಲಿ ಕೆಲಸ ನೀಡಲು ಆಗ್ರಹ



•**ಗಜೇಂದ್ರಗಡ:** ತಾಲೂಕಿನ ವ್ಯಾಪ್ತಿಗೆ ಒಳಪಡುವ ಸೂಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮಸ್ಥ ಮಹಿಳೆಯರು ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ತಮಗೆ ಕೆಲಸ ನೀಡಿಲ್ಲ ಎಂದು ಆರೋಪಿಸಿ ಕೆಲಸ ನೀಡುವಂತೆ ಗ್ರಾಮ ಪಂಚಾಯತಗೆ ಮುತ್ತಿಗೆ ಹಾಕಿದ ಘಟನೆ ನಡೆದಿದೆ.

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಗ್ರಾಮೀಣ ಭಾಗದ ಜನರ ಜೀವಾಳ. ಆದರೆ ಈ ಯೋಜನೆಯು ಗಜೇಂದ್ರಗಡ ತಾಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿ ನನೆಗುದಿಗೆ ಬಿದ್ದಿದೆ. 2025-26 ನೇ ಸಾಲಿನಲ್ಲಿ ಕೊಡಬೇಕಾದ ನರೇಗಾ ಕಾಮಗಾರಿ ಕೆಲಸವನ್ನು ಬೇಸಿಗೆ ದಿನಗಳಲ್ಲಿ ನೀಡುವುದು ವಾಡಿಕೆ. ಆದರೆ ಮುಂಗಾರು ಮಳೆಗಾಲ ಪ್ರಾರಂಭವಾಗುತ್ತಿರುವ ಈ ಸಂದರ್ಭದಲ್ಲಿ ಕೆಲಸ ನೀಡುತ್ತಿರುವುದು ವಿಪರ್ಯಾಸ. ಸೂಡಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ ಕೆಲವು ವಾರ್ಡ್‌ಗಳಲ್ಲಿ ಶುಕ್ರವಾರದಿಂದ ಕೆಲಸ ನೀಡಲಾಗಿದೆ. ಆದರೆ 4ನೇ ವಾರ್ಡಿನ ಜನರಿಗೆ ಕೆಲಸ ನೀಡಿಲ್ಲ ಎಂದು ಕೂಲಿಕಾರ ಮಹಿಳೆಯರು ಆಕ್ರೋಶಿಸಿದರು.

ಸುಮಾರು ಎರಡು ತಿಂಗಳುಗಳಿಂದ ಕೆಲಸ ಕೇಳುತ್ತಿದ್ದೇವೆ. ಆದರೆ ಗ್ರಾಮ ಪಂಚಾಯತಿ ಅಧಿಕಾರಿಗಳು ಹಾರಿಕೆ ಉತ್ತರ ನೀಡುತ್ತಿದ್ದಾರೆ. ಈಗ ಮಳೆ ಪ್ರಾರಂಭವಾಗುತ್ತದೆ. ಇಂತಹ ಸಮಯದಲ್ಲಿ ಕೆಲಸ ಕೊಡುತ್ತೇವೆ ಎಂದಿದ್ದಾರೆ. ದಿನನಿತ್ಯ ನಾವು ಸಲಿಕೆ, ಗುದ್ದಲಿ ಹಿಡಿದು ಹೊಲಕ್ಕೆ ಹೋಗಿ ಕೆಲಸ ಮಾಡದೆ ಹಾಗೆ ಬರುತ್ತಿದ್ದೇವೆ. ಇನ್ನೆರೆಡು ದಿನಗಳಲ್ಲಿ ಕೆಲಸ ನೀಡದೆ ಹೋದರೆ ಪಂಚಾಯತಿಗೆ ಬೀಗ ಹಾಕುತ್ತೇವೆ.
■ **ರೇಣವ್ವ ಜೊತೆಣ್ಣವರ,** ಕೂಲಿ ಕಾರ್ಮಿಕ ಮಹಿಳೆ

ಎನ್‌ಎಂಆರ್ ಹಾಕಲಾಗಿದೆ. ರೈತರು ಮೊದಲು ಜಮೀನು ಕೊಟ್ಟು ಇವಾಗ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ತೊಂದರೆ ಆಗಿದೆ. ಮುಂದಿನ ವಾರದ ಒಳಗಾಗಿ ಕೆಲಸ ನೀಡಲಾಗುವುದು.
■ **ಬಸವಂತಪ್ಪ ವಡ್ಡರ,** ಪಿಡಿಒ, ಸೂಡಿ

ನಾರ್ವೆಯ ಒಬ್ಬ ಅಪ್ರಸಿದ್ಧ ಪತ್ರಕರ್ತೆಯನ್ನು ದಾಳವಾಗಿ ಬಳಸಿಕೊಂಡು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಜಾಗತಿಕ ವರ್ಚಸ್ಸಿಗೆ ಮಸಿ ಬಳಿಯಲು ಗ್ಲಿಸ್ಸೋ ನೆಟ್‌ವರ್ಕ್ ಹೇಗೆ ಸಂಚು ರೂಪಿಸಿತು? ಹಣದ ಹರಿವು ಎಲ್ಲಿಂದ ಎಲ್ಲಿಗೆ ಹೋಯಿತು? ಬಿಬಿಸಿ, ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಮತ್ತು ಹ್ಯೂಮನ್ ರೈಟ್ಸ್ ವಾಚ್ ಸಂಸ್ಥೆಗಳ ಅಸಲಿ ಇತಿಹಾಸವೇನು? ಹೊಸದಿಲ್ಲಿಯ ಡಾ. ಶ್ಯಾಮಾ ಪ್ರಸಾದ್ ಮುಖರ್ಜಿ ರಿಸರ್ಚ್ ಫೌಂಡೇಶನ್ (ಎಸ್‌ಪಿಎಂಆರ್‌ಎಫ್) ಮೇ 2026ರಲ್ಲಿ ಬಿಡುಗಡೆ ಮಾಡಿದ ವಿಶೇಷ ವರದಿಯ ಅತ್ಯಂತ ಸುದೀರ್ಘ ಹಾಗೂ ಪೂರ್ಣ ವಿವರ ಇಲ್ಲಿದೆ.

ಓಸ್ಲೋ ಹಿಟ್ ಜಾಬ್ ಹಿಂದಿನ ಟ್ರೂ ಸ್ಟೋರಿ



ಪ್ರಧಾನಿ ಮೋದಿ ವಿರುದ್ಧ ಜಾಗತಿಕ ಮಾಹಿತಿ ಯುದ್ಧ ಹಾಗೂ ಭಾರತದ ಮೇಲಿನ ವ್ಯವಸ್ಥಿತ ನರೇಟಿವ್ ದಾಳಿ ಬಯಲು!

ಮೂಲ: ಡಾ.ಶ್ಯಾಮಾ ಪ್ರಸಾದ್ ಮುಖರ್ಜಿ ರಿಸರ್ಚ್ ಫೌಂಡೇಶನ್ (ಎಸ್‌ಪಿಎಂಆರ್‌ಎಫ್), ಹೊಸದಿಲ್ಲಿ ಮೇ 2026ರಲ್ಲಿ ಪ್ರಕಟಿಸಿದ ವಿಶೇಷ ತನಿಖಾ ವರದಿ.

ಭಾರತದ ಸಾರ್ವಭೌಮತ್ವದ ವಿರುದ್ಧ ಮಾಹಿತಿ ಯುದ್ಧ

ಮೇ 2026ರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ನಾರ್ವೆಯ ರಾಜಧಾನಿ ಓಸ್ಲೋಗೆ ಅಧಿಕೃತ ಪ್ರವಾಸ ಕೈಗೊಂಡಾಗ, ಅದು ಕೇವಲ ಒಂದು ಸಾಮಾನ್ಯ ದ್ವಿಪಕ್ಷೀಯ ಅಥವಾ ರಾಜತಾಂತ್ರಿಕ ಭೇಟಿಯಾಗಿರಲಿಲ್ಲ, ಅದು ಜಗತ್ತಿನ 5ನೇ ಅತಿ ದೊಡ್ಡ ಆರ್ಥಿಕತೆ, ಸುಮಾರು 145 ಕೋಟಿ ಜನಸಂಖ್ಯೆ ಹೊಂದಿರುವ ಬೃಹತ್ ಮಾನವ ಇತಿಹಾಸದ ಅಭೂತಪೂರ್ವ ಪ್ರಜಾಪ್ರಭುತ್ವ ಮತ್ತು ಪ್ರಬಲ ಪರಮಾಣು ರಾಷ್ಟ್ರವೊಂದರ ನಾಯಕರ ಭೇಟಿಯಾಗಿತ್ತು. ಆದರೆ, ಆ ಪ್ರವಾಸದ ಸಂದರ್ಭದಲ್ಲಿ ಜಾಗತಿಕ ಮಾಧ್ಯಮ ರಂಗದಲ್ಲಿ ಕಂಡುಬಂದದ್ದು ಸಾಮಾನ್ಯ ರಾಜತಾಂತ್ರಿಕ ವರದಿಗಾರಿಕೆಯಲ್ಲ, ಬದಲಿಗೆ ಅತ್ಯಂತ ವ್ಯವಸ್ಥಿತವಾಗಿ ಯೋಜಿಸಲಾಗಿದ್ದ ಒಂದು ಜಾಗತಿಕ ಮಾಹಿತಿ ಯುದ್ಧ ಮತ್ತು ಸಮನ್ವಯತೆಯ ಕಾರ್ಯಾಚರಣೆ. ಗ್ಲೋಬಲ್ ಲೆಫ್ಟ್-ಇಸ್ಲಾಮಿಸ್ಟ್-ಕಮ್ಯುನಿಸ್ಟ್-ಸೊರೊಸ್ (ಗ್ಲಿಸ್ಸೋ) ಜಾಲವು ನಾರ್ವೆಯ ಒಬ್ಬ ಪತ್ರಕರ್ತೆಯನ್ನು ದಾಳವಾಗಿ ಬಳಸಿಕೊಂಡು ಪ್ರಧಾನಿ ಮೋದಿ ಅವರ ಭೇಟಿಯನ್ನು ವಿಫಲಗೊಳಿಸಲು, ಭಾರತದ ಒಳಗಿನ ವಿರೋಧ ಪಕ್ಷದ ನಕಾರಾತ್ಮಕ ಆಖ್ಯಾನ(ನರೇಟಿವ್)ಗಳನ್ನು ಉತ್ತೇಜಿಸಲು ಮತ್ತು ಜಾಗತಿಕವಾಗಿ ಭಾರತದ ವರ್ಚಸ್ಸಿಗೆ ಧಕ್ಕೆ ತರಲು ಸಂಚು ಹೂಡಿತು. ಪತ್ರಿಕಾ ಕಾರ್ಡ್ ಹೊಂದಿದ್ದ ಆ ಪತ್ರಕರ್ತೆ ಕೇವಲ ಪ್ರಶ್ನೆ ಕೇಳಲು ಬಂದಿರಲಿಲ್ಲ, ಅದು ವ್ಯವಸ್ಥಿತ ಹಾಗೂ ಅತ್ಯಂತ ಅಪಾಯಕಾರಿ ಸೈಕಲಾಜಿಕಲ್ ಆಪರೇಷನ್ (ಸೈಓಪ್) ಆಗಿತ್ತು. ಈ ವಿಶೇಷ ವರದಿಯು ಈ ಇಡೀ ಜಾಲದ ಆಳ-ಅಗಲಗಳನ್ನು ಮತ್ತು ಹಣದ ಹರಿವನ್ನು ಸಂಪೂರ್ಣವಾಗಿ ಬಯಲು ಮಾಡುತ್ತದೆ.

ಸೊರೊಸ್ ಹಣದ ಹರಿವಿನ ಜಾಲ

ಯಾವುದೇ ಜಾಗತಿಕ ಮಾಹಿತಿ ಯುದ್ಧ ಅಥವಾ ಸಂಚಿನ ಆಳವನ್ನು ತಿಳಿಯಬೇಕಾದರೆ ಹಣ ಯಾರಿಂದ ಯಾರಿಗೆ ಹರಿಯುತ್ತಿದೆ ಮತ್ತು ಯಾರು ಯಾರಿಗೆ ಧನಸಹಾಯ ಮಾಡುತ್ತಿದ್ದಾರೆ? ಎಂಬುದನ್ನು ತನಿಖೆ ಮಾಡಬೇಕು.

ಸೊರೊಸ್ ಹಣಕಾಸು ಜಾಲದ 4 ಪ್ರಮುಖ ಹಂತಗಳು

ಹಂತ 1 (ಓಪನ್ ಸೊಸೈಟಿ ಫೌಂಡೇಶನ್): ಸೊರೊಸ್‌ನ ಪ್ರಮುಖ ಜಾಗತಿಕ ಕಾರ್ಯಾಚರಣಾ ಸಂಸ್ಥೆ ಓಪನ್ ಸೊಸೈಟಿ ಫೌಂಡೇಶನ್ ನೇರವಾಗಿ ಯುರೋಪಿನ ಎಡಪಂಥೀಯ ಮಾಧ್ಯಮ ಯೋಜನೆಗಳಿಗೆ ಹಣ ಒದಗಿಸುವ journalismfunds.eu ಎಂಬ ವೇದಿಕೆಗೆ ಧನಸಹಾಯ ನೀಡುತ್ತದೆ.

ಹಂತ 2 (ಫ್ರಿಟ್ ಆರ್ಡ್ ಫೌಂಡೇಶನ್, ನಾರ್ವೆ): ನಾರ್ವೆಯ ಫ್ರಿಟ್ ಆರ್ಡ್ ಫೌಂಡೇಶನ್ ತನ್ನನ್ನು ತಾನು ಪತ್ರಿಕಾ ಸ್ವಾತಂತ್ರ್ಯ ಸಂಸ್ಥೆ ಎಂದು ಕರೆದುಕೊಂಡರೂ, ಅದು ಈ ಮೇಲಿನ ಮೂಲಗಳಿಂದ ನೇರ ಅನುದಾನವನ್ನು ಪಡೆಯುತ್ತದೆ. ಇದು ನಾರ್ಡಿಕ್ ಪ್ರದೇಶದಲ್ಲಿ ಎಡಪಂಥೀಯ ಮಾಧ್ಯಮಗಳನ್ನು ಬೆಂಬಲಿಸುವ ಸೊರೊಸ್ ಜಾಲದ ಒಂದು ಪ್ರಮುಖ ನೋಡ್ ಆಗಿದೆ.

ಹಂತ 3 (ದಾಗ್ಸಾವಿಸೆನ್ ದಿನಪತ್ರಿಕೆ): ಹೆಲ್ಲೆ ಲಿಂಗ್ ಕೆಲಸ ಮಾಡುವ ದಾಗ್ಸಾವಿಸೆನ್ ಪತ್ರಿಕೆಯು ಈ ಫ್ರಿಟ್ ಆರ್ಡ್ ಫೌಂಡೇಶನ್‌ನಿಂದ ನೇರ ಧನಸಹಾಯ ಮತ್ತು ಅನುದಾನ ಪಡೆಯುತ್ತದೆ. ಇದು ಸ್ವತಂತ್ರ ಪತ್ರಿಕೋದ್ಯಮವಲ್ಲ, ಬದಲಿಗೆ ಹಣದ ಮೂಲಕ ನಿಯಂತ್ರಿಸಲ್ಪಡುವ ಸೈದ್ಧಾಂತಿಕ ವಕಾಲತ್ತು (ಫಂಡೆಂಡ್ ಅಡ್ವಕೆಸಿ).

ಹಂತ 4 (ಹೆಲ್ಲೆ - ಕಾರ್ಯಾಚರಣೆ): ಈ ಪತ್ರಿಕೆಯಲ್ಲಿ ಕೆಲಸ ಮಾಡುವ ಹೆಲ್ಲೆ ಲಿಂಗ್ ಸ್ವೆಂಡ್ಸೆನ್ ಓಸ್ಲೋದಲ್ಲಿ ಭಾರತದ ಪ್ರಧಾನಿಯವರ ಪತ್ರಿಕಾಗೋಷ್ಠಿಗೆ ಹಾಜರಾಗಿ ಅದನ್ನು ಕದಡಲು ಮತ್ತು ಅಪಪ್ರಚಾರ ಮಾಡಲು ಯತ್ನಿಸುತ್ತಾಳೆ. ಇದು ಕೇವಲ ಮಾಧ್ಯಮವಲ್ಲ, ಇದು ಒಂದು ವ್ಯವಸ್ಥಿತ ಸೈದ್ಧಾಂತಿಕ ಮೂಲಸೌಕರ್ಯ. ಹಣವು ಸೊರೊಸ್‌ನಿಂದ ಫೌಂಡೇಶನ್‌ಗೆ, ಫೌಂಡೇಶನ್‌ನಿಂದ ಪತ್ರಿಕೆಗೆ ಮತ್ತು ಪತ್ರಿಕೆಯಿಂದ ಓಸ್ಲೋ ಪತ್ರಿಕಾಗೋಷ್ಠಿಯ ಪತ್ರಕರ್ತೆಗೆ ಹರಿಯುತ್ತದೆ. ಈ 4 ಹಂತಗಳ ಸರಣಿಯು ಭಾರತ ವಿರೋಧಿ ಅಜೆಂಡಾವನ್ನು ಸಂಪೂರ್ಣವಾಗಿ ಸಾಬೀತುಪಡಿಸುತ್ತದೆ.



ಹೆಲ್ಲೆ ಲಿಂಗ್ ಸ್ವೆಂಡ್ಸೆನ್ ಯಾರು? ಅಸಲಿ ಮುಖವಾಡ ಕಳಚಿದಾಗ!

ಈ ಇಡೀ ಸಂಚಿನ ಕೇಂದ್ರಬಿಂದು ನಾರ್ವೆಯ ದಾಗ್ಸಾವಿಸೆನ್ ಪತ್ರಿಕೆಯಲ್ಲಿ ಕೆಲಸ ಮಾಡುವ ಹೆಲ್ಲೆ ಲಿಂಗ್ ಸ್ವೆಂಡ್ಸೆನ್ ಎಂಬ ಪತ್ರಕರ್ತೆ. ಮೇಲ್ನೋಟಕ್ಕೆ ತಟಸ್ಥ ಜಾಗತಿಕ ವಿದ್ಯಮಾನಗಳ ವೀಕ್ಷಕಿಯಂತೆ ನಟಿಸುವ ಈಕೆಯ ಇಂಟರ್‌ನೆಟ್ ಇತಿಹಾಸ ಮತ್ತು ಸೈದ್ಧಾಂತಿಕ ಬದ್ಧತೆಯನ್ನು ಕೆದಕಿದಾಗ ಅತ್ಯಂತ ಆಘಾತಕಾರಿ ಸತ್ಯಗಳು ಹೊರಬಂದಿವೆ.

1 **ಸುಪ್ತ ಖಾತೆಯ ದಿಢೀರ್ ಜಾಗೃತಿ:** ಈಕೆಯ ಎಕ್ಸ್ (ಅಂದಿನ ಟ್ವಿಟರ್) ಖಾತೆಯನ್ನು ಏಪ್ರಿಲ್ 2012ರಲ್ಲೇ ತೆರೆಯಲಾಗಿದ್ದರೂ, ಕಳೆದ ಎರಡು ವರ್ಷಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಅದು ಸಂಪೂರ್ಣ ನಿಷ್ಕ್ರಿಯವಾಗಿತ್ತು. ಆದರೆ, ಭಾರತದ ಪ್ರಧಾನಿ ಮೋದಿ ಅವರ ಓಸ್ಲೋ ಪ್ರವಾಸ ಮತ್ತು ಮಾಧ್ಯಮಗೋಷ್ಠಿಯ ದಿನ ಹತ್ತಿರ ಬರುತ್ತಿದ್ದಂತೆ ಈ ಸುಪ್ತ ಖಾತೆಯು ಅತ್ಯಂತ ವ್ಯವಸ್ಥಿತವಾಗಿ ಸಕ್ರಿಯವಾಯಿತು. ಸಂಪನ್ಮೂಲ ಮತ್ತು ಖಾತೆಗಳನ್ನು ಸೂಕ್ತ ಸಮಯಕ್ಕೆ ಹೇಗೆ ನಿಯೋಜಿಸಲಾಗುತ್ತದೆ ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆ.

2 **ಬ್ಲೂ ಟಿಕ್ ಖರೀದಿ ಮತ್ತು ದಿಢೀರ್ ಭಾರತ ವಿರೋಧಿ ಪೋಸ್ಟ್:** ಪ್ರಧಾನಿಯವರ ಮಾಧ್ಯಮಗೋಷ್ಠಿಗೆ ಕೇವಲ ಕೆಲವೇ ದಿನಗಳಿರುವಾಗ ಈಕೆ ಮೇ 2026ರಲ್ಲಿ ಹಣ ನೀಡಿ ತನ್ನ ಎಕ್ಸ್ ಖಾತೆಗೆ ಬ್ಲೂ ಟಿಕ್(ವೆರಿಫಿಕೇಶನ್) ಪಡೆದುಕೊಂಡಳು. ಅಕೌಂಟ್ ವೆರಿಫೈ ಆದ ತಕ್ಷಣವೇ ಈಕೆ ತನ್ನ ಪೋಸ್ಟಿಂಗ್ ಶೈಲಿಯನ್ನು ಬದಲಾಯಿಸಿ, ಭಾರತದ ಆಂತರಿಕ ರಾಜಕೀಯದ ಕುರಿತು ಮತ್ತು ಪ್ರಧಾನಿ ವಿರುದ್ಧ ತೀವ್ರ ದ್ವೇಷಕಾರುವ, ಹಗೆತನದ ಕಮೆಂಟ್‌ಗಳನ್ನು ಹಾಕಲು ಆರಂಭಿಸಿದಳು.

3 **ಕಮ್ಯುನಿಸ್ಟ್ ಚೀನಾ ಮತ್ತು ಕ್ಸಿ ಜಿನ್‌ಪಿಂಗ್ ಆರಾಧನೆ:** ಹೆಲ್ಲೆ ಲಿಂಗ್ ಭಾರತದ ತಜ್ಞೆಯೇನಲ್ಲ ಮತ್ತು ಈ ಘಟನೆಗೆ ಮುನ್ನ ಆಕೆ ಭಾರತದ ಬಗ್ಗೆ ಯಾವುದೇ ಮಹತ್ವದ ಲೇಖನಗಳನ್ನೇ ಬರೆದಿರಲಿಲ್ಲ, ಆದರೆ, ಆಕೆಯ ಒಟ್ಟಾರೆ ಕೆಲಸದ ಇತಿಹಾಸವು ಬೇರೆಯದೇ ಕಥೆ ಹೇಳುತ್ತದೆ. ಚೀನಾದ ಕಮ್ಯುನಿಸ್ಟ್ ಸರ್ಕಾರದ ಕುರಿತು ನೂರಾರು ಲೇಖನಗಳನ್ನು ಬರೆದಿರುವ ಈಕೆ, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್‌ನನ್ನು ಮುಕ್ತಕಂಠದಿಂದ ಸೂಪರ್‌ಹೀರೋ ಎಂದು ಕರೆದಿದ್ದಾಳೆ.

4 **ಉಯಿಗರ್ ಮುಸ್ಲಿಮರ ಹತ್ಯಾಕಾಂಡದ ಬಗ್ಗೆ ಜಾಣ ಮೌನ:** ಜಗತ್ತಿನ ಅತಿ ದೊಡ್ಡ ಮುಸ್ಲಿಂ ಜನಸಂಖ್ಯೆಯ ದೌರ್ಜನ್ಯ ಮತ್ತು ದಬ್ಬಾಳಿಕೆ ಎನಿಸಿರುವ ಚೀನಾದ ಉಯಿಗರ್ ಮುಸ್ಲಿಮರ ಮೇಲಿನ ದ್ವೇಷ ಹಾಗೂ ಜನಾಂಗೀಯ ಹತ್ಯಾಕಾಂಡದ ಕುರಿತು ಹೆಲ್ಲೆ ಲಿಂಗ್ ಬರೆದ ಒಟ್ಟು ಲೇಖನಗಳ ಸಂಖ್ಯೆ ಶೂನ್ಯ. ಮಾನವ ಹಕ್ಕುಗಳ ಬಗ್ಗೆ ಮಾತನಾಡುವ ಈಕೆಯ ಜಾಣ ಮೌನ ಈಕೆಯ ಮುಖವಾಡವನ್ನು ಕಳಚುತ್ತದೆ.

5 **ಮಾರ್ಕ್ಸ್‌ವಾದಿ ಸಿದ್ಧಾಂತದ ಪ್ರಭಾವ :** ಮೇ 1ರ ಅಂತಾರಾಷ್ಟ್ರೀಯ ಕಾರ್ಮಿಕರ ದಿನವನ್ನು ಸಾರ್ವಜನಿಕ ರಜಾದಿನವನ್ನಾಗಿ ಘೋಷಿಸದೇ ಇರುವುದರ ಬಗ್ಗೆ ಈಕೆ ಅತ್ಯಂತ ತೀವ್ರ ಆಕ್ರೋಶ ಮತ್ತು ಕೋಪದಿಂದ ಲೇಖನ ಬರೆದಿದ್ದಾಳೆ. ಇದು ಸಾಮಾನ್ಯ ಪತ್ರಿಕೋದ್ಯಮದ ಭಾಷೆಯಲ್ಲ, ಬದಲಿಗೆ ಕಮ್ಯುನಿಸ್ಟ್ ಕೇಡರ್ ಅಥವಾ ಮಾರ್ಕ್ಸ್‌ವಾದಿ ಕ್ರೋಢೀಕರಣದ ಸ್ಪಷ್ಟ ಭಾಷೆಯಾಗಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಚೀನಾದ ಮಾನವ ಹಕ್ಕುಗಳ ತೀವ್ರ ದೌರ್ಜನ್ಯದ ಬಗ್ಗೆ ಸಂಪೂರ್ಣ ಮೌನ ವಹಿಸುವ ಈಕೆ, ಭಾರತದ ಸುದ್ದಿಗೋಷ್ಠಿಯಲ್ಲಿ ಮಾತ್ರ 2002ರ ಗುಜರಾತ್ ಗಲಭೆ ಮತ್ತು ಸಿಎಎ-ಎನ್‌ಆರ್‌ಸಿ ಇತ್ಯಾದಿ ವಿಷಯಗಳನ್ನು ಮುಂದಿಟ್ಟುಕೊಂಡು ಪ್ರಧಾನಿಯವರನ್ನು ಸಾರ್ವಜನಿಕವಾಗಿ ಕೆರಳಿಸಲು ಮತ್ತು ಅಪಮಾನಿಸಲು ಯತ್ನಿಸಿದಳು.

ನೈಜ-ಸಮಯದಲ್ಲಿ ನಡೆದ ಪ್ರಚಾರದ ಜಾಲ

ಓಸ್ಲೋ ಪತ್ರಿಕಾಗೋಷ್ಠಿಯಲ್ಲಿ ಪ್ರಧಾನಿ ಮೋದಿ ತನ್ನ ಪ್ರಶ್ನೆಯನ್ನು ತೆಗೆದುಕೊಳ್ಳಲಿಲ್ಲ ಎಂದು ಹೆಲ್ಲೆ ಟ್ವೀಟ್ ಮಾಡಿದ ಕೆಲವೇ ನಿಮಿಷಗಳಲ್ಲಿ, ಭಾರತದ ಅತಿ ದೊಡ್ಡ ಇಂಗ್ಲಿಷ್ ದಿನಪತ್ರಿಕೆಗಳಲ್ಲೊಂದಾದ ದಿ ಹಿಂದೂ ಪತ್ರಿಕೆಯ ಹಿರಿಯ ಪತ್ರಕರ್ತೆ ಸುಹಾಸಿನಿ ಹೈದರ್ ಅದನ್ನು ಕೋಟ್-ಟ್ವೀಟ್ ಮಾಡಿದರು. ಜಗತ್ತಿಗೆ ಅಷ್ಟಾಗಿ ಪರಿಚಯವಿಲ್ಲದ, ಕೇವಲ ದಿನಗಳ ಹಿಂದಷ್ಟೇ ಸಕ್ರಿಯವಾಗಿದ್ದ ನಾರ್ವೇಯನ್ ಪತ್ರಕರ್ತೆಯ ಪೋಸ್ಟ್ ಅನ್ನು ಭಾರತೀಯ ಮಾಧ್ಯಮದ ಪ್ರಮುಖರು ನಿಮಿಷಗಳಲ್ಲೇ ಹಂಚಿಕೊಂಡಿದ್ದು ಆಕಸ್ಮಿಕವಲ್ಲ, ಬದಲಿಗೆ ಇದು ವ್ಯವಸ್ಥಿತ ಕಾರ್ಯಾಚರಣೆ. ಸೊರೊಸ್ ವಿದೇಶದಲ್ಲಿ ಪ್ರಚಾರ ಮಾಡುವುದನ್ನು ಭಾರತೀಯ ವಿರೋಧ ಪಕ್ಷಗಳು ದೇಶದೊಳಗೆ ಪ್ರತಿಧ್ವನಿಸುವ ಈ ಪೈಪ್‌ಲೈನ್ ಅತ್ಯಂತ ಸ್ಪಷ್ಟವಾಗಿದೆ.

ಭಾರತದ ನಾಗರಿಕತೆಯ ದಿಟ್ಟ ಉತ್ತರ: ಆಪರೇಷನ್ ಸಿಂದೂರ ಸಾಕ್ಷಿ

ಯಾರು ಭಾರತದ ಚಾರಿತ್ರ್ಯದ ಮೇಲೆ ಪ್ರಶ್ನಾರ್ಥಕ ಚಿಹ್ನೆಗಳನ್ನು ಮೂಡಿಸಲು ಮತ್ತು ಮಾಹಿತಿ ಯುದ್ಧ ನಡೆಸಲು ಯತ್ನಿಸುತ್ತಾರೋ ಅವರು ಭಾರತದ ಸಶಸ್ತ್ರ ಪಡೆಗಳ ಇತ್ತೀಚಿನ ಅತ್ಯಂತ ನಿರ್ಣಾಯಕ ಕಾರ್ಯಾಚರಣೆ ಆಪರೇಷನ್ ಸಿಂದೂರ ನೆನಪಿಸಿಕೊಳ್ಳುವುದು ಒಳಿತು.

ಭಾರತದ ಸಶಸ್ತ್ರ ಪಡೆಗಳು ಶತ್ರು ರಾಷ್ಟ್ರದ ಅತ್ಯಂತ ಆಳದ ಉಗ್ರಗಾಮಿ ಮೂಲಸೌಕರ್ಯಗಳ ಮೇಲೆ ವಾಯುದಾಳಿ ನಡೆಸುವಾಗ, ಉಗ್ರನೊಬ್ಬ ಸಾಮಾನ್ಯ ಮುಸ್ಲಿಂ ನಾಗರಿಕರೊಂದಿಗೆ ಮಸೀದಿಯೊಳಗೆ ನಮಾಜ್ ಪ್ರಾರ್ಥನೆ ಮಾಡುತ್ತಾ ಅಡಗಿಕೊಂಡಿದ್ದನ್ನು ಭಾರತದ ಸೇನೆ ಗುರುತಿಸಿತು.

ಭಾರತಕ್ಕೆ ಶಕ್ತಿಯಿದ್ದರೂ ಸಹ ಆ ಮಸೀದಿಯ ಮೇಲೆ ಬಾಂಬ್ ದಾಳಿ ನಡೆಸಲಿಲ್ಲ, ಇದು ಮಿಲಿಟರಿ ದೌರ್ಬಲ್ಯವಲ್ಲ, ಬದಲಿಗೆ ಇದು ಭಾರತದ ಬೃಹತ್ ನಾಗರಿಕತೆಯ ಸಂಯಮ (ಸಿವಿಲೈಸೇಷನಲ್ ರಿಸ್ಟ್ರೈಂಟ್). ಅಫ್ಘಾನಿಸ್ತಾನ, ಇರಾಕ್, ಲಿಬಿಯಾ ಅಥವಾ ಸಿರಿಯಾಗಳಲ್ಲಿ ಇಡೀ ನಗರಗಳನ್ನೇ ಬಾಂಬ್ ಹಾಕಿ ಧ್ವಂಸಗೊಳಿಸಿದ ಅಮೆರಿಕ ಅಥವಾ ಯಾವುದೇ ಪಾಶ್ಚಿಮಾತ್ಯ ಸೇನೆಗಳು ಇಂತಹ ನಾಗರಿಕ ಸಂಯಮವನ್ನು ತನ್ನ ಇತಿಹಾಸದಲ್ಲಿ ಎಂದಾದರೂ ತೋರಿದ್ದಿವೆಯೇ?

ಭಾರತವು ಯುದ್ಧ ಮತ್ತು ಪ್ರೀತಿಯಲ್ಲಿ ಎಲ್ಲವೂ ನ್ಯಾಯಸಮ್ಮತ ಎಂಬ ಪಾಶ್ಚಿಮಾತ್ಯ ಸಿದ್ಧಾಂತವನ್ನು ನಂಬುವುದಿಲ್ಲ, ಬದಲಿಗೆ ಯಾವುದು ನಿಜವಾಗಿಯೂ ಧರ್ಮ ಮತ್ತು ನ್ಯಾಯವೋ ಅದು ಯುದ್ಧ ಮತ್ತು ಪ್ರೀತಿ ಎರಡರಲ್ಲೂ ನ್ಯಾಯಸಮ್ಮತವಾಗಿಯೇ ಇರಬೇಕು ಎಂದು ಭಾರತ ನಂಬುತ್ತದೆ. ಸಕ್ರಿಯ ಯುದ್ಧದ ಪರಿಸ್ಥಿತಿಯಲ್ಲೂ ಶತ್ರು ದೇಶದ ಮಸೀದಿಯ ಮೇಲೆಯೇ ದಾಳಿ ಮಾಡದ ಭಾರತಕ್ಕೆ, ಸೊರೊಸ್ ಆಗಲಿ ಅಥವಾ ಓಸ್ಲೋದ ಸೊರೊಸ್ ಕಾಂಟ್ರ್ಯಾಕ್ಟರ್ ಪತ್ರಕರ್ತೆಯಾಗಲಿ ಮಾನವ ಹಕ್ಕುಗಳ ಪಾಠ ಮಾಡುವ ಯಾವುದೇ ಅಗತ್ಯವಿಲ್ಲ. ಭಾರತವು ತನ್ನ ಶತ್ರು ರಾಷ್ಟ್ರವಾದ ಪಾಕಿಸ್ತಾನವನ್ನು ಸಹ ವಸುಧೈವ ಕುಟುಂಬಕಂ(ಜಗತ್ತೇ ಒಂದು ಕುಟುಂಬ) ಎಂಬ ನಾಗರಿಕ ದೃಷ್ಟಿಕೋನದಿಂದಲೇ ನೋಡುತ್ತದೆ.

ಕೊಳಕು ಆಖ್ಯಾನ(ನರೇಟಿವ್)ಗಳ ಸೈಟೇಶನ್ ಲಾಂಡ್ರಿಂಗ್ ಜಾಲ

ಮಾಧ್ಯಮಗೋಷ್ಠಿಯ ವಿವಾದದ ನಂತರ ಹೆಲ್ಲೆ ಬಿಬಿಸಿ(ಹಿಂದಿ) ವಾಹಿನಿಯ ಪತ್ರಕರ್ತ ನಿತಿನ್ ಶ್ರೀವಾಸ್ತವರಿಗೆ ನೀಡಿದ ಸಂದರ್ಶನದಲ್ಲಿ ಭಾಗಿಯಾದಳು. ಅಲ್ಲಿ ತಾನು ಭಾರತದ ವಿರುದ್ಧ ಹೊರಿಸಿದ ಮಾನವ ಹಕ್ಕುಗಳ ಉಲ್ಲಂಘನೆಯ ಆರೋಪಕ್ಕೆ ಮತ್ತು ತನ್ನ ಕಾರ್ಯಾಚರಣೆಯನ್ನು ಸಮರ್ಥಿಸಿಕೊಳ್ಳಲು ಮೂರು ಪ್ರಮುಖ ಸಂಸ್ಥೆಗಳನ್ನು ಉಲ್ಲೇಖಿಸಿದಳು: ಅಮ್ನೆಸ್ಟಿ ಇಂಟರ್‌ನ್ಯಾಷನಲ್, ಹ್ಯೂಮನ್ ರೈಟ್ಸ್ ವಾಚ್ ಮತ್ತು ವರ್ಲ್ಡ್ ಫ್ರೀಡಂ ಇಂಡೆಕ್ಸ್.

1. ಬಿಬಿಸಿ - ಅಪರಾಧ ಹಿನ್ನೆಲೆ ಹೊಂದಿರುವ ಆಂಟಿ

ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್(ಬಿಬಿಸಿ) ತನ್ನನ್ನು ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಮಾಧ್ಯಮವೆಂದು ಕರೆದುಕೊಂಡರೂ, ಅದರ ಇತಿಹಾಸ ಬೇರೆಯದೇ ಇದೆ. ಶೀತಲ ಸಮರದ ಕಾಲದ ಮಾಹಿತಿ ಯುದ್ಧದ ಕಾರ್ಯಾಚರಣೆಗಳಲ್ಲಿ ಬ್ರಿಟಿಷ್ ಗುಪ್ತಚರ ಇಲಾಖೆಯು ಬಿಬಿಸಿಗೆ ಆಂಟಿ ಎಂಬ ಆಪರೇಷನಲ್ ಕೋಡ್ ನೇಮ್ ನೀಡಿತ್ತು. ಅಂದರೆ ಗೌರವಾನ್ವಿತ ಮುಖವಾಡದ ಹಿಂದೆ ತೀವ್ರ ರಾಜಕೀಯ ಒಳಸಂಚುಗಳನ್ನು ಅಡಗಿಸಿಡುವ ಸಂಸ್ಥೆ.

ಸರ್ಕಾರಗಳನ್ನು ಉರುಳಿಸಿದ ಇತಿಹಾಸ: 1953ರಲ್ಲಿ ಇರಾನ್ ಪ್ರಧಾನಿ ಮೊಹಮ್ಮದ್ ಮೊಸದ್ದೆಕ್ ಅವರ ಪ್ರಜಾಪ್ರಭುತ್ವ ಸರ್ಕಾರವನ್ನು ಜಂಟಿಯಾಗಿ ಉರುಳಿಸಲು ಸಿಐಎ ಮತ್ತು ಎಂಐ6 ನಡೆಸಿದ ಆಪರೇಷನ್ ಅಜಾಕ್ಸ್‌ನಲ್ಲಿ ಬಿಬಿಸಿ ಪರ್ಷಿಯನ್ ಸೇವೆಯನ್ನು ಸಂಕೇತಗಳನ್ನು ರವಾನಿಸಲು ಮತ್ತು ಪ್ರದೂಷಕ ಪ್ರಚಾರಕ್ಕಾಗಿ ಬಳಸಿಕೊಳ್ಳಲಾಗಿತ್ತು. ಬಿಬಿಸಿ ಕೇವಲ ವೀಕ್ಷಕನಲ್ಲ, ಅದು ಆಡಳಿತ ಬದಲಾವಣೆಯ ರಾಜಕೀಯ ಉಪಕರಣವಾಗಿತ್ತು.

ಲೈಂಗಿಕ ಹಗರಣಗಳ ತಾಣ: ಭಾರತಕ್ಕೆ ಮಾನವೀಯ ಮೌಲ್ಯಗಳ ಪಾಠ ಮಾಡುವ ಬಿಬಿಸಿಯ ಸ್ವಂತ ಸಾಂಸ್ಥಿಕ ಇತಿಹಾಸ ಕಳಂಕಿತವಾಗಿದೆ. ನೂರಾರು ಮಕ್ಕಳ ಮೇಲೆ ದಶಕಗಳ ಕಾಲ ತೀವ್ರ ಲೈಂಗಿಕ ಶೋಷಣೆ ಮತ್ತು ದೌರ್ಜನ್ಯ ನಡೆಸಿದ ಜಿಮ್ಮಿ ಸ್ಯಾವಿಲ್ ಮತ್ತು ಸ್ಟುವರ್ಟ್ ಹಾಲ್‌ನಂತಹ ಪ್ರಮುಖ ಪ್ರೆಸೆಂಟರ್‌ಗಳನ್ನು ಬಿಬಿಸಿ ಮ್ಯಾನೇಜ್‌ಮೆಂಟ್ ದಶಕಗಳ ಕಾಲ ರಕ್ಷಿಸಿತ್ತು. ಇತ್ತೀಚೆಗೆ ಅದರ ಪ್ರಮುಖ ಸುದ್ದಿ ನಿರೂಪಕ ಹುವ್ ಎಡ್ವರ್ಡ್ಸ್ ಅಪ್ರಾಪ್ತರಿಗೆ ಲೈಂಗಿಕ ಚಿತ್ರಗಳಿಗಾಗಿ ಹಣ ನೀಡಿ ಸಿಕ್ಕಿಬಿದ್ದು ರಾಜೀನಾಮೆ ನೀಡಿದ್ದಾರೆ. ತೆರಿಗೆ ವಂಚನೆ ಮತ್ತು ಪಕ್ಷಪಾತ: ಭಾರತದಲ್ಲಿ ದಶಕಗಳ ಕಾಲ ತೆರಿಗೆ ನಿಯಮಗಳನ್ನು ಉಲ್ಲಂಘಿಸಿ, ಆದಾಯ ತೆರಿಗೆ ಇಲಾಖೆಯ ಸರ್ವೇ ನಡೆಸಿದ ನಂತರವಷ್ಟೇ ತೆರಿಗೆ ಪಾವತಿಗೆ ಒಪ್ಪಿಕೊಂಡ ಇತಿಹಾಸ ಬಿಬಿಸಿಗೆ ಇದೆ. ಬ್ರಿಟನ್‌ನ ಮುಸ್ಲಿಂ ಸಂಘಟನೆಗಳೇ ಬಿಬಿಸಿ ವಿರುದ್ಧ ಇಸ್ಲಾಮೋಫೋಬಿಯಾ ಮತ್ತು ಮುಸ್ಲಿಂ ವಿರೋಧಿ ಪಕ್ಷಪಾತದ ಆರೋಪ ಹೊರಿಸಿದ್ದರೂ, ಅದು ಭಾರತದಲ್ಲಿ ಮಾತ್ರ ಮುಸ್ಲಿಮರ ರಕ್ಷಕನಂತೆ ನಟಿಸುತ್ತದೆ.

2. ಅಮ್ನೆಸ್ಟಿ ಇಂಟರ್‌ನ್ಯಾಷನಲ್ - ಮಾನವ ಹಕ್ಕುಗಳ ಹೆಸರಿನಲ್ಲಿ ರಾಜತಾಂತ್ರಿಕ ದಾಳ

ಅಮ್ನೆಸ್ಟಿ ಇಂಟರ್‌ನ್ಯಾಷನಲ್ ತನ್ನನ್ನು ತಟಸ್ಥ ಎಂದು ಕರೆದುಕೊಂಡರೂ, ಅದರ ಧನಸಹಾಯದ ರಚನೆ ಅದರ ರಾಜಕೀಯ ನಿಲುವನ್ನು ಸ್ಪಷ್ಟಪಡಿಸುತ್ತದೆ. ಇದು ಸೊರೊಸ್‌ನ ಓಪನ್ ಸೊಸೈಟಿ ಫೌಂಡೇಶನ್ ಮತ್ತು ಅಮೆರಿಕದ ವಿದೇಶಾಂಗ ನೀತಿಯ ಉದ್ದೇಶಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವ ನ್ಯಾಷನಲ್ ಎಂಡೋಮೆಂಟ್ ಫಾರ್ ಡೆಮಾಕ್ರಸಿ(ಎನ್‌ಇಡಿ)ಗಳಿಂದ ಭಾರಿ ಪ್ರಮಾಣದ ಹಣವನ್ನು ಪಡೆಯುತ್ತದೆ.

ಭಾರತದಲ್ಲಿ ವಿದೇಶಿ ಹಣದ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಮತ್ತು ಕಾನೂನುಗಳನ್ನು ವ್ಯವಸ್ಥಿತವಾಗಿ ಉಲ್ಲಂಘಿಸಿ ರಾಜಕೀಯ ಪ್ರಚಾರಗಳನ್ನು ನಡೆಸಿದ್ದಕ್ಕಾಗಿ ಭಾರತ ಸರ್ಕಾರ ಇದರ ವಿರುದ್ಧ ಕಾನೂನು ಕ್ರಮ ಜರುಗಿಸಿದಾಗ, ಅದು 2020ರಲ್ಲಿ ಭಾರತದಲ್ಲಿ ಕಾರ್ಯಾಚರಣೆ ನಿಲ್ಲಿಸಿ ತಾನು ಸಂತ್ರಸ್ತೆ ಎಂದು ಜಾಗತಿಕ ಮಾಧ್ಯಮಗಳಲ್ಲಿ ಸುಳ್ಳು ಪ್ರಚಾರ ಹರಡಿತು. ಕಾಶ್ಮೀರಿ ಪಂಡಿತರ ಜನಾಂಗೀಯ ಹತ್ಯೆ ಅಥವಾ ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳ ಬಗ್ಗೆ ಅಮ್ನೆಸ್ಟಿ ಎಂದಿಗೂ ಯಾವುದೇ ವರದಿ ನೀಡುವುದಿಲ್ಲ.

3. ಹ್ಯೂಮನ್ ರೈಟ್ಸ್ ವಾಚ್ - ಭಾರತದ ಮೇಲಿನ ಆರ್ಥಿಕ ಭಯೋತ್ಪಾದನೆ

ಹ್ಯೂಮನ್ ರೈಟ್ಸ್ ವಾಚ್ ಸಂಸ್ಥೆಯು ಸೊರೊಸ್ ನೆಟ್‌ವರ್ಕ್‌ನೊಂದಿಗೆ ನೇರ ಹಣಕಾಸು ಸಂಪರ್ಕ ಹೊಂದಿದೆ. ಸೊರೊಸ್ 2010ರಲ್ಲಿ ಈ ಒಂದೇ ಸಂಸ್ಥೆಗೆ ಬರೋಬ್ಬರಿ 100 ಮಿಲಿಯನ್ ಡಾಲರ್ ದೇಣಿಗೆ ನೀಡಿದ್ದರು, ಇದು ಆ ಸಂಸ್ಥೆಯ ಇತಿಹಾಸದಲ್ಲೇ ಅತಿ ದೊಡ್ಡ ದೇಣಿಗೆಯಾಗಿತ್ತು. ಇದರ ಕಾರ್ಯಕಾರಿ ನಾಯಕತ್ವವು ಸೊರೊಸ್ ಸಂಸ್ಥೆಗಳ ಬೋರ್ಡ್‌ಗಳಲ್ಲಿ ಮುಂಚೂಣಿಯಲ್ಲಿದೆ. ಹ್ಯೂಮನ್ ರೈಟ್ಸ್ ವಾಚ್ ಭಾರತದ ವರದಿಗಳು ಸಂಪೂರ್ಣ ದ ವೈರ್, ಸ್ಕ್ರಾಲ್‌ನಂತಹ ಭಾರತ ವಿರೋಧಿ ಆ್ಯಕ್ಟಿವಿಸ್ಟ್ ಜಾಲಗಳ ಮಾಹಿತಿಯನ್ನೇ ಅವಲಂಬಿಸಿರುತ್ತವೆ.


4. ವರ್ಲ್ಡ್ ಪ್ರೆಸ್ ಫ್ರೀಡಂ ಇಂಡೆಕ್ಸ್ - ಯುರೋಪಿಯನ್ನರಿಂದ ಯುರೋಪಿಯನ್ನರಿಗಾಗಿ ತಯಾರಾದ ರಿಪೋರ್ಟ್ ಕಾರ್ಡ್

ಪ್ಯಾರಿಸ್ ಮೂಲದ ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ನೀಡುವ ಈ ರೇಟಿಂಗ್ ಅತ್ಯಂತ ಅಪಾರದರ್ಶಕ ಮತ್ತು ಪಕ್ಷಪಾತದಿಂದ ಕೂಡಿದೆ. ಇದರ ರೇಟಿಂಗ್‌ಗಳು ಯಾವುದೇ ವಸ್ತುನಿಷ್ಠ ಮಾಪನಗಳ ಮೇಲೆ ಆಧಾರಿತವಾಗಿಲ್ಲ, ಬದಲಿಗೆ ಪಾಶ್ಚಿಮಾತ್ಯ ಉದಾರವಾದಿ ಮಾಧ್ಯಮಗಳ ಪರಿಸರದಲ್ಲಿರುವ ಆಯ್ದ ಪ್ರತಿಕ್ರಿಯೆ ನೀಡುವವರ ಸರ್ವೇಗಳ ಆಧಾರಿತ. ಭಾರತವನ್ನು ಈ ಸೂಚ್ಯಂಕವು ಮಾಧ್ಯಮ ಸ್ವಾತಂತ್ರ್ಯವೇ ಇಲ್ಲದ ಸಣ್ಣ ಸರ್ವಾಧಿಕಾರಿ ದೇಶಗಳಿಗಿಂತಲೂ ಕೆಳಗಿನ ಸ್ಥಾನದಲ್ಲಿ ನಿಲ್ಲಿಸುತ್ತದೆ.

ಭಾರತೀಯ ಸಂಪರ್ಕ: ರಾಹುಲ್ ಗಾಂಧಿ, ದ ವೈರ್ ಮತ್ತು ರಾಣಾ ಅಯ್ಯೂಬ್

ಗ್ಲಿಸ್ಸೋ ಜಾಗತಿಕ ಜಾಲವು ವಿದೇಶಿ ನೆಲದಲ್ಲಿ ಮಾತ್ರ ಒಂಟಿಯಾಗಿ ಕೆಲಸ ಮಾಡುವುದಿಲ್ಲ, ಅದಕ್ಕೆ ಭಾರತದ ರಾಜಕೀಯದೊಳಗೂ ಸ್ಥಳೀಯ ಪಾಲುದಾರರಿದ್ದಾರೆ. ಹೆಲ್ಲೆ ಲಿಂಗ್‌ನ ಇಂಟರ್‌ನೆಟ್ ಸಂಪರ್ಕಗಳನ್ನು ಗಮನಿಸಿದರೆ ಭಾರತದ ಒಳಗಿನ ಪ್ರಚಾರ ವ್ಯವಸ್ಥೆಯ ಕೊಂಡಿಗಳು ಸ್ಪಷ್ಟವಾಗಿ ದಾಖಲಾಗಿವೆ:

ಟ್ವಿಟರ್ ಸಂಪರ್ಕಗಳು: ಈಕೆಯ ವೆರಿಫೈಡ್ ಫಾಲೋವರ್‌ಗಳಲ್ಲಿ ಭಾರತದ ತೀವ್ರ ಸರ್ಕಾರಿ ವಿರೋಧಿ ನಿಲುವಿನ ಕಮೆಂಟೇಟರ್ ರಾಣಾ ಅಯ್ಯೂಬ್ ಇದ್ದಾರೆ. ರಾಣಾ ಅಯ್ಯೂಬ್ ವಾಷಿಂಗ್ಟನ್ ಪೋಸ್ಟ್, ಟೈಮ್ ಮ್ಯಾಗಜೀನ್, ಮತ್ತು ದಿ ಗಾರ್ಡಿಯನ್‌ನಂತಹ ಬಿಜೆಪಿ ಸರ್ಕಾರದ ವಿರುದ್ಧ ನಿರಂತರ ಹಗೆತನದ ಧೋರಣೆ ಹೊಂದಿರುವ ಮಾಧ್ಯಮಗಳಲ್ಲಿ ಬರೆಯುತ್ತಾರೆ. ಇದರೊಂದಿಗೆ ಹೆಲ್ಲೆ ಭಾರತದ ವಿವಾದಿತ ಡಿಜಿಟಲ್ ಮಾಧ್ಯಮ ದ ವೈರ್ ಅನ್ನು ಫಾಲೋ ಮಾಡುತ್ತಾಳೆ. ಇವು ಯಾವುದೇ ಯಾದೃಚ್ಛಿಕ ಸಂಪರ್ಕಗಳಲ್ಲ, ಬದಲಿಗೆ ಅಂತಾರಾಷ್ಟ್ರೀಯ ಮಟ್ಟದ ಭಾರತ ವಿರೋಧಿ ನಕಾರಾತ್ಮಕ ಆಖ್ಯಾನದ (ನರೇಟಿವ್) ಪ್ರಮುಖ ನೋಡ್‌ಗಳಾಗಿವೆ.




ರಾಹುಲ್ ಗಾಂಧಿ ಸಂದರ್ಶನದ ಪ್ರಯತ್ನ

ಭಾರತದ ವಿದ್ಯಮಾನಗಳ ಬಗ್ಗೆ ಮೊದಲ ಬಾರಿಗೆ ವರದಿ ಮಾಡುವ ಈ ವಿದೇಶಿ ಪತ್ರಕರ್ತೆಯ ಮೊದಲ ಆಲೋಚನೆ ಮತ್ತು ಪ್ರವೃತ್ತಿ ಭಾರತದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಂದರ್ಶನ ಕೋರುವುದಾಗಿತ್ತು. ಇದು ಮುಂಚಿತವಾಗಿ ಸಿದ್ಧವಾಗಿದ್ದ ಚಿತ್ರಕಥೆ ಮತ್ತು ನಿಗದಿಪಡಿಸಿದ ಪಾತ್ರ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅಲ್ಪಸಂಖ್ಯಾತರ ಕಿರುಕುಳ, ಪ್ರಜಾಪ್ರಭುತ್ವದ ಹಿನ್ನಡೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಈ ಭಾಷೆಯು ಸೊರೊಸ್ ತನ್ನ ಹೇಳಿಕೆಗಳಲ್ಲಿ ಬಳಸುವ ಮತ್ತು ರಾಹುಲ್ ಗಾಂಧಿ ತಮ್ಮ ವಿದೇಶಿ ಪ್ರವಾಸಗಳಲ್ಲಿ ಪುನರಾವರ್ತಿಸುವ ಟಾಕಿಂಗ್ ಪಾಯಿಂಟ್‌ಗಳೊಂದಿಗೆ ಸಂಪೂರ್ಣ ಹೊಂದಿಕೆಯಾಗುತ್ತದೆ.

ಭಾರತ ತನ್ನ ಶಕ್ತಿ ಅರಿಯಬೇಕಾದ ಸಮಯ

ಓಸ್ಲೋದಲ್ಲಿ ನಡೆದ ಈ ಘಟನೆಯು ಜಾಗತಿಕವಾಗಿ ಭಾರತದ ವಿರುದ್ಧ ಹೂಡಲಾಗಿರುವ ಬೃಹತ್ ಸೈದ್ಧಾಂತಿಕ ಸಮರದ ಒಂದು ಸಣ್ಣ ಕದನವಷ್ಟೇ. ಸೊರೊಸ್ ಅನುದಾನಿತ ಮತ್ತು ಕಮ್ಯುನಿಸ್ಟ್ ಸಹಾನುಭೂತಿ ಹೊಂದಿರುವ ಪತ್ರಕರ್ತೆಯನ್ನು ಭಾರತದ ಪ್ರಧಾನಿಯನ್ನು ವಿದೇಶಿ ನೆಲದಲ್ಲಿ ಮುಜುಗರಕ್ಕೀಡುಮಾಡಲು ಅತ್ಯಂತ ಸೂಕ್ಷ್ಮವಾಗಿ ನಿಯೋಜಿಸಲಾಗಿತ್ತು. ಆಕೆಯ ಖಾತೆಯನ್ನು ಸಕ್ರಿಯಗೊಳಿಸಲಾಗಿತ್ತು, ಬ್ಲೂ ಟಿಕ್ ಖರೀದಿಸಲಾಗಿತ್ತು ಮತ್ತು ಭಾರತದ ಒಳಗಿನ ಹಾಗೂ ಜಾಗತಿಕ ಆಪರೇಟರ್‌ಗಳು ಸ್ಟ್ಯಾಂಡ್‌ಬೈನಲ್ಲಿ ಸಿದ್ಧರಾಗಿದ್ದರು. ಭಾರತವು ಇಂತಹ ನೂರಾರು ದಾಳಿಗಳನ್ನು ಯಶಸ್ವಿಯಾಗಿ ಮೆಟ್ಟಿ ನಿಂತಿದೆ ಮತ್ತು ಮುಂದೆಯೂ ನಿಲ್ಲಲಿದೆ. ಈ ಗ್ಲಿಸ್ಸೋ ಜಾಲವು 2020ರ ಕೋವಿಡ್ ಬಿಕ್ಕಟ್ಟು, ಸಿಎಎ ಪ್ರತಿಭಟನೆ ಮತ್ತು ದೆಹಲಿಯ ರೈತರ ಪ್ರತಿಭಟನೆಗಳ ಸಂದರ್ಭದಲ್ಲಿ ಏಕಕಾಲಕ್ಕೆ ಭಾರತದಾದ್ಯಂತ ಇಂತಹದ್ದೇ ಸಂಚುಗಳನ್ನು ನಡೆಸಿ ವಿಫಲವಾಗಿತ್ತು. ಆದರೆ, ಕೇವಲ ಬದುಕುಳಿಯುವುದೇ ವಿಜಯವಲ್ಲ, ಓಸ್ಲೋದಂತಹ ಪ್ರತಿಯೊಂದು ಘಟನೆಯೂ ಶತ್ರುಗಳಿಗೆ ಭಾರತದ ರಾಜತಾಂತ್ರಿಕ ವ್ಯವಸ್ಥೆಯ ಸಣ್ಣ ದೌರ್ಬಲ್ಯಗಳನ್ನು ಪರಿಚಯಿಸುತ್ತವೆ. ಭಾರತದ ರಾಜತಾಂತ್ರಿಕ ವ್ಯವಸ್ಥೆಯು ಕೇವಲ ಯೋಗ ಅಥವಾ ಸಾಫ್ಟ್ ಪವರ್ ವಿಷಯಗಳ ಬಗ್ಗೆ ಮಾತನಾಡುತ್ತಾ ಕುಳಿತುಕೊಳ್ಳಬಾರದು. 145 ಕೋಟಿ ಜನಸಂಖ್ಯೆ ಮತ್ತು ಜಗತ್ತಿನ ಅತಿ ಹಳೆಯ ಜೀವಂತ ನಾಗರಿಕತೆಯ ಸಾರ್ವಭೌಮ ಆತ್ಮವಿಶ್ವಾಸದೊಂದಿಗೆ ಭಾರತೀಯ ರಾಜತಾಂತ್ರಿಕರು ಇಂತಹ ಜಾಗತಿಕ ಒಳಸಂಚುಗಳನ್ನು ಅತ್ಯಂತ ಆಕ್ರಮಣಕಾರಿಯಾಗಿ ಗುರುತಿಸಿ, ಎದುರಿಸಲು ತರಬೇತಿ ಪಡೆಯಬೇಕಾಗಿದೆ. ಹೆಲ್ಲೆ ಎಂಬಾಕೆ ಈ ಜಾಗತಿಕ ನೆಟ್‌ವರ್ಕ್‌ನ ಕೇವಲ ಒಂದು ಅತ್ಯಂತ ಸಣ್ಣ ಉಪಕರಣ ಅಷ್ಟೇ. ಆದರೆ, ಆಕೆಯ ಮೂಲಕ ಈ ಇಡೀ ಜಾಗತಿಕ ಮಾಹಿತಿ ಯುದ್ಧದ ಅಪಾಯಕಾರಿ ವ್ಯವಸ್ಥೆ ಮತ್ತು ಅದರ ಕೊಂಡಿಗಳು ಈಗ ಜಗತ್ತಿನ ಮುಂದೆ ಸಂಪೂರ್ಣ ಬಹಿರಂಗಗೊಂಡಿವೆ ಮತ್ತು ದಾಖಲಾಗಿವೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	14	9	5	0	18	+0.783
ಗುಜರಾತ್ (Q)	14	9	5	0	18	+0.695
ಹೈದರಾಬಾದ್(Q)	14	9	5	0	18	+0.524
ರಾಜಸ್ಥಾನ (Q)	14	8	6	0	16	+0.189
ಪಂಜಾಬ್	14	6	6	1	15	+0.309
ಕೆಕೆಆರ್	13	6	6	1	13	+0.011
ಚೆನ್ನೈ	14	6	7	0	12	+0.016
ದಿಲ್ಲಿ	14	6	7	0	12	-0.871
ಮುಂಬೈ	14	4	10	0	8	-0.584
ಲಖನೌ	14	4	10	0	8	-0.740

ಕಿರುಸುದ್ದಿ

ಪಂಜಾಬ್‌ಗೆ ಭಾರೀ ಜಯ

• **ಲಖನೌ:** ಶ್ರೇಯಸ್ ಅಯ್ಯರ್ ಅವರ ಸ್ಫೋಟಕ ಶತಕದ ನೆರವಿನಿಂದ ಭರ್ಜರಿ ಗೆಲುವು ಸಾಧಿಸಿರುವ ಪಂಜಾಬ್ ಕಿಂಗ್ಸ್ 6 ಸೋಲುಗಳ ಸರಪಳಿ ಮುರಿದು ಹಾಕಿತಾದರೂ ಪ್ಲೇಆಫ್ ಗೇರಲಾಗಲಿಲ್ಲ. ಇದು ಐಪಿಎಲ್‌ನ ದ್ವಿತೀಯಾರ್ಧದ ಪಂದ್ಯಗಳಲ್ಲಿ ಪಂಜಾಬ್‌ಗೆ ಮೊದಲ ಗೆಲುವು ಮತ್ತು ಒಟ್ಟು ಏಳನೇ ಗೆಲುವು. ರಾಜಸ್ಥಾನ ಗೆದ್ದ ನಂತರ ಪಂಜಾಬ್ ಪಂದ್ಯಾವಳಿಯನ್ನು ಗೆಲುವಿನೊಂದಿಗೆ ಮುಗಿಸಿದಂತಾಗಿದೆ. ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಸೂಪರ್ ಜೇಂಟ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿತು. ಜೋಶ್ ಇಂಗ್ಲಿಸ್ 72, ಆಯುಷ್ ಬದೋನಿ 43 ಮತ್ತು ಅಬ್ದುಲ್ ಸಮದ್ 37 ರನ್ ಗಳಿಸಿದರು. ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 18 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿ ಪಂದ್ಯ ಗೆದ್ದಿತು. ನಾಯಕ ಶ್ರೇಯಸ್ ಅಯ್ಯರ್ ಅಜೇಯ 101 ರನ್ ಗಳಿಸಿದರು. ಪ್ರಭಸಿಮ್ರನ್ ಸಿಂಗ್ 69 ರನ್ ಗಳಿಸಿದರು. ಶ್ರೇಯಸ್ ಅಯ್ಯರ್ ಅವರಿಗಿದು ಐಪಿಎಲ್‌ನಲ್ಲಿ ಮೊದಲನೇ ಶತಕ. ಚೇಸಿಂಗ್ ವೇಳೆ ಮಿಂಚಿದ ಶ್ರೇಯದ ಜತೆಗೆ ನಾಯಕನಾಟವಾಡಿದ ಸಮಾಧಾನವೂ ಸಿಕ್ಕಿತು. ಪ್ರಭಸಿಮ್ರನ್ ಸಿಂಗ್ ಉತ್ತಮ ಬ್ಯಾಟಿಂಗ್ ಮಾಡಿದರು. ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಪರ ಜೋಶ್ ಇಂಗ್ಲಿಸ್ ಹೋರಾಟ ಮಾಡಿದರು. ಬೌಲಿಂಗ್‌ನಲ್ಲಿ ಶಮಿ 2 ವಿಕೆಟ್ ಪಡೆದರು. ಲಖನೌ ಜೇಂಟ್ಸ್ ಪರ ಮೊದಲ ಪಂದ್ಯವಾಡಿದ ಅರ್ಜುನ್ ತೆಂಡೂಲ್ಕರ್ ವಿಶೇಷ ಬೌಲಿಂಗ್‌ನೊಂದಿಗೆ ಮಿಂಚಿದರು. ಏಕೈಕ ವಿಕೆಟ್ ಪಡೆದರೂ, ಲಖನೌ ಪರ ಕಡಿಮೆ ರನ್ ಕೊಟ್ಟ ಆಟಗಾರ ಅನಿಸಿಕೊಂಡರು.

ಶ್ರೇಯಸ್ ಶತಕ: ಗುರಿ ಬೆನ್ನತ್ತುವಾಗ ಪಂಜಾಬ್‌ಗೆ ಉತ್ತಮ ಆರಂಭ ಸಿಗಲಿಲ್ಲ. ತಂಡದ ಪ್ರಮುಖ ಬ್ಯಾಟರ್ ಪ್ರಿಯಾಂಶ್ ಆರ್ಯ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಆದರೆ ಮತ್ತೊಂದೆಡೆ ಪ್ರಭಸಿಮ್ರನ್ ಉತ್ತಮ ಬ್ಯಾಟಿಂಗ್ ಮಾಡಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಕೊನೊಲಿ ಕೂಡ ಬೇಗನೇ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಶ್ರೇಯಸ್ ಅಯ್ಯರ್ ಪಂದ್ಯದುದ್ದಕ್ಕೂ ಮಿಂಚಿನಾಟದೊಂದಿಗೆ ಪಂದ್ಯ ಗೆಲ್ಲಿಸಿದರು. ಪ್ರಭಸಿಮ್ರನ್ 39 ಬಾಲ್‌ಗಳಲ್ಲಿ 7 ಬೌಂಡರಿ, 2 ಸಿಕ್ಸರ್‌ಗಳೊಂದಿಗೆ 69 ರನ್ ಗಳಿಸಿದರೆ, ಶ್ರೇಯಸ್ ಅಯ್ಯರ್ ಕೊನೆಯ ಬಾಲ್‌ವರೆಗೂ ಬ್ಯಾಟಿಂಗ್ ಮಾಡಿದ್ದು, 11 ಬೌಂಡರಿ, 5 ಸಿಕ್ಸರ್‌ಗಳೊಂದಿಗೆ 101★ ರನ್ ಬಾರಿಸಿದರು.

ಪಂದ್ಯದ ವೇಳೆಯೇ ಕ್ರಿಕೆಟಿಗ ಅಕ್ಷಯ್ ಸಾವು

• **ಬೆಂಗಳೂರು:** ಪಂದ್ಯ ಆಡುತ್ತಿದ್ದ ವೇಳೆ ಹೃದಯಾಘಾತದಿಂದ ಕರ್ನಾಟಕದ ಮಾಜಿ ರಣಜಿ ಆಟಗಾರ ಎಸ್.ಎಲ್. ಅಕ್ಷಯ್ ನಿಧನರಾದರು. ಶಿವಮೊಗ್ಗ ಅಕ್ಷಯ್ ಅವರಿಗೆ 39 ವಯಸಾಗಿತ್ತು. ಕರ್ನಾಟಕ ರಣಜಿ ತಂಡದ ಪರ ಆಡಿದ್ದ ಅಕ್ಷಯ್, ತಮ್ಮ ಕರಾರುವಕ್ಕಾದ ಬೌಲಿಂಗ್ ಮೂಲಕ ಗಮನ ಸೆಳೆದಿದ್ದರು. ರಣಜಿ ಮಾತ್ರವಲ್ಲದೇ ಕೆಪಿಎಲ್ ಟೂರ್ನಿಗಳಲ್ಲೂ ಉತ್ತಮ ಪ್ರದರ್ಶನ ನೀಡಿ ಹೆಸರು ಮಾಡಿದ್ದರು. ಕರ್ನಾಟಕ ಪರ ಅವರು 6 ಫಸ್ಟ್ ಕ್ಲಾಸ್, 3 ಲಿಸ್ಟ್ 'ಎ' ಹಾಗೂ 9 ಟಿ20 ಪಂದ್ಯಗಳನ್ನು ಆಡಿದ್ದರು. ಸಫೀಯರ್ ಕ್ರಿಕೆಟ್ ಕ್ಲಬ್ ಹಾಗೂ ಭಾರತ್ ಕ್ರಿಕೆಟ್ ಕ್ಲಬ್ ನಡುವಿನ ಥರ್ಡ್ ಡಿವಿಷನ್ ಪಂದ್ಯ ನಡೆಯುತ್ತಿತ್ತು. ಸಫೀಯರ್ ತಂಡದ ಪರ ಆಡುತ್ತಿದ್ದ ಅಕ್ಷಯ್, ನಾಲ್ಕು ಓವರ್ ಬೌಲಿಂಗ್ ಮಾಡಿದ್ದರು. ಬಳಿಕ ಸ್ಲಿಪ್‌ನಲ್ಲಿ ಫೀಲ್ಡಿಂಗ್ ಮಾಡುವಾಗ ಸುಸ್ತು ಕಾಣಿಸಿಕೊಂಡ ಹಿನ್ನೆಲೆ ಮೈದಾನದಿಂದ ಹೊರಬಂದು ವಿಶ್ರಾಂತಿ ಪಡೆದಿದ್ದರು. ಬಾಳೆಹಣ್ಣು ಸೇವಿಸಿ ವಿಶ್ರಾಂತಿ ಕೊಠಡಿಗೆ ತೆರಳಿದ್ದ ಅಕ್ಷಯ್, ಕೆಲವೇ ಕ್ಷಣಗಳಲ್ಲಿ ಕುಸಿದು ಬಿದ್ದಿದ್ದಾರೆ. ತಕ್ಷಣ ಸ್ಥಳೀಯ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಆಸ್ಪತ್ರೆಗೆ ಹೋಗುವಷ್ಟರಲ್ಲಿ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಅವರ ಸಾವಿಗೆ ಕೆಎಸ್‌ಸಿಎ ಆಡಳಿತ ಮಂಡಳಿ, ಹಾಲಿ ಮಾಜಿ ಕ್ರಿಕೆಟಿಗರು ಸಂತಾಪ ಸೂಚಿಸಿದ್ದಾರೆ.

ಮುಂಬೈ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನಕ್ಕೆ ಗೆಲುವು | 16 ಅಂಕಗಳೊಂದಿಗೆ ರಾಯಲ್ ಎಂಟ್ರಿ

ಪಂಜಾಬ್ ಮನೆಗೆ ಆರ್‌ಆರ್ ಪ್ಲೇಆಫ್‌ಗೆ

• **ಮುಂಬೈ:** ಹತ್ತಾರು ಆಟಗಾರರ ಪರಿಶ್ರಮ, ಸಾವಿರಾರು ಅಭಿಮಾನಿಗಳ ಕುತೂಹಲ ಮತ್ತು ನೂರಾರು ತಿರುವುಗಳ ನಂತರ ಪ್ಲೇಆಫ್‌ಗೇರುವ 4 ತಂಡಗಳು ಖಚಿತವಾಗಿವೆ. ಮುಂಬೈ ತಂಡದ ವಿರುದ್ಧ 30 ರನ್‌ಗಳಿಂದ ಗೆಲುವು ಸಾಧಿಸಿದ ನಂತರ 16 ಅಂಕ ಗಳಿಸಿರುವ ರಾಯಲ್ಸ್, ನಾಲ್ಕನೇ ಸ್ಥಾನ ಪಡೆದುಕೊಂಡಿದ್ದು, ಪ್ಲೇಆಫ್‌ಗೇರಿತು. ಈ ಪಂದ್ಯದ ನಂತರ ಪಂಜಾಬ್ ಮತ್ತು ಕೆಕೆಆರ್ ತಂಡಗಳು ಅಧಿಕೃತವಾಗಿ ಹೊರಬಿದ್ದವು.

ಭಾನುವಾರದ ಮಹತ್ವದ ಪಂದ್ಯದಲ್ಲಿ ತಂಡದ ಸಾಂಘಿಕ ಬೌಲಿಂಗ್ ಮತ್ತು ಸಾಂಘಿಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ ರಾಜಸ್ಥಾನ ಮುಂಬೈ ಮೇಲೆ ಪ್ರಾಬಲ್ಯ ಸಾಧಿಸಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ರಿಯಾನ್ ಪಡೆ ಧ್ರುವ್ ಜುರೇಲ್ 38, ದಾಸುನ್ ಶಣಕ 29 ಮತ್ತು ಜೋಫ್ರಾ ಆರ್ಚರ್ 32 ರನ್‌ಗಳ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿತು. ಮುಂಬೈ ಪರ ದೀಪಕ್, ಶಾರ್ದೂಲ್ ತಲಾ 2 ವಿಕೆಟ್ ಪಡೆದುಕೊಂಡರೆ, ಜ್ಯಾಕ್ಸ್, ಘಜನ್‌ಫರ್ ಮತ್ತು ಬಾಷ್ ತಲಾ ಒಂದು ವಿಕೆಟ್ ಕಿತ್ತರು.

ಗುರಿ ಬೆನ್ನತ್ತಿದ ಮುಂಬೈ 9 ವಿಕೆಟ್ ನಷ್ಟಕ್ಕೆ 175 ರನ್ ಮಾತ್ರ ಗಳಿಸಲು ಶಕ್ತವಾಯಿತು. ಸೂರ್ಯಕುಮಾರ್ ಯಾದವ್ 60 ರನ್, ವಿಲ್ ಜ್ಯಾಕ್ಸ್ 33 ಮತ್ತು ಹಾರ್ದಿಕ್ ಪಾಂಡ್ಯ 34 ರನ್ ಗಳಿಸಿದರು. ರಾಜಸ್ಥಾನ ಪರ ಜೋಫ್ರಾ ಆರ್ಚರ್ 17/3, ನಾಂದ್ರೆ ಬರ್ಗರ್ 43/2, ಬ್ರಿಜೇಶ್ 26/2 ಮತ್ತು ಯಶ್ ರಾಜ್ 44/2 ವಿಕೆಟ್ ಪಡೆದುಕೊಂಡರು.

ಬ್ಯಾಟಿಂಗ್ ವೇಳೆ 32 ರನ್‌ಗಳಿಸಿ ಸ್ಕೋರ್ ಹಿಗ್ಗಿಸಿರುವ ಜೋಫ್ರಾ ಆರ್ಚರ್, ಬೌಲಿಂಗ್ ವೇಳೆ 3 ವಿಕೆಟ್ ಕಿತ್ತಿ ಗೆಲುವಿನ ರೂವಾರಿ ಅನಿಸಿಕೊಂಡರು. ಸೂರ್ಯಕುಮಾರ್ ಯಾದವ್ 60 ರನ್ ಗಳಿಸಿ ಪಂದ್ಯದಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಅನಿಸಿಕೊಂಡರು.

ಪಂದ್ಯದಲ್ಲಿ ಏನಾಯ್ತು?: ಬ್ಯಾಟಿಂಗ್‌ಗಿಳಿದ ರಾಜಸ್ಥಾನಕ್ಕೆ ದೊಡ್ಡ ಆಘಾತದಲ್ಲಿ ವೈಭವ್ ಸೂರ್ಯವಂಶಿ 4 ರನ್‌ಗೆ ವಿಕೆಟ್ ಒಪ್ಪಿಸಿದರು. ಜೈಸ್ವಾಲ್, ಧ್ರುವ್ ಜುರೇಲ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಆದಾಗ್ಯೂ ಜೈಸ್ವಾಲ್ 27ಕ್ಕೆ ಔಟಾದರು. ಮಧ್ಯಮ ಕ್ರಮಾಂಕದಲ್ಲಿ ರಿಯಾನ್ 14 ರನ್ ಮಾತ್ರಕ್ಕೆ ವಿಕೆಟ್ ಒಪ್ಪಿಸಿದ ನಂತರ ಪವರ್ ಪ್ಲೇನಲ್ಲಿ ಆರ್‌ಆರ್ 53 ರನ್‌ಗೆ 3 ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ದಾಸುನ್ ಶಣಕ ಆಸರೆಯಾದರು. ಜುರೇಲ್ 38 ರನ್‌ಗೆ ವಿಕೆಟ್ ಒಪ್ಪಿಸಿದರು. ಫೆರೇರಾ 18 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ತಂಡ ಒತ್ತಡಕ್ಕೆ ಸಿಲುಕಿಕೊಂಡಿತು. ಶಣಕ ಆಟವೂ 29ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಓವರ್‌ಗಳಲ್ಲಿ ರಾಜಸ್ಥಾನ 93/3 ಗಳಿಸಿತು.

ಡೆತ್ ಓವರ್‌ನಲ್ಲಿ ಆರ್ಚರ್ ಬ್ಯಾಟಿಂಗ್‌ಗಿಳಿದವರೆ ಸ್ಫೋಟಕ ಹೊಡೆತಗಳೊಂದಿಗೆ ಅಬ್ಬರಿಸಿದರು. ಕೊನೆಯ ಓವರ್‌ಗಳಲ್ಲಿ ಜಡೇಜಾ ಕೂಡ ಮಿಂಚಿದರು. ಆರ್ಚರ್ 32 ರನ್ ಪಂದ್ಯದ ತಿರುವು ಬದಲಿಸಿದರೆ, ಜಡೇಜಾ 19, ನಾಂದ್ರೆ ಬರ್ಗರ್ 10 ರನ್‌ಗಳಿಸಿ ತಂಡದ ಸ್ಕೋರ್ ಅನ್ನು 200ರ ಗಡಿ ದಾಟಿಸಿದರು.

ಆರ್ಚರ್ ಅಬ್ಬರ: ಗುರಿ ಬೆನ್ನತ್ತುವಾಗ ಮುಂಬೈ ಭಾರೀ ಕುಸಿತ ಕಂಡಿತು. ಶರ್ಮ ಶೂನ್ಯಕ್ಕೆ, ನಮನ್ 6 ರನ್‌ಗೆ ಮತ್ತು ರಯಾನ್ 12 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ಕೊಂಚ ಹೊತ್ತು ಆಸರೆಯಾದರು. ಅವರಿಗೆ ಹಾರ್ದಿಕ್ ಮತ್ತು ವಿಲ್ ಜ್ಯಾಕ್ಸ್ ಸಾಥ್ ಕೊಟ್ಟರು. ಆದರೆ ಮುಂಬೈ ಪಡೆಯ ಬೆವರಿಳಿಸಿದ ಜೋಫ್ರಾ ಆರ್ಚರ್ 3 ಪ್ರಮುಖ ವಿಕೆಟ್‌ಗಳನ್ನು ಪಡೆದರು. ಬ್ರಿಜೇಶ್ ಶರ್ಮ ಕೂಡ ಉತ್ತಮ ಬೌಲಿಂಗ್ ಮಾಡಿ 2 ವಿಕೆಟ್ ಪಡೆದರೆ, ಬರ್ಗರ್ ಹಾಗೂ ಯಶ್ 2 ವಿಕೆಟ್ ಪಡೆದರು. ಸೂರ್ಯ ಹೋರಾಟ 60 ರನ್‌ಗೆ ನಿಂತಿತು. ಪಾಂಡ್ಯ 34, ಜ್ಯಾಕ್ಸ್ 33 ರನ್ ಗಳಿಸಿದರು.



ಸಂಕ್ಷಿಪ್ತ ಸ್ಕೋರ್
• ರಾಜಸ್ಥಾನ 20 ಓವರ್‌ಗಳಲ್ಲಿ 205/8: ಜುರೇಲ್ 38, ಆರ್ಚರ್ 32; ಶಾರ್ದೂಲ್ 41/2
• ಮುಂಬೈ 20 ಓವರ್‌ಗಳಲ್ಲಿ 175/9: ಸೂರ್ಯ 60, ಹಾರ್ದಿಕ್ 34; ಆರ್ಚರ್ 17/3

ಆರ್‌ಆರ್ ಅರ್ಹ
ಕ್ವಾಲಿಫೈಯರ್ 1ರಲ್ಲಿ ಬೆಂಗಳೂರು ಮತ್ತು ಗುಜರಾತ್ ತಂಡಗಳು ಮುಖಾಮುಖಿಯಾಗಲಿವೆ. ಆದರೆ ಹೈದರಾಬಾದ್ ವಿರುದ್ಧ ಎಲಿಮಿನೇಟರ್‌ನಲ್ಲಿ ಆಡುವವರು ಯಾರು ಎಂಬ ಅಭಿಮಾನಿಗಳ ಪ್ರಶ್ನೆಗೆ ಉತ್ತರ ಸಿಕ್ಕಿದಂತಾಗಿದೆ. ಲೀಗ್ ಹಂತದ ಕೊನೆಯ ಪಂದ್ಯಗಳ ಸಮಯದಲ್ಲಿ ಆ ನಾಲ್ಕನೇ ಸ್ಥಾನಕ್ಕಾಗಿ ಪಂಜಾಬ್, ಆರ್‌ಆರ್, ದಿಲ್ಲಿ, ಕೆಕೆಆರ್ ಮತ್ತು ಚೆನ್ನೈ ತಂಡಗಳು ಪೈಪೋಟಿಯಲ್ಲಿದ್ದವು. ಮೊದಲಿನ ಮೂರು ಸ್ಥಾನಗಳೂ ಈ ಮೊದಲೇ ನಿರ್ಧಾರವಾಗಿದ್ದರೂ, ನಾಲ್ಕನೇ ತಂಡದ ಖಚಿತತೆಗೆ ಕೊನೆ ಲೀಗ್ ಪಂದ್ಯದವರೆಗೂ ಕಾಯಬೇಕಾಯಿತು. ಕೊನೆಯ ವಾರದಲ್ಲಿ ಆರ್‌ಆರ್‌ಗೆ ಮಾತ್ರವೇ 16 ಅಂಕ ಗಳಿಸುವ ಅವಕಾಶ ಸಿಕ್ಕಿತು. ಪಂಜಾಬ್ 15 ಅಂಕ ಗಳಿಸಿದರೆ, ಚೆನ್ನೈ-ದಿಲ್ಲಿ 12 ಅಂಕಗಳೊಂದಿಗೆ ಹೊರನಡೆದವು. ರನ್‌ರೇಟ್ ಆಟಕ್ಕೂ ಮುನ್ನವೇ ರಾಜಸ್ಥಾನ ಅಂಕಗಳಲ್ಲಿ ಮೇಲುಗೈ ಸಾಧಿಸಿದೆ.

ಪ್ಲೇಆಫ್ ಆಡಿಸುವುದು ಹೇಗೆ?
ಮಂಗಳವಾರ ಬೆಂಗಳೂರು-ಗುಜರಾತ್ ನಡುವೆ ಕ್ವಾಲಿಫೈಯರ್ ನಡೆದರೆ, ಬುಧವಾರದಂದು ಹೈದರಾಬಾದ್-ರಾಜಸ್ಥಾನ ನಡುವೆ ಎಲಿಮಿನೇಟರ್ ನಡೆಯುತ್ತದೆ. ಕ್ವಾಲಿಫೈಯರ್ ಗೆಲ್ಲುವ ತಂಡವು ನೇರವಾಗಿ ಫೈನಲ್‌ಗೇರುತ್ತದೆ. ಅಂದರೆ, ಮಂಗಳವಾರ ಫೈನಲ್ ಆಡುವ ಒಂದು ತಂಡ ಖಚಿತವಾಗಲಿದೆ. ಎಲಿಮಿನೇಟರ್‌ನಲ್ಲಿ ಹೈದರಾಬಾದ್ ಮತ್ತು ರಾಜಸ್ಥಾನ ತಂಡಗಳು ಎದುರಾಗುತ್ತವೆ. ಸೋತವರು ಮನೆಗೆ ಹೋದರೆ, ಗೆದ್ದವರು ಎರಡನೇ ಕ್ವಾಲಿಫೈಯರ್‌ನಲ್ಲಿ ಆಡುತ್ತಾರೆ. ಅಲ್ಲಿ ಗೆದ್ದವರು ಕ್ವಾಲಿಫೈಯರ್ ಒಂದರ ವಿಜೇತರೊಂದಿಗೆ ಫೈನಲ್ ಆಡುತ್ತಾರೆ.

ನಾಳೆಯಿಂದ ಆರಂಭ | ಮೂರು ದಿನಗಳವರೆಗೂ ಕೂಟ

ಪ್ಯಾರಾ ಅಥ್ಲೆಟಿಕ್ಸ್‌ಗೆ ಬೆಂಗಳೂರು ಸಿದ್ಧ

• **ಬೆಂಗಳೂರು:** ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗಾಗಿ ಭಾರತೀಯ ಅಥ್ಲೀಟ್‌ಗಳ ಆಯ್ಕೆ ಪ್ರಕ್ರಿಯೆಯಾಗಿ, ಈಗಾಗಲೇ ಆಯ್ಕೆಯಾದವರಿಗೆ ಸಿದ್ಧತಾ ಭಾಗವಾಗಿ ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ ಆಶ್ರಯದಲ್ಲಿ 8ನೇ ಆವೃತ್ತಿಯ ಭಾರತೀಯ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಅಂತಾರಾಷ್ಟ್ರೀಯ ಚಾಂಪಿಯನ್‌ಶಿಪ್ ಮಂಗಳವಾರದಿಂದ ಗುರುವಾರದವರೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. 3 ದಿನಗಳ ಕಾಲ ನಡೆಯಲಿರುವ ಚಾಂಪಿಯನ್‌ಶಿಪ್‌ನಲ್ಲಿ ಭಾರತ ಸೇರಿ ಒಟ್ಟು 5 ರಾಷ್ಟ್ರಗಳ ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಭಾನುವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ ಅಧ್ಯಕ್ಷ ದೇವೇಂದ್ರ ಝುಝಾರಿಯಾ ಅವರು ಚಾಂಪಿಯನ್‌ಶಿಪ್ ಬಗ್ಗೆ ಮಾಹಿತಿ ನೀಡುತ್ತಾ, ಚಾಂಪಿಯನ್‌ಶಿಪ್‌ನಲ್ಲಿ ಭಾರತದ 341 ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಪ್ಯಾರಾಲಿಂಪಿಕ್ಸ್, ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್, ಏಷ್ಯನ್ ಪ್ಯಾರಾ ಗೇಮ್ಸ್ ಪದಕ ವಿಜೇತರು ಕೂಟದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಐದು ರಾಷ್ಟ್ರಗಳಿಂದ ಅಥ್ಲೀಟ್‌ಗಳು ಸ್ಪರ್ಧೆ: ಎರಡು ಬಾರಿ ಪ್ಯಾರಾಲಿಂಪಿಕ್ಸ್ ಹಾಗೂ ಮೂರು ಬಾರಿ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಚಿನ್ನ ವಿಜೇತ ಜಾವೆಲಿನ್ ಪಟು ಸುಮಿತ್ ಅಂಟಿಲ್ ಚಾಂಪಿಯನ್‌ಶಿಪ್‌ನ ಪ್ರಮುಖ ಆಕರ್ಷಣೆ ಅನಿಸಿಕೊಳ್ಳಲಿದ್ದಾರೆ. ಇದರ ಜೊತೆಗೆ ಕಿರ್ಗಿಸ್ತಾನ, ಫಿಲಿಪ್ಪೀನ್ಸ್, ಶ್ರೀಲಂಕಾ, ಥಾಯ್ಲೆಂಡ್‌ನ ಸ್ಪರ್ಧಿಗಳೂ ಭಾಗವಹಿಸಲಿದ್ದಾರೆ. ಅಫ್ಘಾನಿಸ್ತಾನದ ಕೆಲ ಸ್ಪರ್ಧಿಗಳೂ ಕೂಟದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.



» ಭಾರತ ಸೇರಿ 5 ರಾಷ್ಟ್ರಗಳ ಒಟ್ಟು 350 ಪ್ಯಾರಾ ಅಥ್ಲೀಟ್‌ಗಳು ಭಾಗಿ

» ಪ್ಯಾರಾ ಏಷ್ಯನ್ ಗೇಮ್ಸ್‌ಗೆ ಆಯ್ಕೆ ಪ್ರಕ್ರಿಯೆ

ಪದಕದ ನಿರೀಕ್ಷೆ: ಸುಮಿತ್
ಸುಮಿತ್ ಅಂಟಿಲ್ ಅವರು ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳು ಹಿಂದೆಂದಿಗಿಂತ ಈ ವರ್ಷ ಹೆಚ್ಚಿನ ಪದಕ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಭಾರತ 108 ಪದಕಗಳನ್ನು ಗೆದ್ದಿತ್ತು. ಈ ಬಾರಿ ಭಾರತೀಯ ಕ್ರೀಡಾಪಟುಗಳು ಮತ್ತಷ್ಟು ಪದಕ ಸಾಧನೆ ಮಾಡಲಿದ್ದಾರೆ ಎಂದು ಭರವಸೆ ವ್ಯಕ್ತಪಡಿಸಿದರು.

ಯವ್ಯಾವ ಸ್ಪರ್ಧೆ ಇರಲಿವೆ?: ಚಾಂಪಿಯನ್‌ಶಿಪ್‌ನಲ್ಲಿ 100 ಮೀಟರ್, 200 ಮೀಟರ್, 400 ಮೀಟರ್, 800 ಮೀಟರ್, 1500 ಮೀಟರ್, ಹೈ ಜಂಪ್, ಲಾಂಗ್ ಜಂಪ್, ಡಿಸ್ಕಸ್ ಎಸೆತ, ಶಾಟ್‌ಪುಟ್, ಜಾವೆಲಿನ್ ಥ್ರೋ, ಕ್ಲಬ್ ಥ್ರೋ ಸೇರಿದಂತೆ ಪುರುಷ ಹಾಗೂ ಮಹಿಳೆಯರ ಒಟ್ಟು 155 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಚಾಂಪಿಯನ್ ಪಟ್ಟ

ಬೆಂಗಳೂರಿನ ಸೃಷ್ಟಿಗೆ ಜೂನಿಯರ್ ಕಿರೀಟ

• **ಬೆಂಗಳೂರು:** ಬೆಂಗಳೂರಿನ ಯುವ ಟೆನಿಸ್ ಪ್ರತಿಭೆ ಸೃಷ್ಟಿ ಕಿರಣ್ ಮತ್ತೊಮ್ಮೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ್ದು, ಎಲ್ ಸಾಲ್ವಡೊರ್‌ನ ಸಾಂಟಾ ಟೆಕ್ಲಾದಲ್ಲಿ ನಡೆದ ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಫಾರ್ ಜೂನಿಯರ್ಸ್ ಜೆ-60 ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು ಸತತ ಐದನೇ ಐಟಿಎಫ್ ಜೂನಿಯರ್ ಸಿಂಗಲ್ಸ್ ಟೈಟಲ್ ತಮ್ಮದಾಗಿಸಿಕೊಂಡಿದ್ದಾರೆ.

ಕೇವಲ 13 ವರ್ಷದ ಸೃಷ್ಟಿ, ಟೂರ್ನಿಯಿಡೀ ಒಂದು ಸೆಟ್ ಕೂಡ ಕಳೆದುಕೊಳ್ಳದೆ ಭರ್ಜರಿ ಪ್ರದರ್ಶನ ನೀಡಿ ವಿಶ್ವ ಟೆನಿಸ್ ಪ್ರಿಯರ ಗಮನ ಸೆಳೆದರು. ಫೈನಲ್‌ನಲ್ಲಿ ಕೆನಡಾದ ಈವ್ ತಿಬಾಲ್ಟ್ ವಿರುದ್ಧ 7-5, 6-1 ನೇರ ಸೆಟ್‌ಗಳಲ್ಲಿ ಗೆದ್ದು ಚಾಂಪಿಯನ್ ಪಟ್ಟ ಅಲಂಕರಿಸಿದರು.

ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದ ಸೃಷ್ಟಿ, ಎರಡನೇ ಸುತ್ತಿನಲ್ಲಿ ಪ್ಯೂರ್ಟೋ ರಿಕೋದ ವ್ಯಾಲೆಂಟಿನಾ ಫುವೆಂಟೆಸ್ ಬಿಜಿಯೋ ಅವರನ್ನು 6-0, 6-0 ಅಂತರದಲ್ಲಿ ಮಣಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಆತಿಥೇಯ ದೇಶದ ಕಾಮಿಲಾ ಮೊರಟಾಯಾ ವಿರುದ್ಧ 6-4, 6-1 ಜಯ ಸಾಧಿಸಿದ ಅವರು, ಸೆಮಿಫೈನಲ್‌ನಲ್ಲಿ ಅಮೆರಿಕದ ಮಿಲ್ಡಾಲಿನ್ ಡಾಗುಯ್ಲರ್ ವಿರುದ್ಧ 6-2, 6-3 ಅಂತರದಲ್ಲಿ ಗೆದ್ದರು. ಇದಕ್ಕೂ ಮೊದಲು ಮೆಕ್ಸಿಕೋದ ಹುಮಾಂಟ್ಲಾದಲ್ಲಿ ನಡೆದ ಐಟಿಎಫ್ ಜೆ-30 ಟೂರ್ನಿಯಲ್ಲೂ ಸೃಷ್ಟಿ ಪ್ರಶಸ್ತಿ ಗೆದ್ದಿದ್ದರು. ಅಲ್ಲಿ ಫೈನಲ್‌ನಲ್ಲಿ ಕೆನಡಾದ ನಟಾಲಿ ತಾತ್ಸಲಾಶ್ವಿಲಿ ವಿರುದ್ಧ 6-4, 6-1 ಅಂತರದಲ್ಲಿ ಜಯಿಸಿದ್ದರು. ಕಳೆದ ವರ್ಷ ಡೊಮಿನಿಕನ್ ರಿಪಬ್ಲಿಕ್‌ನಲ್ಲಿ ನಡೆದ ಐಟಿಎಫ್ ಜೆ30 ಟೂರ್ನಿಯಲ್ಲಿ ಮೊದಲ ಅಂತರರಾಷ್ಟ್ರೀಯ ಪ್ರಶಸ್ತಿ ಗೆದ್ದ ಬಳಿಕ ಶ್ರೀಷ್ಟಿ ನಿರಂತರವಾಗಿ ಉತ್ತಮ ಪ್ರದರ್ಶನ ನೀಡುತ್ತಾ ಜೂನಿಯರ್ ಟೆನಿಸ್‌ನಲ್ಲಿ ವೇಗವಾಗಿ ಮುನ್ನಡೆಯುತ್ತಿದ್ದಾರೆ.



ಗ್ರ್ಯಾಂಡ್‌ಸ್ಲಾಮ್ ಗುರಿ: ಪ್ರಸ್ತುತ ಫ್ಲೋರಿಡಾದ ಆರ್‌ಪಿಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಸೃಷ್ಟಿ, ಐಟಿಎಫ್ ಸರ್ಕ್ಯೂಟ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವುದು ಸಂತಸ ತಂದಿದೆ. ನನ್ನ ಶ್ರೇಯಾಂಕ ಹೆಚ್ಚಿಸಿ 2027ರಲ್ಲಿ ಜೂನಿಯರ್ ಗ್ರ್ಯಾಂಡ್ ಸ್ಲಾಮ್ ಪ್ರವೇಶಿಸುವ ಗುರಿಯಿದೆ. ಮುಂದಿನ ವರ್ಷಗಳಲ್ಲಿ ಜೂನಿಯರ್ ಗ್ರ್ಯಾಂಡ್ ಸ್ಲಾಮ್ ಹಾಗೂ ಗ್ರ್ಯಾಂಡ್ ಸ್ಲಾಂ ಪ್ರಶಸ್ತಿಗಳನ್ನು ಗೆದ್ದು ಭಾರತಕ್ಕೆ ಕೀರ್ತಿ ತರುವ ಕನಸಿದೆ, ಎಂದು ತಿಳಿಸಿದ್ದಾರೆ.

ಕೆಕೆಆರ್‌ಗೆ ಡಿಸಿಯ 204 ರನ್ ಗುರಿ

• **ಕೋಲ್ಕತ್ತಾ:** ಔಪಚಾರಿಕ ಪಂದ್ಯದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಸ್ಫೋಟಕ ಬ್ಯಾಟಿಂಗ್ ಮಾಡಿ ಮಿಂಚಿದ್ದು, ದಿಲ್ಲಿ ಕ್ಯಾಪಿಟಲ್ಸ್, ಕೆಕೆಆರ್‌ಗೆ ಕಠಿಣ ಗುರಿ ನೀಡಿದೆ. ರಾಜಸ್ಥಾನ ಗೆದ್ದ ನಂತರ ಕೆಕೆಆರ್ ಮತ್ತು ದಿಲ್ಲಿ ನಡುವಿನ ಪಂದ್ಯ ಕೇವಲ ಔಪಚಾರಿಕವಾಯಿತು. ಟಾಸ್ ಗೆದ್ದ ಕೆಕೆಆರ್ ಬೌಲಿಂಗ್ ಆಯ್ಕೆ ಮಾಡಿಕೊಂಡಿತು.



ಬ್ಯಾಟಿಂಗ್‌ಗಿಳಿದ ದಿಲ್ಲಿ ರಾಹುಲ್(60), ಪೋರೆಲ್(22) ಅವರಿಂದ ಉತ್ತಮ ಆರಂಭ ಪಡೆಯಿತು. ಮಧ್ಯಮ ಕ್ರಮಾಂಕದಲ್ಲಿ ಸಾಹಿಲ್ ಪಾರಖ್(24), ಅಕ್ಷರ್ ಪಟೇಲ್ (39) ರನ್ ಗಳಿಸಿದರು. ಅಂತಿಮದಲ್ಲಿ ಡೇವಿಡ್ ಮಿಲ್ಲರ್ ಸ್ಫೋಟಕ ಬ್ಯಾಟಿಂಗ್ ಮಾಡಿದ್ದು, 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 203 ರನ್ ಗಳಿಸಿದೆ.

ರಾಹುಲ್ ಆಡಿದ 30 ಬಾಲ್‌ಗಳಲ್ಲಿ ಅಬ್ಬರದ ಅರ್ಧಶತಕ(60 ರನ್) ಬಾರಿಸಿದರು. ಇದೇ ಪಂದ್ಯದಲ್ಲಿ ಕಣಕ್ಕಿಳಿದ ಸಾಹಿಲ್ ಪಾರಖ್ 24 ರನ್ ಗಳಿಸಿದರು. ಮಧ್ಯಮ ಕ್ರಮಾಂಕದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಅಕ್ಷರ್ ಪಟೇಲ್ ಕೂಡ 25 ಬಾಲ್‌ಗಳಲ್ಲಿ 39 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಡೇವಿಡ್ 28 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಕೆಕೆಆರ್ ಪರ ಸೌರಭ್ 28/2, ವರುಣ್ 35/1, ಅನುಕುಲ್ 23/1 ಮತ್ತು ಸುನಿಲ್ ನರೈನ್ 38/1 ವಿಕೆಟ್ ಪಡೆದರು.

ಇಂದಿನಿಂದ ನಾರ್ವೆ ಚೆಸ್ ಪಂದ್ಯಾವಳಿ

• **ಹೊಸದಿಲ್ಲಿ:** ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರು, ತಮ್ಮ ವಿಶ್ವ ಚಾಂಪಿಯನ್ ಪಟ್ಟದ ರಕ್ಷಣೆಗೆ ಮುನ್ನ ಮತ್ತೆ ಲಯ ಕಂಡುಕೊಳ್ಳುವ ಉದ್ದೇಶದೊಂದಿಗೆ ಸೋಮವಾರ ಆರಂಭವಾಗಲಿರುವ ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿಯಲ್ಲಿ ಅಭಿಯಾನ ಆರಂಭಿಸಲಿದ್ದಾರೆ.


ಈ ಬಾರಿಯ ಟೂರ್ನಿಯ ಪ್ರಮುಖ ಆಕರ್ಷಣೆಯಾಗಿರುವ ಮಾಜಿ ವಿಶ್ವ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಜೊತೆಗೆ ಭಾರತದ ಯುವ ತಾರೆ ಆರ್. ಪ್ರಜ್ಞಾನಂದ ಕೂಡ ಸ್ಪರ್ಧಿಸಲಿದ್ದಾರೆ. ಓಸ್ಲೋ ನಗರದ ಸುಂದರ ಪರಿಸರ ಹಾಗೂ ಫಿಯೋರ್ಡ್ ಪ್ರದೇಶದ ನಡುವೆ ನಡೆಯಲಿರುವ ಈ ಟೂರ್ನಿಯಲ್ಲಿ ಚೊಚ್ಚಲ ಪ್ರಶಸ್ತಿ ಗೆಲ್ಲುವ ಕನಸಿನೊಂದಿಗೆ ಭಾರತ ಬಲಿಷ್ಠ ಪಡೆ ಕಣಕ್ಕಿಳಿಯುತ್ತಿದೆ.

ಜಾಗತಿಕ ಚದುರಂಗ ಶಕ್ತಿಯಾಗಿ ಹೊರಹೊಮ್ಮಿರುವ ಭಾರತಕ್ಕೆ ಈ ಬಾರಿ ನಾಲ್ವರು ಪ್ರತಿನಿಧಿಗಳಿದ್ದಾರೆ. ಮುಕ್ತ ವಿಭಾಗದಲ್ಲಿ ಡಿ. ಗುಕೇಶ್ ಮತ್ತು ಆರ್. ಪ್ರಜ್ಞಾನಂದ ಸ್ಪರ್ಧಿಸಲಿದ್ದರೆ, ಮಹಿಳಾ ವಿಭಾಗದಲ್ಲಿ ಕೊನೆರು ಹಂಪಿ ಹಾಗೂ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ದೇಶವನ್ನು ಪ್ರತಿನಿಧಿಸಲಿದ್ದಾರೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ

5994



ಎಡದಿಂದ ಬಲಕ್ಕೆ
1.ಮುಗಿಸು-ಪೂರ್ಣಗೊಳಿಸುವಿಕೆ (3)
3.ಹೊತ್ತಿದ ಬೆಂಕಿಯನ್ನು ಉಜ್ವಲಗೊಳಿಸು (4)
4.ಕರಿಯ ಮೈಯುಳ್ಳವನು-ಕೃಷ್ಣ (4)
6.ಕೃಷ್ಣಪಕ್ಷ-ಅಮವಾಸ್ಯೆಯಿದು (4)
8.ಇದು ವಾನರರ ಗುಂಪು (4)
10.ಗಣಿತದಲ್ಲಿ ಒಟ್ಟು ಮೊತ್ತವಿದು (3)
11.ಯಾತನೆಯಿಂದ ಸ್ನಾಯುಗಳು ಮಿಡಿಯುವಿಕೆ (3)
13.ಕೆಸರಲ್ಲಿ ಅರಳುವ ಸುಂದರ ಹೂವು (3)
15.ಜಂಗುತಿನ್ನು-ದೋಷಯುಕ್ತವಾಗು (4)
16.ಕುಟುಂಬದ ಗೌರವ ಹಾಳುಮಾಡುವವನು (4)

ಮೇಲಿನಿಂದ ಕೆಳಕ್ಕೆ
1.ತಿದ್ದಿ ಸರಿಪಡಿಸುವಿಕೆ (2)
2.ಕಾಣಿಸುತ್ತಿರುವ ದುಡ್ಡು ತಲೆಕೆಳಗಾಗಿದೆ (2)
3.ಪುಳಕದಿಂದ ಓದುತ್ತಿರುವ ಹೊತ್ತಗೆ (3)
5.ಹಣೆ-ನೊಸಲು (3)
7.ಅವಶ್ಯಕತೆಯ ಮೊದಲು ದೆವ್ವವಿದೆ (3)
9.ನೆಲವನ್ನು ಅಗೆಯುವ ಸಾಧನ (3)
10.ಇವು ಹಾರಿಕೆಯ ನುಡಿಗಳು (4)
12.ಪ್ರಕಟಗೊಳಿಸದಿರು-ಜಾರಿಗೊಳಿಸದಿರು (4)
13.ಪ್ರತಿಬಿಂಬ ತೋರಿಸುವ ಸಾಧನ (3)
14.ವಂಚನೆಯಿಂದ ಕೂಡಿದ್ದು ತಲೆಕೆಳಗಾಗಿದೆ (3)

5993 ಉತ್ತರ

ಎಡದಿಂದ ಬಲಕ್ಕೆ:
2.ತದ್ಭವ 5.ಪೋಲಿದನ
6.ಸಂಗಡಿಗ 9.ನರಿ 9.ವರ
10.ತರಂಗ 12.ತನುಜ
14.ಜಲದಾಗಮ
15.ದಶಕಂಠ 16.ಕರಿಜಾಲಿ
ಮೇಲಿನಿಂದ ಕೆಳಕ್ಕೆ
: 1.ಆಪೋಶನ
2.ಕೊನೆತನಕ
3.ವಸಂತಕಾಲ 4.ನಾಗಸ್ವರ
8.ರಂಗಾರಿ 9.ವಜನು
10.ತತ್ವಪದ 11.ಗಜ
12.ತಮ 13.ಜಯಶಾಲಿ

ವಿದ್ಯಾರ್ಥಿನಿ ಆತ್ಮಹತ್ಯೆ ಪ್ರಕರಣಕ್ಕೆ ಬಿಗ್ ಟ್ವಿಸ್ಟ್

ಪಿಯುಸಿ ಅಂಕಪಟ್ಟಿ ಬಿಚ್ಚಿಟ್ಟ ಅಸಲಿ ಸತ್ಯ

•**ಕಲಬುರಗಿ:** ನಗರದ ಖುಬಾ ಪ್ಲಾಟ್ ಬಡಾವಣೆಯ ಅಪಾರ್ಟ್‌ಮೆಂಟ್‌ನಲ್ಲಿ ಮೇ 2ರಂದು ನೀಟ್ ಪರೀಕ್ಷೆ ಬರೆದಿದ್ದ 18 ವರ್ಷದ ವಿದ್ಯಾರ್ಥಿನಿ ಭಾಗ್ಯಶ್ರೀ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಈಗ ತೀವ್ರ ಸ್ವರೂಪದ ತಿರುವು ಸಿಕ್ಕಿದೆ.



ಆರಂಭದಲ್ಲಿ 'ನೀಟ್' ಪರೀಕ್ಷೆಯ ಆತಂಕ ಅಥವಾ ನೀಟ್ ರದ್ದತಿ ಗೊಂದಲದಿಂದಲೇ ಮಗಳು ಮನನೊಂದು ಸಾವಿಗೆ ಶರಣಾಗಿದ್ದಾಳೆ ಎಂದು ಭಾವಿಸಲಾಗಿತ್ತು. ಆದರೆ, ಆಕೆಯ ದ್ವಿತೀಯ ಪಿಯುಸಿ ಅಂಕಪಟ್ಟಿ ಲಭ್ಯವಾದ ಬೆನ್ನಲ್ಲೇ ಆತ್ಮಹತ್ಯೆಯ ಅಸಲಿ ಕಾರಣವೇ ಬೇರೆ ಇರುವುದು ಬೆಳಕಿಗೆ ಬಂದಿದೆ.

ಮನೆಯವರಿಗೆ ಸುಳ್ಳು ಹೇಳಿ ಸಿಹಿ ಹಂಚಿದ್ದಳು! ಅಸಲಿಗೆ ಮೃತ ವಿದ್ಯಾರ್ಥಿನಿ ಭಾಗ್ಯಶ್ರೀ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲೇ ಉತ್ತೀರ್ಣಳಾಗಿರಲಿಲ್ಲ. ಆದರೆ, ತಾನು ಪಿಯುಸಿಯಲ್ಲಿ ಶೇ.92ರಷ್ಟು ಭರ್ಜರಿ ಅಂಕ ಗಳಿಸಿ ಪಾಸ್ ಆಗಿರುವುದಾಗಿ ಹೆತ್ತವರ ಮುಂದೆ ಸುಳ್ಳು ಹೇಳಿದ್ದಳು.ಅಷ್ಟೇ ಅಲ್ಲದೆ, ಇಡೀ ಬಡಾವಣೆಯಲ್ಲಿ ಸಿಹಿ ಹಂಚಿ ಸಂಭ್ರಮಿಸಿದ್ದಳು. ಮಗಳ ಮಾತನ್ನು ನಂಬಿದ ಹೆತ್ತವರು ಆಕೆಗೆ ನೀಟ್ ಪರೀಕ್ಷೆಗೂ ತಯಾರಿ ನಡೆಸಲು ಪ್ರೋತ್ಸಾಹಿಸಿದ್ದರು.

ಸಪ್ಲಿಮೆಂಟರಿಯಲ್ಲೂ ಕೈಕೊಟ್ಟ ಅದೃಷ್ಟ ಮೊದಲ ಪ್ರಯತ್ನದಲ್ಲಿ ಅನುತ್ತೀರ್ಣಳಾಗಿದ್ದ ಭಾಗ್ಯಶ್ರೀ, ಸಪ್ಲಿಮೆಂಟರಿ (ಪೂರಕ) ಪರೀಕ್ಷೆಯಲ್ಲಿ ಹೇಗಾದರೂ ಮಾಡಿ ಪಾಸ್ ಆಗೇ ತೀರುತ್ತೇನೆ ಎಂಬ ಭಾರಿ ನಿರೀಕ್ಷೆಯಲ್ಲಿದ್ದಳು. ಮೊದಲ ಬಾರಿ ಒಟ್ಟು 369 ಅಂಕ ಪಡೆದಿದ್ದ ಆಕೆ, ಸಪ್ಲಿಮೆಂಟರಿಯಲ್ಲಿ 365 ಅಂಕ ಗಳಿಸಿ ಮತ್ತೆ ಫೇಲ್ ಆಗಿದ್ದಾಳೆ.

ಆಕೆಯ ಅಂಕಪಟ್ಟಿಯ ಪ್ರಕಾರ, ಅತ್ಯಂತ ಆಘಾತಕಾರಿ ವಿಷಯವೆಂದರೆ ಗಣಿತ ವಿಷಯದಲ್ಲಿ ಇಂಟರ್ನಲ್ಸ್‌ನ 20 ಅಂಕಗಳು ಸೇರಿದಂತೆ ಒಟ್ಟು ಲಭ್ಯವಾಗಿರುವುದು ಕೇವಲ 24 ಅಂಕ ಮಾತ್ರ! ಅಂದರೆ, ಈಕೆ ಗಣಿತದ ಮುಖ್ಯ ಥಿಯರಿ ಪರೀಕ್ಷೆಯಲ್ಲಿ ಗಳಿಸಿದ್ದು ಕೇವಲ 4 ಅಂಕಗಳನ್ನು ಮಾತ್ರ. ಸಪ್ಲಿಮೆಂಟರಿ ಫಲಿತಾಂಶವೂ ಕೈಕೊಟ್ಟಿದ್ದರಿಂದ ಹೆತ್ತವರಿಗೆ ಮುಖ ತೋರಿಸಲಾಗದೆ, ತಾನು ಹೇಳಿದ ಸುಳ್ಳು ಎಲ್ಲಿ ಬಯಲಾಗುತ್ತದೋ ಎನ್ನುವ ತೀವ್ರ ಆತಂಕ ಹಾಗೂ ಮನೋವೇದನೆಗೆ ಒಳಗಾಗಿ ಆಕೆ ಈ ಘೋರ ನಿರ್ಧಾರ ಕೈಗೊಂಡಿರುವ ಸಾಧ್ಯತೆ ದಟ್ಟವಾಗಿದೆ.

ಸದ್ಯ ಕಲಬುರಗಿಯ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರ ಸೂಕ್ಷ್ಮ ತನಿಖೆಯ ನಂತರವಷ್ಟೇ ಆತ್ಮಹತ್ಯೆಯ ಹಿಂದಿನ ಸಂಪೂರ್ಣ ಸತ್ಯಾಸತ್ಯತೆ ಹೊರಬರಬೇಕಿದೆ.

ತನಿಖೆಯಿಂದ ಸತ್ಯ ಹೊರಬರಬೇಕಿದೆ

ಮಗಳ ಸಾವಿನಿಂದ ಕಣ್ಣೀರಲ್ಲಿ ಮುಳುಗಿರುವ ತಂದೆ ರಾಜಶೇಖರ್ ಪಾಟೀಲ್ ಮಾಧ್ಯಮಗಳ ಮುಂದೆ ಮಾತನಾಡಿ, ಮಗಳು ಕುಟುಂಬಸ್ಥರ ಜತೆ ಚೆನ್ನಾಗಿಯೇ ಇದ್ದಳು. ಪಿಯುಸಿಯಲ್ಲಿ ಶೇ.92 ರಿಸಲ್ಟ್ ಬಂದಿತ್ತು. ಇವಾಗ ಆಕೆಯೇ ಹೊರಟು ಹೋಗಿದ್ದಾಳೆ. ನಾವು ಯಾರ ಮೇಲೆ ದೂರು ಹೊರಿಸೋಣ? ಯಾರ ಮೇಲೆಯೂ ನಮಗೆ ಅಪಾದನೆ ಇಲ್ಲ ಎಂದು ಕಣ್ಣೀರು ಹಾಕಿದ್ದಾರೆ. ಹೆತ್ತವರನ್ನು ಸಂಪೂರ್ಣ ಗೊಂದಲಕ್ಕೆ ತಳ್ಳಿ ತಾನೂ ಸಾವಿನ ಮನೆ ಸೇರಿದ ಭಾಗ್ಯಶ್ರೀ ಪ್ರಕರಣ ಈಗ ಹಲವು ಪ್ರಶ್ನೆಗಳನ್ನು ಮೂಡಿಸಿದೆ. ಪಿಯುಸಿಯೇ ಪಾಸ್ ಆಗದ ವಿದ್ಯಾರ್ಥಿನಿ ನೀಟ್ ಕಾರಣಕ್ಕೆ ಜೀವ ಕಳೆದುಕೊಳ್ಳಲು ಸಾಧ್ಯವಿಲ್ಲ ಎಂಬುದು ಸದ್ಯಕ್ಕೆ ಸ್ಪಷ್ಟವಾಗಿದೆ.

ಸರ್ಕಾರಿ ಜಾಗೆ ಅತಿಕ್ರಮಣ | ಕಾಂಗ್ರೆಸ್ ಮುಖಂಡನ ವಿರುದ್ಧ ಆರೋಪ

13 ಜನರ ಮೇಲೆ ಪ್ರಕರಣ ದಾಖಲು

•**ಬಳ್ಳಾರಿ:** ಸರ್ಕಾರಿ ಸ್ಥಳವನ್ನು ಅತಿಕ್ರಮಣ ಮಾಡಿ ಬಡಜನರಿಗೆ ಲಕ್ಷ ಲಕ್ಷ ರೂ.ಗೆ ನಿವೇಶನ ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಹಾನಗರ ಪಾಲಿಕೆ ಕಾಂಗ್ರೆಸ್ ಸದಸ್ಯೆ ಉಮಾದೇವಿ ಅವರ ಪತಿ ಶಿವರಾಜ್ ಸೇರಿದಂತೆ 13 ಜನರ ಮೇಲೆ ನಗರದ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಶನಿವಾರ ರಾತ್ರಿ ಪ್ರಕರಣ ದಾಖಲಾಗಿದೆ.

ನಗರದ ಹೊರವಲಯದ ಪಾತ್ರ ಬೂದಿಹಾಳ ಪ್ರದೇಶದ ಸರ್ವೆ ನಂ.125ರಲ್ಲಿ 7.87 ಎಕರೆ ವಿಸ್ತೀರ್ಣದ ಸ್ಥಳವನ್ನು ಒತ್ತುವರಿ ಮಾಡಿದ ಪ್ರಕರಣಕ್ಕೆ ಸಂಬಂಸಿ ಜಿಲ್ಲಾಡಳಿತದ ಅಧಿಕಾರಿಗಳು ಜೆಸಿಬಿ ಮೂಲಕ ತೆರವುಗೊಳಿಸಿ, ಬಹುತೇಕ ಪ್ರಭಾವಗಳಿಗೆ ಬಿಸಿ ಮುಟ್ಟಿಸಿದ್ದರು. ಈ ವೇಳೆ ಮಹಾನಗರ ಪಾಲಿಕೆ ಕಾಂಗ್ರೆಸ್ ಸದಸ್ಯೆ ಉಮಾದೇವಿ ಅವರ ಪತಿ ಶಿವರಾಜ್ ಅವರು ಒತ್ತುವರಿ ಮಾಡಿ, ಬಡಜನರಿಗೆ ನಿವೇಶನಗಳನ್ನು ಮಾಡಿ, 1.50ರಿಂದ 2ಲಕ್ಷದ ವರೆಗೆ ಮಾರಾಟ ಮಾಡಿರುವ ಕುರಿತು ಆರೋಪಗಳು ಕೇಳಿ ಬಂದಿದ್ದವು. ಈ ಕುರಿತು ಲಕ್ಷ ಲಕ್ಷ ನೀಡಿ ನಿವೇಶನಗಳನ್ನು ಖರೀದಿಸಿದ ಜನರು, ಹಣವು ಇಲ್ಲ, ನಿವೇಶನವು ಇಲ್ಲ ಎಂದು ಅಧಿಕಾರಿಗಳ ಎದುರು ಅಳಲು ತೋಡಿಕೊಂಡಿದ್ದರು. ಇದು ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು.

ಹಣ ಪಡೆದ ವಿಡಿಯೋ ಸಾಮಾಜಿಕ ಜಾಲ ತಾಣದಲ್ಲಿ ಸಾಕಷ್ಟು ಹರಿದಾಡಿತ್ತು. ಜನರಿಗೆ ವಂಚನೆ, ಸರ್ಕಾರಿ ಜಮೀನು ಒತ್ತುವರಿ ಆರೋಪ ಹಿನ್ನೆಲೆ ಶಿವರಾಜ್ ಸೇರಿದಂತೆ 13 ಜನರ ವಿರುದ್ಧ ನಗರದ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿಚಾರಣೆ ಮುಂದುವರಿದಿದೆ.

ನನ್ನ ವಿರುದ್ಧ ಷಡ್ಯಂತ್ರ: ನಾನು ಯಾವತ್ತೂ ಸರ್ಕಾರಿ ಒಂದಿಂಚೂ ಜಮೀನನ್ನು ಒತ್ತುವರಿ ಮಾಡಿಲ್ಲ, ಅಂತಹ ಪ್ರಮೇಯವೆ ನನಗೆ ಬಂದಿಲ್ಲ ಎಂದು ಕಾಂಗ್ರೆಸ್ ಮುಖಂಡ ಶಿವರಾಜ್ ಅವರು ಆರೋಪಗಳನ್ನು ತಳ್ಳಿ ಹಾಕಿದರು.

ಕಳೆದ ಸುಮಾರು ವರ್ಷಗಳಿಂದ ರಾಜಕಾರಣದಲ್ಲಿರುವೆ. ಯಾವತ್ತೂ ಪಕ್ಷಕ್ಕೆ, ಸರ್ಕಾರಕ್ಕೆ ಕೆಟ್ಟ ಹೆಸರು ತಂದಿಲ್ಲ, ಈ ನಿವೇಶನ ಮಾರಾಟ ಪ್ರಕರಣವನ್ನು ನನ್ನ ಮೇಲೆ ಹಾಕಿ ರಾಜಕೀಯದಲ್ಲಿ ನನಗೆ ಕೆಟ್ಟ ಹೆಸರು ತರುವ ಹುನ್ನಾರವಿದು.

ನನ್ನ ರಾಜಕೀಯ ಏಳಿಗೆ ಸಹಿಸದ ಕೆಲವರು ಸೇರಿ ಮಾಡಿದ ಷಡ್ಯಂತ್ರ ಇದಾಗಿದೆ. ನಾನು ಯಾವುದೇ ತಪ್ಪು ಮಾಡಿಲ್ಲ, ಮಾಡೋದು ಇಲ್ಲ, ಯಾರು ನನ್ನ ಹತ್ರ ಬಂದು ಹಣ ನೀಡಿಲ್ಲ, ಹರಿದಾಡುತ್ತಿರುವ ಈ ವೀಡಿಯೋಗೂ ನನಗೂ ಸಂಬಂಧವಿಲ್ಲ ಎಂದರು.

ಧಾರಾಕಾರ ಮಳೆಗೆ ಮರಗಳು ಧರೆಗೆ

• **ವಿಜಯಪುರ:** ನಗರ ಸೇರಿದಂತೆ ಜಿಲ್ಲೆಯ ಕೆಲ ಭಾಗದಲ್ಲಿ ಶನಿವಾರ ರಾತ್ರಿ ಭಾರೀ ಮಳೆ, ಗಾಳಿ ಬೀಸಿದ್ದು, ಅಲ್ಲಲ್ಲಿ ಗಿಡ, ಮರಗಳು ಧರೆಗುರುಳಿವೆ.ನಗರದಲ್ಲಿ ಶನಿವಾರ ತಡ ಧಾರಾಕಾರ ಮಳೆ ಸುರಿದಿದೆ. ಜೋರಾಗಿ ಮಳೆ ಸುರಿಯುತ್ತಿದ್ದಂತೆ ನಗರದ ಹಲವು ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕಕ್ಕ ಕಡಿತಗೊಂಡಿದ್ದು, ಫ್ಯಾನ್, ಕೂಲರ್ ಬಂದ್ ಆಗಿದ್ದರಿಂದ ಜನರು ನಿದ್ರೆಯಿಲ್ಲದೆ ಪರದಾಡುವಂತಾಯಿತು.ಇನ್ನು ಜಿಲ್ಲೆಯ ಇಂಡಿ, ಸಿಂದಗಿ, ಬಸವನಬಾಗೇವಾಡಿ, ಬಬಲೇಶ್ವರ, ತಿಕೋಟಾ, ಮುದ್ದೇಬಿಹಾಳ ತಾಲೂಕಿನ ಭಾಗದಲ್ಲಿ ಜೋರಾದ ಮಳೆ, ಗಾಳಿಗೆ ಗಿಡ, ಮರಗಳ ರಂಬೆ, ಕೊಂಬೆ ಮುರಿದು ಬಿದಿದ್ದು, ಯಾವುದೇ ರೀತಿಯ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ, ಮುಂಗಾರು ಮುನ್ನ ಮಳೆ ಆರಂಭಗೊಂಡಿದ್ದು, ಜಿಲ್ಲೆಯ ಅನ್ನದಾತನ ಮೊಗದಲ್ಲಿ ಸಮಾಧಾನ ಮೂಡುವಂತಾಗಿದ್ದು, ರೈತ ವರ್ಗ ತಮ್ಮ ಜಮೀನಿನ ಕಡೆಗೆ ಮುಖ ಮಾಡುತ್ತಿದ್ದಾರೆ.

ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್‌ರಿಗೆ ರೂಪಾಲಿ ನಾಯ್ಕ ಸನ್ಮಾನ

•**ಕಾರವಾರ:** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಸನ್ಮಾನಿಸಿ ಗೌರವಿಸಿದರು.

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ರಾಷ್ಟ್ರೀಯ ಅಧ್ಯಕ್ಷರ ನೇತೃತ್ವದಲ್ಲಿ ನಡೆದ ರಾಜ್ಯದ ಬಿಜೆಪಿ ಶಾಸಕರು, ಪರಿಷತ್ ಸದಸ್ಯರು, ಸಂಸದರು ಹಾಗೂ ಪದಾಧಿಕಾರಿಗಳೊಂದಿಗೆ ಸಂಘಟನಾ ಸಭೆಯಲ್ಲಿ ಪಾಲ್ಗೊಂಡ ರೂಪಾಲಿ ಎಸ್. ನಾಯ್ಕ ನಿತಿನ್ ನಬಿನ್ ಅವರನ್ನು ಗೌರವಿಸಿದರು. ಈ ಸಂದರ್ಭದಲ್ಲಿ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರು, ಮಾಜಿ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರವರು, ರಾಜ್ಯ ಉಸ್ತುವಾರಿಗಳಾದ ಡಾ.ರಾಧಾ ಮೋಹನ್ ದಾಸ್ ಅಗರ್ವಾಲ್, ವಿಪಕ್ಷ ಪಕ್ಷದ ನಾಯಕರಾದ ಆರ್.ಅಶೋಕ್, ವಿಧಾನ ಪರಿಷತ್ತಿನ ವಿಪಕ್ಷ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಮತ್ತಿತರ ಪ್ರಮುಖ ನಾಯಕರು ಉಪಸ್ಥಿತರಿದ್ದರು.



ಮೂರಿನ ಕಟ್ಟೆ ಒಡೆದ ಮುಸ್ಲಿಮರು

ಭಟ್ಕಳ ಬೂದಿ ಮುಚ್ಚಿದ ಕೆಂಡ

•**ಭಟ್ಕಳ:** ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರು ಭಾನುವಾರ ಬೆಳಗ್ಗೆ ನಿರ್ಮಿಸಿದ ಮೂರಿನ ಕಟ್ಟೆಯನ್ನು ರಾತ್ರಿ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ ಮುಸ್ಲಿಂರು ಎಸ್ಪಿ ಎಂ.ದೀಪನ್ ಅವರ ಸಮ್ಮುಖದಲ್ಲೆ ಕಟ್ಟೆಯನ್ನು ಕೆಡವಿ ಹಾಕಿದ್ದು, ಭಟ್ಕಳದ ಸ್ಥಿತಿ ಬೂದಿ ಮುಚ್ಚಿದ ಕೆಂಡದಂತಾಗಿದೆ.

ಮುಂಜಾನೆ ಕಟ್ಟೆ ಕಟ್ಟುವ ವೇಳೆ ಆಕ್ಷೇಪ ಎತ್ತಿದ ಮುಸ್ಲಿಂ ಮುಖಂಡರನ್ನು ಭಟ್ಕಳ ಉಪವಿಭಾಗಾಧಿಕಾರಿ ಜೆ. ಮಹೇಶ ಸಮ್ಮುಖದಲ್ಲಿ ಸಭೆ ನಡೆಸಿ ಹೆದ್ದಾರಿ ಅಕ್ರಮಿತ ಜಾಗದಲ್ಲಿ ಕಟ್ಟೆ ನಿರ್ಮಿಸಲಾಗಿದ್ದು, ಅಪಘಾತ ತಡೆಯಲು ಹೆದ್ದಾರಿ ಅಗಲೀಕರಣ ಕಾಮಗಾರಿಗೆ ಎಲ್ಲರೂ ಸಹಕಾರ ನೀಡುವಂತೆ ಕೋರಿದ್ದರು.

ಆದರೆ, ಇದಕ್ಕೆ ಒಪ್ಪದ ಅನ್ಯಕೋಮಿನವರು ರಾತ್ರಿ ಸಾವಿರಾರು ಸಂಖ್ಯೆಯಲ್ಲಿ ಮೂರಿನಕಟ್ಟೆ ಬಳಿ ಹೆದ್ದಾರಿ ತಡೆ ನಡೆಸಿದರು. ಸ್ಥಳಕ್ಕೆ ಆಗಮಿಸಿದ ಎಸ್ಪಿ ಎಂ.ದೀಪನ್ ಹಾಗೂ ಡಿವೈಎಸ್ಪಿ ಗಿರೀಶ ಪ್ರತಿಭಟನಾಕಾರರನ್ನು ಸಮಧಾನಿಸುವ ವೇಳೆಯಲ್ಲಿಯೇ ಉದ್ರಿಕ್ತ ಯವಕರ ಗುಂಪೊಂದು ಕಬ್ಬಿಣದ ರಾಡಿನಿಂದ ಕಟ್ಟೆಯನ್ನು ಭಾಗಶಃ ತೆರವು ಮಾಡಿ ಅಲ್ಲಿಂದ ತೆರಳಿದ್ದಾರೆ. ಈ ಪ್ರಕರಣದಿಂದ ಭಟ್ಕಳ ಬೂದಿ ಮುಚ್ಚಿದ ಕೆಂಡದಂತಾಗಿದ್ದು, ಹಿಂದೂ ಸಂಘಟನೆಯವರು ಈ ಘಟನೆಯಿಂದ ಆಕ್ರೋಶಿತರಾಗಿದ್ದು, ಇಂದು ಭಟ್ಕಳ ಬಂದ್ ಮಾಡಿ ಪ್ರತಿಭಟನೆ ಮಾಡುವ ಸಾಧ್ಯತೆ ಇದೆ.

ಕಿರುಸುದ್ದಿ

12 ಕ್ವಿಂಟಲ್ ಪಡಿತರ ಅಕ್ಕಿ ವಶ

•**ಸಿರುಗುಪ್ಪ:** ನಗರದ ಟಿಪ್ಪು ಸುಲ್ತಾನ್ ವೃತ್ತದ ಬಳಿ ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದ್ದ ಪಡಿತರ ಅಕ್ಕಿಯನ್ನು ಆಹಾರ ಇಲಾಖೆ ಹಾಗೂ ಪೊಲೀಸರ ಜಂಟಿ ಕಾರ್ಯಾಚರಣೆಯಲ್ಲಿ ವಶಪಡಿಸಿಕೊಳ್ಳಲಾಗಿದೆ.

ಖಚಿತ ಮಾಹಿತಿ ಮೇರೆಗೆ ಆಹಾರ ಶಿರಸ್ತೇದಾರ ಹನುಮೇಶ ನಾಯಕ್ ಹಾಗೂ ಸಿರುಗುಪ್ಪ ಪೊಲೀಸ್ ಠಾಣೆಯ ಸಿಬ್ಬಂದಿ ಶುಕ್ರವಾರ ರಾತ್ರಿ ಜಂಟಿ ಕಾರ್ಯಾಚರಣೆ ನಡೆಸಿದಾಗ ನಗರದಿಂದ ರಾಮತ್ನಾಳ ಕಡೆಗೆ ತೆರಳುತ್ತಿದ್ದ ಟಾಟಾ ಎಸಿ ವಾಹನವನ್ನು ತಡೆದು ಪರಿಶೀಲಿಸಿದಾಗ ಅಕ್ರಮವಾಗಿ ಸಾಗಿಸುತ್ತಿದ್ದ ಅಂದಾಜು 12 ಕ್ವಿಂಟಲ್ ಪಡಿತರ ಅಕ್ಕಿ, ಟಾಟಾ ಎಸಿ ವಾಹನ ಮತ್ತು ಚಾಲಕನನ್ನು ವಶ ಪಡಿಸಿಕೊಂಡು ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಬೈಕ್ ಡಿಕ್ಕಿ: ಸ್ಥಳದಲ್ಲೇ ಯುವಕ ಸಾವು

•**ಕೊಪ್ಪಳ:** ಮಳೆಯಿಂದ ರಸ್ತೆಗೆ ಬಿದ್ದಿದ್ದ ಮರಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಭಾನುವಾರ ಬೆಳಗ್ಗೆ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೊಬ್ಬ ಗಂಭೀರವಾಗಿ ಗಾಯಗೊಂಡ ಘಟನೆ ತಾಲೂಕಿನ ಭೀಮನೂರ ಬಳಿ ನಡೆದಿದೆ.

ಕಾಮನೂರು ಗ್ರಾಮದ ಕಿರಣ ಕರಬಡಗಿ(30) ಮೃತಪಟ್ಟ ಯುವಕನಾಗಿದ್ದು, ಮಹೇಶ ಹುಳ್ಳಿ ಎಂಬ ಯುವಕನಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುವನ್ನು ತಕ್ಷಣ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಕಾಮನೂರಿನಿಂದ ಹೊಸಪೇಟೆ ಸಮೀಪದ ಕಾರ್ಖಾನೆಗೆ ಕೆಲಸಕ್ಕೆ ಇಬ್ಬರು ಯುವಕರು ಒಂದೇ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ.

ಮಳೆಯಿಂದ ರಸ್ತೆ ಮೇಲೆ ಬಿದ್ದಿದ್ದ ಮರ ಕಾಣದೇ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ. ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಮೃತ ಕಿರಣನ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಈ ಕುರಿತು ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ರಾಫ್ಟಿಂಗ್‌ಗೆ ಬಂದಿದ್ದ ಪ್ರವಾಸಿಗ ಸಾವು



•**ಜೋಯಿಡಾ:** ತಾಲೂಕಿನ ಗಣೇಶಗುಡಿಯಲ್ಲಿರುವ ಸಿಲ್ವರ್ ಬಿಲ್ ರೆಸಾರ್ಟ್‌ನಲ್ಲಿ ನಡೆದ ದುರ್ಘಟನೆಯಲ್ಲಿ ರಾಫ್ಟಿಂಗ್‌ಗೆ ಬಂದಿದ್ದ ಪ್ರವಾಸಿಗನೊಬ್ಬ ಮೃತಪಟ್ಟಿರುವ ಘಟನೆ ನಡೆದಿದ್ದು ಇದು ಸಾರ್ವಜನಿಕರಲ್ಲಿ ಆತಂಕ ಹುಟ್ಟಿಸಿದೆ.

ವಿಜಯವಾಡ ಮೂಲದ ಮಹೇಶ್ (27) ಮೃತ ದುರ್ದೈವಿ ಎಂದು ತಿಳಿದು ಬಂದಿದೆ. ಕಾಳಿ ನದಿಯಲ್ಲಿ ರಾಫ್ಟಿಂಗ್ ಚಟುವಟಿಕೆ ನಡೆಯುತ್ತಿದ್ದ ವೇಳೆ ರೆಸಾರ್ಟ್ ಬಳಿ ಅಳವಡಿಸಲಾಗಿದ್ದ ನೀರಿನ ಪಂಪ್‌ಸೆಟ್‌ನಿಂದ ವಿದ್ಯುತ್ ಪ್ರವಹಿಸಿದ್ದರಿಂದ ಈ ಅವಘಡ ಸಂಭವಿಸಿದೆ ಎನ್ನಲಾಗಿದೆ. ಮಹೇಶ್ ತನ್ನ ಸ್ನೇಹಿತ ಎಂಜಿನಿಯರ್‌ಗಳ ತಂಡದೊಂದಿಗೆ ಪ್ರವಾಸಕ್ಕೆ ಬಂದಿದ್ದನು.

ಘಟನೆ ಕುರಿತು ಮಾಹಿತಿ ತಿಳಿಯುತ್ತಿದ್ದಂತೆಯೇ ರಾಮನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ದುರ್ಘಟನೆಯ ನಿಖರ ಕಾರಣ ಕುರಿತು ತನಿಖೆ ಮುಂದುವರಿಸಿದ್ದಾರೆ.

ಎಸ್‌ಎಸ್‌ಕೆ ಸಮಾಜದ ಯುವ ಘಟಕದ

ರಾಜ್ಯಾಧ್ಯಕ್ಷರಾಗಿ ವೆಂಕಟೇಶ ಕಾಟವೆ ನೇಮಕ

•**ಹುಬ್ಬಳ್ಳಿ:** ಕರ್ನಾಟಕ ರಾಜ್ಯ ಎಸ್‌ಎಸ್‌ಕೆ ಸಮಾಜ, ಬೆಂಗಳೂರು ಇವರ ಆಶ್ರಯದಲ್ಲಿ ರಾಜ್ಯ ಎಸ್‌ಎಸ್‌ಕೆ ಯುವ ಘಟಕದ ಭವ್ಯ ಸಮಾವೇಶದ ಪೂರ್ವಭಾವಿ ಸಭೆ ನಗರದ ಕ್ಯೂಬಿಕ್ಸ್ ಹೋಟೆಲ್‌ನಲ್ಲಿ ಅತ್ಯಂತ ಉತ್ಸಾಹಭರಿತ ಹಾಗೂ ಯಶಸ್ವಿಯಾಗಿ ಜರುಗಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಎಸ್‌ಎಸ್‌ಕೆ ಸಮಾಜ ಯುವ ಘಟಕದ ರಾಜ್ಯಾಧ್ಯಕ್ಷರಾಗಿ ವೆಂಕಟೇಶ ಕಾಟವೆ ಹಾಗೂ ಧಾರವಾಡ ಜಿಲ್ಲಾಧ್ಯಕ್ಷರಾಗಿ ಯೋಗೇಶ ಹಬೀಬ ಸೇರಿದಂತೆ ರಾಜ್ಯದ ಹದಿಮೂರು ಜಿಲ್ಲೆಗಳ ಜಿಲ್ಲಾಧ್ಯಕ್ಷರನ್ನು ಅಧಿಕೃತವಾಗಿ ನೇಮಕ ಮಾಡಲಾಯಿತು.



ಸಭೆಯನ್ನುದ್ದೇಶಿಸಿ ಮಾತನಾಡಿದ ಎಸ್‌ಎಸ್‌ಕೆ ಸಮಾಜದ ರಾಜ್ಯಾಧ್ಯಕ್ಷ ಡಾ.ಶಶಿಕುಮಾರ್ ಮೆಹರವಾಡೆ ಅವರು, ಸಮಾಜದ ಬಲಿಷ್ಠ ಭವಿಷ್ಯ ನಿರ್ಮಾಣಕ್ಕೆ ಯುವಶಕ್ತಿಯ ಪಾತ್ರ ಅತ್ಯಂತ ಪ್ರಮುಖವಾಗಿದೆ. ಯುವಕರು ಎದ್ದರೆ ಸಮಾಜ ಎದ್ದು ನಿಲ್ಲುತ್ತದೆ; ಸಮಾಜ ಎದ್ದರೆ ಹೊಸ ಇತಿಹಾಸ ನಿರ್ಮಾಣವಾಗುತ್ತದೆ ಎಂದು ಪ್ರೇರಣಾದಾಯಕ ಸಂದೇಶ ನೀಡಿದರು.

ರಾಜ್ಯದಪ್ರತಿಯೊಂದು ಜಿಲ್ಲೆಯಲ್ಲಿ ಪೂರ್ವಭಾವಿ ಸಭೆಗಳನ್ನು ಆಯೋಜಿಸಿ, ಮುಂದಿನ ದಿನಗಳಲ್ಲಿ ಎಸ್‌ಎಸ್‌ಕೆ ಸಮಾಜದ ಯುವ ಘಟಕದ ಐತಿಹಾಸಿಕ ರಾಜ್ಯಮಟ್ಟದ ಸಮಾವೇಶ ನಡೆಸುವ ಗುರಿಯನ್ನು ಹೊಂದಿದ್ದು, ರಾಜ್ಯದ ಮೂಲೆಮೂಲೆಗಳಿಂದ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಯುವಕರು ಭಾಗವಹಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಸಮಾಜದ ಅಭಿವೃದ್ಧಿಗೆ ಕೇವಲ ವ್ಯಕ್ತಿಗಳ ಸಾಧನೆ ಸಾಕಾಗುವುದಿಲ್ಲ. ಯುವಶಕ್ತಿ ಸಂಘಟಿತವಾಗಿ, ಜಾಗೃತವಾಗಿ ಮತ್ತು ಸಮಾಜದ ಬಗ್ಗೆ ಕಾಳಜಿ ಹೊಂದಿ ಮುಂದೆ ಬರಬೇಕು. ಶಿಕ್ಷಣ, ಉದ್ಯೋಗ, ವ್ಯಾಪಾರ, ರಾಜಕೀಯ ಮತ್ತು ಸಾಮಾಜಿಕ ಸೇವೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಎಸ್‌ಎಸ್‌ಕೆ ಸಮಾಜದ ಯುವಕರು ತಮ್ಮ ಛಾಪು ಮೂಡಿಸುವ ಸಮಯ ಬಂದಿದೆ ಎಂದು ಹೇಳಿದರು.

ಅಲ್ಲದೆ ಸರ್ಕಾರದ ಅನೇಕ ಯೋಜನೆಗಳ ಮಾಹಿತಿ ಜನರಿಗೆ ಸರಿಯಾಗಿ ತಲುಪದೇ ಇರುವುದರಿಂದ, ಸಮಾಜದ ಯುವಕರು ಜಾಗೃತಿ ಮೂಡಿಸಿ ಪ್ರತಿಯೊಬ್ಬರೂ ಸರ್ಕಾರಿ ಸೌಲಭ್ಯಗಳ ಲಾಭ ಪಡೆಯುವಂತೆ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಅಶೋಕ ಕಾಟವೆ, ಎಸ್‌ಎಸ್‌ಕೆ ಸಮಾಜ ಹು–ಧಾ ಚೀಫ್ ಟ್ರಸ್ಟಿ ಸತೀಶ್ ಮೆಹರವಾಡೆ, ಸಮಾಜದ ಹಿರಿಯರಾದ ಶ್ಯಾಮ ಕಬಾಡೆ, ಟಿ.ಎಂ. ಮೆಹರವಾಡೆ, ಭಾಸ್ಕರ್ ಜಿತೂರಿ, ವಿಠ್ಠಲ ಲದವಾ, ಅಶೋಕ್ ರಾಯಬಾಗಿ, ಮಾರುತಿರಾವ ಪವಾರ, ರಾಮಚಂದ್ರ ಕಬಾಡೆ, ಕೃಷ್ಣಮೂರ್ತಿ ರಂಗ್ರೇಜ್, ನೀಲಕಂಠಸಾ ಜಡಿ, ರಮೇಶ್ ಬುರ್ಬುರೇ, ಗೋಪಾಲ್ ಬದ್ದಿ, ಶಂಕರಸಾ ಲದವಾ, ನಾಗೇಶ್ ಕಲ್ಬುರ್ಗಿ, ಸಂಜಯ ಮಿಸ್ಕಿನ್, ನಾರಾಯಣಸಾ ನಿರಂಜನ, ಡಿ.ಕೆ.ಚವಾಣ, ಗಣಪತಸಾ ಹಬೀಬ, ರಾಜೇಶ್ವರಿ ಜಡಿ, ಪುಷ್ಪಾ ಪವಾರ ಸೇರಿದಂತೆ ಸಮಾಜದ ಅನೇಕ ಮುಖಂಡರು ಹಾಗೂ ವಿವಿಧ ಜಿಲ್ಲೆಯಿಂದ ಆಗಮಿಸಿದ ನೂರಾರು ಯುವಕರು ಉಪಸ್ಥಿತರಿದ್ದರು.

ಮನೆಗೆ ನುಗ್ಗಿದ ಮಳೆ ನೀರು



•**ವಿಜಯನಗರ:** ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ದೋಷದಿಂದಾಗಿ ಮಳೆ ನೀರು ಮನೆಗಳಿಗೆನುಗ್ಗಿ, ರೈತರ ಹುಲ್ಲಿನ ಬಣವೆಗಳು ಕೊಚ್ಚಿ ಹೋಗಿರುವ ಘಟನೆ ಹೊಸಪೇಟೆ ತಾಲೂಕಿನ ಗಾದಿಗನೂರು ಗ್ರಾಮದಲ್ಲಿ ಭಾನುವಾರ ನಡೆದಿದ್ದು, ಜನ ಜೀವನ ಅಸ್ತವ್ಯಸ್ತಗೊಂಡಿದೆ.

ಗಾದಿಗನೂರು ಗ್ರಾಮದ ವ್ಯಾಪ್ತಿಯಲ್ಲಿ ಶನಿವಾರ ತಡರಾತ್ರಿ ಸುರಿದ ಭಾರಿ ಮಳೆ ಸುರಿದಿದೆ. ಗ್ರಾಮದ ಮಾರ್ಗವಾಗಿ ಹರಿದು ಹೋಗುವ ರಾಷ್ಟ್ರೀಯ ಹೆದ್ದಾರಿ 67 ಕಾಮಗಾರಿ ಅವೈಜ್ಞಾನಿಕವಾಗಿದೆ. ಮೇಲ್ಸೇತುವೆ ಹಾಗೂ ಹೆದ್ದಾರಿ ಪಕ್ಕದಲ್ಲಿ ತೆರೆದ ಚರಂಡಿ ನಿರ್ಮಿಸದ ಕಾರಣ ಮಳೆ ನೀರು ಮನೆಗಳಿಗೆ ನುಗ್ಗಿದ್ದರಿಂದ ಗ್ರಾಮದಲ್ಲಿ ಅಕ್ಷರಶಃ ಪ್ರವಾಹ ಪರಿಸ್ಥಿತಿ ಉಂಟಾಗಿತ್ತು.

ಮನೆಗಳಿಗೆ ಮಳೆ ನುಗ್ಗಿದ್ದರಿಂದ ದಿನಬಳಕೆ ಸಾಮಗ್ರಿಗಳ, ಪಾತ್ರೆ, ಪಗಡೆಗಳು ನೀರಿನಲ್ಲಿ ತೇಲಾಡುತ್ತಿದ್ದವು. ಆಹಾರ ಪದಾರ್ಥಗಳನ್ನು ರಕ್ಷಿಸಿಕೊಳ್ಳಲು ಜನರ ಪರದಾಡುವಂತಾದರೆ. ಅಹೋರಾತ್ರಿ ಮಳೆ ನೀರು ಹೊರ ಚೆಲ್ಲಲು ಹರಸಾಹಸ ನಡೆಸಿದರು.

ಮನೆಗಳು ಜಲಾವೃತವಾಗಿದ್ದರಿಂದ ವೃದ್ಧರು, ಮಕ್ಕಳು ಮಲಗಲು ಜಾಗವಿಲ್ಲದೇ ರಾತ್ರಿಯಿಡೀ ಜಾಗರಣೆ ಮಾಡುವ ಅನಿವಾರ್ಯತೆ ಸೃಷ್ಟಿಸಿತ್ತು. ಹೆದ್ದಾರಿ ಕಾಮಗಾರಿಯಿಂದಾಗಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ದಾರಿಯಿಲ್ಲದೆ, ನೀರೆಲ್ಲವೂ ಗ್ರಾಮದ ಮನೆಗಳಿಗೆ ನುಗ್ಗಿದೆ. ಇದರೊಂದಿಗೆ ರೈತರು ಶೇಖರಿಸಿಟ್ಟಿದ್ದ ನೂರಾರು ಹುಲ್ಲಿನ ಬಣವೆಗಳು ನೀರಿನ ರಭಸಕ್ಕೆ ಹಳ್ಳಕ್ಕೆ ಕೊಚ್ಚಿ ಹೋಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆ ತಡೆದು ಆಕ್ರೋಶ: ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಖಂಡಿಸಿದ ಗ್ರಾಮಸ್ಥರು ರಾಷ್ಟ್ರೀಯಹೆದ್ದಾರಿ67ರಸಂಚಾರವನ್ನು ತಡೆದು, ಪ್ರತಿಭಟನೆ ನಡೆಸಿದರು.

ಹೆದ್ದಾರಿ ಬಂದ್ ಆಗಿದ್ದರಿಂದ ಬಳ್ಳಾರಿ–ಹೊಸಪೇಟೆ ಮಾರ್ಗದಲ್ಲಿ ಸುಮಾರು 2 ಕಿಲೋ ಮೀಟರ್ ವರೆಗೆ ವಾಹನಗಳು ಸಾಲುಗಟ್ಟಿದ್ದವು. ಪರಿಣಾಮ ಪ್ರಯಾಣಿಕರು ಪರದಾಡುವಂತಾಯಿತು.

ಸ್ಥಳಕ್ಕೆ ಅಧಿಕಾರಿಗಳ ಭೇಟಿ : ಗ್ರಾಮಸ್ಥರ ಪ್ರತಿಭಟನೆಯ ವಿಷಯ ತಿಳಿಯುತ್ತಿದ್ದಂತೆ ಹೊಸಪೇಟೆ ಗ್ರಾಮೀಣ ಪೊಲೀಸ್ ಠಾಣೆಯ ಪೊಲೀಸರು ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಧಾವಿಸಿದ್ದಾರೆ. ಜಲಾವೃತಗೊಂಡಿರುವ ಪ್ರದೇಶಗಳು ಮತ್ತು ಹಾನಿಯಾಗಿರುವ ಜಾಗಗಳನ್ನು ಅಧಿಕಾರಿಗಳು ಪರಿಶೀಲಿಸಿದರು.

ಅತ್ಯಾಚಾರ ಆರೋಪ: ಯುವಕರಿಬ್ಬರ ಬಂಧನ

•**ಲಕ್ಷ್ಮೇಶ್ವರ:** ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಆರೋಪದಡಿಯಲ್ಲಿ ಇಬ್ಬರು ಯುವಕರನ್ನು ಲಕ್ಷ್ಮೇಶ್ವರ ಪೊಲೀಸರು ಬಂಧಿಸಿದ್ದಾರೆ. ತಾಲೂಕಿನ ಕುಂದ್ರಳ್ಳಿ ಗ್ರಾಮದ ಬಾಲಕಿ ಶನಿವಾರ ಪಟ್ಟಣಕ್ಕೆ ಕಂಪ್ಯೂಟರ್ ಕ್ಲಾಸ್‌ಗೆ ಬಂದಿರುವ ಸಂದರ್ಭದಲ್ಲಿ ಇಬ್ಬರು ಅದೇ ಗ್ರಾಮದ ಯುವಕರು ಕೂಡಿಕೊಂಡು ಪಟ್ಟಣದ ಪೋಸ್ಟ್ ಆಫೀಸ್ ಬಳಿ ಬಾಲಕಿಗೆ ನಿಮ್ಮ ಅಣ್ಣ ಕರೆಯುತ್ತಿದ್ದಾನೆ ಬಾ ಎಂದು ವಾಹನದಲ್ಲಿ ಕೂಡಿಸಿಕೊಂಡು ಶಿಗ್ಲಿ ರಸ್ತೆಯಲ್ಲಿ ಹೊಲವಾರಿ ಜಾಗೆಯಲ್ಲಿ ಒತ್ತಾಯ ಪೂರ್ವಕವಾಗಿ ಬಲಾತ್ಕಾರ ಮಾಡಿರುವುದಾಗಿ ಬಾಲಕಿಯ ತಾಯಿಯ ಅಕ್ಕ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.ಆರೋಪಿತ ಅಲ್ಲಾಭಕ್ಷಿ ಕೊಪ್ಪದ ಬಲಾತ್ಕಾರ ಮಾಡಿದ್ದು, ಆಸೀಫ್ ನಧಾಫ ಎನ್ನುವ ಯುವಕ ಆತನಿಗೆ ಸಹಾಯಕನಾಗಿ ವಾಹನ ಚಲಾವಣೆ ಮಾಡಿರುವುದಾಗಿ ಯುವಕರು ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ದಾಖಲಿಸಲಾಗಿದೆ. ಪಿಎಸ್‌ಐ ನಾಗರಾಜ ಗಡದ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಆರೋಪಿತರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ದೂರಿನನ್ವಯ ಅಪಹರಣ, ಅತ್ಯಾಚಾರ, ಕ್ರಿಮಿನಲ್ ಬೆದರಿಕೆ, ಒತ್ತಾಯ ಪೂರ್ವಕ ಬಲಾತ್ಕಾರ ಇತ್ಯಾದಿ ಕೇಸುಗಳನ್ನು ದಾಖಲಿಸಲಾಗಿದೆ.

ಅತೀ ಹೆಚ್ಚಿನ ಮೊತ್ತದ ಟ್ರ್ಯಾಕ್ಟರ್ ಮಾರಾಟ ಮಾಡಿದ ರಾಯಬಾಗದ ಶಿವಶಂಕರ ಮಾರ್ಕೆಟಿಂಗ್

105 ಎಚ್‌ಪಿ ನ್ಯೂ ಹಾಲೆಂಡ್ ಟ್ರ್ಯಾಕ್ಟರ್ ಖರೀದಿಸಿ ದಾಖಲೆ ಬರೆದ ರೈತ

▸ಸುನೀಲ ಕಬ್ಬೂರ

•**ಹಾರೂಗೇರಿ:** ಸ್ಟೇಷನ್ ರಸ್ತೆಯಲ್ಲಿರುವ ಬಸವರಾಜ ಪ್ರಭಾಕರ ಮೇತ್ರಿ ಅವರ ಮಾಲೀಕತ್ವದ ಶಿವಶಂಕರ ಮಾರ್ಕೆಟಿಂಗ್ NEW HOLLAND ಟ್ರ್ಯಾಕ್ಟರ್ ಡೀಲರ್ ಶಿಪ್‌ನಲ್ಲಿ ಬೀದರ ಮೂಲದ ಯಶಪಾಲ್ ರೆಡ್ಡಿ ಎಂಬ ಅನ್ನದಾತರೊಬ್ಬರು 105 ಎಚ್‌ಪಿ ತಾಕತ್ತಿನ ಬರೋಬ್ಬರಿ ಅಂದಾಜು 35 ಲಕ್ಷ ಬೆಲೆ ಬಾಳುವ ಟ್ರ್ಯಾಕ್ಟರ್ ಖರೀದಿಸಿ, ನೋಡುಗರ ಹುಬ್ಬೇರುವಂತೆ ಮಾಡಿದ್ದಾರಲ್ಲದೆ, ಸಾಮಾನ್ಯ ರೈತರೂ ಕೂಡ ಇಂತಹ ಅಗಾಧ ಶಕ್ತಿಯ, ದುಬಾರಿ ಬೆಲೆಯ ಟ್ರ್ಯಾಕ್ಟರ್‌ಗಳನ್ನ ಬಳಸಿಕೊಂಡು ವ್ಯವಸಾಯ ಮಾಡಬಹುದು ಅನ್ನೋದಕ್ಕೆ ಮಾದರಿಯಾಗಿದ್ದಾರೆ.



ಬರೀ ಕಮರ್ಷಿಯಲ್ ವ್ಯವಹಾರಕ್ಕಾಗಿ ಮಾರಾಟವಾಗುತ್ತಿದ್ದ ಇಂತಹ ಅಧಿಕ ಮೈಲೇಜ್‌ನ ಟ್ರ್ಯಾಕ್ಟರ್‌ಗಳು ಇಂದು ರೈತರ ಗದ್ದೆಗೆ ಲಗ್ಗೆಯಿಡುತ್ತಿವೆ. ಇದು ಕರ್ನಾಟಕದಲ್ಲಿಯೇ ರೈತರಿಗಾಗಿ ಮಾರಾಟವಾದ ಟ್ರ್ಯಾಕ್ಟರ್ ಎಂಬ ಹೆಗ್ಗಳಿಕೆ ಗಳಿಸಿದೆ. ಕಂಪನಿಯ ಎ.ಎಂ. ವೈಜನಾಥ ಗಿಟ್ಟೆ ಮಾತನಾಡಿ, ರಾಯಬಾಗದ ಶಿವಶಂಕರ ಮಾರ್ಕೆಟಿಂಗ್‌ನವರು ಅತೀ ಕಡಿಮೆ ಸಮಯದಲ್ಲಿ ಹೆಚ್ಚಿನ ಮಾರಾಟದ ಸಾಧನೆ ಮಾಡಿ ಕಂಪನಿಯ ಶ್ರೇಯಸ್ಸಿಗೆ ಪಾತ್ರರಾಗಿದ್ದಾರೆ. ಇವರ ಮಾರಾಟ ಪ್ರಕ್ರಿಯೆ ಮತ್ತು ಜನ ಬೆಂಬಲ ನಿಜಕ್ಕೂ ಹೆಮ್ಮೆ ತರುವಂಥದ್ದು ಎಂದರು.

ಈ ಸಂದರ್ಭದಲ್ಲಿ ಆಗಮಿಸಿದ್ದ ಅನ್ನದಾತರಿಗೆ ಹಾಗೂ ಗ್ರಾಹಕರಿಗೆ ಹಸಿರು ಶಾಲು ಹಾಕಿ ಸನ್ಮಾನಿಸಲಾಯಿತು. ಕಂಪನಿಯ ಆರ್.ಎಸ್. ಎಂ. ವಿಜಯ ಅಮರವಾಡಿ ,ಕಂಪನಿಯ ಎಫ್.ಈ.ಸಿ ಶ್ರೀನಿವಾಸ ದೊಡ್ಡಮನಿ , ಟಿ.ಎಸ್. ಎಂ.ಆನಂದರಾವ ನಾಯಕ, ಡೆಮಾನ್ಸ್ಟ್ರೇಟರ್ ಗುರುಸಿದ್ದಪ್ಪ ಅಡೂರ್, ಪ್ರಗತಿಪರ ರೈತರಾದ ಶ್ರೀಶೈಲ ಒಡೆಯರ, ಶಿವನಗೌಡ ಮೇಟಿ, ಶ್ರೀಶೈಲ ಠಕ್ಕಣ್ಣವರ, ಮಚ್ಚೇಂದ್ರ ನಿಶಾನದಾರ, ಕಂಪನಿಯ ಸಿಎನ್‌ಎಚ್ ಕ್ಯಾಪ್ಟನ್ ಯೂಸುಫ್ ಮುಲ್ಲಾ , ಮಾಲೀಕರ ಸಹೋದರರಾದ ರಾಜೇಂದ್ರ ಮೇತ್ರಿ, ಕುಮಾರ ಮೇತ್ರಿ, ಗೋವಿಂದ ಮೇತ್ರಿ,ಮೋಹನ್ ಮೇತ್ರಿ, ಡೀಲರಶಿಪ್ ವ್ಯವಸ್ಥಾಪಕರಾದ ಶಿವಲಿಂಗ ನಿಶಾನದಾರ ಹಾಗೂ ಇನ್ನುಳಿದ ಸಿಬ್ಬಂದಿಯವರು ಉಪಸ್ಥಿತರಿದ್ದರು.



"ಇಲ್ಲಿಯವರೆಗೆ ಸುಮಾರು 300ಕ್ಕೂ ಅಧಿಕ ಟ್ರ್ಯಾಕ್ಟರ್‌ಗಳು ಮಾರಾಟವಾಗಿದ್ದು, ರೈತರ,ಗ್ರಾಹಕರ ಸಂಪೂರ್ಣ ಬೆಂಬಲ new Holland ಟ್ರ್ಯಾಕ್ಟರ್ ನೊಂದಿಗೆ ಇದ್ದು, ಆದರಂತೆ ರೈತರ ಮೆಚ್ಚುಗೆಗೆ ಪಾತ್ರವಾಗಿದೆ.

■ **ಬಸವರಾಜ ಮೇತ್ರಿ,** ಮಾಲೀಕರು ಶಿವಶಂಕರ ಮಾರ್ಕೆಟಿಂಗ್, ರಾಯಬಾಗ

"ಪ್ರಪ್ರಥಮವಾಗಿ ನಾವು ರಾಯಬಾಗ ಶಿವಶಂಕರ ಮಾರ್ಕೆಟಿಂಗ್ ಅವರಿಗೆ ಧನ್ಯವಾದ ಹೇಳುತ್ತೇವೆ. ಇಂತಹ ಟ್ರ್ಯಾಕ್ಟರ್ ಅನ್ನು ಪರಿಚಯಿಸಿ ನಮ್ಮ ವ್ಯವಸಾಯದ ಸ್ಥಿತಿಗತಿಯನ್ನು ಅರಿತು ಅದಕ್ಕೆ ಅವಶ್ಯಕತೆ ಇರುವ ವೈಜ್ಞಾನಿಕ ಯಂತ್ರೋಪಕರಣಗಳ ಸರಬರಾಜನ್ನು ಹಾಗೂ ಮಾಹಿತಿ ನೀಡಿದ್ದಾರೆ. ಇದು ನಮಗೆ ಸಂತಸವನ್ನು ಇಮ್ಮಡಿಗೊಳಿಸಿದೆ.

■ **ಯಶಪಾಲ್ ರೆಡ್ಡಿ,** ಗ್ರಾಹಕ, ಬೀದರ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಸುಧೀಶ ನಾಯ್ಕ ಆಯ್ಕೆ



ಹೊನ್ನಾವರ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಹೊನ್ನಾವರ ತಾಲೂಕು ಅಧ್ಯಕ್ಷರಾಗಿ ಸುಧೀಶ ನಾಯ್ಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪ್ರಧಾನಕಾರ್ಯದರ್ಶಿಯಾಗಿ ಕೆ.ಎಂ.ಹೆಗಡೆ, ಉಪಾಧ್ಯಕ್ಷರಾಗಿ ಅಣ್ಣಪ್ಪ ಜಿ. ನಾಯ್ಕ ಮತ್ತು ಸುನಂದಾ ಭಟ್, ಸಹ ಕಾರ್ಯದರ್ಶಿಗಳಾಗಿ ಪ್ರಶಾಂತ ಭಟ್ ಮತ್ತು ಶಿಲ್ಪಾ ಭಂಡಾರಿ, ಸಂಘಟನಾ ಕಾರ್ಯದರ್ಶಿಯಾಗಿ ಜಿ.ಐ.ಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಶಿಕ್ಷಕರು ಅಭಿನಂದಿಸಿದರು.

ಮೇ 27ರಂದು ಕಣ್ಣಿನ ತಪಾಸಣಾ ಉಚಿತ ಶಿಬಿರ

ಸಿದ್ದಾಪುರ: ಎಂ.ಎಂ. ಜೋಶಿ ಗಣೇಶ ನೇತ್ರಾಲಯ ಶಿರಸಿ ಹಾಗೂ ಟಿ.ಎಂ.ಎಸ್ ಸಿದ್ದಾಪುರ ಇವರ ಸಂಯುಕ್ತ ಆಶ್ರಯದಲ್ಲಿ ಮೇ 27ರಂದು ಬೆಳಿಗ್ಗೆ 10 ರಿಂದ ಸಂಜೆ 4.30ರ ವರೆಗೆ ಕಣ್ಣಿನ ತಪಾಸಣಾ ಉಚಿತ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.ಟಿ.ಎಂ.ಎಸ್ ಸಭಾಭವನದಲ್ಲಿ ನಡೆಯಲಿರುವ ಶಿಬಿರವನ್ನು ಶಾಸಕ ಭೀಮಣ್ಣ ಟಿ. ನಾಯ್ಕ ಉದ್ಘಾಟಿಸಲಿದ್ದಾರೆ. ಎಂ.ಎಂ.ಜೋಶಿ ಗಣೇಶ ನೇತ್ರಾಲಯ ಶಿರಸಿ ಇದರ ತಜ್ಞ ವೈದ್ಯರಾದ ಡಾ.ವಿಶ್ವನಾಥ ಅಂಕದ್ ಹಾಗೂ ನೇತ್ರಾಧಿಕಾರಿ ರಘು ಪಿ.ಜಿ.ಯವರು ಸೂಕ್ತ ಪರೀಕ್ಷಾ ಕಾರ್ಯವನ್ನು ನೆರವೇರಿಸಲಿದ್ದಾರೆ. ಕಣ್ಣಿನ ತೊಂದರೆ ಇರುವವರು ಈ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಟಿ.ಎಂ.ಎಸ್ ಅಧ್ಯಕ್ಷ ಆರ್.ಎಂ. ಹೆಗಡೆ ಬಾಳೇಸರ, ಉಪಾಧ್ಯಕ್ಷ ಎಂ.ಜಿ.ನಾಯ್ಕ ಹಾದ್ರಿಮನೆ, ವ್ಯವಸ್ಥಾಪಕ ಸತೀಶ ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ಉಪಕೇಂದ್ರದ ಶಂಕುಸ್ಥಾಪನೆ

ಸಿದ್ದಾಪುರ: ತಾಲೂಕಿನ ಕಾನಸೂರ ಗ್ರಾಮದಲ್ಲಿ ಹೊಸದಾಗಿ ನಿರ್ಮಿಸಲಾಗುವ ವಿದ್ಯುತ್ ಉಪಕೇಂದ್ರದ ಶಂಕುಸ್ಥಾಪನಾ ಸಮಾರಂಭವು ಮೇ 25 ರಂದು ಬೆಳಿಗ್ಗೆ 11 ಗಂಟೆಗೆ ಕಾನಸೂರ ವಿದ್ಯುತ್ ಉಪಕೇಂದ್ರದ ಆವರಣದಲ್ಲಿ ನಡೆಯಲಿದೆ. ಭೂಮಿಪೂಜೆಯನ್ನು ಶಾಸಕ ಭೀಮಣ್ಣ ನಾಯ್ಕ ನೆರವೇರಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳು ಎಸ್.ವೈದ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕಾ ಅಧ್ಯಕ್ಷ ಕೆ.ಜಿ.ನಾಗರಾಜ ಸೇರಿದಂತೆ ಅನೇಕ ಜನಪ್ರತಿನಿಧಿಗಳು, ಅಧಿಕಾರಿ ವರ್ಗದವರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶಿಕ್ಷಣ ಪ್ರೇಮಿ ಶಿವಯೋಗಿ ಉಳ್ಳಾಗಡ್ಡಿ ನಿಧನ



ಬನವಾಸಿ: ಇಲ್ಲಿಯ ವೀರಶೈವ ಲಿಂಗಾಯತ ಸಮಾಜದ ಪ್ರಮುಖರು, ಶಿಕ್ಷಣ ಪ್ರೇಮಿ, ಉದ್ಯಮಿಯಾದ ಶಿವಯೋಗಿ ಉಳ್ಳಾಗಡ್ಡಿ(65)ಮಧು ಮೇಹ ಖಾಯಿಲೆಯಿಂದ ಭಾನುವಾರ ನಿಧನರಾಗಿದ್ದಾರೆ. ಇವರು ಶ್ರೀ ಜಯಂತಿ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯಾಗಿದ್ದು, ಶ್ರೀ ಮಧುಕೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಮಾಜಿ ಕೋಶಾಧ್ಯಕ್ಷರಾಗಿ ಹಾಗೂ ಅನೇಕ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಅಪಾರ ಬಂಧು ಬಳಗ ಇದ್ದಾರೆ. ಇಲ್ಲಿಯ ಹೊಳೆಮಠದ ಮ.ನಿ.ಪ್ರ. ಶ್ರೀ ನಾಗಭೂಷಣ ಸ್ವಾಮೀಜಿ, ಮಾಜಿ ಸಚಿವ ಬಿ.ಸಿ. ಪಾಟೀಲ್, ಮಾಜಿ ಶಾಸಕ ವಿ.ಎಸ್. ಪಾಟೀಲ್ ಸೇರಿದಂತೆ ಅನೇಕ ಗಣ್ಯರು, ಅಭಿಮಾನಿಗಳು ಅಂತಿಮ ದರ್ಶನ ಪಡೆದರು.

ಶಿವಯೋಗಿ ಉಳ್ಳಾಗಡ್ಡಿ ಅವರ ನಿಧನಕ್ಕೆ ಶಾಸಕ ಶಿವರಾಮ ಹೆಬ್ಬಾರ, ಮಾಜಿ ಸಚಿವ ಬಿ. ಸಿ. ಪಾಟೀಲ, ಮಾಜಿ ಶಾಸಕ ವಿ. ಎಸ್. ಪಾಟೀಲ , ಶ್ರೀ ಜಯಂತಿ ಪ್ರೌಢ ಶಾಲೆ ಅಧ್ಯಕ್ಷ ಗಣೇಶ್ ಸಣ್ಣಲಿಂಗಣ್ಣನವರ ಹಾಗೂ ಸದಸ್ಯರು, ಮುಖ್ಯಾಧ್ಯಾಪಕ ಪುಟ್ಟಸ್ವಾಮಿ ಮತ್ತು ಶಿಕ್ಷಕ ಬಳಗ, ಸಿಬ್ಬಂದಿಗಳು ಮತ್ತು ಶ್ರೀ ಮಧುಕೇಶ್ವರ ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಸುಧಾಕರ್ ಹೇಮಾದ್ರಿ ಸೇರಿದಂತೆ ಆಡಳಿತ ಮಂಡಳಿ ಯವರು, ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಗಜಾನನ ಗೌಡ, ಪದವಿ ಪೂರ್ವ ಕಾಲೇಜು ಉಪಾಧ್ಯಕ್ಷ ಸಿದ್ದಲಿಂಗಪ್ಪ ಉಗ್ರಾಣದ, ಬನವಾಸಿ ವೀರಶೈವ ಸಮಾಜದ ಅಧ್ಯಕ್ಷ ಹಾಲೇಶ್ ಕೆರೂಡಿ ಮತ್ತು ಸದಸ್ಯರು,ಬನವಾಸಿ ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ.ಎಫ್. ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಮತ್ತು ಸದಸ್ಯರು, ಲಯನ್ಸ್ ಕ್ಲಬ್ ಅಧ್ಯಕ್ಷ ವಾಗೀಶ ಕೆರೂಡಿ, ಬನವಾಸಿ ವಲಯ ಬಳಗದ ಮುಖ್ಯಸ್ಥ ಮಹೇಶ್ ದಾವಣಗೆರೆ ಸೇರಿದಂತೆ ಹಲವು ಗಣ್ಯರು ಶೋಕ ವ್ಯಕ್ತ ಪಡಿಸಿದ್ದಾರೆ.



ಗೋಕರ್ಣ: ಇಲ್ಲಿನ ಗೋಗರ್ಭ ಮಾರ್ಗದಿಂದ ಕುಡ್ಲೆ ಕಡಲತೀರಕ್ಕೆ ತೆರಳುವ ಬೀದಿ ದೀಪದ ಕಂಬ ಮುರಿದು ಬಿದ್ದು ಒಂದು ವಾರವಾದರೂ ಹೊಸ ಕಂಬ ಹಾಕದೆ ಬಿಟ್ಟಿದ್ದು, ಇದರಿಂದ ಸಂಜೆ ಪ್ರವಾಸಿಗರು, ಸ್ಥಳೀಯರಿಗೆ ತೆರಳಲು ತೊಂದರೆಯಾಗುತ್ತಿದ್ದು, ತಕ್ಷಣ ಸರಿಪಡಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಶಿಕ್ಷಣ, ವೈದ್ಯಕೀಯ ನೆರವು ಕಾರ್ಯಕ್ರಮ ಸಂಪನ್ನ

ಕುಮಟಾ: ಹೆರವಟ್ಟಾದ ಶ್ರೀ ರಾಘವೇಂದ್ರ ಮಠದಲ್ಲಿ ಶ್ರೀನಿವಾಸ ಚೇರಿಟೆಬಲ್ ಟ್ರಸ್ಟ್ ನ ವತಿಯಿಂದ ದಿ. ವಿಮಲಾ ದುರ್ಗಪ್ಪ ಪೈ, ಮುಂಬೈ ಇವರ ಸ್ಮರಣಾರ್ಥ ಅರ್ಹ ಫಲಾನುಭವಿಗಳಿಗೆ ಶಿಕ್ಷಣ ಹಾಗೂ ವೈದ್ಯಕೀಯ ನೆರವು ಕಾರ್ಯಕ್ರಮ ಸಂಪನ್ನಗೊಂಡಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ.ಎ.ವಿ. ಬಾಳಿಗಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಎನ್. ಕೆ. ನಾಯಕ ಭಾಗವಹಿಸಿದ್ದರು. ಉಪಸ್ಥಿತ ಮಕ್ಕಳನ್ನು ಉದ್ದೇಶಿಸಿ ಜೀವನಾನುಭವವನ್ನು ಹಂಚಿಕೊಂಡರಲ್ಲದೆ, ಶ್ರೀನಿವಾಸ ಚೇರಿಟೆಬಲ್ ಟ್ರಸ್ಟ್ ನಡೆಸಿಕೊಂಡು ಬರುತ್ತಿರುವ ವೃದ್ಧಾಶ್ರಮ, ಸೇವಾ ಕಾರ್ಯ ಹಾಗೂ ಇಂತಹ ನೆರವಿನ ಕಾರ್ಯಕ್ರಮ ಶ್ಲಾಘನೀಯ, ಇಂತಹ ಸುತ್ಯಾರ್ಹ ಕಾರ್ಯದಲ್ಲಿ ನಾವೆಲ್ಲ ಕೈಜೋಡಿಸೋಣ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟ್ರಸ್ಟಿನ ಕಾರ್ಯದರ್ಶಿಗಳಾದ ಅನಂತ ಪಿ. ಶಾನಭಾಗ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸುಮಾರು 20 ಫಲಾನುಭವಿಗಳಿಗೆ ಸುಮಾರು 2 ಲಕ್ಷ ರೂಪಾಯಿಗಳ ನೆರವನ್ನು ನೀಡಲಾಯಿತು.

ಮಠದ ಅರ್ಚಕ ಭರತ ಭಟ್ ವೇದಘೋಷ ಹಾಗೂ ವೈಭವಿ ಶಾನಭಾಗ ಈಶಸ್ತವನ ನೆರವೇರಿಸಿದರು. ಟ್ರಸ್ಟಿಗಳಾದ ಅರುಣ ಕಾಮತ ಫಲಾನುಭವಿಗಳ ಯಾದಿಯನ್ನು ಪ್ರಸ್ತುತಪಡಿಸಿದರು. ಇನ್ನೋರ್ವ ಟ್ರಸ್ಟಿ ದಿವ್ಯಾ ಶಾನಭಾಗ ವಂದಿಸಿದರು. ಶಿಕ್ಷಕ ಕಿರಣ ಪ್ರಭು ನಿರೂಪಿಸಿದರು. ಹಿತೈಷಿಗಳಾದ ಮುರಳಿಧರ ಭಟ್, ಸುರೇಶ ಭಟ್, ಅರುಣ ಮಂಕೀಕರ, ವಿಷ್ಣು ಹೆಗಡೇಕರ, ವಿಷ್ಣು ಶಾನಭಾಗ, ಮೋಹನ ಧಾರೇಶ್ವರ ಹಾಗೂ ಪಾಲಕರು ಉಪಸ್ಥಿತರಿದ್ದರು.



ಕುಮಟಾ: ಹೆರವಟ್ಟಾದ ಶ್ರೀ ರಾಘವೇಂದ್ರ ಮಠದಲ್ಲಿ ಶ್ರೀನಿವಾಸ ಚೇರಿಟೆಬಲ್ ಟ್ರಸ್ಟ್ ನ ವತಿಯಿಂದ ದಿ. ವಿಮಲಾ ದುರ್ಗಪ್ಪ ಪೈ, ಮುಂಬೈ ಇವರ ಸ್ಮರಣಾರ್ಥ ಅರ್ಹ ಫಲಾನುಭವಿಗಳಿಗೆ ಶಿಕ್ಷಣ ಹಾಗೂ ವೈದ್ಯಕೀಯ ನೆರವು ಕಾರ್ಯಕ್ರಮ ಸಂಪನ್ನಗೊಂಡಿತು. ಡಾ.ಎ.ವಿ. ಬಾಳಿಗಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಎನ್. ಕೆ. ನಾಯಕ, ಟ್ರಸ್ಟಿಗಳಾದ ಅರುಣ ಕಾಮತ ಮುರಳಿಧರ ಭಟ್, ಸುರೇಶ ಭಟ್, ಅರುಣ ಮಂಕೀಕರ, ವಿಷ್ಣು ಹೆಗಡೇಕರ, ವಿಷ್ಣು ಶಾನಭಾಗ, ಮೋಹನ ಧಾರೇಶ್ವರ ಹಾಗೂ ಪಾಲಕರು ಉಪಸ್ಥಿತರಿದ್ದರು.

ಮುಗಿಲು ಮುಟ್ಟಿದ ಆಕ್ರಂದನ | ಭರದಿಂದ ಸಾಗಿದ ಪರಿಹಾರ ಕಾರ್ಯ

ಹೊಳೆಗೆ ಆಹಾರವಾದ ಬಡಜೀವಗಳು!

ಭಟ್ಕಳ: ಶಿರಾಲಿ ತಟ್ಟಿಹಕ್ಲ ಹೊಳೆಯಲ್ಲಿ ಕಪ್ಪೆಚಿಪ್ಪು ಆಯಲು ಹೋಗಿದ್ದ 11ಜನರು ನೀರಲ್ಲಿ ಕೊಚ್ಚಿ ಹೋದ ದುರಂತ ಜಿಲ್ಲೆಯ ಜನರನ್ನು ದಿಗ್ಭ್ರಾಂತರನ್ನಾಗಿಸಿದೆ.

ಭಾನುವಾರ ಸಂಜೆವೇಳೆಗೆ 10 ಶವಗಳು ಪತ್ತೆಯಾಗಿದ್ದು, ನಿಜರಿನ ಸೆಳೆತದಲ್ಲಿ ಕಣ್ಮರೆಯಾಗಿರುವ ಇನ್ನೋರ್ವನ ಪತ್ತೆ ಕಾರ್ಯ ಭರದಿಂದ ಸಾಗಿದೆ. ಮಳೆಗಾಲದ ಆರಂಭದಲ್ಲೇ ದಾಖಲಾಗಿರುವ ಈ ಅವಘಡವು ಭಟ್ಕಳ ತಾಲೂಕಿನ ಅತಿ ದೊಡ್ಡ ದುರಂತ ಎಂದು ಜನ ನೋವು ತೋಡಿಕೊಳ್ಳುತ್ತಿದ್ದಾರೆ.

ಮುಗಿಲು ಮುಟ್ಟಿದ ಆಕ್ರಂದನ: ಮೃತ ದೇಹಗಳನ್ನು ಇಲ್ಲಿನ ತಾಲೂಕಾ ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದ್ದು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಸುದ್ದಿ ತಿಳಿಯುತ್ತಿದ್ದಂತೆಯೇ ಇಡೀ ಭಟ್ಕಳ ತಾಲೂಕು ಶೋಕ ಸಾಗರದಲ್ಲಿ ಮುಳುಗಿದ್ದು ಸಾವಿರಾರು ಸಂಖ್ಯೆಯಲ್ಲಿ ಜನರು ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡುತ್ತಿದ್ದಾರೆ.

ಭಾನುವಾರ ಬೆಳಿಗ್ಗೆ ಶಿರಾಲಿಯ ಸಾರದಹೊಳೆಯ ಹಿರೇಹಿತ್ಲು ನಿವಾಸಿಗಳಾದ 14 ಜನರು ಒಟ್ಟಾಗಿ ತಟ್ಟಿಹಕ್ಲು ಬಳಿ ಇರುವ ವೆಂಕಟಾಪುರ ಹೊಳೆಗೆ ಮಳವಿ ಸಂಗ್ರಹಿಸಲು ತೆರಳಿದ್ದಾರೆ. ಮಳವಿ ಆರಿಸುತ್ತಿರುವಾಗಲೇ ಸಮುದ್ರದ ಭರತದಿಂದಾಗಿ ಹೊಳೆಯಲ್ಲಿ ನೀರು ಏರುತ್ತಾ ಬಂದಿದ್ದು ಇವರ ಅರಿವಿಗೆ ಬರಲೆ ಇಲ್ಲ. ಇದರಿಂದಾಗಿ ಇವರಿಗೆ ಹೊಳೆ ದಾಟಿ ಈಚೆಗೆ ಬರಲು ಸಾಧ್ಯವಾಗಲಿಲ್ಲ, ಆಳವಾದ ನೀರಿನಲ್ಲಿ ಮುಳುಗಿ 10 ಮಂದಿ ಮೃತ ಪಟ್ಟಿದ್ದರೆ, ಒಬ್ಬ ಕಣ್ಮರೆಯಾಗಿದ್ದಾನೆ.



ಗಣ್ಯರಿಂದ ಶೋಕ

ಭಟ್ಕಳದಲ್ಲಿ ನಡೆದ ದುರಂತಕ್ಕೆ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ,ಶಾಸಕ ಶಿವರಾಮ ಹೆಬ್ಬಾರ್, ಶಾಸಕ ಸತೀಶ ಸೈಲ್, ಶಾಸಕ ಭೀಮಣ್ಣ ನಾಯ್ಕ , ಶಾಸಕ ದಿನಕರ ಶೆಟ್ಟಿ ಮತ್ತಿತರರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

> ಕಪ್ಪೆ ಚಿಪ್ಪು ಮೀನುಗಾರಿಕೆಗೆ ತೆರಳಿದಾಗ ಶಿರಾಲಿಯ ಹತ್ತು ಮಂದಿ ನೀರಿನ ಸೆಳತಕ್ಕೆ ಸಿಕ್ಕಿ ಪ್ರಾಣ ಕಳೆದುಕೊಂಡ ಹೃದಯ ವಿದ್ರಾವಕ ಘಟನೆಯನ್ನು ಕೂಡಲೇ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳಿಗೆ ತಿಳಿಸಿದ್ದೇನೆ. ಎಲ್ಲ ನೊಂದ ಕುಟುಂಬಗಳಿಗೆ ಶೀಘ್ರ ಪರಿಹಾರ ಒದಗಿಸಲಾಗುವುದು
>
> ■ ಮಂಕಾಳ ಎಸ್. ವೈದ್ಯ, ಜಿಲ್ಲಾ ಉಸ್ತುವಾರಿ ಸಚಿವರು

> ಸಂತ್ರಸ್ತ ಕುಟುಂಬಗಳಿಗೆ ಆಸರೆಯಾಗಲು ಪಿಎಂ ರಾಷ್ಟ್ರೀಯ ಪರಿಹಾರ ನಿಧಿಯಿಂದ ಸೂಕ್ತ ಮತ್ತು ಗರಿಷ್ಠ ಪ್ರಮಾಣದ ಆರ್ಥಿಕ ಪರಿಹಾರವನ್ನು ಒದಗಿಸಿಕೊಡಲು ಸಂಬಂಧಪಟ್ಟ ಕೇಂದ್ರ ಸರ್ಕಾರದ ಸಚಿವಾಲಯ ಹಾಗೂ ಅಧಿಕಾರಿಗಳೊಂದಿಗೆ ತಕ್ಷಣವೇ ಮಾತುಕತೆ ನಡೆಸಿ, ಪರಿಹಾರ ಬಿಡುಗಡೆಗೆ ಅಗತ್ಯ ಕ್ರಮ ವಹಿಸಲಾಗುವುದು.
>
> ■ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದರು ,ಉ.ಕ

ಉಳಿದಂತೆ ಮೂವರು ಮಹಿಳೆಯರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಇಬ್ಬರನ್ನು ಮಣಿಪಾಲ ಆಸ್ಪತ್ರೆಗೆ ಒಯ್ಯಲಾಗಿದೆ.

ಭಾನುವಾರ ಬೆಳಿಗ್ಗೆ ಪರಸ್ಪರ ಮಾತನಾಡಿಕೊಂಡು ಹೊಳೆಗೆ ಕಪ್ಪೆಚಿಪ್ಪು ಆರಿಸಲು ಹೋಗಿದ್ದ ಇವರು ನೀರು ಜಾಸ್ತಿಯಾದಂತೆ ನದಿಯಿಂದ ದಡಕ್ಕೆ ಬರಲು ಪರಸ್ಪರ ಕೈಕೈ ಹಿಡಿದು ಕೊಂಡು ಬರುತ್ತಿದ್ದಾರೆನ್ನಲಾಗಿದೆ. ಭಾನುವಾರ ಬೆಳಗಿನ ಜಾವ ಭಟ್ಕಳದಾದ್ಯಂತ ಭಾರೀ ಪ್ರಮಾಣದಲ್ಲಿ ಮಳೆಯಾಗಿದ್ದರಿಂದ ನದಿಯಲ್ಲಿ ನೀರು ಜಾಸ್ತಿಯಾಗಿದ್ದಲ್ಲದೇ ಸಮುದ್ರದ ಅಲೆಯೂ ಉಕ್ಕಿ ಹರಿದ ಪರಿಣಾಮ ಇವರೆಲ್ಲರೂ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.

ಆಸ್ಪತ್ರೆಗೆ ಡೀಸಿ ಲಕ್ಷ್ಮೀಪ್ರಿಯ, ಎಸ್ಪಿ ದೀಪನ್, ಮಾಜಿ ಶಾಸಕ ಸುನೀಲ ನಾಯ್ಕ, ಮಾಜಿ ಸಚಿವ ಶಿವಾನಂದ ನಾಯ್ಕ, ಬಿಜೆಪಿ ಮುಖಂಡ ಗೋವಿಂದ ನಾಯ್ಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ ನಾಯ್ಕ ಮತ್ತಿತರ ಗಣ್ಯರು ಆಗಮಿಸಿದ್ದಾರೆ. ಬೆಂಗಳೂರಿನಲ್ಲಿರುವ ಮೀನುಗಾರಿಕಾ ಸಚಿವ ಮಂಕಾಳ ವೈದ್ಯ ಘಟನೆ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ರಾತ್ರಿಯೇ ಭಟ್ಕಳಕ್ಕೆ ಆಗಮಿಸುವುದಾಗಿ ಹೇಳಿದ್ದಾರೆ. ಈಗಾಗಲೇ ಡೀಸಿ ಲಕ್ಷ್ಮೀಪ್ರಿಯಾ ಮತ್ತು ಎಸ್ಪಿ ದೀಪನ್ ಭೇಟಿ ನೀಡಿದ್ದು, ಮಾಹಿತಿ ಪಡೆದು ಪ್ರಕರಣದ ಬಗ್ಗೆ ತನಿಖೆ ನಡೆಸುವುದಾಗಿ ಹೇಳಿದ್ದಾರೆ. ಆಸ್ಪತ್ರೆಯ ಬಳಿ ಜಮಾಯಿಸಿರುವ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿದೆ.

ಮಳೆಯಬ್ಬರ: ಮನೆ, ಬೆಳೆಗಳಿಗೆ ಹಾನಿ

ಕುಮಟಾ: ಶನಿವಾರ ರಾತ್ರಿ ತಾಲೂಕಿನಲ್ಲಿ ಸುರಿದ ಅಬ್ಬರದ ಮಳೆ ಹತ್ತಾರು ಅವಾಂತರಕ್ಕೆ ಕಾರಣವಾಗಿದೆ. ತಾಲೂಕಿನ ಅಘನಾಶಿನಿ ಗ್ರಾಮ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ಸುರಿದ ಭಾರೀ ಮಳೆ ಹಾಗೂ ಸಿಡಿಲಿನ ಪರಿಣಾಮವಾಗಿ ಮನೆ ಮತ್ತು ಕೃಷಿ ಜಮೀನುಗಳಿಗೆ ಹಾನಿ ಸಂಭವಿಸಿದೆ ಎಂದು ವರದಿಯಾಗಿದೆ.

ಶನಿವಾರ ರಾತ್ರಿ ಸುಮಾರು 3 ಗಂಟೆಯ ವೇಳೆಗೆ ಅಘನಾಶಿನಿ ಗ್ರಾಮದ ಬಾವಿಕೋಡ್ಲದ ವಾಸುದೇವ ನಾಗೇಶ ಮೊರ್ಜೆ ಅವರ ವಾಸ್ತವ್ಯದ ಮನೆಗೆ ಸಿಡಿಲು ಬಡಿದ ಪರಿಣಾಮ ಮನೆಗೆ ಸಂಪರ್ಕ ಹೊಂದಿದ್ದ ವಿದ್ಯುತ್ ಸ್ವಿಚ್ ಬೋರ್ಡ್, ವೈರಿಂಗ್ ಹಾಗೂ ಫ್ಯಾನ್ ಸಂಪೂರ್ಣ ಹಾನಿಗೊಳಗಾಗಿದೆ. ಅಲ್ಲದೇ ಮನೆ ಮುಂಭಾಗದ ಗೋಡೆಯೂ ಭಾಗಶಃ ಹಾನಿಗೊಂಡಿದೆ.

ಘಟನೆಯಿಂದ ಸುಮಾರು 15,000 ರೂ. ಮೌಲ್ಯದ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಅದೃಷ್ಟವಶಾತ್ ಯಾವುದೇ ಜೀವಹಾನಿ ಅಥವಾ ಜಾನುವಾರುಗಳಿಗೆ ಹಾನಿಯಾಗಿಲ್ಲ.

ಇದೇ ವೇಳೆ ಅಘನಾಶಿನಿ ಗ್ರಾಮದ ವಿನಾಯಕ ಗಂಗಾಧರ ನಾಯ್ಕ ಅವರ ಜಮೀನಿಗೆ ಸಿಡಿಲು ಬಡಿದ ಪರಿಣಾಮ 5 ತೆಂಗಿನ ಮರಗಳು ಹಾಗೂ 4 ಅಡಿಕೆ ಮರಗಳು ಸುಟ್ಟು ಹೋಗಿವೆ. ಈ ಘಟನೆಯಿಂದ ಸುಮಾರು 18,000 ರೂ. ಮೌಲ್ಯದ ಹಾನಿ ಸಂಭವಿಸಿದೆ ಎಂದು ತಿಳಿದುಬಂದಿದೆ.

ಅದೇ ಗ್ರಾಮದ ಮಾಸ್ತಿ ರಾಮ ಹರಿಕಂತ್ರ ಅವರ ಜಮೀನಿನಲ್ಲಿಯೂ ಸಿಡಿಲು ಬಡಿದು 4 ತೆಂಗಿನ ಮರಗಳು ಹಾಗೂ 4 ಅಡಿಕೆ ಮರಗಳು ಹಾನಿಗೊಳಗಾಗಿವೆ. ಸುಮಾರು ರೂ. 15,000 ಮೌಲ್ಯದ ನಷ್ಟ ಉಂಟಾಗಿದೆ. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನಷ್ಟದ ಅಂದಾಜು ಪಡೆದು ಮುಂದಿನ ಪ್ರಕ್ರಿಯೆ ಕೈಗೊಂಡರು.



ವಾರದೊಳಗೆ ಸೋರಿಕೆ ತಡೆಗೆ ಆಗ್ರಹ

ಬನವಾಸಿ: ಇಲ್ಲಿಯ ಶ್ರೀ ಮಧುಕೇಶ್ವರ ದೇವಸ್ಥಾನದ ಸೋರಿಕೆ ತಡೆಯನ್ನು ಒಂದು ವಾರದಲ್ಲಿ ಆರಂಭಿಸಬೇಕು. ಈ ಬಾರಿ ಪ್ಲಾಸ್ಟಿಕ್ ಹೊದಿಕೆ ಹಾಕಲು ಅವಕಾಶ ನೀಡುವುದಿಲ್ಲ ಎಂದು ತಾಲೂಕು ಹೋರಾಟ ಸಮಿತಿಯ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ ಹೇಳಿದರು.

ಮಧುಕೇಶ್ವರ ದೇವಸ್ಥಾನದ ಕಚೇರಿಯಲ್ಲಿ ಪುರಾತತ್ವ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸೋರಿಕೆ ತಡೆಯುವ ವಿಚಾರದಲ್ಲಿ ಕಳೆದ ಐದು ವರ್ಷ ಪುರಾತತ್ವ ಇಲಾಖೆ ಇಲಾಖೆಯ ನಾಟಕವನ್ನು ಕಂಡು ಬೇಸರವಾಗಿದೆ. ಈ ಬಾರಿ ಅದು ನಡೆಯಲು ಬಿಡುವುದಿಲ್ಲ, ಒಂದು ವಾರದೊಳಗೆ ತಾತ್ಕಾಲಿಕವಾಗಿ ಅಂಟು ಬಳಸುವ ಮೂಲಕ ಸೋರಿಕೆ ನಿಲ್ಲಿಸಬೇಕು. ಮಳೆಗಾಲ ಮುಗಿದ ಬಳಿಕ ಶಾಶ್ವತ ಕಾಮಗಾರಿ ಮಾಡಬೇಕು ಎಂದರು.

ಪುರಾತತ್ವ ಇಲಾಖೆಯ ಅಧಿಕಾರಿ ರಾಕೇಶ ಮಾತನಾಡಿ, ಮಳೆಗಾಲ ಆರಂಭವಾಗಿದ್ದು ಈ ಬಾರಿಯೂ ಪ್ಲಾಸ್ಟಿಕ್ ಹೊದಿಕೆ ಅನಿವಾರ್ಯ. ಮಳೆಗಾಲ ಮುಗಿದ ಕೂಡಲೇ ದುರಸ್ತಿ ಕಾರ್ಯ ಆರಂಭಿಸಲಾಗುತ್ತದೆ. ನಿಮ್ಮ ಬೇಡಿಕೆಯನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಒಂದು ವಾರದೊಳಗೆ ಅವರನ್ನು ಕರೆತಂದು ತಾಲೂಕು ಹೋರಾಟ ಸಮಿತಿಯೊಂದಿಗೆ ಸಭೆ ನಡೆಸುವ ಭರವಸೆ ನೀಡಿದರು.

ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಗಜಾನನ ಗೌಡ ಮಾತನಾಡಿ, ಪುರಾತತ್ವ ಇಲಾಖೆಯ ಅಧಿಕಾರಿಗಳು ಪ್ರತಿವರ್ಷ ಜನರಿಗೆ ಸುಳ್ಳು ಹೇಳುವುದನ್ನೆ ಮಾಡಿದೆ. ಈ ಬಾರಿ ಅದು ಸಾಧ್ಯವಿಲ್ಲ, ಈ ಬಾರಿ ಮಧುಕೇಶ್ವರ ದೇವಸ್ಥಾನದ ಉಳಿವಿಗಾಗಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪ್ರತಿಭಟನೆಗೆ ಸಜ್ಜಾಗಿದ್ದಾರೆ ಎಂದರು. ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಸುಧಾಕರ ಹೇಮಾದ್ರಿ, ಸದಸ್ಯೆ ಗೀತಾ ಯಜಮಾನಿ, ತಾಲೂಕು ಹೋರಾಟ ಸಮಿತಿಯ ಗೌರವ ಅಧ್ಯಕ್ಷ ಸಿ.ಎಫ್. ನಾಯ್ಕ್ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ ಒಡೆಯರ್, ಪಿಎಸ್ಐ ಮಾಂತೇಶ ಕುಂಬಾರ, ಮಧುಸೂದನ್ ಭಟ್, ರವಿ ನಾಯ್ಕ್ ಮಾತನಾಡಿದರು. ಸಭೆಯಲ್ಲಿ ದೇವಸ್ಥಾನ ವ್ಯವಸ್ಥಾಪನ ಸಮಿತಿಯ ಕಾರ್ಯದರ್ಶಿ ಲತಾ ಶೆಟ್ಟಿ, ಸದಸ್ಯರಾದ ವಿನಾಯಕ ಮಂಗಳೂರು, ಮೇಘರಾಜ ನರೇಗಲ್, ಪರಶುರಾಮ ಉಪ್ಪಾರ, ಪಿಎಸ್ಐ ರವೀಂದ್ರ ಬಿರಾದಾರ, ಲಯನ್ಸ್ ಕ್ಲಬ್ ನ ಸಾಯಿರಾಂ ಕಾನಳ್ಳಿ, ಪುರಾತತ್ವ ಇಲಾಖೆಯ ಅಧಿಕಾರಿಗಳು ಇದ್ದರು.



ಮಹಿಳಾ ಮೀಸಲಾತಿ-ಮಾನವೀಯತೆಯ ಸೋಲು: ಹೆಗಡೆ

ಶಿರಸಿ: ಮಹಿಳೆಗೆ ಅವಕಾಶ ಬೇಕು; ಪೀಠ ಬೇಡ; ಸ್ಥಾನ ಬೇಕು. ಸಂಸಾರದಲ್ಲಿ 50 ಪ್ರತಿಶತ ಸಹಯೋಗ ನೀಡುವ ಹೆಣ್ಣಿಗೆ ರಾಜಕೀಯದಲ್ಲೂ 33 ಅಲ್ಲ, ಪ್ರತಿಶತ 50 ಅಧಿಕಾರ ಸಿಗಬೇಕು. ಇನ್ನೂ ಮಹಿಳಾ ಮೀಸಲಾತಿ ನೀಡಬೇಕು ಎನ್ನುವ ಮಾತೇ ನಾವು ಹೆಣ್ಣಿಗೆ ಸುರಕ್ಷಿತ ಸಮಾಜವನ್ನು ನಿರ್ಮಿಸಿಲ್ಲ ಎಂದರ್ಥ. ಇದು ಮಾನವೀಯತೆಯ ಸೋಲು. ಇನ್ನಾದರೂ ಮಹಿಳೆಗೆ ಸಮಾನ ಅವಕಾಶಗಳು ದೊರೆತು ಅವಳು ಪೋಷಕ ಪಾತ್ರವಾಗದೆ ಸ್ವತಂತ್ರ ಅಸ್ತಿತ್ವವುಳ್ಳ ವ್ಯಕ್ತಿಯಾಗಿ ಬಾಳಬೇಕು ಎಂದು ಬರಹಗಾರ್ತಿ, ಶಿಕ್ಷಕಿ ಕವಿತಾ ಹೆಗಡೆ ಅಭಯಂ ಹೇಳಿದರು.

ಅವರು ಶಿರಸಿ ಗಾಯತ್ರಿ ಗೆಳೆಯರ ಬಳಗದಲ್ಲಿ ಜಸ್ಟಿಸ್ ಜಿ ಎನ್ ಸಭಾಹಿತ , ಜಸ್ಟಿಸ್ ವಿಷ್ಣು ಸಭಾಹಿತ ಸ್ಮರಣೆ ಉಪನ್ಯಾಸ, ಕಾನೂನು ಸಲಹೆ ಕಾರ್ಯಕ್ರಮದಲ್ಲಿ ಮಹಾಭಾರತದಿಂದ ಮೆಟ್ರೋವರೆಗೆ ಅವಳು ಪೋಷಕ ಪಾತ್ರವೇ ಏಕೆ? ಎಂಬ ವಿಷಯದ ಮೇಲೆ ಉಪನ್ಯಾಸ ನೀಡುತ್ತಿದ್ದರು.

ಗಂಡು ಮತ್ತು ಹೆಣ್ಣು ಮಕ್ಕಳು ಹುಟ್ಟಿದಾಗಿನಿಂದಲೇ ಲಿಂಗ ತಾರತಮ್ಯವನ್ನು ಅನುಸರಿಸುವ ಜನರು, ಹೆಣ್ಣು 'ಎರಡನೇ ಆಯ್ಕೆ' ಆಗಲು ಅವಳನ್ನು ಮಾನಸಿಕವಾಗಿ ಸಿದ್ಧಗೊಳಿಸಿಬಿಡುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು. ಸ್ತ್ರೀಯನ್ನು ದೇವಿಯನ್ನಾಗಿ ಪೂಜಿಸುವುದು ಸುಲಭ. ಆದರೆ ಮಾನವಳಾಗಿ ಸಮಾನತೆ ನೀಡುವುದು ಕಷ್ಟ. ರಾಜಕೀಯದಲ್ಲಿ, ಉದ್ಯೋಗದಲ್ಲಿ, ವಾರಸುದಾರಿಕೆಯಲ್ಲಿ, ಪ್ರೀತಿಯಲ್ಲಿ ಎಲ್ಲೆಡೆ ಅವಳು ಅರ್ಹತೆಯಿದ್ದರೂ ವಂಚಿತಳಾಗುತ್ತಿದ್ದಾಳೆ. ಸ್ತ್ರೀ ಈಗ ಬದಲಾವಣೆಗೆ ಸಿದ್ಧವಾಗಬೇಕು, ತಮ್ಮ ಹಕ್ಕಿಗಾಗಿ ದನಿ ಎತ್ತಲು ಹೆಣ್ಣು ಮಕ್ಕಳಿಗೆ ಎಲ್ಲರೂ ಪ್ರೋತ್ಸಾಹಿಸಬೇಕು ಎಂದರು.



ಧರೆಗೆ ಉರುಳಿದ ಮರ: ಸಂಚಾರ ಸ್ಥಗಿತ

ಮುಂಡಗೋಡ: ಮಿಂಚು, ಗುಡುಗು ಸಹಿತ ಗಾಳಿ ಮಳೆಯಿಂದ ಶನಿವಾರ ರಾತ್ರಿಯಿಂದ ಆರಂಭವಾದ ಮಳೆ ಭಾನುವಾರ ಬೆಳಗಿನವರೆಗೆ ಸುರಿದು ಪಟ್ಟಣ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಹಲವು ಅವಾಂತರಗಳನ್ನು ಸೃಷ್ಟಿ ಮಾಡಿತು.

ಬಾರಿ ಗಾಳಿ ಮಳೆಗೆ ಮುಂಡಗೋಡ-ಯಲ್ಲಾಪುರ ರಸ್ತೆಯಲ್ಲಿ ಬೃಹತ್ ಮರವೊಂದು ರಸೆಯ ಮಧ್ಯಭಾಗದಲ್ಲೇ ಅಡ್ಡಲಾಗಿ ಬಿದ್ದ ಪರಿಣಾಮ ಮಾರ್ಗದಲ್ಲಿ ಕೆಲ ಕಾಲ ವಾಹನ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ನಂತರ ಮಾಹಿತಿ ತಿಳಿದು ಅರಣ್ಯ ಇಲಾಖೆಯವರು ಸ್ಥಳಕ್ಕೆ ಬಂದು ಬಿದ್ದ ಮರವನ್ನು ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿ ಕೊಟ್ಟರು.ಮಳೆಯು ಸಣ್ಣ ಹನಿಗಳ ಮೂಲಕ ಆರಂಭವಾಗಿ ಬೃಹತ್ ಹನಿಗಳ ಮೂಲಕ ಸುಮಾರು ನಾಲ್ಕು ಗಂಟೆ ಸುರಿದ ಮಳೆಯಿಂದ ಪಟ್ಟಣದ ರಸ್ತೆ ಚರಂಡಿಗಳು ತುಂಬಿ ಹರಿದವು. ರಸ್ತೆಗಳ ಮೇಲೆ ಅಲ್ಲಲ್ಲಿ ಚರಂಡಿಯ ನೀರು ನಿಂತಿರುವುದು ಕಂಡು ಬಂತು. ಬೆಳಿಗ್ಗೆ ಪಟ್ಟಣ ಪಂಚಾಯತ ಪೌರಕಾರ್ಮಿರು ಚರಂಡಿಗಳಲ್ಲಿ ತುಂಬಿದ ತ್ಯಾಜ್ಯವನ್ನು ತೆಗೆದು ನೀರು ಸರಾಗವಾಗಿ ಸಾಗಿಸಲು ಅನುಕೂಲ ಮಾಡಿಕೊಟ್ಟು ಚರಂಡಿಗಳನ್ನು ಸ್ವಚ್ಛಗೊಳಿಸಿದರು. ದೊಡ್ಡ ಪ್ರಮಾಣದಲ್ಲಿ ಮಳೆಯಾದರೆ ಪ್ರತಿವರ್ಷವೂ ಬಂಕಾಪೂರ ರಸ್ತೆಯು ತುಂಬಿ ಓಡಾಡಲಾಗದೆ. ಕೆರೆಯಂತಾಗಿರುತ್ತದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು. ಮಳೆಯೊಂದಿಗೆ ಬೀಸಿದ ಭಾರಿ ಗಾಳಿಯ ಆರ್ಭಟಕ್ಕೆ ಅಲ್ಲಲ್ಲಿ ಮರಗಳು ಹಾಗೂ ವಿದ್ಯುತ ಕಂಬಗಳು ಬಿದ್ದಿದ್ದು ಕೆಲ ಕಡೆ ವಿದ್ಯುತ್ ವ್ಯತ್ಯಯವಾಗಿದೆ.

ಗ್ರಾಮೀಣ ಭಾಗಗಳಲ್ಲಿ ಮಳೆಗಾಲ ಆರಂಭವಾಗುವ ಮುನ್ನವೆ ಚರಂಡಿಗಳನ್ನು ಸ್ವಚ್ಚತೆ ಗೊಳಿಸದೆ. ಇರುವುದರಿಂದ ಚರಂಡಿಗಳಲ್ಲೆ ನೀರು ನಿಂತಿರುವುದು ಕಂಡು ಸ್ಥಳಿಯರು ಗ್ರಾಮ ಪಂಚಾಯತ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿದರೆ ಹೆಚ್ಚಿನ ಸಾಧನೆ ಸಾಧ್ಯ: ಶಾಸಕ

ಹೊನ್ನಾವರ: ಪ್ರತಿಭೆಗಳಿಗೆ ಸಮಾಜದವರು ಪೋತ್ಸಾಹ ನೀಡಿದರೆ ಮಾತ್ರ ಇನ್ನಷ್ಟು ಸಾಧನೆ ಮಾಡಲು ಸಾಧ್ಯ ಎಂದು ಶಾಸಕ ದಿನಕರ ಶೆಟ್ಟಿ ಹೇಳಿದರು.

ಅವರು ಶ್ರೀನಿಧಿಸೇವಾವಾಹಿನಿಯ ವತಿಯಿಂದ ಬಾಳೆಗದ್ದೆ ವೆಂಕಟ್ರಮಣ ಸಭಾಭವನದಲ್ಲಿ ಜರುಗಿದ 'ಶ್ರೀನಿಧಿ ಸಂಘದ ಬೆಳ್ಳಿ ಹಬ್ಬ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸುಶಿಕ್ಷಿತ ಸಮಾಜದ ಅಭಿವೃದ್ಧಿಗೆ ಶಿಕ್ಷಣವು ಪ್ರಮುಖ ಪಾತ್ರ ವಹಿಸಲಿದ್ದು, ಪಾಲಕರು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವಂತೆ ಸಲಹೆ ನೀಡಿದರು. ಚಿಕ್ಕ ಸಮಾಜವಾದ ಗಾಣಿಗ ಸಮಾಜದಲ್ಲಿರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಕಳೆದ 25 ವರ್ಷದಿಂದ ಪ್ರತಿಭಾ ಪುರಸ್ಕಾರದ ಶೈಕ್ಷಣಿಕ ಸಲಕರಣೆ ನೀಡುವ ಕಾರ್ಯಕ್ರಮ ಯಶಸ್ವಿಯಾಗಿ ಮಾಡುತ್ತಾ ಬಂದಿರುವುದು ಪ್ರಶಂಸಾರ್ಹವಾಗಿದೆ. ಉತ್ತಮವಾಗಿ ಸಂಘಟನೆ ಮಾಡಿಕೊಂಡು ನಮ್ಮ ಸಮಾಜದ ಇತರೆ ತಾಲೂಕಿಗೆ ಮಾದರಿಯಾಗಿದೆ ಎಂದರು.



ಯಧುವೀರ ಬ್ಯಾಂಕ್ ಅಧ್ಯಕ್ಷ ಶ್ರೀಕಾಂತ ನಾಯ್ಕ ಮಾತನಾಡಿ ಗಾಣಿಗ ಸಮಾಜ ಸಣ್ಣದಾದರೂ ವಿವಿಧ ರಂಗದಲ್ಲಿ ಸಾಧನೆ ಮಾಡಿದ್ದಾರೆ. ಶಿಕ್ಷಣ, ಕಲೆ, ಕ್ರೀಡಾ ಕ್ಷೇತ್ರದಲ್ಲಿ ಹಲವು ಅವಕಾಶವಿದ್ದು, ಯುವ ಸಮುದಾಯ ದೊರೆತ ಅವಕಾಶ ಸದುಪಯೋಗ ಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಶಿವಮೊಗ್ಗಾ ಜಿಲ್ಲಾ ನೋಂದಣಾಧಿಕಾರಿ ನಾಗಭೂಷಣ ಚಂದ್ರಶೇಖರ ಕಲ್ಮನೆ ಮಾತನಾಡಿ ಸಮಾಜದವರು ಪ್ರತಿಭಾವಂತರ ಸಾಧನೆ ಗುರುತಿಸಿ ಸನ್ಮಾನಿಸುವ ಮೂಲಕ ಪ್ರೇರಣೆ ನೀಡುತ್ತಿದೆ. ಕಳೆದ 25 ವರ್ಷದಿಂದ ಹಲವು ಸಾಧನೆ ಮಾಡಿದ್ದು, ಮುಂದೆಯೂ ಈ ಕಾರ್ಯ ಮುನ್ನಡೆಸುವಂತೆ ಸಲಹೆ ನೀಡಿದರು.

ಭಟ್ಕಳ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಅಧ್ಯಕ್ಷಪ್ರೋ. ನಾಗೇಶ ಶೆಟ್ಟಿ ಮಾತನಾಡಿ ಯುವ ಸಮುದಾಯ ದುಶ್ಚಟಗಳಿಂದ ದೂರವಿದ್ದು, ಉತ್ತಮ ಪ್ರಜೆಯಾಗುವಂತೆ ಕರೆ ನೀಡಿದರು. ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ವಿವಿಧಕ್ಷೇತ್ರದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಶ್ರೀನಿಧಿ ಸೇವಾ ವಾಹಿನಿ ಅಧ್ಯಕ್ಷ ಕೇಶವ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಉದ್ಯಮಿಗಳು, ಹೊಸಾಕುಳಿ ವಿ.ಎಸ್.ಎಸ್. ಅಧ್ಯಕ್ಷ ಸುರೇಶ ಶೆಟ್ಟಿ, ಜಿಲ್ಲಾ ಗಾಣಿಗ ಸಂಘದ ಅಧ್ಯಕ್ಷ ಗಜಾನನ ಶೆಟ್ಟಿ, ವೆಂಕಟ್ರಮಣ ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷಎಸ್.ಕೆ.ಶೆಟ್ಟಿ, ಜಯಕರ್ನಾಟಕ ಸಂಘದ ಉಪಾಧ್ಯಕ್ಷ ಪ್ರದೀಪ ಶೆಟ್ಟಿ, ನಿವೃತ್ತ ತಾಲೂಕಾ ಎಲ್. ಎಚ್.ಪಿ. ಸುನಂದಾ ಶೆಟ್ಟಿ, ಉದ್ಯಮಿ ನರಸಿಂಹ ಶೆಟ್ಟಿ ಕಡತೋಕಾ,ಸಿವಿಲ್ ಇಂಜಿನಿಯರ್ ಸದಾನಂದ ಕೇಶವ ಶೆಟ್ಟಿ, ಗುತ್ತಿಗೆದಾರ ಸಂದೇಶ ಶೆಟ್ಟಿ ಸಂಘಟನೆಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಘದ ಸದಸ್ಯ ಮಂಜುನಾಥ ಶೆಟ್ಟಿ ಸ್ವಾಗತಿಸಿ, ಆರ್.ಬಿ.ಶೆಟ್ಟಿ ಮತ್ತು ಜಿ.ಆರ್.ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು. ಮಹೇಶ ಶೆಟ್ಟಿ ವಂದಿಸಿದರು.

ಸಂಸ್ಕಾರ ಮನೆಯಿಂದಲೇ ಆರಂಭವಾಗಲಿ: ಅನಂತಕುಮಾರ ಹೆಗಡೆ

ಯಲ್ಲಾಪುರ: ಬ್ರಾಹ್ಮಣತ್ವ ಕೇವಲ ಜಾತಿಯಲ್ಲ, ಅದು ಒಂದು ಯೋಗ್ಯತೆ ಹಾಗೂ ಅರ್ಹತೆ. ಜಾತಿಯ ಸಂಕೋಲೆಯಲ್ಲಿ ಯೋಚಿಸಿದಾಗ ನಾವು ಬ್ರಾಹ್ಮಣರಾಗುವುದಿಲ್ಲ, ನಮ್ಮ ಆಚಾರ ವಿಚಾರಗಳಿಂದ ನಾವು ಬ್ರಾಹ್ಮಣರಾಗುತ್ತೇವೆ ಎಂದು ಮಾಜಿ ಸಂಸದ ಅನಂತಕುಮಾರ ಹೆಗಡೆ ಹೇಳಿದರು.

ಭಾನುವಾರ ಪಟ್ಟಣದ ಕಾರ್ಮಿಕ ಭವನದಲ್ಲಿ ನಡೆದ ಸಂಸ್ಕಾರೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಹುಟ್ಟಿದ ಸಂಸ್ಕಾರೋತ್ಸವದ ಹರಿವು ಈಗ ಎಲ್ಲೆಡೆ ಹೊರಟಿದೆ. ನಮ್ಮ ಸಮಾಜದ ಆಚಾರ ವಿಚಾರ, ಸಂಸ್ಕಾರ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಿಳಿಸಲು ಇಂತಹ ಕಾರ್ಯಕ್ರಮ ಅಗತ್ಯ. ಕಾಲ ಕಾರ್ಯ ಕಾರಣ ಇಲ್ಲದೆ ಜಗತ್ತಿನಲ್ಲಿ ಯಾವುದೇ ಕಾರ್ಯ ನಡೆಯುವುದಿಲ್ಲ, ಬಲವಂತದಿಂದ ಯಾವುದೇ ಕೆಲಸಗಳು ಆಗುವುದಿಲ್ಲ, ಹೊಸತಲೆಮಾರನ್ನು ಸಂಸ್ಕಾರ ಸಂಸ್ಕೃತಿಯತ್ತ ಸಾಗಿಸುವುದು ಹೇಗೆ ಎನ್ನುವುದು ದೊಡ್ಡ ಪ್ರಶ್ನೆಯಾಗಿದೆ. ಮನೆಯಲ್ಲಿ ನಮ್ಮ ಮಕ್ಕಳು ನಮ್ಮ ಮಾತನ್ನು ಕೇಳಬೇಕು ಅಂತಾದರೆ, ನಮ್ಮ ನಡತೆ ಮುಖ್ಯವಾಗುತ್ತದೆ. ನಾವು ಅದನ್ನು ಪಾಲಿಸಿದಾಗ ನಮ್ಮ ಮಕ್ಕಳು ಅದನ್ನು ಪಾಲಿಸುತ್ತಾರೆ. ಸಂಸ್ಕಾರ ಎನ್ನುವುದು ಮನೆಯಿಂದ ಆರಂಭವಾಗಬೇಕು ಹೊರತು ಯಾವುದೇ ಪಾಠಶಾಲೆಯಿಂದ ಆರಂಭಿಸಲು ಸಾಧ್ಯವಾಗುವುದಿಲ್ಲ. ಜಾತೀಯತೆಯ ಮೇಲೆ ಹೋಗಬೇಕೇ ಅಥವಾ ನಮ್ಮತನದ ಮೇಲೆ ನಮ್ಮನ್ನು ಗುರುತಿಸಬೇಕೇ ಎನ್ನುವುದು ಜಿಜ್ಞಾಸೆಯ ಪ್ರಶ್ನೆಯಾಗಿದೆ. ಬ್ರಾಹ್ಮಣತ್ವ ಕಳೆದುಹೋಗುತ್ತಿದೆ. ನಾವು ವಾಸ್ತವಿಕತೆಯನ್ನು ಅರಿತುಕೊಳ್ಳದಿದ್ದಾಗ ನಮಗೆ ಮುಂದಿನ ದಾರಿ ಕಾಣುವುದಿಲ್ಲ, ನಾನು ಬದಲಾದಾಗ ಮಾತ್ರ ಸಮಾಜದ ಬದಲಾವಣೆ ಸಾಧ್ಯ ಎಂಬುದನ್ನು ನಾವೆಲ್ಲ ಅರಿಯಬೇಕು ಎಂದರು.



ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ. ಗಿರಿಧರ ಕಜೆ ಮಾತನಾಡಿ, ಗಿರಿಧರ ಕಜೆ ಮಾತನಾಡಿ, ಅಪಾರ ಸಂಖ್ಯೆಯಲ್ಲಿ ಇಲ್ಲಿ ಜನ ಸೇರಿರುವುದು ಕಾರ್ಯಕ್ರಮದ ಸಾರ್ಥಕತೆಯನ್ನು ತೋರುತ್ತದೆ. ನಮಗೆ ಎಷ್ಟೇ ಕಷ್ಟ ಬಂದರೂ, ಸಮಾಜಕ್ಕಾಗಿ ನಮ್ಮನ್ನು ನಾವು ತೊಡಗಿಸಿಕೊಂಡಾಗ ಮಾತ್ರ ಸಾರ್ಥಕತೆ ಕಾಣಲು ಸಾಧ್ಯ. ಆತಿಥ್ಯಕ್ಕೆ ಹೆಸರುವಾಸಿಯಾಗಿರುವ ಯಲ್ಲಾಪುರದಲ್ಲಿ ಇಂತಹ ಯಶಸ್ವಿ ಕಾರ್ಯಕ್ರಮ ಆದರ್ಶವಾಗಿದೆ ಎಂದರು. ಸಂಕಲ್ಪ ಸಂಸ್ಥೆಯ ಅಧ್ಯಕ್ಷ ಪ್ರಮೋದ್ ಹೆಗಡೆ ಮಾತನಾಡಿದರು.

ಅಖಿಲ ಹವ್ಯಕ ಮಹಾಸಭೆಯ ಉಪಾಧ್ಯಕ್ಷ ಕೆಕ್ಕಾರ್, ನಿರ್ದೇಶಕ ಶ್ರೀಧರ ಭಟ್, ಪ್ರಶಾಂತ ಹೆಗಡೆ, ಇದ್ದರು. ಅಖಿಲ ಹವ್ಯಕ ಮಹಾಸಭಾದ ಮಹಿಳಾ ವೇದಿಕೆಯನ್ನು ಆರಂಭಿಸಿ, ಪದಾಧಿಕಾರಿಗಳಿಗೆ ಆಜ್ಞಾ ಪತ್ರ ನೀಡಲಾಯಿತು. ಪ್ರಸಾದಿನಿ ಭಟ್ ಪ್ರಾರ್ಥಿಸಿದರು. ನಿರ್ದೇಶಕ ಗೋಪಾಲಕೃಷ್ಣ ಭಟ್ ಹಂಡ್ರಮನೆ ಸ್ವಾಗತಿಸಿದರು. ವೀಣಾ ಜೋಶಿ ಮತ್ತು ರವೀಂದ್ರ ಗಾಂವ್ಕರ್ ನಿರ್ವಹಿಸಿದರು. ಸಂಸ್ಕಾರೋತ್ಸವದ ಸಂಚಾಲಕ ಸಣ್ಣಪ್ಪ ಭಾಗ್ವತ್ ವಂದಿಸಿದರು.

ಕಿರುಸುದ್ದಿ

ಹೊಲದಲ್ಲಿ ವ್ಯಕ್ತಿ ಶವ ಪತ್ತೆ: ಹತ್ಯೆ ಶಂಕೆ

◆**ಬ್ಯಾಡಗಿ:** ತಾಲೂಕಿನ ಕದರಮಂಡಲಗಿ ಗ್ರಾಮದ ಬೆಳಕೇರಿ ರಸ್ತೆಯ ಸಮೀಪ ಜಮೀನ ಒಂದರಲ್ಲಿ ವ್ಯಕ್ತಿಯ ಮೃತದೇಹವು ರಕ್ತದ ನಡುವಿನ ಸ್ಥಿತಿಯಲ್ಲಿ ಬೆಳಗ್ಗೆ ಪತ್ತೆಯಾಗಿದ್ದು ಹುಲಿಯಾಗಿರುವ ಬಗ್ಗೆ ಪೊಲೀಸರು ಶಂಕಿ ವ್ಯಕ್ತಪಡಿಸಿದ್ದಾರೆ.

ಮೃತ ವ್ಯಕ್ತಿಯನ್ನು ಕದರಮಂಡಲಗಿ ಗ್ರಾಮದ ರೈತ ಮಹೇಶ್ ಪಾಟೀಲ್ 36 ಎಂದು ಗುರುತಿಸಲಾಗಿದೆ ತಡರಾತ್ರಿ ಜಮೀನಿನಲ್ಲಿ ಹುಳಿ ಮಾಡಲೆಂದು ಟ್ರ್ಯಾಕ್ಟರ್ ತೆಗೆದುಕೊಂಡು ಹೋಗಿರುವುದಾಗಿ ತಿಳಿದು ಬಂದಿದ್ದು ಕೃಷಿ ಚಟುವಟಿಕೆ ನಡೆಸಲು ಹೋಗಿದ್ದ ವ್ಯಕ್ತಿ ಶವವಾಗಿ ಪತ್ತೆಯಾಗಿದ್ದು ಕುಟುಂಬಸ್ಥರು ಸೇರಿದಂತೆ ಗ್ರಾಮದ ಜನರಲ್ಲಿ ಆಘಾತ ಸೃಷ್ಟಿಸಿದೆ.

ಜಮೀನಿನ ಮಧ್ಯಭಾಗದಲ್ಲಿ ರಕ್ತದ ಮಡುವಿನಲ್ಲಿ ಮೃತ ದೇಹ ದೊರೆತಿದ್ದು ಮುಖ ಹಾಗೂ ದೇಹದ ವಿವಿಧ ಭಾಗಗಳಲ್ಲಿ ಗಾಯದ ಗುರುತುಗಳು ಪತ್ತೆಯಾಗಿವೆ ಸ್ಥಳೀಯರು ಬೆಳಗ್ಗೆ ಜಮೀನಿಗೆ ತೆರಳುತ್ತಿದ್ದ ವೇಳೆ ಮೃತನ ದೇಹ ನೋಡಿ ತಕ್ಷಣ ಬ್ಯಾಡಗಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಹತ್ಯದ ಬಗ್ಗೆ ಶಂಕೆ ವ್ಯಕ್ತವಾಗಿದ್ದರೂ ಸಹ ಘಟನೆಗೆ ಕಾರಣ ಮಾತ್ರ ನಿಗೂಢವಾಗಿದೆ.

ಸ್ಥಳಕ್ಕೆ ಎಸ್ ಪಿ ಯಶೋಧ ಒಂಟ ಗೋಡೆ ಹಾಗೂ ಪಿಎಸ್ಐ ಭಾರತಿ ಕುರಿ ಹಾಗೂ ಪೊಲೀಸ್ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಮೃತ್ಯುನ ಪತ್ನಿ ಮಂಜುಳಾ ಪಾಟೀಲ ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ತೋಟಕ್ಕೆಂದು ಹೋದ ಯುವಕ ಕಣ್ಮರೆ

◆**ಹಾವೇರಿ:** ಎಲೆಬಳ್ಳಿ ತೋಟಕ್ಕೆ ಕೆಲಸಕ್ಕೆ ಹೋಗುತ್ತೇನೆಂದು ಹೋದ ಯುವಕ ವಾಪಾಸ್ ಬಾರದೆ ಕಾಣೆಯಾಗಿದ್ದಾರೆ. ಕಾರಡಗಿ ಗ್ರಾಮದ ದುದ್ದುಸಾಬ ಖಾದರಸಾಬ ಬಂಕಾಪುರ (28) ಕಾಣೆಯಾದ ಯುವಕ. ಈತ ಮನೆಯಲ್ಲಿ ಎಲೆಬಳ್ಳಿ ತೋಟಕ್ಕೆ ಹೋಗುವುದಾಗಿ ಹೇಳಿ ಹೋದವರು ವಾಪಸ್ ಮನೆಗೆ ಬಂದಿಲ್ಲ ಎಂದು ಸಹೋದರ ಮೌಲಾಲಿ ಬಂಕಾಪುರ ಪೊಲೀಸರಿಗೆ ದೂರು ನೀಡಿದ್ದಾರೆ. ಹುಲಗೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಡಿದ ಅಮಲಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ

◆**ಹಾವೇರಿ:** ಮನೆಯಲ್ಲಿ ಯಾರೂ ಇಲ್ಲದಿರುವಾಗ ನೇಣು ಬಿಗಿದುಕೊಂಡು ವ್ಯಕ್ತಿಯೊಬ್ಬ ಆತ್ಮಹತ್ಯೆಗೆ ಶರಣಾದ ಘಟನೆ ಜಿಲ್ಲೆಯ ಶಿಗ್ಗಾವಿ ತಾಲೂಕು ಸುರುಪಗಟ್ಟಿ ಗ್ರಾಮದಲ್ಲಿ ನಡೆದಿದೆ.

ಕಾರಡಗಿ ಗ್ರಾಮದ ಸದ್ದಾಂಹುಸೇನ ಗೌಸ್ ಮೋದಿನ ಮುಲ್ಲಾ (35) ಮೃತ ದುರ್ದೈವಿ, ಈತ ಗೌಂಡಿ ಕೆಲಸ ಮಾಡಿಕೊಂಡಿದ್ದು, ಮದ್ಯವ್ಯಸನಕ್ಕೆ ಅಂಟಿಕೊಂಡಿದ್ದ, ಮದ್ಯ ಸೇವನೆ ಮಾಡಬೇಡ ಎಂದು ಮೃತರ ಪತ್ನಿ ಎಷ್ಟೇ ಬುದ್ಧಿವಾದ ಹೇಳಿದರೂ ಕೂಡ ಕೇಳದೇ ಇರುವ ಕಾರಣದಿಂದ ಬೇಸತ್ತ ಹೆಂಡತಿ ಸರಾಯಿ ಕುಡಿಯುವುದನ್ನ ಬಿಡಲಿಲ್ಲ ಎಂದರೆ ತವರು ಮನೆಗೆ ಹೋಗುವುದಾಗಿ ತಿಳಿಸಿ, ಆದರಂತೆ ಹೆಂಡತಿ ತನ್ನ ಮಕ್ಕಳೊಂದಿಗೆ ತವರು ಮನೆಗೆ ಹೋಗಿದ್ದಳು.

ಈ ಸಂದರ್ಭದಲ್ಲಿ ಈತ ತನ್ನಷ್ಟಕ್ಕೆ ತಾನೇ ಮನೆಯಲ್ಲಿ ಯಾರೂ ಇಲ್ಲದಿರುವಾಗ ಕುಡಿದ ಅಮಲಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಪತ್ನಿ ಮೋದಿನಬೀ ಮುಲ್ಲಾ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹುಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ -ಬಸ್ ಡಿಕ್ಕಿ: ಸವಾರನಿಗೆ ಗಾಯ

◆**ಹಾವೇರಿ:** ಬೈಕ್ ಸವಾರನೊಬ್ಬ ಕೆಎಸ್ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಇಬ್ಬರು ಸವಾರರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಸಂಗೂರು-ದಿಡಗೂರು ರಸ್ತೆಯಲ್ಲಿ ನಡೆದಿದೆ.

ಚಿಕ್ಕಹುಲ್ಲಾಳ ಗ್ರಾಮದ ವಿರೇಂದ್ರಪ್ಪ ಕೋಳೂರ ಎಂಬ ಬೈಕ್ ಸವಾರ ಹಾಗೂ ಹಿಂಬದಿ ಕುಳಿತಿದ್ದ ಯಶವಂತ ಎಂಬುವವರೇ ಗಂಭೀರ ಗಾಯಗೊಂಡವರು. ಆರೋಪಿ ಬೈಕ್ ಸವಾರ ವಿರೇಂದ್ರಪ್ಪ ದಿಡಗೂರು ಕಡೆಯಿಂದ ಸಂಗೂರ ಕಡೆಗೆ ಹೋಗುವಾಗ ಬೈಕ್‌ನ್ನು ನಿಯಂತ್ರಿಸಲಾಗದೆ ಎದುರಿಗೆ ಬರುತ್ತಿದ್ದ ಕೆಎಸ್ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದಾನೆ. ಘಟನೆಯಲ್ಲಿ ಬೈಕ್ ಸವಾರರು ಗಾಯಗೊಂಡಿದ್ದು, ಬಸ್ ಕೂಡ ಜಖಂಗೊಂಡಿದೆ ಎಂದು ಕೆಎಸ್ಆರ್‌ಟಿಸಿ ಬಸ್‌ನ ಚಾಲಕ ದಾದಾಭಾಷಾ ದಾವಲಬಾಯಿ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ಜಿಲ್ಲಾ ಯುವ ಕಾಂಗ್ರೆಸ್ ಘಟಕದ ಕಾರ್ಯದರ್ಶಿಯಾಗಿ ಯಲಗಚ್ಚ ಗ್ರಾಮದ ಯುವ ಮುಖಂಡ ಕೃಷ್ಣಕುಮಾರ ತುಕ್ಕಮ್ಮನವರ ಅವರನ್ನು ನೇಮಕ ಮಾಡಿ ಜಿಲ್ಲಾಧ್ಯಕ್ಷ ದರ್ಶನಕುಮಾರ ಲಮಾಣಿ ಆದೇಶ ಪತ್ರ ನೀಡಿದರು. ಜಿಲ್ಲೆಯಾದ್ಯಂತ ಪಕ್ಷದ ಹಿರಿಯರ ಮಾರ್ಗದರ್ಶನದಲ್ಲಿ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಆದೇಶ ಪತ್ರದಲ್ಲಿ ಸೂಚಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ ವಕ್ತಾರ ಸಂಜಯಗಾಂಧಿ ಸಂಜೀವಣ್ಣನವರ, ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಜಮೀರ್ ಚೆಗರಿ, ತಾಲೂಕು ಕೆಡಿಪಿ ಸದಸ್ಯ ಮಲ್ಲಿಕಾರ್ಜುನ ಬೂದಿಗಟ್ಟಿ ಉಪಸ್ಥಿತರಿದ್ದರು.

ಪರಿಸರ ಸಮತೋಲನಕ್ಕೆ ಜೇನುನೊಣಗಳ ಪಾತ್ರ ಅನನ್ಯ

◆**ಶಿರಸಿ:** ವಿಶ್ವ ಜೇನು ದಿನಾಚರಣೆ ಪ್ರಯುಕ್ತ ರೋಟರಿ ಕ್ಲಬ್ ಶಿರಸಿ, ತೋಟಗಾರಿಕಾ ಇಲಾಖೆ ಹಾಗೂ ಮಧು ಬೀ ನರ್ಸರಿ ಇವರ ಜಂಟಿ ಆಶ್ರಯದಲ್ಲಿ ಜೇನು ಕೃಷಿ ತರಬೇತಿ ಕಾರ್ಯಾಗಾರವು ರೋಟರಿ ಸಭಾಭವನದಲ್ಲಿ ಶನಿವಾರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಡಾ. ಬಿ.ಪಿ. ಸತೀಶ್, ಪರಿಸರ ಸಮತೋಲನದಲ್ಲಿ ಜೇನುನೊಣಗಳ ಪಾತ್ರ ಅನನ್ಯವಾಗಿದ್ದು, ದೇಶದಲ್ಲಿ 'ಸಿಹಿ ಕ್ರಾಂತಿ' ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುತ್ತಿದೆ ಎಂದರು. ಹಿರಿಯ ಸಹಾಯಕ ನಿರ್ದೇಶಕ ಸತೀಶ್ ಹೆಗಡೆ ಮಾತನಾಡಿ, ಮಲೆನಾಡು ಭಾಗಕ್ಕೆ ತುಡವೆ ಜೇನು ಅತ್ಯಂತ ಸೂಕ್ತವಾಗಿದ್ದು, ಪರಾಗಸ್ಪರ್ಶದಿಂದ ಬೆಳೆಗಳ ಇಳುವರಿ ಹೆಚ್ಚುತ್ತದೆ ಎಂದು ತಿಳಿಸಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥೆ ಡಾ. ರೂಪಾ ಎಸ್. ಪಾಟೀಲ್ ದೈನಂದಿನ ನಿರ್ವಹಣೆ ಕುರಿತು ಮಾರ್ಗದರ್ಶನ ನೀಡಿದರು. ಜೇನು ತಜ್ಞ ಡಾ. ಮಧುಕೇಶ್ವರ ಹೆಗಡೆ ಅವರು ಜೇನು ಕುಟುಂಬದ ವಿಭಜನೆ, ರೋಗ ಹತೋಟಿ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳಾದ ಲಿಪ್ ಬಾಮ್, ಹನಿ ಜಾಮ್, ಬೀ ವೇನಮ್ ಆಯಿಲ್ ತಯಾರಿಕಾ ವಿಧಾನಗಳನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ರೋಟರಿ ಸಂಸ್ಥೆಯ ಶ್ರೀನಿವಾಸ ನಾಯ್ಕ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಗಾರದಲ್ಲಿ ನೂರಕ್ಕೂ ಅಧಿಕ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಗಿದ್ದು, ಲಕ್ಕಿ ಡಿಪ್ ಮೂಲಕ 10 ಉಚಿತ ಜೇನು ಪೆಟ್ಟಿಗೆಗಳನ್ನು ನೀಡಲಾಯಿತು. ವೇದಿಕೆಯಲ್ಲಿ ಗಣೇಶ್ ಹೆಗಡೆ, ವಿನಾಯಕ್ ಶೇಟ್, ಸತೀಶ್ ಭಟ್, ವಿದ್ಯಾ ನಾಯ್ಕ್, ಸಂಧ್ಯಾ ನಾಯ್ಕ್ ಉಪಸ್ಥಿತರಿದ್ದರು. ಹರೀಶ್ ಹೆಗಡೆ ವಂದಿಸಿದರು.



ಶಿರಸಿ: ವಿಶ್ವ ಜೇನು ದಿನಾಚರಣೆ ಪ್ರಯುಕ್ತ ರೋಟರಿ ಕ್ಲಬ್ ಶಿರಸಿ, ತೋಟಗಾರಿಕಾ ಇಲಾಖೆ ಹಾಗೂ ಮಧು ಬೀ ನರ್ಸರಿ ಇವರ ಜಂಟಿ ಆಶ್ರಯದಲ್ಲಿ ಜೇನು ಕೃಷಿ ತರಬೇತಿ ಕಾರ್ಯಾಗಾರವು ರೋಟರಿ ಸಭಾಭವನದಲ್ಲಿ ಶನಿವಾರ ನಡೆಯಿತು.ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಡಾ. ಬಿ.ಪಿ. ಸತೀಶ್ ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಬಂಕ್ ಮುಂದೆ ಸರದಿ ಸಾಲಿನಲ್ಲಿ ವಾಹನಗಳು

ಡೀಸೆಲ್ ಕೊರತೆ: ಸಾರ್ವಜನಿಕರ ಪರದಾಟ

◆**ಹಾವೇರಿ:** ಮುಂಗಾರು ಹಂಗಾಮಿನ ಹೊಸ್ತಿಲಲ್ಲಿರುವ ಜಿಲ್ಲೆಯ ರೈತರಿಗೆ ಕೃಷಿ ಕಾರ್ಯಗಳನ್ನು ಕೈಗೊಳ್ಳಲು ಅಗತ್ಯವಿರುವ ಡೀಸೆಲ್ ಕೊರತೆ ಭಾನುವಾರವೂ ಮುಂದುವರೆದಿದೆ. ಜಿಲ್ಲಾ ಕೇಂದ್ರ ಹಾವೇರಿಯ ಹಲವು ಬಂಕ್‌ಗಳಲ್ಲಿ ಡೀಸೆಲ್ ಲಭ್ಯತೆ ಇಲ್ಲದ್ದರಿಂದ ಶನಿವಾರ ಜನ ಪರದಾಡಿದ್ದರು. ಆದರೆ, ಭಾನುವಾರ ಕೆಲವು ಬಂಕ್‌ಗಳಲ್ಲಿ ಡೀಸೆಲ್ ಹೊಸ ಸ್ಟಾಕ್ ಬಂದ ಹಿನ್ನೆಲೆಯಲ್ಲಿ ಕೆಲವೇ ಬಂಕ್‌ಗಳಲ್ಲಿ ಲಭ್ಯವಿದ್ದ ಡೀಸೆಲ್‌ಗಾಗಿ ರೈತರು ಮತ್ತು ಸಾರ್ವಜನಿಕರು ಸರದಿ ಸಾಲಿನಲ್ಲಿ ವಾಹನಗಳು ನಿಂತಿರುವ ದೃಶ್ಯ ಕಂಡುಬಂದಿತು.

ಜಿಲ್ಲೆಯಲ್ಲಿ ಮುಂಗಾರು ಹಂಗಾಮು ಆರಂಭವಾಗುತ್ತಿರುವ ಹಿನ್ನೆಲೆ ಕೃಷಿ ಕಾರ್ಯಕ್ಕಾಗಿ ಟ್ರ್ಯಾಕ್ಟರ್ ಸೇರಿದಂತೆ ವಿವಿಧ ಕೃಷಿ ಯಂತ್ರೋಪಕರಣಗಳ ಅಗತ್ಯವಿದೆ. ಆದರೆ, ಮಧ್ಯ ಪ್ರಾಚ್ಯ ರಾಷ್ಟ್ರಗಳ ಯುದ್ಧದ ಬಿಕ್ಕಟ್ಟಿನಿಂದಾಗಿ ಸಮರ್ಪಕ ಇಂಧನ ಪೂರೈಕೆಯಾಗದ ಕಾರಣ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗುತ್ತಿದೆ. ಕಳೆದೆರಡು ದಿನಗಳಿಂದ ಜಿಲ್ಲೆಯ ಬಹುತೇಕ ಪೆಟ್ರೋಲ್ ಬಂಕ್‌ಗಳಲ್ಲಿ ಡೀಸೆಲ್ ಸಮಸ್ಯೆ ಉಲ್ಬಣಗೊಂಡಿದೆ. ಶನಿವಾರ ದಿನವಿಡಿ ಬಂಕ್‌ಗಳಿಗೆ ಕ್ಯಾನ್ ಸಮೇತ ಸರದಿ ಸಾಲಿನಲ್ಲಿ ನಿಂತು ಕೆಲವರು ಡೀಸೆಲ್ ಪಡೆದುಕೊಂಡರೆ ಮತ್ತೆ ಕೆಲವರೂ ಖಾಲಿ ಕೈಯಲ್ಲಿ ಮರಳಿದ್ದರು.

ಶನಿವಾರ ಮಧ್ಯರಾತ್ರಿ ಕೆಲಹೊತ್ತು ಜೋರು ಮಳೆಯಾದ ಹಿನ್ನೆಲೆ ಕೆಲವು ಟ್ರ್ಯಾಕ್ಟರ್ ಬಳಸಿ ಕೃಷಿ ಚಟುವಟಿಕೆ ಮಾಡುತ್ತಿದ್ದ ರೈತರು ಭಾನುವಾರ ಮಧ್ಯಾಹ್ನದವರೆಗೆ ಕೆಲಸಗಳನ್ನು ಸ್ಥಗಿತಗೊಳಿಸಿದ್ದರು. ಏತನ್ಮಧ್ಯೆ ಭಾನುವಾರ ಬೆಳಗ್ಗೆ ನಗರದ ಎರಡ್ಮೂರು ಬಂಕ್‌ನಲ್ಲಿ ಮಾತ್ರ ಸಿಗುತ್ತಿದ್ದ ಡೀಸೆಲ್ ಪಡೆಯಲು ರೈತರು, ಟ್ರ್ಯಾಕ್ಟರ್, ಕಾರು, ಟಂಟಂ ವಾಹನಗಳ ಚಾಲಕರು ಸರದಿ ಸಾಲಿನಲ್ಲಿ ನಿಂತು ಡೀಸೆಲ್ ತುಂಬಿಸಿಕೊಳ್ಳುತ್ತಿದ್ದ ದೃಶ್ಯ ಕಂಡುಬಂತು. ಇನ್ನು ಕೆಲ ಬಂಕ್‌ಗಳಲ್ಲಿ ಮಧ್ಯಾಹ್ನದ ವೇಳೆಯ ತನಕ ಡೀಸೆಲ್ ಅಭಾವದ ಸಮಸ್ಯೆ ಮುಂದುವರೆದಿತ್ತು. ಮಧ್ಯಾಹ್ನದ ನಂತರ ಡೀಸೆಲ್ ಟ್ಯಾಂಕರ್ ಬಂದ ಹಿನ್ನೆಲೆ ಅನ್ಲೋಡ್ ಮಾಡಿದ ಮೇಲೆ ಕೆಲವರು ಡಿಸೇಲ್ ಪಡೆದುಕೊಳ್ಳುತ್ತಿದ್ದರು.



> ಈಗಾಗಲೇ ಡೀಸೆಲ್ ಕೊರತೆ ಹಿನ್ನೆಲೆಯಲ್ಲಿ ಟ್ರ್ಯಾಕ್ಟರ್ ಮತ್ತು ಕೃಷಿ ಯಂತ್ರೋಪಕರಣಗಳ ದರ ಹೆಚ್ಚಳವಾಗಿದೆ. ಇದು ರೈತರ ಮೇಲೆ ಮತ್ತಷ್ಟು ಆರ್ಥಿಕ ಹೊರೆಯನ್ನು ಹೆಚ್ಚಿಸಲಿದೆ.
>
> ■ ಮೂಕಪ್ಪ ಅಗಸಿಬಾಗಿಲ, ರೈತ

> ರಾತ್ರಿ ವೇಳೆ ಮಳೆಯಾಗಿದ್ದಕ್ಕೆ ಟ್ರ್ಯಾಕ್ಟರ್‌ಗಳು ಹೆಚ್ಚಾಗಿ ಜಮೀನುಗಳಿಗೆ ಹೋಗಿಲ್ಲ, ಜತೆಗೆ ನಿನ್ನೆಯವರೆಗೂ ಡೀಸೆಲ್ ಅಭಾವ ಎಲ್ಲೆಡೆ ಕಂಡುಬಂದಿದ್ದರಿಂದ ಹೆಚ್ಚಿನ ಸಂಖ್ಯೆಯ ಜನರು ಡೀಸೆಲ್ ಪಡೆದುಕೊಳ್ಳಲು ಬಂದಿಲ್ಲ. ನಾಳೆಗೆ (ಸೋಮವಾರ) ಮತ್ತೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಸಾಧ್ಯತೆ ಇದೆ.
>
> ■ ಕಾಂತೇಶ್, ಬಂಕ್‌ನ ಸಿಬ್ಬಂದಿ.

ಗ್ರಾಮೀಣದಲ್ಲಿ ತಪ್ಪದ ಕ್ಯೂ: ಜಿಲ್ಲೆಯ ಸವಣೂರು, ಹಾವೇರಿ, ಹಾನಗಲ್ಲ, ಶಿಗ್ಗಾವಿ, ರಾಣೇಬೆನ್ನೂರು ಸೇರಿದಂತೆ ಹಲವು ಭಾಗಗಳಲ್ಲಿ ಡೀಸೆಲ್ ಸಿಗದೇ ರೈತರು ಪರದಾಡುತ್ತಿದ್ದಾರೆ. ಜಿಲ್ಲೆಯ ಗ್ರಾಮೀಣ ಭಾಗದ ಹೊಸರಿತ್ತಿ, ಗುತ್ತಲ ಭಾಗದ ಕೆಲವೆಡೆ ಬೈಕ್, ಕಾರು, ಟ್ರ್ಯಾಕ್ಟರ್‌ಗಳು ವಿವಿಧ ಪೆಟ್ರೋಲ್ ಬಂಕ್‌ಗಳ ಎದುರು ಜನರು ಕ್ಯಾನ್ ಹಿಡಿದು ಸರದಿ ಸಾಲಿನಲ್ಲಿ ನಿಂತ ದೃಶ್ಯಗಳು, ವಾಹನಗಳ ಉದ್ದನೆಯ ಸಾಲುಗಳು ಕಂಡುಬರುತ್ತಿವೆ.

ಇಂಧನ ಪೂರೈಕೆಗೆ ಒತ್ತಾಯ: ಇಂಧನ ಅಭಾವದಿಂದ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಹಾಗೂ ತೈಲ ಕಂಪನಿಗಳು ತಕ್ಷಣ ಕ್ರಮ ಕೈಗೊಂಡು ಸಮರ್ಪಕವಾಗಿ ಡಿಸೆಲ್ ಹಾಗೂ ಪೆಟ್ರೋಲ್ ಪೂರೈಕೆ ಮಾಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

◆**ಶಿಗ್ಗಾವಿ:** ಪಟ್ಟಣದ ಜ್ಞಾನದೀಪ ಅಕಾಡೆಮಿ ಕೋಚಿಂಗ್ ಕ್ಲಾಸಸ್‌ನ 2026ರ 10 ನೇ ತರಗತಿಯ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಂಸ್ಥೆಯಲ್ಲಿ ತರಬೇತಿ ಪಡೆದು ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕ ಎಂ.ಬಿ.ಹಳೆಮನೆ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟಕರಾಗಿ ಜಿ.ಎಸ್.ದೇಸಾಯಿ ಪಾಲ್ಗೊಂಡಿದ್ದರು. ಮುಖ್ಯ ಅತಿಥಿಯಾಗಿ ಸುರೇಶ್ ದೇಸಾಯಿ, ಮಲ್ಲನಗೌಡ ಸಂಶಿ, ರಾಜೇಶ್ ಹುಡೇದ, ಸಂಜೀವರಡ್ಡಿ ವಂಟಿಗೋಡಿ, ಜ್ಯೋತಿ ವಂಟಿಗೋಡಿ ಉಪಸ್ಥಿತರಿದ್ದರು. ವೀರೇಶ್ ಹೈಗರ ನಿರೂಪಿಸಿದರು. ಸಂಸ್ಥೆ ನಿರ್ದೇಶಕ ಮಂಜುನಾಥ ರಾಯಾಪೂರ ಸ್ವಾಗತಿಸಿದರು. ವಿಶಾಲ್‌ಗೌಡ ವಂದಿಸಿದರು.



ಅಧ್ಯಕ್ಷರಾಗಿ ಉಮೇಶ ಕೆರೆಕಟ್ಟೆ ಆಯ್ಕೆ

◆**ಭಟ್ಕಳ:** ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮುಂದಿನ ಐದು ವರ್ಷದ ಆಡಳಿತ ಸಮಿತಿಗೆ ನೂತನ ಅಧ್ಯಕ್ಷರಾಗಿ ಶಿಕ್ಷಕ ಮುರುಡೇಶ್ವರದ ಉಮೇಶ ಕೆರೆಕಟ್ಟೆ ಅವಿರೋಧವಾಗಿ ಆಯ್ಕೆಯಾದರು. ಶನಿವಾರ ಬೆಳಿಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಹುದ್ದೆಗಾಗಿ ಇವರ ಎದುರು ಯಾರು ಸ್ಪರ್ಧಿಸಿದ ಕಾರಣ ಅವಿರೋಧ ಆಯ್ಕೆ ಎಂದು ಘೋಷಿಸಲಾಯಿತು. ಉಪಾಧ್ಯಕ್ಷರಾಗಿ ನಾಗೇಶ ಸೀತಾರಾಮ ಮಡಿವಾಳ ಮತ್ತು ಜಯಶ್ರೀ ದತ್ತಾತ್ರೇಯ ಆಚಾರಿ ಆಯ್ಕೆಯಾದರೆ,ಪ್ರಧಾನ ಕಾರ್ಯದರ್ಶಿಯಾಗಿ ಪ್ರಶಾಂತ ಮಂಜು ಕಾಯ್ಕಿಣಿ ಆಯ್ಕೆಯಾದರು. ಅದರಂತೆ ಸಹಕಾರ್ಯದರ್ಶಿಯಾಗಿ ಜನಾರ್ಧನ ಮೊಗೇರ, ಖಜಾಂಜಿಯಾಗಿ ವಸಂತ ಮಂಜುನಾಥ ನಾಯ್ಕ, ಸಂಘಟನಾ ಕಾರ್ಯದರ್ಶಿಯಾಗಿ ಪೂರ್ಣಿಮಾ ನಾಯ್ಕ, ಕಾರ್ಯಕಾರಿ ಸದಸ್ಯರಾಗಿ ಉಲ್ಲಾಸ ನಾಯ್ಕ, ಜಯಲಕ್ಷ್ಮೀ ಅನಂತ ನಾಯ್ಕ ಹಾಗೂ ಪರ್ಪೆಚ್ಚು ಆಗ್ನೇಲ್ ಗೋಮ್ಸ ಅವಿರೋಧವಾಗಿ ಆಯ್ಕೆಯಾದರು. ತಾಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಾಘವೇಂದ್ರ ನಾಯ್ಕ ಚುನಾವಣಾಧಿಕಾರಿಯಾಗಿ ಹಾಗೂ ಶಿಕ್ಷಣ ಸಂಯೋಜಕ ಶ್ರೀನಿವಾಸ ನಾಯ್ಕ ಸಹಾಯಕ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.




ರಸ್ತೆ ಅಂಚು ಕುಸಿತ: ಸಾರ್ವಜನಿಕರ ಆಕ್ರೋಶ

◆**ಗೋಕರ್ಣ:** ಕೋಟಿ ರೂಪಾಯಿ ವೆಚ್ಚ ಮಾಡಿ ನಿರ್ಮಿದ ರಸ್ತೆ ಮಳೆಗೆ ಹಾಳಾದ ನಂತರ ಲಕ್ಷಾಂತರ ರೂಪಾಯಿಯಲ್ಲಿ ದುರಸ್ತಿಗೊಳಿಸಿದ ಇಲ್ಲಿನ ರಾಜ್ಯ ಹೆದ್ದಾರಿಯ ಭದ್ರಕಾಳಿ ಕಾಲೇಜಿನ ಎದುರುನಿಂದ ಓಂ ಬೀಚ್ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ಮಾರ್ಗ ಮತ್ತೆ ಕುಸಿಯುವ ಆತಂಕ ಎದುರಾಗಿದೆ.

ಕಳೆದ ಮೂರು ವರ್ಷಗಳ ಹಿಂದೆ ಪರ್ವತದ ಪ್ರದೇಶದಲ್ಲಿ ಹಾದು ಹೋಗುವ ಈ ಸಂಪರ್ಕ ಮಾರ್ಗವನ್ನ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಸಿಮೆಂಟ್ ರಸ್ತೆ ನಿರ್ಮಾಣ ಮಾಡಲಾಗಿತ್ತು. ಮಳೆಯ ಅಬ್ಬರಕ್ಕೆ ಒಂದೇ ವರ್ಷದಲ್ಲಿ ಕುಸಿದು ಬಿದ್ದಿತ್ತು. ಅಲ್ಲದೇ ತಡೆಗೋಡೆ ಹಾಗೂ ಚರಂಡಿ ನಿರ್ಮಾಣವು ಅಸಮರ್ಪಕವಾದ ಕಾರಣ ಮಣ್ಣು ಕಲ್ಲುಗಳ ರಾಶಿಯೇ ಬಿದ್ದಿತ್ತು. ನಂತರ ವರ್ಷಗಳ ಕಾಲ ಅಪಾಯದ ರಸ್ತೆಯಲ್ಲೇ ವಾಹನ ಸಂಚರಿಸುತ್ತಿತ್ತು, ಈ ಬಗ್ಗೆ ಪತ್ರಿಕಾ ವರದಿ ಪ್ರಕಟಗೊಂಡ ಬಳಿಕ ಎಚ್ಚೆತ್ತ ಲೋಕೋಪಯೋಗಿ ಇಲಾಖೆ ಈ ಬಾರಿ 15 ಲಕ್ಷ ರೂಪಾಯಿ ಮಂಜೂರಿ ಮಾಡಿ ದುರಸ್ತಿ ಕಾರ್ಯಕ್ಕೆ ಚಾಲನೆ ನೀಡಿತ್ತು.

ರಸ್ತೆ ಬಿರುಕು ಬಿಟ್ಟ ಕಡೆಯಲ್ಲಿ ತಡಗೋಡೆ ನಿರ್ಮಿಸಲಾಗಿದೆ. ಇಲ್ಲಿ ಮಣ್ಣು ತುಂಬಿ ಸಮತಟ್ಟು ಮಾಡಿರುವುದು ಮಳೆಯ ನೀರಿಗೆ ಕೊಚ್ಚಿ ಹೋಗಿದ್ದು, ಕೆಲವೆಡೆ ಕಂದಕ ಬಿದ್ದಿದೆ. ಅಲ್ಲದೇ ಚರಂಡಿಯಲ್ಲಿ ತುಂಬಿದ ಮಣ್ಣಿನ ರಾಶಿಯನ್ನ ಸಹ ತೆಗೆಯದೇ ಬಿಡಲಾಗಿದ್ದು, ಮಳೆಗಾಲದಲ್ಲಿ ಅವಘಡ ಸಂಭವಿಸುವ ಅಪಾಯವಿದೆ. ಈ ಕಾಮಾಗರಿ ಮಗಿದು ಮೂರು ತಿಂಗಳೊಳಗೆ ಮೊದಲ ಮಳೆಗೆ ಪಿಚ್ಚಿಂಗ್ ಮಾಡಿ ತುಂಬಿದ ಮಣ್ಣು ಕೊಚ್ಚಿ ಹೋಗಿದ್ದು, ರಸ್ತೆ ಅಂಚು ಪುನಃ ಕುಸಿದು ಕಂದಕ ನಿರ್ಮಾಣವಾಗಿದೆ. ಕಳಪೆ ಕಾಮಗಾರಿ ನಡೆಸಿ ಸಾರ್ವಜನಿಕರ ಹಣವನ್ನ ಪೋಲು ಮಾಡಲಾಗುತ್ತಿದೆಯೇ ಎಂದು ಜನರು ಸಂದೇಹ ವ್ಯಕ್ತಪಡಿಸಿದ್ದು ತಕ್ಷಣ ಸರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಬಗ್ಗೆ ಕುಮಟಾ ಲೋಕೋಪಯೋಗಿ ಇಲಾಖೆ ಇಂಜಿನೀಯರ ಸೋಮನಾಥ ಭಂಡಾರಿ ಪ್ರತಿಕ್ರಿಯಿಸಿ ಶಿವರಾತ್ರಿ ಸಮಯದಲ್ಲಿ ತುರ್ತಾಗಿ ಕಾಮಗಾರಿ ಆರಂಭಿಸಿ ಮಣ್ಣು ತುಂಬಲಾಗಿತ್ತು. ನೀರು ಹಾಕದ ಪರಿಣಾಮ ಮಳೆಗೆ ಮಣ್ಣು ಕುಸಿದಿರಬಹುದು, ಮತ್ತೆ ಮಣ್ಣು ಹಾಕಿ ಸಮತಟ್ಟುಗೊಳಿಸಿ ನೀರ ಸರಾಗವಾಗಿ ಹರಿದು ಹೋಗುವಂತೆ ಮಾಡಿಕೊಟ್ಟು ರಸ್ತೆಯ ಸುಸ್ಥಿತಿಯಲ್ಲಿಡಲು ಕ್ರಮ ತೆಗೆದುಕೊಳ್ಳುತ್ತೇವೆ ಎಂದಿದ್ದಾರೆ.



ಸ್ಕೇಟಿಂಗ್: ಹಾವೇರಿ ಮಕ್ಕಳ ಸಾಧನೆ

◆**ಹಾವೇರಿ:** ಹುಬ್ಬಳ್ಳಿಯ ಇಂದಿರಾಗಾಂಧಿ ಗ್ಲಾಸ್ ಹೌಸ್‌ನಲ್ಲಿ ಧಾರವಾಡ ಜಿಲ್ಲಾ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ಹಾಗೂ ಕರ್ನಾಟಕ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ 5ನೇ ಜಿಲ್ಲಾ ಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್ಸ್‌ನಲ್ಲಿ ಹಾವೇರಿಯ ಐದು ವಿದ್ಯಾರ್ಥಿಗಳು ಚಾಂಪಿಯನ್‌ಶಿಪ್ ಪಡೆದರು.

ಹಾವೇರಿಯಲ್ಲಿ ಸರಿಯಾದ ಸ್ಕೇಟಿಂಗ್ ಮೈದಾನ ಇಲ್ಲದಿದ್ದರೂ ಬಾಸ್ಕೆಟ್ ಬಾಲ್ ಮೈದಾನದಲ್ಲಿ ಶ್ರಮದಿಂದ ಸ್ಕೇಟಿಂಗ್ ಪರಿಣಿತಿ ಪಡೆದು ಹುಬ್ಬಳ್ಳಿಯಲ್ಲಿ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿ ಸ್ಕೇಟಿಂಗ್ ಪಟುಗಳು ವಯಸ್ಸಿನ ಕ್ರಮವಾಗಿ 10 ರಿಂದ 12 ವಯಸ್ಸಿನ ಎಸ್.ವಿ. ಪ್ರಕುಲ್ ಪ್ರಥಮ ಸ್ಥಾನ, 12ರಿಂದ 15 ವಯಸ್ಸಿನ ವೈಷ್ಣವಿ ಆರ್. ಪ್ರಥಮ ಸ್ಥಾನ, ಅಪೂರ್ವ ಬೂದಗಟ್ಟಿ ದ್ವಿತೀಯ ಸ್ಥಾನ, 15 ರಿಂದ 18 ವಯಸ್ಸಿನ ಅಖಿಲ್ ಅಲ್ಲಾಪುರ್ ದ್ವಿತೀಯ ಸ್ಥಾನ, 19 ವಯಸ್ಸಿನ ಮೇಲ್ಪಟ್ಟ ಆಸಿಮ್ ಅಲ್ಲಾಪುರ್ ಪ್ರಥಮ ಸ್ಥಾನ ಪಡೆದು ಹಾವೇರಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಈ ಸಂದರ್ಭದಲ್ಲಿ ಓಂ ಯುವಕ ಸಂಘದ ಪ್ರಶಾಂತ ಅಸುಂಡಿ, ಗಣೇಶ ರಾಯ್ಕರ್, ಸಂತೋಷ ಪಿಸೆ, ಹುಬ್ಬಳ್ಳಿಯ ತರಬೇತುದಾರರಾದ ಮಲ್ಲಿಕಾರ್ಜುನ ಕಾಡಪ್ಪನವರ್, ಅಕ್ಷಯ್ ಹಾಗೂ ಸ್ಕೇಟಿಂಗ್ ವಿದ್ಯಾರ್ಥಿಗಳಾದ ಧನುಷ್ ಭಜಂತ್ರಿ, ಸಿಂಚನಾ ಮಂಗಳೂರು, ತೇಜೇಂದ್ರ ಮುಂದಿನಮನಿ ಇದ್ದರು.



ಹಿಜಾಬ್ ಅವಕಾಶ ನಿರ್ಧಾರ ಹಿಂಪಡೆಯಲು ಆಗ್ರಹಿಸಿ ಮನವಿ

◆**ಹಳಿಯಾಳ:** ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವ ಹಾಗೂ ಕೇಸರಿ ಶಾಲು ಧರಿಸುವುದಕ್ಕೆ ನಿರ್ಬಂಧ ವಿಧಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ತಕ್ಷಣ ಹಿಂಪಡೆಯಬೇಕು ಎಂದು ಆಗ್ರಹಿಸಿ ಹಳಿಯಾಳದ ಧರ್ಮಪ್ರೇಮಿಗಳು ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಮನವಿಯಲ್ಲಿ; ಸರ್ಕಾರದ ಈ ನಿರ್ಧಾರವು ಸಮಾನತೆ, ಧರ್ಮನಿರಪೇಕ್ಷತೆ ಹಾಗೂ ಏಕರೂಪದ ಸಮವಸ್ತ್ರ ನೀತಿಗೆ ವಿರುದ್ಧವಾಗಿದೆ. 2022ರಲ್ಲಿ ಉಡುಪಿಯಲ್ಲಿ ಆರಂಭವಾದ ಹಿಜಾಬ್ ವಿವಾದದ ಕುರಿತು ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪಿನಲ್ಲಿ ನಿಗದಿತ ಸಮವಸ್ತ್ರ ಪಾಲನೆಗೆ ಒತ್ತು ನೀಡಲಾಗಿತ್ತು. ಇಂತಹ ಸಂದರ್ಭದಲ್ಲಿ ಏಕಪಕ್ಷೀಯವಾಗಿ ಹಿಜಾಬ್ ಗೆ ಅವಕಾಶ ನೀಡಿರುವುದು ನ್ಯಾಯಾಂಗ ಪ್ರಕ್ರಿಯೆಯ ವಿರುದ್ಧವಾಗಿದೆ. ಶಿಕ್ಷಣ ಸಂಸ್ಥೆಗಳು ಜ್ಞಾನ, ಶಿಸ್ತು ಮತ್ತು ರಾಷ್ಟ್ರೀಯ ಏಕತೆಯ ಕೇಂದ್ರಗಳಾಗಿರಬೇಕು. ಧಾರ್ಮಿಕ ಚಿಹ್ನೆಗಳಿಗೆ ಅವಕಾಶ ನೀಡುವುದರಿಂದ ವಿದ್ಯಾರ್ಥಿಗಳಲ್ಲಿ ಧರ್ಮ ಆಧಾರಿತ ವಿಭಜನೆ ಹಾಗೂ ತಾರತಮ್ಯ ಹೆಚ್ಚಾಗುವ ಸಾಧ್ಯತೆ ಇದೆ. ಅಲ್ಲದೇ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಏಕರೂಪದ ಸಮವಸ್ತ್ರ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಹಾಗೂ ಯಾವುದೇ ಧಾರ್ಮಿಕ ಚಿಹ್ನೆ, ಶಾಲು ಅಥವಾ ಪ್ರತ್ಯೇಕ ಧಾರ್ಮಿಕ ಉಡುಪುಗಳಿಗೆ ಅವಕಾಶ ನೀಡಬಾರದೆಂದು ಆಗ್ರಹಿಸಲಾಗಿದೆ ಎಂದು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ವಿಠೋಬಾ ಮಾಲ್ಸೆಕರ, ಗಜಾನನ ಪಾಲ್ಕರ, ಶಿವಾನಂದ ಶೆಟ್ಟರ, ರಾಘವೇಂದ್ರ ಛಲವಾದಿ, ಅಭಿನಂದನ ಮಸೂರಕರ್, ಶಂಕರ ರೇಣಕೆ, ವಿನೋದ ಘೀಂಡೆ, ಮಂಜುನಾಥ ಗಾಡಿ, ಜಿ.ಟಿ. ಗಂಗಾಧರ, ಎಸ್.ಎಸ್. ಗೋಕಾವಿ, ರಾಜು ವಿ, ವಿ.ಕೆ. ಸಾವಂತ್, ಆರ್.ಬಿ. ಛಲವಾದಿ, ಶಿವಾನಂದ, ಸದಾನಂದ ಬಾಳೆಕುಂದ್ರಿ, ಇತರರು ಇದ್ದರು.



ಫಲಾನುಭವಿಗಳಿಗೆ ಶಾಶ್ವತ ಮನೆ ಮಾಲೀಕತ್ವದ ಹಕ್ಕುಪತ್ರ ವಿತರಣೆ

◆**ಹಾನಗಲ್ಲ:** ತಾಲೂಕಿನಲ್ಲಿ ಕೃಷಿ ಮೇಲೆ ಅವಲಂಬಿತ ಕುಟುಂಬಗಳ ಸಂಖ್ಯೆ ಹೆಚ್ಚಿದೆ. ಒಂದು ಕೃಷಿಯಲ್ಲಿ ತೊಡಗಬೇಕು, ಇಲ್ಲವೇ ಕೂಲಿ ಕೆಲಸಕ್ಕೆ ಹೋಗಬೇಕು. ಇಂಥ ಪರಿಸ್ಥಿತಿಯಲ್ಲಿನ ಕುಟುಂಬಗಳಿಗೆ ಶಾಶ್ವತ ಮನೆ ಮಾಲಿಕತ್ವ ದೊರಕಿಸುವ ದೃಢಸಂಕಲ್ಪ ಈಡೇರಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಮಕರವಳ್ಳಿ ಗ್ರಾಮದಲ್ಲಿ ನಡೆದ ಸಮಾರಂಭದಲ್ಲಿ ನಾನಾ ಕಂದಾಯ ಗ್ರಾಮ ಮತ್ತು ಉಪಗ್ರಾಮಗಳ 323 ಫಲಾನುಭವಿ ಕುಟುಂಬಗಳಿಗೆ ಶಾಶ್ವತ ಮನೆ ಮಾಲೀಕತ್ವದ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು. 2023 ರ ಸಾರ್ವತ್ರಿಕ ಚುನಾವಣೆಗೂ ಮೊದಲು ತಾಲೂಕಿನಲ್ಲಿ 51 ದಿನಗಳ ಕಾಲ ದೃಢಸಂಕಲ್ಪ ಯಾತ್ರೆಯ ಮೂಲಕ ಪಾದಯಾತ್ರೆಯಲ್ಲಿ ಪ್ರತಿ ಗ್ರಾಮ, ಬೀದಿಗಳಲ್ಲಿ ಸುತ್ತಾಡಿ ಜನರ ಕಷ್ಟ ಅರಿಯುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಸರ್ಕಾರಿ ಮತ್ತು ಖಾಸಗಿ ಜಮೀನುಗಳಲ್ಲಿ ದಾಖಲೆ ಇಲ್ಲದೇ ಮನೆ ಕಟ್ಟಿಕೊಂಡು ಅತಂತ್ರ ಸ್ಥಿತಿಯಲ್ಲಿ ಸಾವಿರಾರು ಕುಟುಂಬಗಳು ದಿನದೂಡುತ್ತಿದ್ದ ಸಂಗತಿ ತಿಳಿದು, ಆ ಸಂದರ್ಭದಲ್ಲಿಯೇ ಇಂಥ ಕುಟುಂಬಗಳನ್ನು ಸ್ವತಂತ್ರಗೊಳಿಸುವ ದೃಢಸಂಕಲ್ಪ ಮಾಡಲಾಗಿತ್ತು. ಸುದೈವದಿಂದ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಆಡಳಿತಕ್ಕೆ ಬಂದು ಬಡವರ ಸಂಕಷ್ಟ ದೂರಾಗಿದೆ. ಕಾಂಗ್ರೆಸ್ ಪಕ್ಷ ಚುನಾವಣೆ ಸಂದರ್ಭದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಭರವಸೆ ನೀಡಿದ್ದರೆ ತಾಲೂಕಿನಲ್ಲಿ 6 ನೇ ಗ್ಯಾರಂಟಿಯಾಗಿ ಹಕ್ಕುಪತ್ರ ವಿತರಿಸುವ ಭರವಸೆ ನೀಡಲಾಗಿತ್ತು. ಇದೀಗ ನುಡಿದಂತೆ ನಡೆದ ತೃಪ್ತಿ ಇದೆ ಎಂದರು.



ತಹಶೀಲ್ದಾರ್ ರೇಣುಕಾ ಎಸ್., ಕಾನೂನಿನಲ್ಲಿರುವ ಅವಕಾಶ ಬಳಸಿ ಶಾಶ್ವತ ಮನೆ ಮಾಲೀಕತ್ವ ಒದಗಿಸುವ ಕಾರ್ಯ ತಾಲೂಕಿನಲ್ಲಿ ಪ್ರಗತಿಯಲ್ಲಿದೆ. ಈಗಾಗಲೇ 8 ಸಾವಿರ ಕುಟುಂಬಗಳಿಗೆ ಮಾಲಿಕತ್ವ ನೀಡಲು ಸರಕಾರದ ಅನುಮೋದನೆ ಸಿಕ್ಕಿದೆ. ಕಂದಾಯ ಗ್ರಾಮ, ಉಪ ಗ್ರಾಮಗಳನ್ನು ಅಸ್ತಿತ್ವಕ್ಕೆ ತಂದು ಹಕ್ಕುಪತ್ರ ವಿತರಿಸಲಾಗುತ್ತಿದೆ. ಸರಕಾರವೇ ಫಲಾನುಭವಿ ಕುಟುಂಬಗಳ ಮನೆ ಬಾಗಿಲಿಗೆ ಹೋಗಿ ಸರ್ವೆ ಕೈಗೊಂಡು, ನೋಂದಣಿ ಪತ್ರ, ಈಸ್ವತ್ತಿನೊಂದಿಗೆ ಕಂಪ್ಯೂಟರೀಕೃತ ಹಕ್ಕುಪತ್ರ ಒಳಗೊಂಡ ದಾಖಲೆಗಳನ್ನು ನೀಡಿದೆ. ಭೂ ಗ್ಯಾರಂಟಿ ಕಾರ್ಯಕ್ರಮದಡಿ ಕರ್ನಾಟಕದಲ್ಲಿ ಅತೀ ಹೆಚ್ಚು ಕುಟುಂಬಗಳು ನಮ್ಮ ತಾಲೂಕಿನಲ್ಲಿ ಹಕ್ಕುಪತ್ರ ಪಡೆದುಕೊಂಡಿವೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಹಿರೇಕಾಂಶಿ ಗ್ರಾಮದ 130, ಮಕರವಳ್ಳಿ 73, ಶಾಡಗುಪ್ಪಿ 70, ಕೊಂಡೋಜಿ 40 ಹಾಗೂ ಯತ್ತಿನಹಳ್ಳಿ ಮ ಆಡೂರು ಗ್ರಾಮದ 10 ಫಲಾನುಭವಿ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲಾಯಿತು. ಕಂದಾಯ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು, ಮುಖಂಡರು ಇದ್ದರು.

ಇಂದು ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ: ಪ್ರಶಸ್ತಿ ಪ್ರದಾನ

◆**ಹಾವೇರಿ:** ಕರುನಾಡ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಲಾ ಬಳಗದ ರಾಜ್ಯ ಸಮಿತಿ ವತಿಯಿಂದ ಹಾವೇರಿಯ ಡಾ.ಬಿ.ಆರ್. ಅಂಬೇಡ್ಕರ ಸಭಾಭವನದಲ್ಲಿ ಮೇ 25ರಂದು ಬೆಳಗ್ಗೆ 10.30ಕ್ಕೆ 2ನೇ ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಕರುನಾಡ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಬಳಗದ ಸಂಸ್ಥಾಪಕ ಅಧ್ಯಕ್ಷ ಎಸ್.ಡಿ. ಮುಡೆಣ್ಣವರ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮ್ಮೇಳನದ ಸರ್ವಾಧ್ಯಕ್ಷರಾಗಿ ಮುಖ್ಯೋಪಾಧ್ಯಾಯ, ಸಾಹಿತಿ, ರಂಗ ನಿರ್ದೇಶಕ ಜಿ.ಎಂ. ಓಂಕಾರಣ್ಣನವರ ಅವರನ್ನು ಆಯ್ಕೆ ಮಾಡಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಕನ್ನಡ ಧ್ವಜಾರೋಹಣವನ್ನು ಹಿರಿಯ ಸಾಹಿತಿ ಕೋರಗಲ್ ವಿರುಪಾಕ್ಷಪ್ಪ ನೆರವೇರಿಸಲಿದ್ದಾರೆ. 9ಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಡಿಎಸ್‌ಎಸ್ ರಾಜ್ಯ ಸಂಚಾಲಕ ಎಸ್.ಫಕ್ಕೀರಪ್ಪ ಚಾಲನೆ ನೀಡಲಿದ್ದು, ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು, ಕನ್ನಡಾಭಿಮಾನಿಗಳು ಹಾಗೂ ಮಕ್ಕಳು ಭಾಗವಹಿಸಲಿದ್ದಾರೆ ಎಂದರು.

ಬೆಳಗ್ಗೆ 10.30ಕ್ಕೆ ರಾಷ್ಟ್ರಪ್ರಶಸ್ತಿ ಪುರಸ್ಕೃತ ದಿ.ಗಂಗಾಧರ ನಂದಿ ಮಹಾವೇದಿಕೆಯಲ್ಲಿ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಲಾಗುವುದು. ನಾಡಿನ ವಿವಿಧ ಮಠಾಧೀಶರ ಸಾನಿಧ್ಯದಲ್ಲಿ ಭುವನೇಶ್ವರಿ ದೇವಿಗೆ ಪುಷ್ಪಾರ್ಪಣೆ, ವೇದಿಕೆ ಉದ್ಘಾಟನೆ ಹಾಗೂ ನೆನಪಿನ ಆರು ದ್ವಾರಗಳ ಉದ್ಘಾಟನೆ ನಡೆಯಲಿದೆ. ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಸಮ್ಮೇಳನ ಉದ್ಘಾಟಿಸಲಿದ್ದು, ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ವಿವಿಧ ತಾಲೂಕುಗಳ ಶಾಸಕರು, ಜಿಲ್ಲಾಮಟ್ಟದ ಅಧಿಕಾರಿಗಳು, ರಾಜ್ಯದ ವಿವಿಧ ಭಾಗಗಳಿಂದ ಆಗಮಿಸುವ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಇದೇ ವೇಳೆ ವಿವಿಧ ಪುಸ್ತಕ ಲೋಕಾರ್ಪಣೆ, ಸಮ್ಮೇಳನಾಧ್ಯಕ್ಷರ ನುಡಿಯೊಂದಿಗೆ ವಿವಿಧ ಸಾಹಿತ್ಯ ಹಾಗೂ ಚಿಂತನಾತ್ಮಕ ಗೋಷ್ಠಿಗಳು ನಡೆಯಲಿವೆ. ಮಧ್ಯಾಹ್ನ 1ಕ್ಕೆ ''ಕನ್ನಡ ಸಾಹಿತ್ಯಕ್ಕೆ ಹಾವೇರಿ ಜಿಲ್ಲೆಯ ಕೊಡುಗೆಗಳು'' ಎಂಬ ವಿಚಾರಗೋಷ್ಠಿಗೆ ಡಾ.ಎಸ್.ಪಿ. ಗೌಡರ ಅಧ್ಯಕ್ಷತೆ ವಹಿಸಲಿದ್ದು, ಡಾ.ಪುಷ್ಪಾವತಿ ಶಲವಡಿಮಠ ಉಪನ್ಯಾಸ ನೀಡಲಿದ್ದಾರೆ.

ಮಧ್ಯಾಹ್ನ 2.30ಕ್ಕೆ ಕವಿಗೋಷ್ಠಿ. ಹಿರಿಯ ಸಾಹಿತಿ ಡಾ.ಸತೀಶ ಕುಲಕರ್ಣಿ ಅಧ್ಯಕ್ಷತೆ ವಹಿಸಲಿದ್ದು, ಪ್ರೊ.ಎಚ್.ಎ. ಭಿಕ್ಷಾವರ್ತಿಮಠ ಆಶಯ ನುಡಿಯಲಿದ್ದಾರೆ. ನಂತರ ರಾಜ್ಯದ ವಿವಿಧ ಜಿಲ್ಲೆಗಳ 28 ಕವಿಗಳು ಕವನ ವಾಚನ ಮಾಡಲಿದ್ದಾರೆ ಎಂದು ತಿಳಿಸಿದರು.

ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಇದರಲ್ಲಿ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಇದೇ ವೇಳೆ ರಾಜ್ಯದ 31 ಜಿಲ್ಲೆಗಳ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಹಾಗೂ ಪ್ರಶಸ್ತಿ ಪ್ರದಾನ ನಡೆಯಲಿದೆ. ಸಮಾರೋಪ ಸಮಾರಂಭದಲ್ಲಿ ವಿವಿಧ ಮಠಾಧೀಶರು ಸಾನಿಧ್ಯ ವಹಿಸಲಿದ್ದು, ವಿಪ ಸದಸ್ಯ ಎಸ್.ವಿ. ಸಂಕನೂರ, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ವಿಶೇಷ ಆಮಂತ್ರಿತರಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿಎಸ್‌ಎಸ್ ರಾಜ್ಯ ಸಂಚಾಲಕ ಎಸ್.ಫಕ್ಕೀರಪ್ಪ, ಎಸ್.ಎಲ್ ಕಾಡದೇವರಮಠ, ಚಂಪಾ ಹುಣಸಿಕಟ್ಟಿ, ಉಡಚಪ್ಪ ಮಾಳಗಿ, ಸಂಜಯಗಾಂಧಿ ಸಂಜೀವಣ್ಣನವರ, ನಾಗರಾಜ ಎಚ್., ಎಫ್.ಎಚ್. ಕೊರವರ, ವೈ.ಬಿ. ಲಕ್ಷ್ಮಣ, ಮಂಜುಳಾ ಅಕ್ಕಿ, ಲೀಲಾವತಿ ಪಾಟೀಲ, ಕುಮಾರ ತಳವಾರ ಮತ್ತಿತರರು ಇದ್ದರು.

ಕಿರುಸುದ್ದಿ

ಅರ್ಜಿ ಆಹ್ವಾನ

ಖಾನಾಪುರ: ತಾಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಖಾನಾಪುರ ಪಟ್ಟಣದ ಬಾಲಕರ, ಬಾಲಕಿಯರ ವಸತಿ ನಿಲಯ, ಇಟಗಿಯ ಬಾಲಕರ ವಸತಿ ನಿಲಯ ಇಟಗಿ ಕಾರ್ಯನಿರ್ವಹಿಸುತ್ತಿವೆ. ಈ ವಸತಿ ನಿಲಯಗಳಿಗೆ ಪ್ರವೇಶ ಪಡೆಯಲು ವಿವಿಧ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 5 ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಿದ ನಂತರ ದಾಖಲಾತಿಗಳನ್ನು ತಾಲೂಕು ಸಮಾಜ ಕಲ್ಯಾಣ ಇಲಾಖೆ ಕಚೇರಿ ಅಥವಾ ಸಂಬಂಧಿಸಿದ ನಿಲಯಗಳ ಮೇಲ್ವಿಚಾರಕರಿಗೆ ತಲುಪಿಸಬೇಕು ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಖಾನಾಪುರ: 2025-26 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಜರುಗಿದ ಎಸ್ಸೆಸ್ಸೆಲ್ಸಿ, ಪಿಯುಸಿ ಮತ್ತು ಅಂತಿಮ ವರ್ಷದ ಪದವಿ ಪರೀಕ್ಷೆಗಳಲ್ಲಿ ಪ್ರಥಮ ಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರೋತ್ಸಾಹ ಧನ ಮಂಜೂರು ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸತಕ್ಕದ್ದು. ಬಳಿಕ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯ ಪ್ರತಿಯನ್ನು ಪಟ್ಟಣದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸುವಂತೆ ಇಲಾಖೆಯ ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಖಾನಾಪುರ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮೆಟ್ರಿಕ್ ಪೂರ್ವ ವಸತಿನಿಲಯಗಳಿಗೆ 5 ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳು ಮತ್ತು ಮೆಟ್ರಿಕ್ ನಂತರದ ವಸತಿನಿಲಯಗಳಿಗೆ ಪಿಯುಸಿ ಅಥವಾ ಸಮಾನಾಂತರ ಕೋರ್ಸುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಿದ ನಂತರ ದಾಖಲಾತಿಗಳನ್ನು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಡಿ.ದೇವರಾಜ ಅರಸು ಭವನ, ಜಾಂಬೋಟಿ ರಸ್ತೆ ಖಾನಾಪುರ, ಈ ವಿಳಾಸದಲ್ಲಿ ತಲುಪಿಸಬೇಕು. ಮೆಟ್ರಿಕ್ ಪೂರ್ವ ವಸತಿನಿಲಯಗಳಿಗೆ ಪ್ರವೇಶ ಪಡೆಯಲು ಜೂನ್ 8 ಮತ್ತು ಮೆಟ್ರಿಕ್ ನಂತರ ವಸತಿನಿಲಯಗಳಿಗೆ ಪ್ರವೇಶ ಪಡೆಯಲು ಜೂನ್ 15 ಕೊನೆಯ ದಿನ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಬೆಳಗಾವಿ : 2026-2027 ನೇ ಸಾಲಿಗೆ ಬೈಲಹೊಂಗಲ ಹಾಗೂ ಕಿತ್ತೂರ ತಾಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಒಟ್ಟು 7 ವಿದ್ಯಾರ್ಥಿ ನಿಲಯಗಳಿಗೆ ಪ್ರವರ್ಗ-1, 2ಎ,2ಬಿ,3ಎ,3ಬಿ, ಪ.ಜಾ/ಪ.ಪಂ ಮತ್ತು ಇತರೆ ಜನಾಂಗಗಳಿಗೆ ಸೇರಿದ ಪಿ.ಯು.ಸಿ ಕೋರ್ಸಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಮೇ 25 ರಿಂದ ಜೂನ್ 15 ರೊಳಗಾಗಿ ಇಲಾಖಾ ವೆಬ್‌ಸೈಟ್ https://shp.karnataka.gov.in/bcwd ನ ಮೂಲಕ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಅಗತ್ಯ ದಾಖಲೆಗಳೊಂದಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ, ತಾಲೂಕು ಅಧಿಕಾರಿಗಳನ್ನು ಸಂಪರ್ಕಿಸುವುದು ಎಂದು ಬೈಲಹೊಂಗಲ ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಶೈಲಜಾ ಶಶಿಧರ ಪಾಟೀಲ



ಸವದತ್ತಿ: ತಾಲೂಕಿನ ಹೂಲಿ ಗ್ರಾಮದ ಅಂಗನವಾಡಿ ಶಿಕ್ಷಕಿಯಾಗಿ ಸುದೀರ್ಘವಾಗಿ 30 ವರ್ಷಗಳ ಸೇವೆ ಸಲ್ಲಿಸಿದ್ದ ಶೈಲಜಾ ಶಶಿಧರ್ ಪಾಟೀಲ್ (75) ಅವರು ಗುರ್ಲ ಹೊಸೂರಿನಲ್ಲಿ ನಿಧನರಾಗಿದ್ದಾರೆ. ಮೃತರು ಪುತ್ರರು ಹಾಗೂ ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ: ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಅಡಿಯಲ್ಲಿ ಬಸರೀಕಟ್ಟಿಯ ಕನ್ನಡ ಹಾಗೂ ಮರಾಠಿ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚುವುದನ್ನು ವಿರೋಧಿಸಿ ಭಾನುವಾರ ಎಐಡಿಎಸ್‌ಓ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದಲ್ಲಿ ಬಸರೀಕಟ್ಟಿಯ ಗ್ರಾಮಸ್ಥರು, ಪೋಷಕರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಸರ್ಕಾರಿ ಶಾಲೆ ಮುಚ್ಚುವುದಕ್ಕೆ ವಿರೋಧ

ಬೆಳಗಾವಿ : ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಅಡಿಯಲ್ಲಿ ಬಸರೀಕಟ್ಟಿಯ ಕನ್ನಡ ಹಾಗೂ ಮರಾಠಿ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚುವುದನ್ನು ವಿರೋಧಿಸಿ ಭಾನುವಾರ ಎಐಡಿಎಸ್‌ಓ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದಲ್ಲಿ ಬಸರೀಕಟ್ಟಿಯ ಗ್ರಾಮಸ್ಥರು, ಪೋಷಕರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ನಮ್ಮೂರ ಶಾಲೆ ನಮ್ಮ ಕಣ್ಮಣಿ ಎಂಬ ಬ್ಯಾನರ್ ಕಟ್ಟುವುದರ ಮೂಲಕ ಶಾಲೆ ಮುಚ್ಚುವುದರ ವಿರುದ್ಧ ಪ್ರತಿರೋಧ ವ್ಯಕ್ತಪಡಿಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಊರಿನ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಅಧ್ಯಕ್ಷರಾದ ಬಸವಾನಿ ಕೊಂಡಸಕೊಪ್ಪ, ಬಡ ಮಕ್ಕಳು ಓದುವ ನಮ್ಮೂರಿನ ಸರ್ಕಾರಿ ಶಾಲೆ ಮುಚ್ಚುವ ನಿರ್ಧಾರವನ್ನು ರಾಜ್ಯ ಸರ್ಕಾರವು ಈ ಕೂಡಲೇ ಹಿಂಪಡೆಯಬೇಕು. ಇದು ಬಡವರ ವಿರೋಧಿ ನಿರ್ಧಾರವಾಗಿದೆ. ನಮ್ಮೂರಿನಲ್ಲಿ ಕನ್ನಡ ಮತ್ತು ಮರಾಠಿಗರ ಮಕ್ಕಳು ಒಟ್ಟಿಗೆ ಓದುತ್ತಿದ್ದಾರೆ. ಇಂತಹ ಶಾಲೆಯನ್ನು ಮುಚ್ಚುವುದು ನಮ್ಮೂರಿನ ಅಸ್ಮಿತೆಗೆ ಧಕ್ಕೆ ಮಾಡಿದಂತೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.ಎಐಡಿಎಸ್‌ಓ ಜಿಲ್ಲಾ ಸಂಚಾಲಕರಾದ ಮಹಾಂತೇಶ್ ಬೀಳೂರ್ ಮಾತನಾಡಿದರು. ಏನೇ ಅಡೆತಡೆ ಬಂದರೂ ನಮ್ಮೂರ ಶಾಲೆಯನ್ನು ರಕ್ಷಿಸಬೇಕು ಎನ್ನುವ ಸಂಕಲ್ಪವನ್ನು ಗ್ರಾಮಸ್ಥರು ತೆಗೆದುಕೊಂಡರು. ಗ್ರಾಮಸ್ಥರೆಲ್ಲರ ಸಹಿ ಸಂಗ್ರಹಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸುವ ನಿರ್ಧಾರ ಕೈಗೊಣಳ್ಳಲಾಯಿತು. ಈ ವೇಳೆ ವಿಕ್ರಂ ದೇಸಾಯಿ, ಸಿದ್ದರಾಯಿ ನಾಗರೋಳಿ, ದೇವಪ್ಪ ಕೊಂಡಸಕೊಪ್ಪ ದಿಲೀಪ್ ಕೊಂಡಸಕೊಪ್ಪ, ಗ್ರಾಮಸ್ಥರು ಪೋಷಕರು ಸೇರಿದಂತೆ ವಿದ್ಯಾರ್ಥಿಗಳು ಭಾಗಿಯಾಗಿದ್ದರು.



ರಾಮದುರ್ಗ: ಪಟ್ಟಣದ ಅಮೃತಾ ಪಿ. ಕಾಲವಾಡ ಎಂಎಸ್‌ಸಿ ಭೌತಶಾಸ್ತ್ರ ವಿಷಯದಲ್ಲಿ ಬಂಗಾರದ ಪದಕ ಲಭಿಸಿದೆ. ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ಸಮಾರಂಭದಲ್ಲಿ ಬಂಗಾರದ ಪದಕ ನೀಡಿ ಗೌರವಿಸಲಾಯಿತು. ಬೆಳಗಾವಿಯ ಕೆಎಲ್‌ಇ ಡೀಮ್ಡ್ ವಿಶ್ವವಿದ್ಯಾಲಯದ ಘಟಕೋತ್ಸವದಲ್ಲಿ ವಿಶ್ವವಿದ್ಯಾಲಯದ ಕರ್ನಾಟಕ ಸರ್ಕಾರದ ಉಪಾಧ್ಯಕ್ಷ ನಿರಂಜನ ಎಸ್. ಆರ್., ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಮಹಾಂತೇಶ ಕವಟಗಿಮಠ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಸಿ. ಎಂ.ತ್ಯಾಗರಾಜ ಅಮೃತಾ ಕಾಲವಾಡಗೆ ಬಂಗಾರದ ಪದಕ ನೀಡಿ ಗೌರವಿಸಿದರು.

ಬೆಳಗಾವಿಯಲ್ಲಿ ಗೋ ವಧೆ ತಡೆಯಲು ವಿಹಿಂಪ ಒತ್ತಾಯ

ಬೆಳಗಾವಿ : ಬಕ್ರೀದ್ ಈದ್ ಸಂದರ್ಭದಲ್ಲಿ ಬೆಳಗಾವಿ ಸುತ್ತಮುತ್ತ ಗೋವಧೆ ತಡೆಯುವಂತೆ ಆಗ್ರಹಿಸಿ ಪೊಲೀಸ್ ಕಮೀಷನರ ಅವರಿಗೆ ವಿಶ್ವ ಹಿಂದು ಪರಿಷತ್ ನೇತೃತ್ವದಲ್ಲಿ ಗೋ ಭಕ್ತರು ಮನವಿ ಅರ್ಪಿಸಿ ಒತ್ತಾಯಿಸಿದರು.

ಮೇ 28ರಂದು ಬಕ್ರೀದ್ ಹಬ್ಬವಿದ್ದು, ಅಂದು ಬೆಳಗಾವಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗೋ ಹತ್ಯೆ ನಡೆಯುವ ಸಾಧ್ಯತೆ ಇದೆ. ಬೆಳಗಾವಿಯ ಕಂಜರಗಲ್ಲಿ, ಕ್ಯಾಂಪ್ , ಕಸಾಯಿಗಲ್ಲಿ ಮುಂತಾದ ಕಡೆ ಇವು ಹೆಚ್ಚಾಗಿ ನಡೆಯುತ್ತದೆ. 33 ಕೋಟಿ ದೇವತೆಗಳಿವೆ ಎಂದು ನಂಬಿ ನಾವು ಗೋಮಾತೆಯನ್ನು ಪೂಜಿಸುತ್ತೇವೆ. ಭಾರತವು ಗೋ ಆಧಾರಿತ ಕೃಷಿ ದೇಶವಾಗಿದ್ದು, ಗೋ ಹತ್ಯೆಯನ್ನು ತಡೆಯುವುದು ತಡೆಯುವುದು ನಮ್ಮ ಎಲ್ಲರ ಕರ್ತವ್ಯ ಆಗಿದೆ. ಸುಪ್ರೀಮ್ ಕೋರ್ಟಿನ ಆದೇಶ ಸಹಿತ ಇದೆ. ತಮ್ಮ ಸರಹದ್ದಿನಲ್ಲಿ ಬರುವ ಈ ಎಲ್ಲ ಪ್ರದೇಶದಲ್ಲಿ ವಿಶೇಷ ನಿಗಾವಹಿಸಿ ಗೋ ಹತ್ಯೆಯನ್ನು ತಡೆಯಬೇಕೆಂದು ಹಿಂದೂ ಸಮಾಜದ ಆಗ್ರಹ



» ಪ್ರಮುಖ ರಾಜೇಂದ್ರ ಜೈನ ಅವರು ಕಾನೂನಾತ್ಮಕ ಕ್ರಮ ಕೈಗೊಳ್ಳುವಂತೆ ಅಗ್ರಹಿಸಿದರು.

ಮಾಡುವುದಾಗಿ ತಿಳಿಸಲಾಗಿದೆ. ಮುಪ್ಪಿನ ಕಾಡಸಿದ್ದೇಶ್ವರ ಸ್ವಾಮೀಜಿಯವರು ಗೋ ಸಂತತಿ ನಾಶ ಆಗದಂತೆ ಕಠಿಣ ಬಂದೋಬಸ್ತ್ ಬಗ್ಗೆ ಒತ್ತಾಯಿಸಿದರು. ಭಾರತ ಗೊ ಆಧಾರಿತ ಕೃಷಿ ರಾಷ್ಟ್ರ, ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ಗೋ ವಧೆ ಆಗದಂತೆ ಎಚ್ಚರ ವಹಿಸಲು ವಿಹಿಂಪ ಪ್ರಮುಖ ಕೃಷ್ಣ ಭಟ್ಟ ಆಗ್ರಹಿಸಿದರು.

ಮುನಿಸ್ವಾಮಿ ಭಂಡಾರಿ, ಡಾ.ಸುಭಾಷ ಪಾಟೀಲ, ಸಂದೀಪ ಓವಳಕರ, ನೇತ್ರಾವತಿ ಭಾಗವತ, ವಿಜಯ ಜಾಧವ, ಆನಂದ ಕರಲಿಂಗಣ್ಣವರ, ಮಗನ್ ಭಾಯಿ ಪಾಟೀಲ,ಡಾ ಬಸವರಾಜ ರೇವಣ್ಣ ಮುಂತಾದವರು ಇದ್ದರು.

ಕಾಮಗಾರಿ ಕಳಪೆಯಾಗದಂತೆ ಕ್ರಮವಹಿಸಿ

ರಾಮದುರ್ಗ : ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಯಶಸ್ವಿ ಅನುಷ್ಠಾನದ ಜೊತೆಗೆ ಗ್ರಾಮೀಣ ಪ್ರದೇಶದ ರೈತರ ಮತ್ತು ಜನಸಾಮಾನ್ಯರಿಗೆ ಮೂಲ ಸೌಲಭ್ಯ ಕಲ್ಪಿಸಲು ಅನುದಾನ ಬಿಡುಗಡೆಯಾಗತ್ತಿದ್ದು, ಅನುದಾನದ ಸದ್ಬಳಕೆಯಾಗಲು ಅಧಿಕಾರಿಗಳು ಕಾಮಗಾರಿ ಕಳಪೆಯಾಗದಂತೆ ಉಸ್ತುವಾರಿ ಮಾಡಬೇಕು ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.

ತಾಲೂಕಿನ 25 ಲಕ್ಷ ವೆಚ್ಚದಲ್ಲಿ ಘಟಕನೂರದಿಂದ ಸುರೇಬಾನ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಸಿಸಿ ರಸ್ತೆ ನಿರ್ಮಾಣ, ರಂಕಲಕೊಪ-ದೊಡಮಂಗಡಿ ಗ್ರಾಮದ ಹತ್ತಿರ ಹೂವಿನ ಕೊಳ್ಳಕ್ಕೆ ಸಣ್ಣ ನೀರವಾರಿ ಇಲಾಖೆಯ ಅನುದಾನ ರೂ. 2.50 ಕೋಟಿ ಅನುದಾನದಲ್ಲಿ ಬ್ರಿಜ್ ಕಂ ಬ್ಯಾರೇಜ್ ನಿರ್ಮಾಣ, ರಾಮಾಪೂರದಲ್ಲಿ ರೂ. 30 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ, ಅರಿಬೆಂಚಿ ಹತ್ತಿರ ನೀರಾವರಿ ಇಲಾಖೆ ರೂ. 2.35 ಕೋಟಿ ಅನುದಾನದಲ್ಲಿ ಕಾಳುವೆಯ ಆಧುನೀಕರಣ ಮತ್ತು ರೂ. 30 ಲಕ್ಷ ವೆಚ್ಚದಲ್ಲಿ ಹುಲಕುಂದ – ಹೊಸೂರ ರಸ್ತೆ ಸುಧಾರಣೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗುತ್ತಿಗೆದಾರರು ಕಾಮಗಾರಿ ಶೀಘ್ರ ಮುಗಿಸುವ ಆತುರದಲ್ಲಿ ಕಳಪೆ ಕಾಂಗಾರಿ ಮಾಡದಂತೆ ತಿಳಿಸಿದರು.

ಕಾಮಗಾರಿ ನಡೆದ ಸಂದರ್ಭದಲ್ಲಿ ಅಧಿಕಾರಿಗಳ ಜೊತೆಗೆ ಗ್ರಾಮಸ್ಥರು ನಿಗಾವಹಿಸಬೇಕು. ಸಣ್ಣ ಪುಟ್ಟ ವಿಷಯಕ್ಕೆ ತಕರಾರು ಮಾಡದೇ ಗುಣಮಟ್ಟದ ಕಾಮಗಾರಿ ನಿರ್ವಹಣೆ ಮಾಡುವಂತೆ ಜಾಗೃತಿ ವಹಿಸಬೇಕು. ಕಳಪೆಯಾದರೆ ಅಧಿಕಾರಿಗಳ ಮತ್ತು ತಮ್ಮ ಗಮನಕ್ಕೆ ತರಲು ಹೇಳಿದರಲ್ಲದೆ ರೈತರು ಸಹಕಾರ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಪ್ರದೀಪ ಪಟ್ಟಣ, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶಿದ್ದಿಂಗಪ್ಪ ಶಿಂಗಾರಗೊಪ ಮುಖಂಡರಾದ ಫಕೀರಪ್ಪ ಕೊಂಗವಾಡ ನಾಶೀರಖಾನ್ ಶಾನೆಧಿವಾನೆ, ಜಿಪಂ ಮಾಜಿ ಸದಸ್ಯ ಜಹೂರ ಹಾಜಿ, ಕೆಎಂಎಫ್ ನಿರ್ದೇಶಕ ರಮೇಶ ಅಣ್ಣಿಗೇರಿ, ರಾಜಶೇಖರ ತೋಳಗಟ್ಟಿ, ಗುತ್ತಿಗೆದಾರ ವಿಜಯ ಶೆಟ್ಟಿ, ಪುಂಡಲೀಕ ಪಮ್ಮಾರ, ನೀರಾವರಿ ಇಲಾಖೆಯ ಎಇಇ ಶ್ರೀನಿವಾಸ ಅರಿಷನಗೋಡಿ ಸೇರಿದಂತೆ ಇದ್ದರು.



ಶ್ರೀ ಯಲ್ಲಾಲಿಂಗೇಶ್ವರ ಮಠಕ್ಕೆ ಅಶ್ವಿನಿ ಬೆಳವಡಿ ಭೇಟಿ

ಮುಗಳಖೋಡ : ಪಟ್ಟಣದ ಸುಕ್ಷೇತ್ರ ಶ್ರೀ ಯಲ್ಲಾಲಿಂಗೇಶ್ವರ ಮುಕ್ತಿಮಂದಿರಕ್ಕೆ ಭಾನುವಾರ ಸಂಜೆ ಬೆಳಗಾವಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಘಟಕದ ಜಿಲ್ಲಾಧ್ಯಕ್ಷೆ ಅಶ್ವಿನಿ ಬೆಳವಡಿ ಭೇಟಿ ನೀಡಿ ಕರ್ತೃ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ , ದರ್ಶನಾಶೀರ್ವಾದ ಪಡೆದರು. ಶ್ರೀ ಮಠದ ಅರ್ಚಕರು ಶಾಲು ಹೊದಿಸಿ, ಹೂಮಾಲೆ ಹಾಕಿ ಸತ್ಕರಿಸಿದರು. ಈ ಸಂದರ್ಭದಲ್ಲಿ ಇಟ್ನಾಳ ಗ್ರಾಪಂ ಮಾಜಿ ಸದಸ್ಯರಾದ ಲಕ್ಕವ್ವ ಭಂಗಿ , ಭೀಮವ್ವ ಮಾದರ , ವೈಷ್ಣವಿ ಕರಡಿಮಠ, ಭೀಮರೆಡ್ಡಿ ಹೊಸೂರ , ಮುತ್ತಪ್ಪ ಡಾಂಗೆ, ಸದಾಶಿವ ಡಾಂಗೆ , ಬಾಳೇಶ ತೇರದಾಳ, ಲಕ್ಷ್ಮಣ ಭಂಗಿ, ಇತರರು ಇದ್ದರು.



ಕಾರ್ಗಿಲ್ ಹುತಾತ್ಮ ವೀರ ಯೋಧನ ಮೂರ್ತಿ ಮೆರವಣಿಗೆ

ಬೆಳಗಾವಿ: ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಕಾರ್ಗಿಲ್ ಯುದ್ಧದ ವೀರ ಯೋಧ ಧೋಂಡಿಬಾ ದೇಸಾಯಿ ಅವರ ಸ್ಮರಣಾರ್ಥವಾಗಿ ಬೆಳಗಾವಿಯ ಅನಗೋಳದಿಂದ ಖಾನಾಪುರ ತಾಲೂಕಿನ ಜಾಂಬೋಟಿ ವಡಗಾಂವವರೆಗೆ ಭವ್ಯ ಮೂರ್ತಿ ಮೆರವಣಿಗೆ ಜರುಗಿತು.

ಭಾನುವಾರ ಖಾನಾಪೂರದ ಮಾಜಿ ಶಾಸಕ ಅರವಿಂದ ಪಾಟೀಲ್ ಸೇರಿದಂತೆ ಹಲವು ಗಣ್ಯರು ಹಾಗೂ ಮಾಜಿ ಸೈನಿಕರು ವೀರಯೋಧನ ತ್ಯಾಗಕ್ಕೆ ಮನದುಂಬಿ ಕೃತಜ್ಞತೆ ಸಲ್ಲಿಸಿದರು. ಬಳಿಕ ಖಾನಾಪುರ ತಾಲೂಕಿನ ಜಾಂಬೋಟಿ-ವಡಗಾಂವ ಗ್ರಾಮದ ಸುಪುತ್ರ ಧೋಂಡಿಬಾ ದೇಸಾಯಿ ಅವರು 25 ಮೇ 1999 ರಂದು ನಡೆದ ಕಾರ್ಗಿಲ್ ಯುದ್ಧದಲ್ಲಿ ದೇಶದ ಗಡಿ ಕಾಯುತ್ತಾ ವೀರಮರಣ ಹೊಂದಿದ್ದರು.

ಈ ವೀರಯೋಧನ ಬಲಿದಾನವಾಗಿ 25 ವರ್ಷಗಳು ಸಂದ ಹಿನ್ನೆಲೆಯಲ್ಲಿ ಅವರ ಸ್ಮರಣೆಯನ್ನು ಸದಾ ಹಸಿರಾಗಿಡಲು ಗ್ರಾಮಸ್ಥರು, ಕುಟುಂಬಸ್ಥರು ಹಾಗೂ ಮಾಜಿ ಸೈನಿಕರು ಒಗ್ಗೂಡಿ ಗ್ರಾಮದ

» ಮುಂದಿನ ದಿನಗಳಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಂದ ಮೂರ್ತಿಯ ಅನಾವರಣವನ್ನು ಮಾಡಲಾಗುವುದು ಎಂದು ಪ್ರಮುಖರು ತಿಳಿಸಿದ್ದಾರೆ.

ಪ್ರವೇಶದ್ವಾರದಲ್ಲಿ ಹುತಾತ್ಮ ಯೋಧನ ಭವ್ಯ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಿದ್ದಾರೆ.

ಅನಗೋಳನಿಂದಪೀರಣವಾಡಿ-ಕಿಣಯೇ ಮಾರ್ಗವಾಗಿ ಜಾಂಬೋಟಿ ವಡಗಾಂವವರೆಗೆ ಅದ್ದೂರಿ ಮೂರ್ತಿ ಮೆರವಣಿಗೆಯನ್ನು ಆಯೋಜಿಸಲಾಗಿತ್ತು.

ವಡಗಾಂವ ಜಾಂಬೋಟಿ ಗ್ರಾಮದ ಸುಪುತ್ರ ಧೋಂಡಿಬಾ ದೇಸಾಯಿ ಅವರು ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾಗಿ 25 ವರ್ಷಗಳು ಸಂದಿವೆ. ಅವರ ಮೂರ್ತಿಯನ್ನು ಮೆರವಣಿಗೆ ಮೂಲಕ ತೆಗೆದುಕೊಂಡು ಹೋಗಿ ಪ್ರತಿಷ್ಠಾಪಿಸಲಾಗುವುದು. ಈ ವೇಳೆ ವೀರ ಯೋಧನ ಮೆರವಣಿಗೆಯಲ್ಲಿ ನೂರಾರು ಜನ ಹಾಗೂ ಮಾಜಿ ಸೈನಿಕರು ಸೇರಿದಂತೆ ಇತರರು ಪಾಲ್ಗೊಂಡಿದ್ದರು.



ಸ್ವಸ್ಥತೆಯ ಮಹೋತ್ಸವ ಕೂಟ ಉದ್ಘಾಟಿಸಿದ ಶಾಸಕ

ಮೂಡಲಗಿ: ಜಗತ್ತಿಗೆ ಶಾಂತಿ ಸಂದೇಶ ಸಾರಿದ ಏಸುಕ್ರಿಸ್ತನ ತತ್ವ ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಹೇಳಿದರು.

ಇಲ್ಲಿನ ಮರೆಪ್ಪಗೋಳ ತೋಟದಲ್ಲಿ ಶನಿವಾರ ಮೆಥೋಡಿಸ್ಟ್ ಚರ್ಚ್ ಹಮ್ಮಿಕೊಂಡ ಸ್ವಸ್ಥತೆಯ ಮಹೋತ್ಸವ ಕೂಟಗಳನ್ನು ಉದ್ಘಾಟಿಸಿ ಮಾತನಾಡಿದರು.

ನೆಮ್ಮದಿ, ಸಮಾಧಾನ, ಶಾಂತಿಯ ಬಗ್ಗೆ ಸಂದೇಶ ಹೇಳಿರುವ ಏಸುಕ್ರಿಸ್ತನು ಎಲ್ಲರನ್ನೂ ಪ್ರೀತಿಸಬೇಕು. ನಮ್ಮ ವೈರಿಗಳೂ ಸಹ ತಪ್ಪು ಮಾಡಿದ್ದರೆ, ಅಂತಹ ತಪ್ಪುಗಳನ್ನು ಮರೆತು ಒಂದಾಗಿ ಪ್ರೀತಿಸಲು ಹೇಳಿದ್ದಾರೆ ಎಂದರು. ಯುನೈಟೆಡ್ ಕಿಂಗ್ಡಮ್ ನ ವೈದ್ಯ ಹಾಗೂ ಧರ್ಮ ಬೋಧಕ ಡಾ. ಜಾಬ್ ಮುಕಾಡಿ, ಬೆಂಗಳೂರು ಎಎಲ್ಜಿ ಸಂಸ್ಥೆಯ ಅಧ್ಯಕ್ಷ ರಾಜೇಶ ಫಿಲಿಪ್ಸ್ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಮೆಥೋಡಿಸ್ಟ್ ಚರ್ಚ್ ಸಭಾಪಾಲಕ ರೇ. ವಿಜಯಕುಮಾರ್ ಮೂಡಲಗಿ ವಹಿಸಿದ್ದರು.

ವೇದಿಕೆಯಲ್ಲಿ ಮುಖಂಡರಾದ ಆರ್.ಪಿ.ಸೋನವಾಲಕರ, ಜಯಾನಂದ ಪಾಟೀಲ, ವಿಜಯ ಸೋನವಾಲಕರ, ರವಿ ಸಣ್ಣಕ್ಕಿ, ಮರೆಪ್ಪ ಮರೆಪ್ಪಗೋಳ,



ರಮೇಶ ಸಣ್ಣಕ್ಕಿ, ಶಿವು ಚಂಡಕಿ, ಸೈದಪ್ಪ ಗದಾಡಿ, ಚನ್ನಪ್ಪ ಅಥಣಿ, ಈರಣ್ಣ ಬನ್ನೂರ, ಮಲಿಕ ಹುಣಶ್ಯಾಳ, ಈಶ್ವರ ಕಂಕಣವಾಡಿ, ಹಣಮಂತ ಗುಡ್ಲಮನಿ, ಸಿದ್ದು ಗಡ್ಡೇಕಾರ, ಮುಖ್ಯಾಧಿಕಾರಿ ತುಕಾರಾಮ ಮಾದರ, ಶಿವಬೋಧ ಗೋಕಾಕ, ಮೂಡಲಗಿ ಪುರಸಭೆಯ ಮಾಜಿ ಸದಸ್ಯರು, ಅನೇಕ ಗಣ್ಯರು, ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

ನಿವೃತ್ತ ಪ್ರಾಧ್ಯಾಪಕ ಶಿರಗಾಂವಕರಗೆ ಸತ್ಕಾರ

ಚಿಕ್ಕೋಡಿ: ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದರೆ ಶಿಷ್ಯ ಬಳಗ ಎಷ್ಟೊಂದು ಪ್ರೀತಿಸುತ್ತದೆ ಎಂಬುವುದಕ್ಕೆ ನಿವೃತ್ತ ಪ್ರಾಧ್ಯಾಪಕ ಎನ್ ವಿ ಶಿರಗಾಂವಕರ ಅವರನ್ನು ಸತ್ಕರಿಸಿದ ಕ್ಷಣಗಳೇ ಪ್ರತ್ಯಕ್ಷ ನಿದರ್ಶನವಾಗಿದೆ ಎಂದು ಚಿಕ್ಕೋಡಿಯ ಚರಮೂರ್ತಿ ಮಠದ ಸಂಪಾದನಾ ಸ್ವಾಮೀಜಿ ಹೇಳಿದರು.

ಪಟ್ಟಣದ ಪದ್ಮ ಮಂಗಲ ಭವನದಲ್ಲಿ ಸಿಟಿಇ ಸಂಸ್ಥೆಯ ಪಿಯು ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಭಾನುವಾರ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಹಾಗೂ ಸತ್ಕಾರ ಸಮಾರಂಭ ಉದ್ದೇಶಿಸಿ ಮಾತನಾಡಿ, ನಿವೃತ್ತಿ ಬದುಕಿನ ಬಳಿಕ ಸಮಾಜ ನಮ್ಮನ್ನು ಹೇಗೆಲ್ಲ ನೋಡುತ್ತದೆ ಎಂಬುವುದೇ ಸೇವಾ ಅವಧಿಯಲ್ಲಿ ಮಾಡಿದ ಕಾರ್ಯಸಾಧನೆಯ ಪ್ರತಿಬಿಂಬದಂತಿರುತ್ತದೆ ಎಂದರು.

ಸಿಟಿಇ ಸಂಸ್ಥೆಯ ಉಪಾಧ್ಯಕ್ಷ ವಿಜಯ ಮಾಂಜರೇಕರ ಮಾತನಾಡಿದರು. ಸಿಟಿಓ ಸಂಸ್ಥೆಯ ಪಿಯು ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಹಾಗೂ ಅಭಿಮಾನಿಗಳ ಬಳಗದವರು ವಿವಿಧ ಮಹಾನ್ ಕೃತಿಗಳ ಮೂಲಕ ಅವರ ತುಲಾಭಾರ ಮಾಡಿ ಸತ್ಕರಿಸಿ ಅಭಿಮಾನವನ್ನು ಮೆರೆದರು. ಈ ಸಂದರ್ಭದಲ್ಲಿ ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಯ ನಿರ್ದೇಶಕ ರಮೇಶ ಕಳಸದ, ಬೆಂಗಳೂರಿನ




ಆಡಳಿತ ಸುಧಾರಣಾ ಆಯೋಗದ ಕಾರ್ಯದರ್ಶಿ ರಮೇಶ ದೇಸಾಯಿ, ಕರ್ನಾಟಕ ರಾಜ್ಯ ವಿಪತ್ತು ಪರಿಹಾರ ಸಮಿತಿ ನಿರ್ದೇಶಕ ಎಂ ಎಸ್ ದಿವಾಕರ, ಜಿಲ್ಲಾ ಪಂಚಾಯಿತಿ ಸಿಇಓ ರಾಹುಲ ಸಿಂಧೆ, ಚಿಕ್ಕೋಡಿ ಉಪ ವಿಭಾಗಾಧಿಕಾರಿ ಸುಭಾಷ ಸಂಪಗಾವಿ, ಲೋಕಾಯುಕ್ತ ಡಿವೈಎಸ್ಪಿ ಬಸವರಾಜ ಮಗದುಮ್ಮ, ಡಿಡಿಪಿಯು ಪಾಂಡುರಂಗ ಭಂಡಾರಿ, ರಾಜಶೇಖರ ಡಂಬಳ, ನಿವೇದಿತಾ ಶಿರಗಾಂವಕರ, ಎಸ್ ಕೆ ಎಂಟೆತ್ತಿನವರ ಇತರರು ಇದ್ದರು.

ಮುತಗಾ ಗ್ರಾಮದ ಪುರಾತನ ಬಾವಿಗೆ ಮರುಜೀವ

ಬೆಳಗಾವಿ: ತಾಲೂಕಿನ ಮುತಗಾ ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ಧ ಜಲಮೂಲಗಳ ಸಂರಕ್ಷಣೆಗೆ ಮತ್ತೊಂದು ಹೆಜ್ಜೆ ಇಡಲಾಗಿದೆ. ಮುತಗಾ ಗ್ರಾಮದ ಕಂಚವೀರ ನಗರದಲ್ಲಿರುವ ಸುಮಾರು 300 ವರ್ಷಗಳ ಹಳೆಯ ಐತಿಹಾಸಿಕ ಬಾವಿಯೊಂದನ್ನು ಪುನಶ್ಚೇತನಗೊಳಿಸುವ ಮಹತ್ಕಾರ್ಯಕ್ಕೆ ಭಾನುವಾರ ಚಾಲನೆ ಸಿಕ್ಕಿದೆ. 'ಪ್ಯಾಸ್ ಫೌಂಡೇಶನ್ ಬೆಳಗಾವಿ' ಹಾಗೂ 'ಆಪ್ಲ ಸೇವಕರಿ ಸಂಘಟನೆ'ಯ ಜಂಟಿ ಆಶ್ರಯದಲ್ಲಿ, ಸಾರ್ವಜನಿಕರ ಕುಡಿಯುವ ನೀರಿನ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಬಾವಿಗಳಲ್ಲಿ ಸ್ವಚ್ಛತೆ ಹಾಗೂ ಹೂಳೆತ್ತುವ ಕಾಮಗಾರಿಗೆ ಅದ್ದೂರಿ ಚಾಲನೆ ನೀಡಲಾಗಿದೆ.

ಮುತಗಾ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷ ಉಮೇಶ್ ಪುರಿ ಹಾಗೂ ಮುಖಂಡ ಲಕ್ಷ್ಮಣ್ ರಾಮ್ ಜೀರವರ ವಿಶೇಷ ಮುತುವರ್ಜಿಯಿಂದಾಗಿ ಕಂಚವೀರ



ನಗರದ ಈ 300 ವರ್ಷ ಹಳೆಯ ಬಾವಿಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.

ಗ್ರಾಮ ಪಂಚಾಯತ್ ಪಿಡಿಓ ಬಸವಂತ ಕಡೇಮಣಿ ಅವರು ಶಾಸ್ತ್ರೋಕ್ತವಾಗಿ ಜಲಪೂಜೆ ನೆರವೇರಿಸುವ ಮೂಲಕ ಈ ಜನಪರ ಯೋಜನೆಗೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಪ್ಯಾಸ್ ಫೌಂಡೇಶನ್ ನಿರ್ದೇಶಕರಾದ ಡಾ. ಮಾಧವ ಪ್ರಭು, ಭರತೇಶ್ ಫೌಂಡೇಶನ್ ಅಧ್ಯಕ್ಷರಾದ ಡಾ. ವಿನೋದ ದೊಡ್ಡಣ್ಣವರ ಹಾಗೂ ಸ್ವಾತಿ ಜೋಗ್ ಉಪಸ್ಥಿತರಿದ್ದು ಕಾಮಗಾರಿಗೆ ಸಾಥ್ ನೀಡಿದರು.

ಈ ವೇಳೆ ಭರಮಾ ಪಾಟೀಲ್, ಮಹಾವೀರ್ ಗುಡಾಜ್, ದೀಪಕ್ ಪುರಿ, ಶಾಮರಾವ್ ಪಾಟೀಲ್, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಸಾತೇರಿ ಪಾಟೀಲ್, ಸಯಾಜಿ ಪಾಟೀಲ್, ಸಿದ್ದಪ್ಪ ಪಾಟೀಲ್, ವಕೀಲ ಅಶೋಕ್ ಬಸಾಪುರೆ, ಸೂರಜ್ ಪಾಟೀಲ್, ಬಾಳಾರಾಮ್ ಚೌಗುಲೆ, ವಕೀಲ ಹಿರೇಮಠ, ಕದಂ ಸರ್, ಕೃಷ್ಣಾ ಚುಡಾಪ್ಪ ಪಾಟೀಲ್ ಸೇರಿದಂತೆ ಮುಗತಾ ಗ್ರಾಮಸ್ಥರು ಹಿರಿಯರು, ಯುವಕರು ಸೇರಿದಂತೆ ಇತರರು ಇದ್ದರು.

ಅಥಣಿಯಲ್ಲಿ ಎಂಜಿನಿಯರಿಂಗ್ ಮಹಾವಿದ್ಯಾಲಯ ಆರಂಭಿಸಿ

ಅಥಣಿ/ಹಲ್ಯಾಳ: ತಾಲೂಕಿನ ಪ್ರತಿಯೊಂದು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಸ್ಥಾಪನ ಮಾಡುವುದರ ಜೊತೆಗೆ ತಾಲೂಕಿನ ಜನತೆಗೆ, ರೈತರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಉನ್ನತ ಶಿಕ್ಷಣ ದೊರಕುವ ನಿಟ್ಟಿನಲ್ಲಿ ಮಹಾವಿದ್ಯಾಲಯಗಳನ್ನು ಆರಂಭಿಸುವ ಮೂಲಕ ಅಥಣಿ ಮತ ಕ್ಷೇತ್ರದಲ್ಲಿ ಶೈಕ್ಷಣಿಕ ಕ್ರಾಂತಿ ಕೈಗೊಂಡಿದ್ದಾರೆ ಎಂದು ಗಚ್ಚಿನಮಠದ ಶಿವ ಬಸವ ಸ್ವಾಮೀಜಿ ಹೇಳಿದರು.

ಶಾಸಕ ಲಕ್ಷ್ಮಣ ಸವದಿ ಅವರ ಕೃಷ್ಣಾ ರೈತ ಭವನದಲ್ಲಿ ಹಮ್ಮಿಕೊಂಡಿದ್ದ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ದ್ವಿತೀಯ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದ ಅಥಣಿ ಮತಕ್ಷೇತ್ರಕ್ಕೆ ಅನೇಕ ಪ್ರೌಢ ಶಾಲೆಗಳನ್ನು, ವಸತಿ ಶಾಲೆಗಳನ್ನು, ಆಂಗ್ಲ ಮಾಧ್ಯಮ ಶಾಲೆಗಳನ್ನು, ಕೇಂದ್ರಿಯ ಮಹಾವಿದ್ಯಾಲಯ, ಪಶು ವೈದ್ಯಕೀಯ ಮಹಾವಿದ್ಯಾಲಯ,



ಕೃಷಿ ಮಹಾವಿದ್ಯಾಲಯ ಸೇರಿದಂತೆ ವಿವಿಧ ಕಾಲೇಜುಗಳನ್ನು ಆರಂಭಿಸಿದ್ದಾರೆ. ಇದರಿಂದ ತಾಲೂಕಿನ ಅನೇಕ ಬಡ ಹಾಗೂ ರೈತರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಪಡೆದುಕೊಳ್ಳಲು ಸಹಾಯಕಾರಿಯಾಗಿದೆ. ಮುಂಬರುವ ದಿನಗಳಲ್ಲಿ ತಾಲೂಕಿನಲ್ಲಿ ಇಂಜಿನಿಯರಿಂಗ್ ಮಹಾವಿದ್ಯಾಲಯವನ್ನು ಆರಂಭಿಸಬೇಕೆಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಲಕ್ಷ್ಮಣ ಸವದಿ ಮಾತನಾಡಿ, ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಮ್ಮ ತಾಲೂಕಿನ ಕಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಪ್ರಾರ್ಥನಾ ಬಿರಾದಾರ ಪಾಟೀಲ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯುವ ಮೂಲಕ ಅಥಣಿ ಕೀರ್ತಿಯನ್ನು ಹೆಚ್ಚಿಸಿದ್ದಾಳೆ. ಆದರ್ಶ ಶಾಲೆಯ ವಿದ್ಯಾರ್ಥಿ ದಶರಥ ಬೋಸಲೆ ಎರಡನೇ ಸ್ಥಾನ ಪಡೆದುಕೊಂಡಿದ್ದು, ನಮ್ಮೆಲ್ಲರಿಗೆ ಹೆಮ್ಮೆ. ಇದಕ್ಕೆಲ್ಲ ಕಳಸಪ್ರಾಯ ಎಂಬಂತೆ ಸವದಿ ಗ್ರಾಮದ ಯುವಕ ಬಸವರಾಜ ಕೆಂಪವಾಡ ಐಎಫ್‌ಎಸ್ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಬಂದಿರುವುದು ತಾಲೂಕಿಗೆ ದೊಡ್ಡ ಹೆಮ್ಮೆಯಾಗಿದೆ. ಇಂತಹ ವಿಶೇಷ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವ ಮೂಲಕ ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆ ಆಗಲಿದೆ ಎಂದರು.

ಈ ಸಂದರ್ಭದಲ್ಲಿ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ. 85 ಕ್ಕಿಂತ ಅಧಿಕ ಅಂಕಗಳನ್ನು ಪಡೆದ 2200 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಶೇಗುಣಸಿಯ ವಿರಕ್ತ ಮಠದ ಡಾ. ಮಹಾಂತ ಪ್ರಭು ಸ್ವಾಮೀಜಿ ಮಾತನಾಡಿದರು. ಉಪನ್ಯಾಸಕ ಶರಣಯ್ಯ ಭಂಡಾರಿ ಮಠ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಯುವ ಮುಖಂಡ ಚಿದಾನಂದ ಸವದಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮಾರಂಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಆರ್. ಮುಂಜೆ, ಶಿಕ್ಷಣ ಪ್ರೇಮಿ ಶ್ರೀಶೈಲ ನಾರಗೊಂಡ, ಸುರೇಶ ಮಾಯಣ್ಣವರ, ಕುಮಾರ ಪಾಟೀಲ, ಆನಂದ ದೇಶಪಾಂಡೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನೂತನ ನಿರ್ದೇಶಕರನ್ನಾಗಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕ ಡಾ.ಜಿ.ಎಂ.ಚಂದುನವರ ಅವರನ್ನು ನೇಮಕ ಮಾಡಲಾಗಿದೆ. ಹಿಂದಿನ ನಿರ್ದೇಶಕ ಪ್ರೊ. ಎ.ಎಂ.ಕಡಕೋಳ ಅವರಿಂದ ನಿರ್ದೇಶಕ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡರು.

ಜನಪದ ಸಾಹಿತ್ಯದ ಉಳಿವು ಅಗತ್ಯ

ಧಾರವಾಡ: ಜಾನಪದ ಹಾಡುಗಳು ಬದುಕಿನ ಪಾಠ ಹೇಳಿಕೊಡುವ ಅಮೂಲ್ಯ ಸಾಹಿತ್ಯ. ಇಂತಹ ಜಾಹಿತ್ಯದ ಉಳಿವು ಅಗತ್ಯವಿದೆ ಎಂದು ಕ.ವಿ.ವ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಹೇಳಿದರು.

ನಗರದ ಸಾಹಿತ್ಯ ಭವನದಲ್ಲಿ ತಡಸಿನಕೊಪ್ಪದ ಶ್ರೀ ದ್ಯಾಮವ್ವದೇವಿ ಸಾಂಸ್ಕೃತಿಕ ಮಹಿಳಾ ಸಂಘ ಆಯೋಜಿಸಿದ್ದ ಜಾನಪದ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜನಪದ ಸಾಹಿತ್ಯ ಬದುಕು ತಿದ್ದುತ್ತದೆ ಎಂದರು. ಜನಪದ ಸಾಹಿತ್ಯವನ್ನು ಅವಿದ್ಯಾವಂತರು ಹಾಡು ಕಟ್ಟಿ ಕಾವ್ಯ, ಭಾವಮಯವಾಗಿ ಹಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಜನಪದ ಸಾಹಿತ್ಯವು ಜಗತ್ತಿನ ಎಲ್ಲ ಸಾಹಿತ್ಯದ ತಾಯಿ ಬೇರು ಎಂದರು. ಜನಪದ ನಮ್ಮ ಸಂಸ್ಕೃತಿಯ ಮೂಲ ಬೇರು. ಇದು ದೇಶದ ಗಡಿಯನ್ನು ದಾಟಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆದಿದೆ. ಜನಪದ ಸಾಹಿತ್ಯ ಯಾರ ಸ್ವತ್ತು ಅಲ್ಲ. ಇದು ಜನ ಸಮುದಾಯದ ಸ್ವತ್ತಾಗಿದೆ ಎಂದರು.

ಉಮಾ ಅಗಡಿ ಮಾತನಾಡಿ, ಜಾನಪದ ಕಲಾವಿದರು ಈ ನಾಡಿನ ಜೀವಂತ ಆಸ್ತಿ. ಕಲಾವಿದರ ಬದುಕು ಹಸನಾಗಬೇಕಾಗಿದೆ. ಅವರು ಉತ್ತಮ ಆರೋಗ್ಯ ಹೊಂದಿ, ನಾಡಿನ ಸಾಂಸ್ಕೃತಿಕ ಪರಂಪರೆ ಉಳಿಸಿ, ಬೆಳೆಸಲಿ ಎಂದರು.



ಧಾರವಾಡ: ನಗರದ ಸಾಹಿತ್ಯ ಭವನದಲ್ಲಿ ತಡಸಿನಕೊಪ್ಪದ ಶ್ರೀ ದ್ಯಾಮವ್ವದೇವಿ ಸಾಂಸ್ಕೃತಿಕ ಮಹಿಳಾ ಸಂಘ ಆಯೋಜಿಸಿದ್ದ ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಕ.ವಿ.ವ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಉದ್ಘಾಟಿಸಿದರು. ಸಂಘದ ಅಧ್ಯಕ್ಷೆ ಗಂಗಮ್ಮ ಆಡಿನ ಅಧ್ಯಕ್ಷತೆ ವಹಿಸಿದ್ದರು. ಕಲಾವಿದ ಯಕ್ಕೀರಪ್ಪ ನಡುವಿನಮನಿ, ಕೆ.ಎಸ್.ದುರ್ಗಾದಾಸ್ ಇದ್ದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಜನಪದ ಮತ್ತು ಸಾಂಸ್ಕೃತಿಕ ತಂಡಗಳಿಂದ ಕಲಾ ಪ್ರದರ್ಶನ ನೆರವೇರಿತು.

ಕಿರುಸುದ್ದಿ

ಉಚಿತ ಸಾಮೂಹಿಕ ವಿವಾಹ

ಹುಬ್ಬಳ್ಳಿ: ಇಲ್ಲಿನ ಗಣೇಶಪೇಟೆಯ ಶ್ರೀ ಕರಿಯಮ್ಮದೇವಿ ದೇವಸ್ಥಾನ ಟ್ರಸ್ಟ್ ಕಮಿಟಿಯಿಂದ 2026ರ ಜುಲೈ ಮೊದಲ ವಾರದಲ್ಲಿ ಸಮುದಾಯ ಭವನ ಉದ್ಘಾಟನೆ ಹಾಗೂ ಸರ್ವಧರ್ಮಗಳ 101 ಜೋಡಿಗಳ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ನಿಂಗಪ್ಪ ಜಕ್ಕಲಿ ಹೇಳಿದರು.

ನಗರದ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಕರಿಯಮ್ಮದೇವಿ ದೇವಸ್ಥಾನದ ಸಮುದಾಯ ಭವನದ ನಿರ್ಮಾಣಕ್ಕೆ ಈ ಹಿಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಿದ್ದಾಗ 1 ಕೋಟಿ ರೂ.ಗಳ ವಿಶೇಷ ಅನುದಾನ ಬಿಡುಗಡೆ ಮಾಡಿದ್ದರು. ಅದರ ಜೊತೆಯಲ್ಲಿ ಮತ್ತೊಂದು ಕೋಟಿ ದೇಣಿಗೆ ಮೂಲಕ ಸಂಗ್ರಹಿಸಿ ಅತ್ಯುತ್ತಮವಾದ ಸಮುದಾಯ ಭವನ ನಿರ್ಮಾಣ ಮಾಡಲಾಗಿದ್ದು, ಅದರ ಉದ್ಘಾಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಬರಬೇಕೆಂದು ಅವರ ಸಮಯಾವಕಾಶಕ್ಕಾಗಿ ಕಾಯುತ್ತಿದ್ದೇವೆ ಎಂದರು.

ಅಂದು ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಪ್ರಸಾದ ಅಬ್ಬಯ್ಯ ವಹಿಸಲಿದ್ದಾರೆ ಎಂದರು.

101 ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಹೆಸರು ನೋಂದಾಯಿಸಿಕೊಳ್ಳುವ ದಂಪತಿಗಳಿಗೆ ಟ್ರಸ್ಟ್ ವತಿಯಿಂದ ಉಚಿತ ಧೋತಿ, ಶಾಲು, ಸೀರೆ ಹಾಗೂ ಮಾಂಗಲ್ಯ ನೀಡಲಾಗುವುದು ಎಂದರು. ಆಸಕ್ತ ವಧುವರರು ಜೂ.20 ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕೆಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಬಸವರಾಜ ಪೂಜಾರ, ವೈ.ಎಂ.ಹೊನ್ನಳ್ಳಿ, ಫಕೀರಪ್ಪ ವಾಲಿಕಾರ, ಶಂಕರಯ್ಯ ಹಿರೇಮಠ, ಪರಶುರಾಮ ದಿವಾನದ, ಸಹದೇವಪ್ಪ ತಿರಕಣ್ಣವರ ಇದ್ದರು.

ಹೊಳೆಗೆ ಆಹಾರದವಾದ ಬಡಜೀವಗಳು

ಭಟ್ಕಳ: ಶಿರಾಲಿ ತಟ್ಟಿಹಕ್ಲ ಹೊಳೆಯಲ್ಲಿ ಕಪ್ಪೆಚಿಪ್ಪು ಆಯಲು ಹೋಗಿದ್ದ 11ಜನರು ನೀರಲ್ಲಿ ಕೊಚ್ಚಿ ಹೋದ ದುರಂತ ಜಿಲ್ಲೆಯ ಜನರನ್ನು ದಿಗ್ಭ್ರಾಂತರನ್ನಾಗಿಸಿದೆ. ಭಾನುವಾರ ಸಂಜೆವೇಳೆಗೆ 10 ಶವಗಳು ಪತ್ತೆಯಾಗಿದ್ದು, ನಿಒರಿನ ಸೆಳೆತದಲ್ಲಿ ಕಣ್ಮರೆಯಾಗಿರುವ ಇನ್ನೋರ್ವನ ಪತ್ತೆ ಕಾರ್ಯ ಭರದಿಂದ ಸಾಗಿದೆ. ಮಳೆಗಾಲದ ಆರಂಭದಲ್ಲೇ ದಾಖಲಾಗಿರುವ ಈ ಅವಘಡವು ಭಟ್ಕಳ ತಾಲೂಕಿನ ಅತಿ ದೊಡ್ಡ ದುರಂತ ಎಂದು ಜನ ನೋವು ತೋಡಿಕೊಳ್ಳುತ್ತಿದ್ದಾರೆ. ಮೃತ ದೇಹಗಳನ್ನು ಇಲ್ಲಿನ ತಾಲೂಕಾ ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದ್ದು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಸುದ್ದಿ ತಿಳಿಯುತ್ತಿದ್ದಂತೆಯೇ ಇಡೀ ಭಟ್ಕಳ ತಾಲೂಕು ಶೋಕ ಸಾಗರದಲ್ಲಿ ಮುಳುಗಿದ್ದು ಸಾವಿರಾರು ಸಂಖ್ಯೆಯಲ್ಲಿ ಜನರು ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡುತ್ತಿದ್ದಾರೆ. ಭಾನುವಾರ ಬೆಳಿಗ್ಗೆ ಶಿರಾಲಿಯ ಸಾರದಹೊಳೆಯ ಹಿರೇಹಿತ್ಲು ನಿವಾಸಿಗಳಾದ 14 ಜನರು ಒಟ್ಟಾಗಿ ತಟ್ಟಿಹಕ್ಲು ಬಳಿ ಇರುವ ವೆಂಕಟಾಪುರ ಹೊಳೆಗೆ ಮಳವಿ ಸಂಗ್ರಹಿಸಲು ತೆರಳಿದ್ದಾರೆ. ಮಳವಿ ಆರಿಸುತ್ತಿರುವಾಗಲೇ ಸಮುದ್ರದ ಭರತದಿಂದಾಗಿ ಹೊಳೆಯಲ್ಲಿ ನೀರು ಏರುತ್ತಾ ಬಂದಿದ್ದು ಇವರ ಅರಿವಿಗೆ ಬರಲೆ ಇಲ್ಲ. ಇದರಿಂದಾಗಿ ಇವರಿಗೆ ಹೊಳೆ ದಾಟಿ ಈಚೆಗೆ ಬರಲು ಸಾಧ್ಯವಾಗಲಿಲ್ಲ. ಆಳವಾದ ನೀರಿನಲ್ಲಿ ಮುಳುಗಿ 10 ಮಂದಿ ಮೃತ ಪಟ್ಟಿದ್ದರೆ, ಒಬ್ಬ ಕಣ್ಮರೆಯಾಗಿದ್ದಾನೆ. ಉಳಿದಂತೆ ಮೂವರು ಮಹಿಳೆಯರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಇಬ್ಬರನ್ನು ಮಣಿಪಾಲ ಆಸ್ಪತ್ರೆಗೆ ಒಯ್ಯಲಾಗಿದೆ. ಭಾನುವಾರ ಬೆಳಿಗ್ಗೆ ಪರಸ್ಪರ ಮಾತನಾಡಿಕೊಂಡು ಹೊಳೆಗೆ ಕಪ್ಪೆಚಿಪ್ಪು ಆರಿಸಲು ಹೋಗಿದ್ದ ಇವರು ನೀರು ಜಾಸ್ತಿಯಾದಂತೆ ನದಿಯಿಂದ ದಡಕ್ಕೆ ಬರಲು ಪರಸ್ಪರ ಕೈಕೈ ಹಿಡಿದು ಕೊಂಡು ಬರುತ್ತಿದ್ದಾರೆನ್ನಲಾಗಿದೆ. ಭಾನುವಾರ ಬೆಳಗಿನ ಜಾವ ಭಟ್ಕಳದಾದ್ಯಂತ ಭಾರೀ ಪ್ರಮಾಣದಲ್ಲಿ ಮಳೆಯಾಗಿದ್ದರಿಂದ ನದಿಯಲ್ಲಿ ನೀರು ಜಾಸ್ತಿಯಾಗಿದ್ದಲ್ಲದೇ ಸಮುದ್ರದ ಆಲೆಯೂ ಉಕ್ಕಿ ಹರಿದ ಪರಿಣಾಮ ಇವರೆಲ್ಲರೂ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.

ಇಂದು ವಿದ್ಯುತ್ ಉಪಕೇಂದ್ರದ ಶಂಕುಸ್ಥಾಪನೆ

ಸಿದ್ದಾಪುರ: ತಾಲೂಕಿನ ಕಾನಸೂರ ಗ್ರಾಮದಲ್ಲಿ ಹೊಸದಾಗಿ ನಿರ್ಮಿಸಲಾಗುವ ವಿದ್ಯುತ್ ಉಪಕೇಂದ್ರದ ಶಂಕುಸ್ಥಾಪನಾ ಸಮಾರಂಭವು ಮೇ 25 ರಂದು ಬೆಳಿಗ್ಗೆ 11 ಗಂಟೆಗೆ ಕಾನಸೂರ ವಿದ್ಯುತ್ ಉಪಕೇಂದ್ರದ ಆವರಣದಲ್ಲಿ ನಡೆಯಲಿದೆ. ಭೂಮಿಪೂಜೆಯನ್ನು ಶಾಸಕ ಭೀಮಣ್ಣ ನಾಯ್ಕ ನೆರವೇರಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳು ಎಸ್.ವೈದ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕಾ ಅಧ್ಯಕ್ಷ ಕೆ.ಜಿ.ನಾಗರಾಜ ಸೇರಿದಂತೆ ಅನೇಕ ಜನಪ್ರತಿನಿಧಿಗಳು, ಅಧಿಕಾರಿ ವರ್ಗದವರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶೀಘ್ರದಲ್ಲೇ ಮಲ್ಲಿಕಾರ್ಜುನ ಏತ ನೀರಾವರಿ ಕಾಮಗಾರಿ ಪ್ರಾರಂಭ



ಹುಕ್ಕೇರಿ: ಮಲ್ಲಿಕಾರ್ಜುನ ಏತ ನೀರಾವರಿಗೆ 780 ಕೋಟಿ ಬೇಕು. ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರದಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪ ನಿರ್ದೇಕ ರಾಜೇಶ ಅಮ್ಮಿಣಭಾವಿ ಅವರು ರೈತರ ಅಹವಾಲು ಆಲಿಸಿ ಭರವಸೆ ನೀಡಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಸತತ 4ನೇ ದಿನವಾದ ಶನಿವಾರ ಹುಕ್ಕೇರಿ ತಾಲೂಕು ಸಮಗ್ರ ನೀರಾವರಿಕುರಿತುನಡೆದಬೃಹತ್ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಸುಲ್ತಾನಪೂರ ಬ್ರಿಜ್ ಕುರಣಿ ಏತ ನೀರಾವರಿ, ಕೋಚರಿ ಏತ ನೀರಾವರಿ ರಸ್ತಾಪುರ ದಡ್ಡಿ ನಾಗನೂರು ಸೇರಿದಂತೆ ವಿವಿಧ ಏತ ನೀರಾರಿ ಯೋಜನೆಗಳಿಗಾಗಿ ಸರ್ಕಾರ ಹಣ ಮಂಜೂರಾತಿ ನೀಡಿದ್ದು, ಶೀಘ್ರದಲ್ಲಿ ಟೆಂಡರ್ ಕರೆ ಕಾಮಗಾರಿ ಪ್ರಾರಭಿಂಸಲಾಗುವುದು. ಅರಳಿಕಟ್ಟಿ ಹೊಸ ಯೋಜನೆ ಪರಿಶೀಲನೆಯಲ್ಲಿದೆ. ಹತ್ತರಕಿ, ಗುಡಗನಟ್ಟಿ: ಸರ್ಕಾರಕ್ಕೆ ಅನುಮೋದನೆಗೆ ಕಳುಹಿಸಲಾಗಿದೆ. ಅಡವಿಸಿದ್ದೇಶ್ವರ: 2026-27ರ ಹಂಗಾಮಿನಲ್ಲಿ ನೀರು ಹರಿಸಲಾಗುವುದು. ಕೋಟಬಾಗಿ ನೀರಾವರಿ ಯೋಜನೆಯ ಮೋಟಾರ್ ದುರಸ್ತಿಗೊಳಿಸಿ ಶೀಘ್ರದಲ್ಲಿ ನೀರು ಹರಿಸಲಾಗುವುದು. ಮಹಾರಾಷ್ಟ್ರ ಗಡಿಭಾಗದ ಶಿಪ್ಪೂರು ಗ್ರಾಮದಲ್ಲಿ ಜನ ಜಾನುವಾರುಗಳ ಕುಡಿಯಲು ನೀರಿನ ಸಮಸ್ಯೆ ಗೊತ್ತಾಗಿದ್ದು, ಸರ್ವೆ ಮಾಡಿಸಿ ನೀರು ಒದಗಿಸಲಾಗುವುದು. ಹಿರಣ್ಯಕೇಶಿ ನದಿ ಹೂಳು ತೆಗೆಯವುದಕ್ಕೆ ಸರ್ವೆಮಾಡಲು ಹಣ ನೀಡಲಾಗಿದೆ. ಸರ್ವೇ ಕಾರ್ಯ ಮುಗಿಸಿದ ಕೂಡಲೇ ಹಣದ ಮಂಜೂರಾತಿ ಪಡೆದುಕೊಳ್ಳಲಾಗುವುದು ಎಂದು ಹೇಳಿದರು.

> **ಸಚಿವರ ಭೇಟಿ ಮಾಡಿಸಿ**
> ಮಲ್ಲಿಕಾರ್ಜುನ ಯೋಜನೆಗೆ 780 ಕೋಟಿ ಅನುದಾನಬೇಕಾಗಿದ್ದು, ಸರ್ಕಾರ ಮಟ್ಟದಲ್ಲಿ ಚರ್ಚೆ ಮಾಡುವುದು ಅವಶ್ಯವಾಗಿದೆ. ಅದಕ್ಕಾಗಿ 50 ಜನರ ನಿಯೋಗದೊಂದಿಗೆ ನೀರಾವರಿ ಸಚಿವರನ್ನು ಭೇಟಿ ಮಾಡಿ ಚರ್ಚಿಸಲು ಅವಕಾಶ ಕಲ್ಪಸಬೇಕು ಎಂದು ರಾಜ್ಯ ರೈತ ಸಂಘಟನೆ ಹಸಿರು ಸೇನೆಯ ಸಂಘಟನೆಯಗೌರವಾಧ್ಯಕ್ಷ ಶಶಿಕಾಂತ ಗುರುಜಿ ಹೇಳಿದರು.

ರಾಜ್ಯ ರೈತ ಸಂಘಟನೆ ಹಸಿರು ಸೇನೆ ರಾಜ್ಯಾಧ್ಯಕ್ಷ ಚೂನಪ್ಪಾ ಪೂಜೇರಿ ಮಾತನಾಡಿ, 4 ದಿನದಿಂದ ದುಃಖದಿಂದ ಹೋರಾಟ ಮಾಡಿದ್ದೇವೆ, ಇದಕ್ಕೆ ಪ್ರತಿಫಲ ಬೇಕು. ನಾಳೆಯೇ ಎಲ್ಲಾ ಏತ ನೀರಾವರಿ ಯೋಜನೆಗಳನ್ನು ಪರಿಶೀಲಿಸಿ ಕಾಮಗಾರಿ ಶೀಘ್ರದಲ್ಲಿ ಪ್ರಾರಂಭಿಸಬೇಕು. ಅಧಿಕಾರಿಗಳು ನಿರ್ಲಕ್ಷ್ಯವಹಿಸಿದಲ್ಲಿ ಹತ್ತರಕಿ ಟೋಲ ನಾಕಾ 1 ಲಕ್ಷ ಜನ ಸೇರಿಸಿ ಮತ್ತೆ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು. ಧಾರವಾಡಕ್ಕೆ ನೀರು ಹೋಗುವುದನ್ನು ಅದೇ ನೀರು ಹುಕ್ಕೇರಿ ಕ್ಷೇತ್ರಕ್ಕೆ ಬಳಸಬೇಕು ಒತ್ತಾಯಿಸಿದರು.

ಹಿರೇಮಠದ ಚಂದ್ರ ಶೇಖರ ಸ್ವಾಮಿಜಿ ಮಾತನಾಡಿ, ದೇಶಕ್ಕೆ ಅನ್ನ ನೀಡುವ ರೈತರು ಸಮಸ್ಯೆ ಆಲಿಸಿ ಶೀಘ್ರದಲ್ಲಿ ನೀರಾವರಿಗಾಗಿ ಇಲಾಖೆ ಅಧಿಕಾರಿಗಳು ವಾಸ್ತವ್ಯ ಮಾಡಿ ಕ್ಷೇತ್ರದ ನೀರಾವರಿ ಯೋಜನೆಗಳನ್ನು ಪರಿಶಿಸಿ ರೈತರ ಜಮೀನುಗಳಿಗೆ ನೀರು ಒದಗಿಸುವ ಕೆಲಸ ಮಾಡಬೇಕು ಎಂದರು.

ಸಂಗಮ ಸಕ್ಕರೆ ಕಾರ್ಖಾನೆ ಅಧ್ಯಕ್ಷ ರಾಜೇಂದ್ರ ಪಾಟೀಲ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ರೈತ ಸಂಘದ ಪದಾಧಿಕಾರಿಗಳು ಇದ್ದರು.

ಕಂಚಿನ ಮೂರ್ತಿ ಪ್ರತಿಷ್ಠಾಪನೆಗೆ ಸಜ್ಜಾದ ಭಕ್ತರು



» 2027ಕ್ಕೆ ಅಪ್ಪಯ್ಯ ಸ್ವಾಮಿಗಳ ಶತಮಾನೋತ್ಸವ

ಐಗಳಿ: ಗ್ರಾಮ ದೇವರು ಮಹಾತಪಸ್ವಿ ಶಿವಯೋಗಿ ಅಪ್ಪಯ್ಯ ಸ್ವಾಮಿಗಳ ಲಿಂಗೈಕ್ಯ ಶತಮಾನೋತ್ಸವ ಕಾರ್ಯಕ್ರಮ ಜರಗಲಿದ್ದು, ನಾಗನೂರ ರುದ್ರಾಕ್ಷಿಮಠದ ಪೀಠಾಧಿಪತಿ ಡಾ. ಅಲ್ಲಮಪ್ರಭು ಸ್ವಾಮೀಜಿ ಸಾನ್ನಿಧ್ಯದಲ್ಲಿ ಶ್ರೀ ಅಪ್ಪಯ್ಯ ಮಹಾ ಸ್ವಾಮಿಗಳ ಭವ್ಯವಾದ ಕಂಚಿನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಮಂಗಲ ಕಾರ್ಯಲಯ ಮತ್ತು ಕುಸ್ತಿ ಪಳಿ ನಿರ್ಮಾಣದ ನೀಲ ನಕ್ಷೆ ಸಿದ್ಧವಾಗಿದೆ.

ಈ ಕಾರ್ಯಕ್ರಮಕ್ಕೆ ಒಂದು ವರ್ಷ ಸಮಯವಿದ್ದರೂ ಸಹಿತ ಗ್ರಾಮದಲ್ಲಿ ಈಗಾಗಲೇ ಶತಮಾನೋತ್ಸವದ ಹಬ್ಬಮನೆ ಮಾಡಿದೆ. ಕಾರ್ಯಕ್ರಮದ ಅಂಗವಾಗಿ ದೇಣಿಗೆ ಸಂಗ್ರಹ ಪ್ರಾರಂಭವಾಗಿದೆ. ಗ್ರಾಮದಲ್ಲಿ ಈಗಾಗಲೇ ಒಂದು ಕೋಟಿಗಿಂತ ಅಧಿಕವಾಗಿ ದಾನಿಗಳಿಂದ ದೇಣಿಗೆ ಸಂಗ್ರವಾಗಿದೆ. ಪ್ರತಿಯೊಬ್ಬರೂ ತಮ್ಮ ಶಕ್ತಿ ಮೀರಿ ದೇಣಿಗೆ ನೀಡುತ್ತಿದ್ದು 11,000 ದಿಂದ 11 ಲಕ್ಷದವರೆಗೆ ದೇಣಿಗೆ ನೀಡಿದ್ದಾರೆ. ದೇಣಿಗೆ ಹಣವು ಶ್ರೀ ಅಪ್ಪಯ್ಯಸ್ವಾಮಿ ಸೇವಾ ಸಮಿತಿಯ ಟ್ರಸ್ಟ್‌ಗೆ ಜಮೆಯಾಗುತ್ತಿದೆ. ದೇಣಿಗೆ ನೀಡುವವರು 9008603430/9731039700 ಅವರನ್ನು ಸಂಪರ್ಕಿಸಬಹುದಾಗಿದೆ.

> ಐಗಳಿಯ ಶ್ರೀ ಅಪ್ಪಯ್ಯ ಸ್ವಾಮಿಗಳು ಪವಾಡ ಪುರುಷ್ಯರು ಅವರ ಶಕ್ತಿ ದೂಡ್ಡದಿದೆ. ಅವರು ಲಿಂಗೈಕ್ಯರಾಗಿ ನೂರು ವರ್ಷ ಕಳದಿದೆ. ಇಲ್ಲಿವರಿಗೂ ಭಕ್ತಿರು ಕೇಳಿಕೊಂಡದ್ದನ್ನು ನೀಡಿದ್ದಾರೆ. ದೇಣಿಗೆ ನೀಡಿ ಈ ಮಹತ್ವವಾದ ಕಾರ್ಯಲ್ಲಿ ತಾವು ಭಾಗಿಯಾಗಿ.
> ■ **ಕಾಂತುಗೌಡ ಪಾಟೀಲ,** ಕಾರ್ಯದರ್ಶಿ ಶ್ರೀ ಬಸವೇಶ್ವರ ಸೂಸೈಟಿ ಐಗಳಿ

> 2017ಕ್ಕೆ ಲಿಂಗೈಕೆ ಶ್ರೀ ಅಪ್ಪಯ್ಯ ಸ್ವಾಮಿಗಳ ಶತಮಾನೋತ್ಸವ ಕಾರ್ಯಕ್ರಮದ ನಿಮಿತ್ತ ಅವರ ಕಂಚಿನ ಪ್ರತಿಮೆ ನಿರ್ಮಾಣ ಮಾಡುತ್ತಿದ್ದೇವೆ. ಈ ಸ್ಥಳವನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಮೂರು ಕೋಟಿ ರೂ. ವೆಚ್ಚ ಮಾಡಲು ನೀಲಿ ನಕ್ಷೆ ಸಿದ್ಧಪಡಿಸಿದ್ದೇವೆ.
> ■ **ಶಿವಾನಂದ ಸಿಂಧೂರ,** ಗ್ರಾಮದ ಮುಖಂಡ

ಬೆಳಗಾವಿ ಪಾಲಿಕೆಗೆ ಮುತ್ತಿಗೆ ಹಾಕಲು ಸಿದ್ಧತೆ

» ಮೇ 26ರಂದು ಬೆಳಗಾವಿಗೆ ವಾಟಾಳ್ ನಾಗರಾಜ ಆಗಮನ

ಬೆಳಗಾವಿ: ಕನ್ನಡ ಪರವಾದ ನಾಡಿನ ಅತ್ಯಂತ ಹಿರಿಯ ಹೋರಾಟಗಾರರಾದ ವಾಟಾಳ ನಾಗರಾಜ, ಸಾ.ರಾ. ಗೋವಿಂದು ಹಾಗೂ ಕೆ.ಆರ್. ಕುಮಾರ ಅವರು ಮೇ 26ರಂದು ಬೆಳಗಾವಿಗೆ ಆಗಮಿಸಲಿದ್ದು, ಪಾಲಿಕೆಯಲ್ಲಿ ಕನ್ನಡ ಪರವಾದ ಗೊತ್ತುವಳಿಯನ್ನು ಅಂಗೀಕರಿಸುವ ಸಲುವಾಗಿ ಪಾಲಿಕೆಯನ್ನು ಮುತ್ತಿಗೆ ಹಾಕುವ ಮೂಲಕ ಬೃಹತ್ ದೊಡ್ಡ ಮಟ್ಟದ ಹೋರಾಟ ಮಾಡಲಿದ್ದಾರೆ ಎಂದು ಕನ್ನಡಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಹಾಗೂ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಅಶೋಕ ಚಂದರಗಿ ಅವರು ತಿಳಿಸಿದರು.

ಭಾನುವಾರ ನಗರದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 26ರಂದು ಹಿರಿಯ ಹೋರಾಟಗಾರ ವಾಟಾಳ ನಾಗರಾಜ ಆಗಮಿಸಲಿದ್ದು, ಮೊದಲು ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲಿ ಇರುವ ಹಲ್ಮಿಡಿ ಶಾಸನಕ್ಕೆ ಪೂಜೆ ಸಲ್ಲಿಸುವರು, ಬಳಿಕ ಬೆಳಗಾವಿ ಮಹಾನಗರ ಪಾಲಿಕೆಗೆ ಮುತ್ತಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಈ ಹೋರಾಟಕ್ಕೆ ಬೆಳಗಾವಿಯ ಕನ್ನಡಪರ ಸಂಘಟನೆಗಳ ಸಂಪೂರ್ಣ ಬೆಂಬಲ ನೀಡಲಾಗುವುದು. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಪಾಲಿಕೆಯಲ್ಲಿ ಗೊತ್ತುವಳಿ ನಿರ್ಣಯ ಮಾಡುವ ಹೋರಾಟದ ಮತ್ತೊಂದು ಮಜಲು. ಪಾಲಿಕೆಯಲ್ಲಿ ಸಾಮಾನ್ಯ ಸಭೆಯನ್ನು ಕರೆದು ಕನ್ನಡಪರ ಗೊತ್ತುವಳಿಯನ್ನು ಅಂಗಿಕರಿಸಿ, ಈ ವಿಷಯುವನ್ನು ಸುಖಾಂತ್ಯಗೊಳಿಸಬೇಕು ಎಂದರು.

ಕಿತ್ತೂರು ಕರ್ನಾಟಕ ಸೇನೆಯ ರಾಜ್ಯಾಧ್ಯಕ್ಷರಾದ ಮಹಾದೇವ ತಳವಾರ, ಗಡಿನಾಡು ಕನ್ನಡಿಗರ ಸೇನೆಯ ರಾಜ್ಯಾಧ್ಯಕ್ಷರಾದ ಬಲರಾಮ ಮಾಸೆನಟ್ಟಿ, ಕರವೇ ಶಿವರಾಮೇಗೌಡ ಬಣದ ಜಿಲ್ಲಾಧ್ಯಕ್ಷ ವಾಜೀದ್ ಹಿರೇಕೋಡಿ ಶ್ರೀನಿವಾಸ ತಾಲೂಕರ, ಮಲ್ಲಪ್ಪ ಗುಡಗೇನಟ್ಟಿ, ಈಶ್ವರಗೌಡ ಪಾಟೀಲ್, ಬಾಳಪ್ಪ ಗುಡಗನಟ್ಟಿ, ಶಿವರೆಡ್ಡಿ ಹುಚ್ಚರೆಡ್ಡಿ, ಇರ್ಫಾನ್ ಅತ್ತಾರ, ರಾಜು ಕೋಲಾ, ಶಿವಾನಂದ ಸಮ್ಮಕ್ಕನವರ, ಸಾಗರ್ ಬೋರಗಲ್ಲ, ಬಸು ತುಬಾಕಿ, ಶರೀಫ ಸನದಿ, ಸಿದ್ದಲಿಂಗಪ್ಪ ಸುನಕುಪ್ಪಿ, ರೋಹಿತ್ ಪದ್ಮಣ್ಣವರ ಸೇರಿದಂತೆ ಇತರರು ಇದ್ದರು.



ಅನುದಾನದ ಕೊರತೆಯಿಲ್ಲ: ಅಬ್ಬಯ್ಯ



ಹುಬ್ಬಳ್ಳಿ: ಪೂರ್ವ ಕ್ಷೇತ್ರದಲ್ಲಿ ಶಿಕ್ಷಣ, ಆರೋಗ್ಯ, ಆಶ್ರಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದ್ದು, ಇದರ ಜೊತೆಗೆ ಮೂಲಭೂತ ಸೌಕರ್ಯಗಳ ಒದಗಿಸಲು ಅನುದಾನದ ಕೊರತೆ ಇಲ್ಲ ಎಂದು ಸ್ಲಂ ಬೋರ್ಡ್ ಅಧ್ಯಕ್ಷ ಹಾಗೂ ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ಇಲ್ಲಿಯ ಸೋನಿಯಾ ಗಾಂಧಿ ನಗರದಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನದಡಿಯಲ್ಲಿ 5 ಕೋಟಿ ರೂ ವೆಚ್ಚದ ಕಾಂಕ್ರೀಟ್ ರಸ್ತೆ ಕಾಮಗಾರಿ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಕ್ಷೇತ್ರದಲ್ಲಿ ಅಭಿವೃದ್ಧಿ ಕಾಣುತ್ತಿದೆ ಎಂದರೆ ಅದು ಕಾಂಗ್ರೆಸ್ ಸರ್ಕಾರವನ್ನು ಮತ್ತೆ ಅಧಿಕಾರದಲ್ಲಿ ತಂದಿದ್ದರ ಫಲ ಎಂಬುದು ಯಾರು ಮರೆಯಬಾರದು. ಬಿಜೆಪಿ ಆಡಳಿತದ ಸಂದರ್ಭದಲ್ಲಿ ಅನುದಾನ ಕೊರತೆಯಿತ್ತು. ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿದ್ದವು. ಆದರೆ ಈ ಮೂರು ವರ್ಷದಲ್ಲಿ ನೂರಾರು ಕೋಟಿ ಅನುದಾನ ತಂದು ಮತ್ತಷ್ಟು ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಈಗಾಗಲೇ ಪೂರ್ವ ಕ್ಷೇತ್ರದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜ್ ಇರಲಿಲ್ಲ. ಈಗ ನಮ್ಮ ಸರ್ಕಾರ 26-27ನೇ ಸಾಲಿಗೆ ಪದವಿ ಪೂರ್ವ ಕಾಲೇಜ್ ಮಂಜೂರು ಮಾಡಿ ಕೊಟ್ಟಿದೆ. ಕಾಮರ್ಸ್ ವಿಭಾಗವನ್ನು ಪ್ರಾರಂಭ ಮಾಡಲಾಗಿದೆ. ವಿಜ್ಞಾನ ವಿಭಾಗವನ್ನು ಕೂಡ ಪ್ರಾರಂಭಿಸಲು ಮಂಜೂರಾತಿ ಸಿಗಲಿದೆ ಎಂದು ತಿಳಿಸಿದರು.

ಐಎಎಸ್ ಹಾಗೂ ಕೆಎಎಸ್ ಕೋಚಿಂಗ್ ಸೆಂಟರ್ ಕೂಡ ಶೀಘ್ರವೇ ಪ್ರಾರಂಭವಾಗಲಿದೆ. ಈಗಾಗಲೇ ಪೂರ್ವ ಕ್ಷೇತ್ರದಲ್ಲಿ ಆರೋಗ್ಯಕ್ಕೂ ಕೂಡ ಹೆಚ್ಚಿನ ಒತ್ತು ಕೊಡಲಾಗಿದ್ದು, 6 ನಮ್ಮ ಕ್ಲಿನಿಕ್, 4 ನಗರ ಪ್ರಾಥಮಿಕ ಕೇಂದ್ರ, 2 ಪಾಲಿಕೆ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಕಾಂಗ್ರೆಸ್ ಮುಖಂಡ ಮೋಹನ ಅಸುಂಡಿ, ಪಾಲಿಕೆ ಸದಸ್ಯೆ ಲಕ್ಷ್ಮೀಭಾಯಿ ಜಾದವ, ಮಾಜಿ ಪಾಲಿಕೆ ಸದಸ್ಯ ವಿಜನಗೌಡ ಪಾಟೀಲ,ಹಜರತ್ ಮುನಸಿ, ಭಾಸ್ಕರ್, ಅಲ್ತಾಫ್ ಮುಲ್ಲಾ, ಧಾರವಾಡಕರ್, ಶರೀಫ್ ಇದ್ದರು.

ಶ್ರೇಷ್ಠ ಕಲಾವಿದ ಅಡವಯ್ಯಸ್ವಾಮಿ

ಕಲಘಟಗಿ: ಅಡವಯ್ಯಸ್ವಾಮಿ ಅವರು ದೊಡ್ಡಾಟ ಕಲಾಪ್ರಕಾರದ ಶ್ರೇಷ್ಠ ಕಲಾವಿದರಾಗಿದ್ದರು. ಅವರಿಂದ ಎಷ್ಟೋ ಜನ ಶಿಷ್ಯರು ದೊಡ್ಡಾಟದ ಪರಂಪರೆ ಮುಂದೆ ಕೊಂಡೊಯ್ಯುತ್ತಿದ್ದಾರೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಲಾವಿದ ಶಿವಣ್ಣ ಆದರಗುಂಚಿ ಹೇಳಿದರು.

ಅವರು ಪಟ್ಟಣದ ಹನ್ನೆರಡು ಮಠದಲ್ಲಿ ಆಯೋಜಿಸಲಾಗಿದ್ದ ದೊಡ್ಡಾಟ ಕಲಾವಿದರಾದ ಅಡವಯ್ಯಸ್ವಾಮಿ ಹಿರೇಮಠ ಅವರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿ, ಅಡವಯ್ಯಸ್ವಾಮಿ ಅವರು ಎಂದೂ ಪ್ರಶಸ್ತಿ ಹಿಂದೆ ಹೋಗಿದ್ದಿಲ್ಲ. ಅವರ ಪ್ರತಿಭೆಗೆ ಪ್ರಶಸ್ತಿಗಳು ಸಂದಿವೆ. ಕಲಾವಿದರ ಸೇವೆ ನೆನೆಯಲು ನುಡಿನಮನ ಕಾರ್ಯಕ್ರಮ ಮಾಡಿದ್ದು ಸ್ತುತ್ಯಾರ್ಹ ಎಂದರು.

ಜನಪದ ವಿದ್ವಾಂಸ ಎಂ.ಆರ್. ತೋಟಗಂಟಿ ಮಾತನಾಡಿ, ದೊಡ್ಡಾಟ ಹಿರಿಮೆಯನ್ನು ರಾಜ್ಯದಾದ್ಯಂತ ಪಸರಿಸಿದ ಶ್ರೇಯ ಅಡವಯ್ಯಸ್ವಾಮಿ ಅವರದು, ಬಡತನದಲ್ಲೇ ಕಲಾವಿದ ಕಷ್ಟ ಪಟ್ಟು ಕಲೆಗೆ ತನ್ನ ಬಾಳನ್ನು ಸಮರ್ಪಣೆ ಮಾಡಿದ್ದಕ್ಕೆ ಇದೊಂದು ಉದಾಹರಣೆ. ಮುಂದಿನ ಪೀಳಿಗೆ ಅಡವಯ್ಯಸ್ವಾಮಿ ಅಂತಹ ಶ್ರೇಷ್ಠ ಕಲಾವಿದರ ಬಗ್ಗೆ, ದೊಡ್ಡಾಟದ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ ಎಂದರು.

ರಂಗಭೂಮಿ ಹಿರಿಯ ಕಲಾವಿದ ಬಸವರಾಜ ದೊಡಮನಿ ಪ್ರಾಸ್ತಾವಿಕವಾಗಿಮಾತನಾಡಿ, ದೊಡ್ಡಾಟ ಕಲಾ ಪ್ರಕಾರಕ್ಕೆ ಅಡವಯ್ಯಸ್ವಾಮಿ ಆಲದಮರದಂತೆ ಇದ್ದರು. ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಹಲವಾರು ದೊಡ್ಡಾಟಗಳನ್ನು ಆಡಿಸಿದ ಅವರನ್ನು ಕಳೆದುಕೊಂಡು ಇಂದು ಕಲಾ ಪರಂಪರೆಗೆ ತುಂಬಾ ನಷ್ಟವಾಗಿದೆ. ತಾಲೂಕಿನ ಕಲಾವಿದರು ಹಿರಿಯರ ಮಾರ್ಗದರ್ಶನದಂತೆ ಕಲಾ ಸೇವೆ ಮಾಡೋಣ ಎಂದರು.

ಹಿರಿಯರಾದ ಎಚ್.ಎನ್. ಸುಣಗದ, ವೈ.ಜಿ. ಭಗವತಿ, ಅಶೋಕಕುಮಾರ್ ಅರ್ಕಸಾಲಿ, ಗಂಗಯ್ಯ ಹಿರೇಮಠ, ವೈ.ಡಿ. ಸುಳ್ಳದ, ಕುಬೇರಗೌಡ ಮುರಳ್ಳಿ ಅವರು ಅಡವಯ್ಯಸ್ವಾಮಿ ಅವರಿಗೆ ನುಡಿ ನಮನ ಸಲ್ಲಿಸಿದರು. ಹನ್ನೆರಡು ಮಠದ ರೇವಣಸಿದ್ಧ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಬಸವರಾಜ ತಿಪ್ಪಣ್ಣವರ ನಿರೂಪಿಸಿದರು. ಸೋಮಲಿಂಗ ಒಡೆಯರ, ಗಿರೀಶ ರೆಡ್ಡಿ, ವೀರಣ್ಣ ಕುಬಸದ, ಸಾತಪ್ಪ ಕುಂಕೂರ, ನಾಗೇಶ್ ಗೌಳಿ ಸೇರಿದಂತೆ ಅಡವಯ್ಯಸ್ವಾಮಿ ಹಿರೇಮಠ ಕುಟುಂಬಸ್ಥರು ಉಪಸ್ಥಿತರಿದ್ದರು.



ಅಭಿವೃದ್ಧಿ ಕಾರ್ಯ ಮೆಚ್ಚಿ ಕಾಂಗ್ರೆಸ್ ಸೇರ್ಪಡೆ: ಶಾಸಕ ವೈದ್ಯ



ಸವದತ್ತಿ : ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಮ್ಮ ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ನಡೆಯುತ್ತಿವೆ. ನಾನು ಶಾಸಕನಾಗಿ ಆಯ್ಕೆಯಾದ ಮೇಲೆ ಮಾಡಿರುವ ಅಭಿವೃದ್ಧಿ ಕಾರ್ಯಗಳು ಜನರ ಮನದಲ್ಲಿ ಅಚ್ಚಳಿಯದೆ ಉಳಿಯುವಂತಾಗಿದೆ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಅವರು ತಮ್ಮ ಗೃಹ ಕಾರ್ಯಾಲಯದಲ್ಲಿ ತಾಲೂಕಿನ ಮುನವಳ್ಳಿ, ಬೆನಕಟ್ಟಿ, ಮಬನೂರ, ಮೆಳ್ಳಿಕೇರಿ, ಆಲದಕಟ್ಟಿ , ಕಡಬಿ, ಜೀವಾಪುರ ಮತ್ತು ಯರಗಟ್ಟಿ ಮತ್ತು ಸವದತ್ತಿಯ ಕೆಲವು ಕಾರ್ಯಕರ್ತರು ಕಾಂಗ್ರೆಸ್‌ಗೆ ಸೇರ್ಪಡೆಯಾದ ಸಂದರ್ಭದಲ್ಲಿ ಮಾತನಾಡಿದ ಅವರು,

ಸಚಿವ ಸತೀಶ ಜಾರಕಿಹೊಳಿ ಹಾಗೂ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಸ್ಥಳೀಯ ಹಿರಿಯ ಕಾಂಗ್ರೆಸ್ ಪಕ್ಷದ ಮುಖಂಡರ ನೇತೃತ್ವದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯ ಮನಗಂಡು ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಆರ್. ವಿ. ಪಾಟೀಲ್, ಕಾಂಗ್ರೆಸ್ ಮುಖಂಡರಾದ ಫಕೀರಪ್ಪ ಹದ್ದನ್ನವರ, ಚಂದ್ರಣ್ಣ ಶಾಮರಾಯಣವರ, ಮಹಾಬಲೇಶ್ವರ ಪುರದಗುಡಿ, ಬಸವರಾಜ ಗುರುಣ್ಣವರ್, ಶಿವಾನಂದ ಹೂಗಾರ, ಚಂದ್ರು ಪೂಜೇರ, ಪ್ರವೀಣ್ ರಾಮಪ್ಪನವರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲು ಜಕಾತಿ, ಪ್ರಭು ಪ್ರಭುನವರ, ನ್ಯಾಯವಾದಿ ಎಸ್. ಆರ್. ಪಾಟೀಲ್ , ಮಲಿಕ್ ಸಾಬ್ ಭಗವಾನ್, ನೀಲಕಂಠ ಸಿದ್ದಬಸಣ್ಣವರ, ಪ್ರಕಾಶ್ ವಾಲಿ, ಶಂಕರ್ ಇಟ್ನಾಳ, ಮಹಾಂತೇಶ್ ಉಪ್ಪಿನ, ವಿಠಲ ಹುಲಕುಂದ, ಕಲ್ಮೇಶ ಬಾಲರೆಡ್ಡಿ, ವೆಂಕಣ್ಣ ಕರಡಿಗುಡ್ಡಿ, ಅಶೋಕ ಯರಜರ್ವಿ, ವಿಠ್ಠಲ್ ಹಲಗಲಿ ಸೇರಿದಂತೆ ಅನೇಕ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಅಲ್ಪಸಂಖ್ಯಾತರ ಓಲೈಕೆ ಸಲ್ಲ

ಹುಬ್ಬಳ್ಳಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂದು ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಆರೋಪಿಸಿದರು.

ಹುಬ್ಬಳ್ಳಿಯ ಹಳೆ ಹುಬ್ಬಳ್ಳಿ ಘಟನೆ ಡಿಜೆ ಹಳ್ಳಿ ಕೇಜೆ ಹಳ್ಳಿ ಇತ್ತೀಚಿಗೆ ಆಳಂದ್ ಕೋಮುಗಲಭೆ ಕೇಸ್‌ನಲ್ಲಿ 53 ಸಮಾಜಘಾತಕ ಶಕ್ತಿಗಳ ವಿರುದ್ಧ ದಾಖಲಾದ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲು ಯೋಚಿಸಿದ್ದು ನೋಡಿದರೆ ಈ ಸರ್ಕಾರ ಸಂಪೂರ್ಣ ಓಲೈಕೆಯಲ್ಲಿ ತೊಡಗಿದೆ. ಇಂತಹ ಸಮಾಜಘಾತುಕ ಶಕ್ತಿಗಳನ್ನು ಹತ್ತಿಕುವುದನ್ನು ಬಿಟ್ಟು ಅವರಿಗೆ ಬೆಂಬಲವಾಗಿ ನಿಂತಿರುವುದು ಸರಿಯಲ್ಲ ಎಂದು ದೂರಿದ್ದಾರೆ.ಈ ಹಿಂದೆ ವಿಧಾನಸಭಾ ಅಧಿವೇಶನದಲ್ಲಿ ಸದನದಲ್ಲಿ ಹುಬಳ್ಳಿಯಲ್ಲಿ ನಡೆದ ಗಲಭೆ ವಿಚಾರವಾಗಿ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವುದು ಬೇಡ ಎಂದು ಹೇಳಿದ್ದೆ. ಆದರೂ ಸಹ ಪ್ರಕರಣವನ್ನು ಹಿಂದಕ್ಕೆ ತೆಗೆದುಕೊಂಡು ಈಗಾಗಲೇ ನ್ಯಾಯಾಲಯವು ತಡೆಯಜ್ಞೆ ನೀಡಿ ಛೀಮಾರಿ ಹಾಕಿದೆ. ಕಾಂಗ್ರೆಸ್ ಸರ್ಕಾರದ ನಡೆಯನ್ನು ಬಿಜೆಪಿ ತೀವ್ರವಾಗಿ ವಿರೋಧಿಸಿದ್ದು ತಕ್ಷಣ ಸರ್ಕಾರ ತನ್ನ ನಿಲುವನ್ನು ಬದಲಿಸಬೇಕು ಎಂದಿದ್ದಾರೆ.

ಸಿನೇಮಾ ಜನಸಮುದಾಯ ತಲುಪಬಲ್ಲ ಪ್ರಭಾವಶಾಲಿ ಮಾಧ್ಯಮ



ಬೆಳಗಾವಿ: ಸಿನಿಮಾ ಒಂದು ಪ್ರಜಾಸತ್ತಾತ್ಮಕ ಕಲೆಯಾಗಿದ್ದು, ಜನಸಮುದಾಯವನ್ನು ತಲುಪಬಲ್ಲ ಪ್ರಭಾವಶಾಲಿ ಮಾಧ್ಯಮವಾಗಿದೆ. ಅದು ಶ್ರಮ ಮತ್ತು ಸೃಜನಶೀಲತೆ ಒಟ್ಟಾಗಿ ಇರುವ ಬಹುವ್ಯಕ್ತಿ ಸೃಷ್ಟಿಯಾಗಿದ್ದು, ಪ್ರಜಾಸತ್ತಾತ್ಮಕ ಒಕ್ಕೂಟ ಕಲೆ. ಅದರ ಮೂಲಕ ಪ್ರಗತಿಪರ ವಿಚಾರಧಾರೆಯನ್ನು ಜನಸಾಮಾನ್ಯರಲ್ಲಿಗೆ ತಲುಪಿಸಬಹುದಾಗಿದೆ ಎಂದು ಹಿರಿಯ ಬಂಡಾಯ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಹೇಳಿದರು.

ಇಲ್ಲಿನ ನಗರದ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸಭಾಭವನದಲ್ಲಿ ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯ ಬೆಳಗಾವಿ ಜಿಲ್ಲಾ ಘಟಕ ಆಯೋಜಿಸಿದ್ದ 'ಬಂಡಾಯ ಸಾಹಿತ್ಯ: ಹೊಸ ತಲೆಮಾರು' ಅಭಿಯಾನದ ಅಂಗವಾಗಿ 'ಕನ್ನಡ ಸಿನಿಮಾ : ಪ್ರಗತಿಪರ ನೆಲೆಗಳ ಸ್ವರೂಪ' ಎನ್ನುವ ರಾಜ್ಯ ಮಟ್ಟದ ವಿಚಾರ ಸಂಕಿರಣದ ಮೊದಲ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕನ್ನಡ ಸಿನಿಮಾಗಳು ಕನ್ನಡ ಸಾಹಿತ್ಯದ ಮೂಲ ಆಶಯಕ್ಕೆ ಧಕ್ಕೆ ಬಾರದಂತೆ ಮರುಸೃಷ್ಟಿಗೆ ಪ್ರಾಧಾನ್ಯತೆ ನೀಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ ಎಂದರು.

ಮುಖ್ಯವಾಹಿನಿ ಕನ್ನಡ ಸಿನಿಮಾಗಳ ಮೂಲ ಧಾರೆ ಪ್ರಗತಿಪರ ಚಿಂತನೆಯೇ ಆಗಿದೆ. ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ಸಿನಿಮಾಗಳಲ್ಲಿ ಉಪಧಾರೆಗಳ ಮೂಲಕ ಹೊಸ ಚಿಂತನೆಗಳನ್ನು ರೂಪಿಸಿವೆ. ಸಿನಿಮಾ ತಂತ್ರಜ್ಞಾನ ಎಷ್ಟೇ ಬೆಳೆದರೂ ಮನುಷ್ಯ ಜ್ಞಾನವೇ ಅದರ ಮೂಲವಾಗಿರುವುದರಿಂದ ಅದರ ಮೂಲ ಆತ್ಮ ಕಥೆಯೇ ಆಗಿದೆಯೆ ಹೊರತು ತಂತ್ರಜ್ಞಾನವಲ್ಲ ಎನ್ನುವುದನ್ನು ಗಮನಿಸಬೇಕು. ಸಿನಿಮಾಗಳ ಮೂಲ ಬೇರು ಜನಸಾಮಾನ್ಯರ ಬದುಕಿನ ಅಂತಃಕರಣವೇ ಆಗಿರುವುದರಿಂದ ಸಾಮಾಜಿಕ ಸ್ಥಿತ್ಯಂತರಗಳನ್ನು ಗಮನದಲ್ಲಿಟ್ಟುಕೊಂಡು ಸಿನಿಮಾ ರೂಪಗೊಳ್ಳಬೇಕು ಎಂದರು.

ಈ ನಿಟ್ಟಿನಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಸಮಕಾಲೀನ ಸಂದರ್ಭದ ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆ, ಸವಾಲುಗಳ ಬಗ್ಗೆ ಅರಿವು ಮೂಡಿಸುವ ವಿವಿಧ ವಿಷಯಗಳನ್ನು ಹೊಸ ತಲೆಮಾರಿಗೆ ತಲುಪಿಸುವುದಕ್ಕಾಗಿ ಇಂತಹ ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳನ್ನು ಆಯೋಜಿಸುತ್ತಿದೆ. ಹೊಸತಲೆಮಾರನ್ನು ಒಳಗೊಂಡಿರುವ ಬೆಳಗಾವಿಯ ಈ ವಿಚಾರಸಂಕಿರ ಅರ್ಥಪೂರ್ಣವಾಗಿದೆ ಎಂದು ಹೇಳಿದರು.

ಈ ವೇಳೆ ಸಮಾರಂಭದಲ್ಲಿ ಪರಿಸರವಾದಿ ಶಿವಾಜಿ ಕಾಗಣೀಕರ, ಕುಲಪತಿ ಪ್ರೊ. ಸಿ. ಎಂ. ತ್ಯಾಗರಾಜ್, ಸುನಿಲ ಮೂಗಿ, ಮಂದಾ ನೇವಗಿ, ವಿಷ್ಣು ಶಿಂಧೆ, ಶಂಕರ ಕೊಡತೆ, ಸುಬ್ಬರಾವ ಎಂಟೆತ್ತಿನವರ, ಶಂಕರ ಬಾಗೇವಾಡಿ, ರಾಧಾ. ಎಂ. ಎನ್. ಸಾಹಿತಿಗಳಾದ ಚಂದ್ರಕಾಂತ ಪೋಕಳೆ, ರಾಮಕೃಷ್ಣ ಮರಾಠೆ, ಬಸವರಾಜ ಜಗಜಂಪಿ, ಶಿವಯೋಗಿ ಕುಸುಗಲ್ಲ, ಪ್ರೊ. ಕೆ. ಬಿ. ಚಂದ್ರಿಕಾ, ಕವಿತಾ ಕುಸುಗಲ್ಲ, ಆಶಾ ಯಮಕನಮರಡಿ, ರಂಜನಾ ಗೋದಿ, ಇಂದಿರಾ ಮೋಟೆಬೆನ್ನೂರ, ಮಹಾದೇವಿ ಹುಣಸಿಬೀಜ, ಬಸವರಾಜ ಗಾರ್ಗಿ, ಭರತ ಕಲಾಚಂದ, ಯಾದವೇಂದ್ರ ಪೂಜಾರ, ಮಹಾಬಲ ಸಾಬಣ್ಣವರ, ಎಸ್. ಟಿ. ಕರೀಭೀಮಗೋಳ, ಕಲ್ಲಪ್ಪ ಕಾಂಬಳೆ, ದುರ್ಗೇಶ್ ಮೇತ್ರಿ, ಸೇರಿದಂತೆ ಹಲವರು ಇದ್ದರು.

ಕಿರುಸುದ್ದಿ

ತಂಪೆರೆದ ಮಳೆ

ರಬಕವಿ ಬನಹಟ್ಟಿ: ಮೂರು ತಿಂಗಳಿಗಿಂತ ಹೆಚ್ಚು ಕಾಲ ಬಿಸಿಲಿನ ಬವಣೆಯಿಂದ ತತ್ತರಿಸಿದ್ದ ರಬಕ– ಬನಹಟ್ಟಿ ಹಾಗೂ ಸುತ್ತ ಮುತ್ತಲಿನ ಗ್ರಾಮೀಣ ಪ್ರದೇಶದ ಜನರು ಶನಿವಾರ ಮಧ್ಯ ರಾತ್ರಿ ಸುರಿದ ಭಾರಿ ಮಳೆಯಿಂದ ನಿಟ್ಟುಸಿರು ಬಿಟ್ಟಂತಾಗಿದೆ. 2.8 ಸೆಂ.ಮೀಟರ್ ಮಳೆಯಾದ ವರದಿಯಾಗಿದೆ. ಶನಿವಾರ ಸಂಜೆಯಿಂದಲೇ ಭಾರಿ ಪ್ರಮಾಣದಲ್ಲಿ ಮೋಡ, ಮಿಂಚು, ಗುಡುಗುಗಳ ಅರ್ಭಟ ಇದ್ದರೂ ಮಳೆಯಾಗಲಿಲ್ಲ. ರಾತ್ರಿ ಅಂದಾಜು ಒಂದುವರೆ ಗಂಟೆಗಿಂತ ಹೆಚ್ಚು ಕಾಲ ಗುಡುಗುಗಳೊಂದಿಗೆ ಉತ್ತಮ ಮಳೆ ಸುರಿಯಿತು. ಮಳೆಯಿಂದಾಗಿ ನಗರದ ಬಹುತೇಕ ಚರಂಡಿಗಳು ಸ್ವಚ್ಚಗೊಂಡಿದ್ದು, ಸುತ್ತ ಮುತ್ತಲಿನ ರೈತರ ಜಮೀನುಗಳಿಗೆ ಶನಿವಾರ ಮಧ್ಯ ರಾತ್ರಿ ಸುರಿದ ಮಳೆಯಿಂದ ಬಹಳಷ್ಟು ಅನುಕೂಲವಾಗಿದೆ. ರೈತರು ಈಗ ಬಿತ್ತನೆ ಮಾಡುತ್ತಿದ್ದು, ಇದು ರೈತರ ಮೊಗದಲ್ಲಿ ನಗೆಯನ್ನು ಬೀರಿದೆಯೆಂದು ರೈತ ಅಪ್ಪು ಪಾಟೀಲ ಪತ್ರಿಕೆ ತಿಳಿಸಿದರು.

ರಾಜ್ಯಾಧ್ಯಕ್ಷರಾಗಿ ವೆಂಕಟೇಶ ಸಾಕಾ ಆಯ್ಕೆ



ಇಳಕಲ್: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೇಕಾರರ ವಿಭಾಗದ ಸಂಘಟನೆ ಹಿನ್ನಲೆಯಲ್ಲಿ ವೆಂಕಟೇಶ ವಿಠಲ್ ಸಾಕಾ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಕಾರ ವಿಭಾಗ, ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಕರ್ನಾಟಕ ಪ್ರದೇಶ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಡಿಕೆ ಶಿವಕುಮಾರ್ ಅವರು ನೇಮಕ ಮಾಡಿ ಆದೇಶಿಸಿದ್ದಾರೆ. ನೇಕಾರ ವಿಭಾಗದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ವೆಂಕಟೇಶ್ ಸಾಕಾ ಅವರು ತಮ್ಮ ಆಯ್ಕೆಗೆ ಕಾರಣಿಕರ್ತರಾದ ಶಾಸಕ ವಿಜಯಾನಂದ ಕಾಶಪ್ಪನವರಿಗೆ ಭೇಟಿ ಮಾಡಿ ಧನ್ಯವಾದ ತಿಳಿಸಿದರು. ನೇಕಾರ ವಿಭಾಗದ ರಾಜ್ಯ ಅಧ್ಯಕ್ಷರಾಗಿ ಆಯ್ಕೆಯಾದ ವೆಂಕಟೇಶ ಸಾಕಾ ಇವರಿಗೆ ಇಳಕಲ್ ನೇಕಾರ ಬಾಂಧವರು ಮತ್ತು ನಗರದ ಸಂಘ ಸಂಸ್ಥೆಗಳು, ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘ, ಚಂದನ ಪ್ರತಿಷ್ಠಾನದ ಅಧ್ಯಕ್ಷರು ಸದಸ್ಯರು ಶುಭಾಶಯ ತಿಳಿಸಿದ್ದಾರೆ.

ಗೃಹಲಕ್ಷ್ಮೀ ಲೋನ್ ಯೋಜನೆ ಸುಳ್ಳು ಸುದ್ದಿ

ಬಾಗಲಕೋಟೆ: ಸಾಮಾಜಿಕ ಜಾಲತಾಣಗಳಲ್ಲಿ ಗೃಹಲಕ್ಷ್ಮೀ ಯೋಜನೆಯಲ್ಲಿ 30 ಸಾವಿರದಿಂದ 3 ಲಕ್ಷದವರೆಗೆ ಸಾಲ ನೀಡಲಾಗುತ್ತಿದೆ ಎಂಬ ಸುದ್ದಿ ಹರಿದಾಡುತ್ತಿದ್ದು, ಇದೊಂದು ಸುಳ್ಳು ಸುದ್ದಿಯಾಗಿದ್ದು, ಇಂತಹ ವದಂತಿಗಳಿಗೆ ಮರುಳಾಗಬಾರದೆಂದು ಜಿಲ್ಲಾ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅನೀಲಕುಮಾರ ದಡ್ಡಿ ತಿಳಿಸಿದ್ದಾರೆ. ಗೃಹಲಕ್ಷ್ಮಿ ಯೋಜನೆ ಮಾಸಿಕ ಸಹಾಯಧನ ಯೋಜನೆ ಹೊರತು ಸಾಲದ ಯೋಜನೆಯಲ್ಲ. ಅಪರಿಚಿತ ಲಿಂಕ್‌ಗಳನ್ನು ಭರ್ತಿ ಮಾಡಬೇಡಿ, ಓಟಿಪಿ, ಬ್ಯಾಂಕ್ ವಿವರ, ವಯಕ್ತಿಕ ವಿವರ ಹಂಚಿಕೊಳ್ಳಬೇಡಿ, ಮೋಸಕ್ಕೆ ಬಲಿಯಾಗಬೇಡಿ. ಸರ್ಕಾರದ ಆದೇಶ ಅಥವಾ ಪತ್ರಿಕಾ ಪ್ರಕಟಣೆ ನೋಡಬೇಕು. ಗೃಹಲಕ್ಷ್ಮಿ ಫಲಾನುಭವಿಗಳಿಗೆ 30 ನೇ ಕಂತಿನ ಹಣ ಬಿಡುಗಡೆಯಾಗಿದೆ. ಯಾವದೇ ಸುಳ್ಳು ಸುದ್ದಿಗಳನ್ನು ನಂಬದೆ ಸರಕಾರದ ಅಧಿಕೃತ ಆದೇಶ ನಂಬಬೇಕು. ಗ್ಯಾರಂಟಿ ಯೋಜನೆಗಳನ್ನು ಪಡೆದುಕೊಳ್ಳಲು ಹಾಗೂ ಸಮಸ್ಯೆಗಳಿದ್ದಲ್ಲಿ ನಿಮ್ಮ ತಾಲೂಕ ಗ್ಯಾರಂಟಿ ಸಮಿತಿ ಅಥವಾ ಜಿಲ್ಲಾ ಗ್ಯಾರಂಟಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರನ್ನು ಸಂಪರ್ಕಿಸುವಂತೆ ತಿಳಿಸಿದ್ದಾರೆ.

ವಿದ್ಯುತ್ ಅವಘಡ: ಬೀದಿ ಬಸವ ಸಾವು

ಜಮಖಂಡಿ: ಶನಿವಾರ ರಾತ್ರಿ ಸುರಿದ ಭಾರಿ ಮಳೆಯಿಂದ ನಗರದ ಸಿದ್ದರಾಮೇಶ್ವರ ಕಾಲನಿಯ ಕೆನಾಲ್ ರಸ್ತೆಯಲ್ಲಿ ವಿದ್ಯುತ ಪರಿವರ್ತಕದ ಹತ್ತಿರ ಬೀದಿ ಬಸವ ವಿದ್ಯುತ್ ಅವಘಡದಿಂದ ಮೃತಪಟ್ಟಿದೆ. ಕೆನಾಲ್ ರಸ್ತೆಗೆ ಹೊಂದಿಕೊಂಡ ವಿದ್ಯುತ್ ಪರಿವರ್ತಕಕ್ಕೆ ಸುರಕ್ಷತೆಗಾಗಿ ಯಾವುದೇ ಬೇಲಿಯನ್ನು ಹೆಸ್ಕಾಂ ಮಾಡದಿರುವುದೇ ಈ ಅಪಘಾತಕ್ಕೆ ಕಾರಣ ಎಂದು ಅಲ್ಲಿಯ ನಿವಾಸಿಗಳು ಆರೋಪಿಸಿದ್ದಾರೆ. ದಿನನಿತ್ಯ ಹತ್ತಾರು ಮಕ್ಕಳು ಈ ಬಯಲಿನಲ್ಲಿ ಆಟವಾಡಿಕೊಂಡಿರುತ್ತಾರೆ. ಈ ಪರಿವರ್ತಕಕ್ಕೆ ಸುತ್ತಲೂ ಬೇಲಿ ಹಾಕಿ ಸುರಕ್ಷತೆ ಕಾಪಾಡಬೇಕೆಂದು ಹೆಸ್ಕಾಂ ಅಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

ಅಗ್ರಾಣೆಪ್ಪ ಬಾವಲತ್ತಿ ನಿಧನ



ರಬಕವಿ–ಬನಹಟ್ಟಿ: ಬನಹಟ್ಟಿಯ ಸೋಮವಾರ ಪೇಟೆ ನಿವಾಸಿ ಅಗ್ರಾಣೆಪ್ಪ ಬಾವಲತ್ತಿ(75) ಭಾನುವಾರ ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಳಗವಿದೆ.



ಬಾಗಲಕೋಟೆ: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಪ್ರಥಮ ಬಾರಿಗೆ ಕರ್ನಾಟಕಕ್ಕೆ ಆಗಮಿಸಿದ ನಿತಿನ್ ನಬಿನ್ ಅವರನ್ನು ಮಾಜಿ ಸಚಿವರು ಹಾಗೂ ರಾಜ್ಯ ಬಿಜೆಪಿಯ ಉಪಾಧ್ಯಕ್ಷ ಡಾ.ಮುರುಗೇಶ ಆರ್ .ನಿರಾಣಿ ಅವರು ರಾಜ್ಯಕ್ಕೆ ಆತ್ಮೀಯವಾಗಿ ಬರಮಾಡಿಕೊಂಡರು.

ಒಪ್ಪತ್ತೇಶ್ವರ ಶ್ರೀಗಳ ತೊಟ್ಟಿಲೋತ್ಸವ

ಗುಳೇದಗುಡ್ಡ: ಪಟ್ಟಣದ ಗುರುಒಪ್ಪತ್ತೇಶ್ವರ ಮಠದ ಗೋಶಾಲೆ ಟ್ರಸ್ಟ್ ವತಿಯಿಂದ ಅಧಿಕ ಮಾಸದ ನಿಮಿತ್ತ ನಡೆದ ಮೌನಾನುಷ್ಠಾನ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಬರುವ ಸನ್ನಿವೇಶದ 14ನೇ ಒಪ್ಪತ್ತೇಶ್ವರ ಶ್ರೀಗಳ ತೊಟ್ಟಿಲು ಕಾರ್ಯಕ್ರಮ ನಡೆಯಿತು. ಕೋಟೆಕಲ್ ಗ್ರಾಮದ ಹೊಳೆಹುಚ್ಚೇಶ್ವರಮಠದಿಂದ ಗ್ರಾಮಸ್ಥರಿಂದ ತೊಟ್ಟಿಲನ್ನು ಮೆರವಣಿಗೆ ಮೂಲಕ ಒಪ್ಪತ್ತೇಶ್ವರ ಗೋಶಾಲೆಯವರಿಗೆ ನಡೆಯಿತು. ಹೊಳೆಹುಚ್ಚೇಶ್ವರ ಸ್ವಾಮಿಗಳು ಮಾತನಾಡಿ, ಅಧಿಕಮಾಸ ಬಹಳ ಶ್ರೇಷ್ಠವಾದ ಮಾಸವಾಗಿದ್ದು, ಈ ಭಾಗದಲ್ಲಿ ಅಧಿಕ ಮಾಸದ ಪ್ರವಚನವನ್ನು ಒಪ್ಪತ್ತೇಶ್ವರ ಶ್ರೀಗಳು ಆರಂಭ ಮಾಡಿದ್ದು ಖುಷಿಯ ವಿಚಾರ. ಗೋಮಾತೆಯ ಜಾಗವಾದ ಗೋಶಾಲೆಯಲ್ಲಿ ಪ್ರವಚನ ನಡೆಯುತ್ತಿರುವುದು ಉತ್ತಮ ಕಾರ್ಯ ಎಂದರು. ಅಮರೇಶ್ವರ ಬೃಹನ್ಮಠದ ಡಾ.ನೀಲಕಂಠ ಸ್ವಾಮಿಗಳು ಸಾನಿಧ್ಯ ವಹಿಸಿ ಮಾತನಾಡಿದರು. ಮಠದ ಪೀಠಾಧ್ಯಕ್ಷ ಒಪ್ಪತ್ತೇಶ್ವರ ಶ್ರೀಗಳು ಪ್ರವಚನ ಹೇಳಿದರು. ರಮೇಶ ಅಬಕಾರಿ, ವೈ.ಜಿ.ತಳವಾರ ಇತರರು ತೊಟ್ಟಿಲು ಕಾರ್ಯಕ್ರಮದ ಸೇವೆ ಸಲ್ಲಿಸಿದರು. ಕೋಟೆಕಲ್ ಗ್ರಾಮದ ಅಕ್ಕನ ಬಳಗ ಹಾಗೂ ಗ್ರಾಮಪಂಚಾಯಿತಿ ಮಹಿಳಾ ಒಕ್ಕೂಟದ ಸದಸ್ಯರಿಂದ ತೊಟ್ಟಿಲು ಹಾಕುವ ಕಾರ್ಯಕ್ರಮ ನಡೆಯಿತು. ಶ್ಯಾಮಣ್ಣ ಪತ್ತಾರ, ಬಸವರಾಜ ಅಬ್ಬಿಗೇರಿ ಇವರಿಂದ ಸಂಗೀತ ಸೇವೆ ನಡೆಯಿತು. ಸಂಗಪ್ಪ ಜವಳಿ, ರಂಗಪ್ಪ ಅರಮನ್ನವರ, ನೀಲಪ್ಪ ಅಬಕಾರಿ, ಸಂಗಪ್ಪ ಆಲೂರ, ಮುತ್ತಪ್ಪ ಅಬಕಾರಿ, ಮಹಾಂತೇಶ ಹಿರೇಮಠ, ಹನಮಂತ ವಾರಿ, ಶರಣಪ್ಪ ಚಿಕ್ಕನರಗುಂದ, ಯಲಗೂರೇಶ ಅರಮನಿ, ಹುಚ್ಚೇಶ ಕಮತರ, ಅಶೋಕ ರೋಜಿ, ಹುಚ್ಚಪ್ಪ ಅಬಕಾರಿ,ಪರಸಪ್ಪ ಆಲೂರ, ಬೂದಿಹಾಳಮಠ, ಯಲಗುರದಪ್ಪ ತೊಗಲಂಗಿ ಸೇರಿದಂತೆ ಇತರರಿದ್ದರು.



ಗುಳೇದಗುಡ್ಡ: ಪಟ್ಟಣದ ಗುರುಒಪ್ಪತ್ತೇಶ್ವರ ಮಠದ ಗೋಶಾಲೆ ಟ್ರಸ್ಟ್ ವತಿಯಿಂದ ಅಧಿಕ ಮಾಸದ ನಿಮಿತ್ತ ನಡೆದ ಮೌನಾನುಷ್ಠಾನ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಬರುವ ಸನ್ನಿವೇಶದ 14ನೇ ಒಪ್ಪತ್ತೇಶ್ವರ ಶ್ರೀಗಳ ತೊಟ್ಟಿಲು ಕಾರ್ಯಕ್ರಮ ನಡೆಯಿತು.

ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ | ಅಂಬಿಗೇರ ಸಲಹೆ

ಮಕ್ಕಳ ಪ್ರತಿಭೆಗೆ ಪ್ರೋತ್ಸಾಹಿಸಿ

ಬಾಗಲಕೋಟೆ: ಅಂಬಿಗ ಸಮಾಜದ ಮಕ್ಕಳು ಇಂದು ಸಮಾಜದ ಮುಂದುವರಿದ ಸಮಾಜದ ಮಕ್ಕಳಿಗೆ ಶೈಕ್ಷಣಿಕವಾಗಿ ಸಾಕಷ್ಟು ಪ್ರತಿ ಸ್ಪರ್ಧೆ ನೀಡುತ್ತಿರುವದು ಬಲು ಖುಷಿ ನೀಡಿದೆ ಎಂದು ಅಂಬಿಗ ಸಮಾಜದ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾಧ್ಯಕ್ಷ ಉದಯ ಅಂಬಿಗೇರ ಹೇಳಿದರು.



ನವನಗರದ ಕಲಾಭವನದಲ್ಲಿ ಅಂಬಿಗ ಸಮಾಜದ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಾಜದಲ್ಲಿ ಶಿಕ್ಷಣ ಕ್ರಾಂತಿ ಆದರೆ ಸಮಾಜ ಕ್ರಾಂತಿಯಾಗಲಿದೆ ಸಮಾಜದ ಕಟ್ಟಕಡೆ ಬಡ ವಿದ್ಯಾರ್ಥಿಗಳು ಸಮಾಜ ಪ್ರಾರಂಭಿಸಿರುವ ವಿದ್ಯಾಸಿರಿ ಯೋಜನೆಯ ಲಾಭ ಪಡೆಯಬೇಕು. ಸಮಾಜದಲ್ಲಿ ಇಂದು ಮಕ್ಕಳು ಪಿಯುಸಿ ಹಾಗೂ ಎಸ್ಎಸ್ಎಲ್‌ಸಿಯಲ್ಲಿ ಒಟ್ಟು 300ಕ್ಕೂ ಹೆಚ್ಚು ಮಕ್ಕಳು ಇಂದು ಸಾಧನೆ ಮಾಡಿದ್ದು ಶ್ಲಾಘನೀವಾದದ್ದು, ಮಕ್ಕಳು ತಮ್ಮ ಪ್ರತಿಭೆ ಹೊರಹಾಕಿದ್ದು, ಅವರಿಗೆ ಪಾಲಕರು ಸಹಕಾರ ನೀಡಬೇಕು ಅವರಿಗೆ ಸಮಾಜ ಕೂಡಾ ಬೆಂಬಲವಾಗಿ ನಿಲ್ಲುತ್ತೆ ಎಂದು ಹೇಳಿದರು.

ಸಮಾಜದ ಮಾಜಿ ರಾಜ್ಯಾಧ್ಯಕ್ಷ ಎಂ.ಮೌಲಾಲಿ ಮಾತನಾಡಿ, ಸಮಾಜದ ಬಹುದಿನಗಳ ಬೇಡಿಕೆಯಾಗಿರುವ ಎಸ್‌ಟಿ ಸೇರ್ಪಡೆಯ ಫೈಲ್ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಿದ್ದು ಸದ್ಯದಲ್ಲಿ ಅದು ಅನುಮೋದನೆಗೊಳ್ಳಲಿದೆ ಎಂದು ಹೇಳಿದರು.

ನೌಕರರ ಸಂಘದ ರಾಜ್ಯಾಧ್ಯಕ್ಷ ಎಂ.ಶ್ರೀನಿವಾಸ ಮಾತನಾಡಿ ಪಾಲಕರು ಮಕ್ಕಳ ಕೈಯಲ್ಲಿ ಮೊಬೈಲ ಕೊಡಬೇಡಿ ಆದರಿಂದ ದೂರುವಿಡಿ ಮಕ್ಕಳ ಬಗ್ಗೆ ನಿಗಾವಹಿಸಿ ಮಕ್ಕಳು ವಿದ್ಯಾವಂತರಾದರೆ ಸಮಾಜ ಬಲಿಷ್ಟಗೊಳ್ಳಲಿದೆ ಸಮಾಜ ಸಂಘಟನೆ ಬಗ್ಗೆ ಹೆಚ್ಚು ಗಮನಕೊಡಿ ಅಂದಾಗ ರಾಜಕೀಯ ಲಾಭ ಪಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ನೌಕರರ ಸಂಘದ ಬೆಳ್ಳಿ ಮಹೋತ್ಸವ ಕಾರ್ಯಕ್ರಮವನ್ನು ಮಧ್ಯ ಕರ್ನಾಟಕದ ಯಾವದಾದರು ಒಂದು ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಸಮಾಜಬಾಂದವರ ಸಮ್ಮುಖದಲ್ಲಿ ಕಾರ್ಯಕ್ರಮ ಜರುಗಲಿದೆ ಎಂದು ಹೇಳಿದರು.

ವಿದ್ಯಾಸಿರಿ ಯೋಜನೆಯ ಹರಿಕಾರ ನಾಗೇಂದ್ರ ಹೊನ್ನಳ್ಳಿ ಮಾತನಾಡಿ, ವಿದ್ಯಾರ್ಥಿಗಳು ಸಮಾಜದ ಉತ್ತಮ ನಾಗರಿಕರಾಗಿ ಪ್ರತಿಯೊಬ್ಬರಿಗೆ ಒಂದೊಂದು ಪ್ರತಿಭೆವಿದೆ ಪಾಲಕರು ಮಕ್ಕಳ ಪ್ರತಿಭೆಯನ್ನು ಗುರುತಿಸಿ ಮಕ್ಕಳಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿವಿದೆ ಅಲ್ಲಿ ಸಾಧನೆ ಮಾಡಲು ಅವಕಾಶ ಮಾಡಿಕೊಡಿ. ಸಮಾಜ ಬಾಂದವರು ಎಲ್ಲರೂ ಒಗ್ಗಾಟ್ಟಾಗಬೇಕು. ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಅವಕಾಶ ಸದುಪಯ ೂಗಪಡಿಸಿಕೊಳ್ಳಬೇಕೆಂದರು. ಗಂಗಾವಿದ್ಯಾಸಿರಿ ಯೋಜನೆಯಲ್ಲಿ ಸುಮಾರು 70 ಲಕ್ಷ ಹಣ ಸಂಗ್ರಹಿಸಿದ್ದಾರೆ. ಈ ಹಣದಲ್ಲಿ ಪ್ರತಿಭಾವಂತ ಸಮಾಜದ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ನೀಡಲಾಗುವದು. ಈ ಯೋಜನೆ ಲಾಭ ಪಡೆದ ಮಕ್ಕಳು ಮುಂದೆ ಸಮಾಜದ ಬಡ ಮಕ್ಕಳಿಗೆ ಸಹಾಯ ಸಹಕಾರ ಮಾಡಬೇಕು ಎಂದರು.

ಅಂಬಿಗ ಸಮಾಜದ ಗುರುಪೀಠದ ಶಾಂತಭೀಷ್ಮ ಚೌಡಯ್ಯ ಮಹಾಸ್ವಾಮಿಜಿ ಸಾನಿಧ್ಯವಹಿಸಿದ್ದರು. ಸಮಾಜದ ಜಿಲ್ಲಾಧ್ಯಕ್ಷ ಮಹೇಶ ಕೋಳಿ ನಾಗಪ್ಪ ಅಂಬಿ ಎಂ.ಬಿ.ಅಂಬಿಗೇರ ಚಿನ್ನು ಅಂಬಿ ಶ್ರೀಕಾಂತ ಕಟ್ಟಿಮನಿ ಎಚ್.ಸಿ.ಅಂಬಿಗೇರ ಪುಂಡಲೀಕ ಕರೆಣಿ ಸಿ.ಆರ್.ಕೋಲ್ಕಾರ ಶಿವಾನಂದ ಗೋಕಾವಿ ರಾಮಣ್ಣ ರಾಮವಾಡಗಿ ಸದಾಶೀವ ಕಟ್ಟಿಮನಿ ಬಸವರಾಜ ಜಮಲಾಪೂರ ಎಸ್.ಕೆ.ಮೇಲ್ಕಾರ ಮಹಾಂತೇಶ ಅಂಬಿಗೇರ ಚಂದ್ರು ಅಂಬಿಗೇರ ಶಿವುಕುಮಾರ ಅಂಬಿಗೇರ ಸಂತೋಷ ನಂಜಪ್ಪ ಪ್ರದೀಪ ಮಂಟೂರು ದಿಲೀಪ ಎಸ್.ಎನ್. ವಾಲಿಕಾರ ಚಂದ್ರು ಸದಪ್ಪಗೋಳ ಚಂದ್ರು ಕಟ್ಟಿಮನಿ ಕುರಂದವಾಡ ಸೇರಿದಂತೆ ಇನ್ನಿತರರು ಇದ್ದರು.

ಮಹಿಳೆ ಕುಟುಂಬದ ಆಧಾರ ಸ್ತಂಭ: ಜೆಟಿಪಾ

ಬಾಗಲಕೋಟೆ: ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾಗಿರುವುದನ್ನು ಗಮನಿಸಿ ಸರ್ಕಾರ ಗ್ಯಾರಂಟಿ ಯೋಜನೆ ಜಾರಿ ಮಾಡಿ ದ್ದು ಅವುಗಳಲ್ಲಿ ಬಹು ಪಾಲು ಮಹಿಳೆ ಯರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳಿದ್ದು, ಅಂತ ಯೋಜನೆಗಳ ಸದುಪಯೋಗ ಪಡೆದುಕೊಂಡು ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಬೇಕು ಎಂದು ಶಾಸಕ ಜೆ.ಟಿ.ಪಾಟೀಲ ಹೇಳಿದರು.

ಬಾಗಲಕೋಟೆ ಹಳೆ ಪ್ರವಾಸಿ ಮಂದಿರದ ತಮ್ಮ ಕಚೇರಿಯಲ್ಲಿ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಜೀವನೋಪಾಯ ಇಲಾಖೆಯ ವತಿಯಿಂದ ಬೀಳಗಿ ತಾಲೂಕಿನ, ತೆಗ್ಗಿ ಸಿದ್ದಾಪುರ ಸೊನ್ನ ಗ್ರಾಮಗಳ ಮಹಿಳೆಯರಿಗೆ ಹೊಲಿಗೆ ಯಂತ್ರ ಹಾಗೂ ಕಿಟ್ ವಿತರಿಸಿ ಮಾತ್ರ ನಾಡಿದರು. ಕಲಿಯಲಾರದ ಬಡ ಹೆಣ್ಣು ಮಕ್ಕಳು ಹೊಲಿಗೆ ತರಬೇತಿ ಪಡೆದಿದ್ದರೆ ಅಂತವರನ್ನು ಗುರುತಿಸಿ ಅವರು ಸ್ವಂತ ಉದ್ಯೋಗ ಮಾಡಲು ಅನುಕೂಲವಾಗುವ ದೃಷ್ಟಿಯಿಂದ ಹೊಲಿಗೆ ಯಂತ್ರ ಹಾಗೂ ಸಾಮಗ್ರಿಗಳನ್ನು ಉಚಿತವಾಗಿ ಕೊಡಲಾಗುವುದು ಎಂದರು.

ಇಂದು ಟೆಲರಿಂಗ್ ಕಾರ್ಯ ವಿರಳವಾಗಿದ್ದು ಅದರಲ್ಲೂ ಮಹಿಳೆಯರ ಉಡುಪುಗಳ ತಯಾರಿಕೆಯಲ್ಲಿ ದುಬಾರಿಯಾಗಿದ್ದು, ಒಬ್ಬ ಹೆಣ್ಣುಮಗಳು ಹೊಲಿಗೆ ಕಾರ್ಯ ಮಾಡುತ್ತಾ ದುಡಿದಲ್ಲಿ ಖಾಸಗಿ ಆಸ್ಪತ್ರೆ ವೈದ್ಯರಷ್ಟು ಸಂಪಾದನೆ ಮಾಡಬಹುದಾಗಿದೆ ಪ್ರತಿ ತಿಂಗಳಿಗೆ ಕನಿಷ್ಠ 50 ಸಾವಿರ ರೂ.ಗಳನ್ನು ಗಳಿಸಲು ಅವಕಾಶವಿದ್ದು ಜೊತೆಗೆ ಮಕ್ಕಳಿಗೆ ಉನ್ನತ ಶಿಕ್ಷಣ ಕಲಿಸುವಲ್ಲಿ ಕುಟುಂಬದ ನಿರ್ವಹಣೆಯಲ್ಲಿ ಮತ್ತು ಗೌರವಯುತವಾಗಿ ಬದುಕುವ ಅವಕಾಶ ಇರುವುದರಿಂದ ನೀವೆಲ್ಲ ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಹೊಲಿಗೆ ತರಬೇತಿ ಪಡೆದ ಮಹಿಳೆಯರು ಯಂತ್ರಗಳನ್ನು ಕೊಳ್ಳಲು ಅಶಕ್ತರಾಗಿದ್ದರಿಂದ ಅಂತಹ ಮಹಿಳೆಗೆ ಉಚಿತವಾಗಿ ಒಂಬತ್ತು ಸಾವಿರ ಐದು ನೂರು ರೂಪಾಯಿಗಳ ಬೆಲೆಯುಳ್ಳ ಹೊಲಿಗೆ ಯಂತ್ರ ಹಾಗೂ ಉಳಿದ ಪರಿಕರಗಳನ್ನು ನೀಡಲಾಗಿತ್ತಿದ್ದು, ಸದ್ಯ 81 ಮಹಿಳೆಯರು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ದ ತಾಲೂಕ ಅಧ್ಯಕ್ಷ ಉಪಸ್ಥಿತರಿದ್ದರು. ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ ಗುರುಪಾದಯ್ಯ ಹಿರೇಮಠ ಸ್ವಾಗತಿಸಿ ವಂದಿಸಿದರು.



ಶಾಲಾ ದಾಖಲಾತಿ ಆಂದೋಲನ ಯಶಸ್ವಿ

ಬೀಳಗಿ: ತಾಲೂಕಿನ ಕೊಪ್ಪ (ಎಸ್.ಕೆ) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಶಾಲಾ ದಾಖಲಾತಿ ಆಂದೋಲನ ಯಶಸ್ವಿಯಾಗಿ ನಡೆಯಿತು.

ಈ ವೇಳೆ ಸರ್ಕಾರಿ ಶಾಲೆಯ ಸೌಲಭ್ಯಗಳಾದ ಉಚಿತ ಸಮವಸ್ತ್ರ, ಪಠ್ಯಪುಸ್ತಕ, ಮಧ್ಯಾಹ್ನದ ಬಿಸಿಯೂಟ, ಶೂ–ಸಾಕ್ಸ್, ವಿದ್ಯಾರ್ಥಿ ವೇತನ, ಸುಸಜ್ಜಿತ ತರಗತಿ, ಗ್ರಂಥಾಲಯ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಸೌಲಭ್ಯ ಹಾಗೂ ನುರಿತ ಶಿಕ್ಷಕರಿಂದ ಗುಣಮಟ್ಟದ ಶಿಕ್ಷಣ ಹಾಗೂ ಶಾಲಾ ವಿಶೇಷತೆಗಳಾದ ಸಹಪಠ್ಯ ಚಟುವಟಿಕೆಗಳು, ಪರಿಸರಯುಕ್ತ ಶಿಕ್ಷಣ, ಪ್ರಾಯೋಗಿಕ ಪಾಠಗಳ ಶಿಕ್ಷಣ, ಮೌಲ್ಯ ಶಿಕ್ಷಣ ಮುಂತಾದ ಸೌಲಭ್ಯಗಳ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿಕೊಡಲಾಯಿತು. ಈ ದಾಖಲಾತಿ ಆಂದೋಲನದ ಫಲವಾಗಿ 2026–27ನೇ ಸಾಲಿಗೆ 1ನೇ ತರಗತಿಗೆ ಇಂದು ಒಟ್ಟು 11 ಮಕ್ಕಳ ದಾಖಲಾತಿ ಮಾಡಿಕೊಳ್ಳಲಾಯಿತು.

ಎಸ್‌ಡಿಎಂಸಿ ಅಧ್ಯಕ್ಷ ರಾಜೇಂದ್ರ ಕುಂಬಾರ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲಿಷ್ ಜ್ಞಾನ ಅಗತ್ಯ. ನಮ್ಮ ಶಾಲೆಯಲ್ಲಿ ಕನ್ನಡದ ಜೊತೆಗೆ ಇಂಗ್ಲಿಷ್ ಮಾಧ್ಯಮದಲ್ಲೂ ಶಿಕ್ಷಣ ನೀಡಲಾಗುತ್ತಿದೆ. ಸರ್ಕಾರಿ ಶಾಲೆಗಳು ಎಲ್ಲ ರೀತಿಯ ಸೌಲಭ್ಯಗಳೊಂದಿಗೆ ಖಾಸಗಿ ಶಾಲೆಗಳಿಗೆ ಸರಿಸಮನಾಗಿವೆ. ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಿ ಸದುಪಯೋಗ ಪಡೆಯಬೇಕು. ಪ್ರಸ್ತುತ ವರ್ಷದಲ್ಲಿ ಶಾಲೆಯ ಬಗ್ಗೆ ಗ್ರಾಮಸ್ಥರು ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಆದ್ದರಿಂದ ಈ ವರ್ಷ ದಾಖಲಾತಿಯು ಹೆಚ್ಚಳವಾಗಲಿದೆ ಎಂದು ಹೇಳಿದರು.

ಶಿಕ್ಷಕ ಚಂದ್ರು ವೈ.ಎ.,ಗ್ರಾಮಸ್ಥರ ಹಾಗೂ ಎಸ್‌ಡಿಎಂಸಿಯವರ ಸಹಕಾರದಿಂದ ಶಾಲಾ ಮಕ್ಕಳ ದಾಖಲಾತಿ ಹೆಚ್ಚಿಸಿ ನಮ್ಮ ಗ್ರಾಮದ ಶಾಲೆಯನ್ನು ಅಭಿವೃದ್ಧಿ ಮಾಡಬೇಕಾಗಿದೆ. ದ್ವಿಭಾಷೆ ಮಾಧ್ಯಮದಿಂದ ಮಕ್ಕಳಿಗೆ ಎರಡೂ ಭಾಷೆಗಳಲ್ಲಿ ಪ್ರಾವೀಣ್ಯತೆ ಸಿಗಲಿದೆ. ಆದ್ದರಿಂದ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಿ ಎಂದು ಪೋಷಕರಿಗೆ ಬಿತ್ತಿ ಪತ್ರಗಳನ್ನು ವಿತರಿಸುವ ಸಂದರ್ಭದಲ್ಲಿ ಮನವಿ ಮಾಡಿದರು.

ಎಸ್‌ಡಿಎಂಸಿ ಸದಸ್ಯ ಲಿಂಗರಾಜ ಬೂದಿಹಾಳ, ಶಿಕ್ಷಕಿಯರಾದ ಜ್ಯೋತಿ ನರಗುಂದ, ಸಕ್ಕುಬಾಯಿ ಬೆಳ್ಳುಬ್ಬಿ, ಸವಿತಾ ಮಾಳೇದ ಹಾಗೂ ಶಾಲಾ ಹಳೆಯ ವಿದ್ಯಾರ್ಥಿಗಳು ಪೋಷಕರು ಭಾಗವಹಿಸಿದ್ದರು.



ಗುರುಗಳಿಗಿಂತ ವಿದ್ಯಾರ್ಥಿಗಳು ಉನ್ನತ ಸ್ಥಾನ ತಲುಪಲಿ

ರಬಕವಿ-ಬನಹಟ್ಟಿ: ವಿದ್ಯಾರ್ಥಿಗಳು ಕಲಿಸಿದ ಗುರುಗಳಿಗಿಂತ ಉನ್ನತ ಸ್ಥಾನ ತಲುಪಬೇಕು. ಆಗ ಮಾತ್ರ ವಿದ್ಯೆ ಕಲಿಸಿದ ಗುರುಗಳಲ್ಲಿ ಸಾರ್ಥಕಭಾವ ಮೂಡುತ್ತದೆಯೆಂದು ಹಿರೇಮಠದ ಶರಣಬಸವ ಶಿವಾಚಾರ್ಯರು ಹೇಳಿದರು.



ಬನಹಟ್ಟಿಯ ಭದ್ರನ್ನವರ ಕಲ್ಯಾಣಮಂಟಪದಲ್ಲಿ ನಡೆದ ಸರ್ಕಾರಿ ಶಾಲೆ 2000–2001ನೇ ಸಾಲಿನ ವಿದ್ಯಾರ್ಥಿಗಳ ಭಕ್ತಿಯ ಗುರುವಂದನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇಲ್ಲಿನ ಎಸ್‌ಆರ್‌ಎ ಶಾಲೆಯಲ್ಲಿ ವ್ಯಾಸಾಂಗ ಮಾಡಿದ ವಿದ್ಯಾರ್ಥಿಗಳು ವಿಶ್ವದೆಲ್ಲೆಡೆ ಸಿಗುತ್ತಾರೆ. ದೇಶ ವಿದೇಶಗಳಲ್ಲಿ ಉತ್ತಮ ಸ್ಥಾನ–ಮಾನ ಹೊಂದಿದ್ದಾರೆಂದರು. ವಿದ್ಯಾರ್ಥಿಗಳಾದರು ಒಂದು ದಿನ ಉನ್ನತ ಸ್ಥಾನವೆಂಬುದು ಎಷ್ಟೇ ದೊಡ್ಡದಿರಲಿ ನಮ್ಮ ಸಂಸ್ಕೃತಿಯನ್ನು ಬಿಡಬಾರದು. ವಯಸ್ಸಾದ ತಂದೆ–ತಾಯಿ ಪೋಷಣೆ ಅಗತ್ಯವೆಂದರು.

ಶಾಲೆಯಲ್ಲಿ ಮಾಡುತ್ತಿದ್ದ ಚೇಷ್ಟೆಗಳು, ಶಿಕ್ಷಕರಿಂದ ಬೈಸಿಕೊಂಡಿದ್ದು ಹೆಚ್ಚು ಅಂಕಕೊಡುವಂತೆ ಬೇಡಿಕೊಂಡಿದ್ದು, ಗಲಾಟೆ ಸೆಕ್ಷನ್ ಎಂಬ ಬಿರುದು ಪಡೆದುಕೊಂಡಿದ್ದು, ಹೀಗೆ ವಿದ್ಯಾರ್ಥಿ ದೆಸೆಯ ಹಲವಾರು ನೆನಪುಗಳನ್ನು ಹಳೆ ವಿದ್ಯಾರ್ಥಿಗಳು ಹಂಚಿಕೊಂಡರು.

ನಿವೃತ್ತಿಯಾದ ಎಲ್ಲ ಶಿಕ್ಷಕರಿಗೂ ಗೌರವ ಸಮರ್ಪಣೆ ಮಾಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಡಿ.ಎ.ಬಾಗಲಕೋಟೆ ವಹಿಸಿದ್ದರು. ಎಚ್.ಆರ್. ಮೆಟಗುಡ್, ಜಯವಂತ ಕಾಡದೇವರ, ಅಶೋಕ ಪತ್ತಾರ, ಎ.ಸಿ.ಹಳ್ಳಿ, ಸಿದ್ಧರಾಮ ಹಾವಿನಾಳ, ಆರ್.ಡಿ. ಪಾಠಕ, ಎನ್.ಎಸ್.ಕಂಕನಮೇಲಿ, ಡಾ.ಎಚ್.ಬಿ.ನದಾಫ್, ಎಂ.ಪಿ.ಧೂಪದಳ, ಆರ್. ಎಂ.ಉಕ್ಕಲಿ, ಬಿ.ಜಿ.ಚೋರಾಪುರ, ಎಸ್.ಆರ್. ಕಲಾದಗಿ, ಎಂ.ಎನ್.ವಲ್ಯಾಪುರ, ಎಂ.ಎಸ್. ಹೊಸೂರ, ಎಸ್.ಆರ್.ಪದಕಿ, ಜಿ.ಕೆ.ಸುರಪುರ, ಎಸ್.ಕೆ.ಹುನ್ನೂರ ಸೇರಿದಂತೆ ಅನೇಕರು ಇದ್ದರು.

ಜಿಲ್ಲಾಧ್ಯಕ್ಷರಾಗಿ ಹೊಳಬಸಪ್ಪ ಬಾಳಶೆಟ್ಟಿ ಆಯ್ಕೆ

ಬೀಳಗಿ: ಬಾಗಲಕೋಟೆಯ ವಿದ್ಯಾಗಿರಿ ಸಾಯಿ ಮಂದಿರದಲ್ಲಿ ಬಣಜಿಗ ಕ್ಷೇಮಾಭಿವೃದ್ಧಿ ಸಂಘ ಬೆಂಗಳೂರು ಇದರ ಬಾಗಲಕೋಟೆ ಜಿಲ್ಲೆಯ ಅಧ್ಯಕ್ಷರ ಆಯ್ಕೆ ಬಾಗಲಕೋಟೆ ಜಿಲ್ಲೆಯ, ತಾಲೂಕಿನ ಪದಾಧಿಕಾರಿಗಳು ಹಾಗೂ ವಿಶ್ವಸ್ಥ ಮಂಡಳಿ ಸದಸ್ಯರು, ಮಹಾ ಪೋಷಕರು, ಪೋಷಕರು ಮತ್ತು ಹಿರಿಯರೆಲ್ಲರೂ ಸೇರಿಕೊಂಡು ಅವಿರೋಧವಾಗಿ ನೂತನ ಜಿಲ್ಲಾ ಅಧ್ಯಕ್ಷರಾಗಿ ಗಲಗಲಿಯ ಹೊಳಬಸಪ್ಪ ಗುರುಸಿದ್ದಪ್ಪ ಬಾಳಶೆಟ್ಟಿ ಅವರನ್ನು ಆಯ್ಕೆ ಮಾಡಲಾಯಿತು.



ರಾಜ್ಯ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ರೂಡಗಿ, ಪ್ರಧಾನ ಕಾರ್ಯದರ್ಶಿ ಶಿವಾನಂದ ಬಿದರಿ, ಕಾರ್ಯದರ್ಶಿ ಸಿದ್ದರಾಮ ಶಿರೋಳ, ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರಭು ಇದ್ದಲಗಿ ಹಾಗೂ ನಿಕಟಪೂರ್ವ ಜಿಲ್ಲೆಯ ಗೌರವಾಧ್ಯಕ್ಷ ತಾತಾಸಾಹೇಬ ಬಾಂಗಿ, ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಮುತ್ತು ಜೋಳದ, ರವಿ ಕುಮಟಗಿ, ರಾಜು ತಪಶೆಟ್ಟಿ, ಬಸವರಾಜ ಜಮಖಂಡಿ, ಶಿವಾನಂದ ಪಟ್ಟಣಶೆಟ್ಟಿ, ಸುಭಾಷ ಸೌದಿ, ಮುಖಂಡರು ಪಾಲ್ಗೊಂಡಿದ್ದರು.

ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ.90.45 ರಷ್ಟು

ಬೀಳಗಿ: 2025–26 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ–1ರ ಮರು ಮೌಲ್ಯಮಾಪನದಿಂದ ತಾಲೂಕಿನ 14 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮೊದಲು ಫಲಿತಾಂಶ ಶೇ.89.31 ಆಗಿತ್ತು. ಮರು ಮೌಲ್ಯಮಾಪನದಿಂದ ಈಗ ತಾಲೂಕಿನ ಫಲಿತಾಂಶ ಶೇ.90.45 ರಷ್ಟು ಸಾಧನೆಯಾಗಿದೆ. 10 ಪ್ರೌಢ ಶಾಲೆಗಳು ಶೇ.100 ರಷ್ಟು ಫಲಿತಾಂಶ ದಾಖಲಿಸಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರಮೇಶ ಆದಾಪೂರ ಪತ್ರಿಕೆಗೆ ತಿಳಿಸಿದ್ದಾರೆ.

ರಸ್ತೆ ವಿಭಜಕ; ಜನರ ಜೀವದ ಜೊತೆ ಚೆಲ್ಲಾಟ

▸ ನಾರನಗೌಡ ಉತ್ತಂಗಿ

ಮಹಾಲಿಂಗಪುರ: ಜನರಿಗೆ ವರವಾಗಬೇಕಿದ್ದ ರಸ್ತೆ ವಿಭಜಕ ಶಾಪವಾಗಿ ಪರಿಣಮಿಸಿದ್ದು, ಇದುವರೆಗೂ ನೂರಾರು ಅಪಘಾತಗಳು ಸಂಭವಿಸಿ ಸಾಕಷ್ಟು ಜನ ಶಾಶ್ವತ ಅಂಗವೈಕಲ್ಯಕ್ಕೆ ಒಳಗಾಗಿದ್ದರೂ ಇಲಾಖೆ ಅಧಿಕಾರಿಗಳು ಮಾತ್ರ ಕಣ್ಮುಚ್ಚಿ ಕುಳಿತಿರುವುದು ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ.



> ಇಂದು ನಡೆದಿರುವ ಅಪಘಾತಕ್ಕೆ ರಸ್ತೆ ವಿಭಜಕದ ಸೂಚನೆಗಳು ಇಲ್ಲದಿರುವುದು ಕಾರಣ ಎಂದು ಗೊತ್ತಾಗಿದ್ದು ಸೋಮವಾರ ಬೆಳಿಗ್ಗೆ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.
> ■ ಶ್ವೇತಾ ಬೀಡಿಕರ, ಉಪ ವಿಭಾಗಾಧಿಕಾರಿ, ಜಮಖಂಡಿ

ಮುಧೋಳದಿಂದ ರಬಕವಿ ಬನಹಟ್ಟಿ ಮುಖಾಂತರ ಸಾಂಗ್ಲಿ, ಮಿರಜ್ ಹಾಗೂ ಜಮಖಂಡಿ, ವಿಜಯಪುರ ಮತ್ತು ಗೋಕಾಕ, ಘಟಪ್ರಭಾ, ಬೆಳಗಾವಿ, ಕೊಲ್ಹಾಪುರ, ನಿಪ್ಪಾಣಿ ಕಡೆ ನಿತ್ಯವೂ ನೂರಾರು ವಾಹನಗಳು ಚಲಿಸುವ ಮುಧೋಳ ನಿಪ್ಪಾಣಿ ಹೆದ್ದಾರಿಯಲ್ಲಿ ಸ್ಥಳೀಯ ಅಪ್ಪಗಿ ಚಿತ್ರಮಂದಿರದ ಮುಂಭಾಗದಲ್ಲಿ ಅಪೋಲೋ ಮೆಡಿಕಲ್ ಸ್ಟೋರ್‌ನ ಎದುರು ಆರಂಭವಾಗುವ ರಸ್ತೆ ವಿಭಜಕಕ್ಕೆ ಯಾವುದೇ ರೀತಿಯ ಸೂಚನಾ ಫಲಕವಾಗಲಿ, ವಿದ್ಯುತ್ ದೀಪಗಳಿಂದ ರಸ್ತೆ ವಿಭಜಕದ ತಿಳುವಳಿಕೆಯಾಗಲಿ ಮಾಡದಿರುವುದು ಬರುವ ವಾಹನ ಸವಾರರು ರಸ್ತೆ ವಿಭಜಕ ಅರಿಯದೆ ಇದುವರೆಗೂ ನೂರಾರು ಟ್ರ್ಯಾಕ್ಟರ್, ಕಾರು, ಲಾರಿ, ಬೈಕ್ ಮುಂತಾದ ವಾಹನಗಳು ಡಿಕ್ಕಿ ಹೊಡೆದು ಸಾಕಷ್ಟು ಅವಘಡಗಳು ಸಂಭವಿಸಿದೆ.

ಕೆಲವು ಅಪಘಾತಗಳು ಜನರ ಶಾಶ್ವತ ಅಂಗ ವೈಕಲ್ಯಕ್ಕೆ ಕಾರಣವಾಗಿದ್ದು ಅದು ಅಲ್ಲದೆ ಸಾಕಷ್ಟು ನಷ್ಟವು ಆಗಿದೆ. ಇದಕ್ಕೆ ತಾಜಾ ಉದಾಹರಣೆಯಾಗಿ ಮೇ 24ರ ಶನಿವಾರ ರಾತ್ರಿಯೂ ಸಹ ಕಾರು ರಸ್ತೆ ವಿಭಜಕ್ಕೆ ಡಿಕ್ಕಿಯಾಗಿ ಅಪೋಲೋ ಮೆಡಿಕಲ್ಸ್ ಪಕ್ಕದಲ್ಲಿ ಅಪ್ಪಳಿಸಿದೆ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರು ಮೆಡಿಕಲ್ ಸ್ಟೋರ್ ಒಳಗೆ ನುಗ್ಗಿ ದೊಡ್ಡ ಅನಾಹುತ ಸಂಭವಿಸುವ ಸಂಭವವಿತ್ತು.

ಅದು ಅಲ್ಲದೆ ಇಲ್ಲಿ ಬಾರ್, ಮೆಡಿಕಲ್ ಸ್ಟೋರ್ಸ್, ಕಟಿಂಗ್ ಶಾಪ್, ಖಾನಾವಳಿಗಳು, ಬಟ್ಟೆ ಅಂಗಡಿಗಳು ಮುಂತಾದ ವ್ಯಾಪಾರ ಮಳಿಗೆಗಳಿದ್ದು ಮತ್ತು ಮಹಾಲಿಂಗಪುರದ ಮುಖ್ಯ ಬಜಾರ ಜವಳಿ ಬಜಾರ್‌ಗೆ ಹೋಗುವ ದಾರಿಯೂ ಇದೇ ಆಗಿರುವುದರಿಂದ ಇಲ್ಲಿ ಯಾವಾಗಲೂ ಸಾಕಷ್ಟು ಜನಸಂದಣಿ ಇದ್ದು ಜನರು ಕೈಯಲ್ಲಿ ಜೀವ ಹಿಡಿದು ಪ್ರಾಣಭಯದಿಂದ ಓಡಾಡುವಂತಾಗಿದೆ. ಹೀಗಿದ್ದರೂ ಇಲ್ಲಿ ರಸ್ತೆ ವಿಭಜಕ ಸೂಚನಾ ಫಲಕ ಹಾಕಿರದೆ ಸಾಕಷ್ಟು ಅಪಘಾತಗಳು ಸಂಭವಿಸಿದ್ದು ಅದೃಷ್ಟವಶಾತ್ ಇದುವರೆಗೂ ಯಾವುದೇ ಪ್ರಾಣಪಾಯ ಸಂಭವಿಸಿರುವುದಿಲ್ಲ.

ಹದಗೆಟ್ಟ ರಸ್ತೆ: ಸಾರ್ವಜನಿಕರ ಆಕ್ರೋಶ

▸ ಮಲ್ಲಿಕಾರ್ಜುನ ತುಂಗಳ

ರಬಕವಿ-ಬನಹಟ್ಟಿ: ಆವಳಿ ನಗರ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿರುವ ತಗ್ಗು–ಗುಂಡಿಗಳ ಮಧ್ಯೆ ರಸ್ತೆಯ ಜಾಡನ್ನು ಹುಡುಕುತ್ತಾ ಚಾಲಕರು ವಾಹನ ಚಲಾಯಿಸುವಂತಹ ಪರಿಸ್ಥಿತಿಯಿದೆ. ಇತ್ತೀಚೆಗೆ ಕೆಲವು ರಸ್ತೆಗಳು ದುರಸ್ಥಿ ಭಾಗ್ಯ ಕಂಡರೂ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ಬಿಲ್ಲಿನ ಮೊತ್ತ ಪಾವತಿಸುವದಕ್ಕೂ ಮೊದಲೇ ತಗ್ಗು–ಗುಂಡಿಗಳು ಪ್ರತ್ಯಕ್ಷವಾಗಿ ಕಳಪೆ ಕಾಮಗಾರಿಗೆ ಸಾಕ್ಷಿಯಾಗಿರುವದು ಕಾಣಬಹುದು.

ನಗರಸಭೆ ಮುಂಭಾಗ, ಶ್ರೀನಿವಾಸ ಚಿತ್ರ ಮಂದಿರ, ಸೋಮವಾರ ಪೇಟೆ, ಮಂಗಳವಾರ ಪೇಟೆ, ಶಂಕರಲಿಂಗ ದೇವಸ್ಥಾನಮುಂಭಾಗಹಲವಾರುಕಡೆ ರಸ್ತೆಗಳು ಗುಂಡಿಗಳಿಂದಲೇ ತುಂಬಿವೆ.

ಈ ರಸ್ತೆಗಳು ದುರಸ್ಥಿ ಕಾಣದಿರುವದರಿಂದ ನಿತ್ಯವೂ ಅಪಘಾತಗಳು ಸಂಭವಿಸುತಿದ್ದರೂ ಅಧಿಕಾರಿಗಳು ಕ್ರಮಕೈಗೊಳ್ಳುತ್ತಿಲ್ಲವೆಂದು ಸಾರ್ವಜನಿಕರ ಆಕ್ರೋಶ. ಇದೀಗ ಮಳೆಯಾಗುತ್ತಿದ್ದಂತೆ ರಸ್ತೆಗಳೆಲ್ಲ ನೀರಿನಿಂದ ತುಂಬಿ ಪಾದಚಾರಿ ರಸ್ತೆ ಅಥವಾ ಚರಂಡಿ ಮೇಲಿನ ಜಾಗವೇ ವಾಹನಗಳ ಸಂಚಾರಕ್ಕೆ ರಸ್ತೆಯಾಗಿವೆ. ಈ ಅವ್ಯವಸ್ಥೆಯ ಬಗ್ಗೆ ಸಾಕಷ್ಟು ಬಾರಿ ನಗರಸಭೆ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ರಸ್ತೆಗಳ ದುಸ್ಥಿತಿಯಿಂದ ಸಕಾಲಕ್ಕೆ ಶಾಲಾ, ಕಾಲೇಜಗಳಿಗೆ ಹಾಗೂ ಕಚೇರಿಗಳಿಗೆ ತಲುಪು ಸಾಧ್ಯವಾಗುತ್ತಿಲ್ಲ. ರಸ್ತೆಗಳ ಸ್ಥಿತಿ–ಗತಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಆಡಳಿತ ವೈಖರಿಗೆ ಹಿಡಿದ ಕನ್ನಡಿಯಾಗಿದೆ. ಇನ್ನಾದರೂ ರಸ್ತೆಗಳ ದುರಸ್ಥಿಗೆ ಅಧಿಕಾರಿಗಳು ಮುಂದಾಗಬೇಕೆಂಬುದು ಜನತೆಯ ಒತ್ತಾಯವಾಗಿದೆ.



> ಹಲವಾರು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಕೂಡಲೇ ಆವಳಿ ನಗರಕ್ಕೆ ಸಂಪರ್ಕ ಹೊಂದಿರುವ ರಸ್ತೆ ದುರಸ್ಥಿ ಕಾರ್ಯವಾಗಬೇಕು.
> ■ ಚಿದಾನಂದ ಸೊಲ್ಲಾಪೂರ, ನಾಗರಿಕ

ಸಮಯಪ್ರಜ್ಞೆ, ಶಿಸ್ತು ರೂಢಿಸಿಕೊಳ್ಳಿ



ಇಳಕಲ್: ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಗಂಗಾಧರ ಮೂರು ಸಾವಿರ ಮಠ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಟೊಯೋಟೊ ಕಿರ್ಲೋಸ್ಕರ್ ಮೋಟಾರ್ಸ್ ಬಿಡದಿ, ಬೆಂಗಳೂರು ಇವರ ಕ್ಯಾಂಪಸ್ ಡ್ರೈವ್ ಉದ್ಘಾಟಿಸಿದರು.

ಆಯ್ಕೆಯಾದ 144 ತರಬೇತಿದಾರರನ್ನು ಉದ್ದೇಶಿಸಿ ಮಾತನಾಡಿದ ಸಂಸ್ಥೆಯ ಪ್ರಾಚಾರ್ಯ ಮಂಜುನಾಥ ಬೆಳವಣಿಕಿ ಅವರು, ತಮ್ಮ ಕೌಶಲ್ಯ ಬಳಸಿಕೊಂಡು ಕಾರ್ಖಾನೆ ಬೆಳವಣಿಗೆಗೆ ಸಹಕಾರಿಯಾಗಬೇಕೆಂದು ಮತ್ತು ತರಬೇತಿದಾರರು ಸಮಯ ಪ್ರಜ್ಞೆ, ಶಿಸ್ತು ರೂಡಿಸಿಕೊಂಡು ಸಮಾಜದಲ್ಲಿ ಉತ್ತರೋತ್ತರವಾಗಿ ಬೆಳೆಯಬೇಕೆಂದು ತಿಳಿಸಿದರು.

ಕಂಪನಿ ವತಿಯಿಂದ ರವೀಂದ್ರ ಮುಗದುಂ, ಹರೀಶ, ಸಂತೋಷ ಹಾಗೂ ಸಂಸ್ಥೆಯ ತರಬೇತಿ ಅಧಿಕಾರಿಗಳಾದ ವಲಿ ಮೊಹಮ್ಮದ ದಲಾಯತ, ಪ್ಲೇಸ್ಮೆಂಟ್ ಅಧಿಕಾರಿ ವಿನೋದ ಅಕ್ಕಿ, ಮೋಹನ ವಂದಕುದರಿ, ರವಿಕುಮಾರ ಕಾಚಟ್ಟಿ, ಬಸವರಾಜ ಅಂಗಡಿ ಉಪಸ್ಥಿತರಿದ್ದರು.

ಕಿರುಸುದ್ದಿ

ವಿದ್ಯಾರ್ಥಿಗಳಿಗೆ ಸನ್ಮಾನ



ಬಸವನಬಾಗೇವಾಡಿ: ಗೊಳಸಂಗಿ ಸೇರಿದಂತೆ ವಿಜಯಪುರ ಜಿಲ್ಲೆಯ ದೇವಾಂಗ ಸಮಾಜದ ನಾಲ್ವರು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ರಾಜ್ಯ ಕಡೇಮನೆ ದಿವಿತ್ ಟ್ರಸ್ಟ್ ವತಿಯಿಂದ ದಾವಣಗೆರೆ ಜಿಲ್ಲೆಯ ಸುರಹೊನ್ನೆ ಗ್ರಾಮದಲ್ಲಿ ಭಾನುವಾರ ನಗದು ಹಣದೊಂದಿಗೆ ಪುರಸ್ಕರಿಸಲಾಯಿತು. ಪುರಸ್ಕೃತಗೊಂಡ ರಾಜ್ಯದ 15ಜಿಲ್ಲೆಗಳ 180 ವಿದ್ಯಾರ್ಥಿಗಳಲ್ಲಿ ಗೊಳಸಂಗಿಯ ಸುಮಂತ ಕುಪ್ಪಸ್ತ, ಮಹಾಂತೇಶ ಯಂಕಂಚಿ, ಇಂದು ಹುಬ್ಬಳ್ಳಿ ಹಾಗೂ ವಿಜಯಪುರದ ನೀರಜ್ ಗೌಡರ ಇವರಿಗೆ ಕಡೇಮನೆ ದಿವಿತ್ ಟ್ರಸ್ಟ್ ಅಧ್ಯಕ್ಷ ಕೆ.ತೀರ್ಥಪ್ಪ ನಗದು ಹಣ ನೀಡಿ ಗೌರವಿಸಿದರು. ಈ ವೇಳೆ ಟ್ರಸ್ಟ್ ಉಪಾಧ್ಯಕ್ಷೆ ಕೆ.ಯಶೋಧಾ, ನೇಕಾರ ಸಮಾಜದ ಮುಖಂಡರಾದ ಜಯಶ್ರೀ ದಾಸಮನಿ, ಡಿ.ಬಿ.ಕುಪ್ಪಸ್ತ (ಡಿಬಿಕೆಜಿ), ಡಾ.ಎಸ್.ಬಿ.ಬನಪ್ಪ, ಪುನಿತಕುಮಾರ್, ತಿಪ್ಪೇಸ್ವಾಮಿ, ಚಿತ್ರಾ ಶೆಟ್ಟಿ ಸೇರಿದಂತೆ ಇತರರು ಇದ್ದರು.

ನವೋದಯ ಶಾಲೆಗೆ ಕಾರ್ತಿಕ ಆಯ್ಕೆ

ಸಿಂದಗಿ: ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಆರ್.ಡಿ.ಕುಲಕರ್ಣಿ ಕೋಚಿಂಗ್ ಕ್ಲಾಸಿನ ವಿದ್ಯಾರ್ಥಿ ಕಾರ್ತಿಕ ಯಾಳಗಿ ಅವರು ಆಲಮಟ್ಟಿಯಲ್ಲಿನ ಜವಾಹರ ನವೋದಯ ವಸತಿ ಶಾಲೆಗೆ ಆಯ್ಕೆಯಾಗಿದ್ದಾನೆ. ವಿದ್ಯಾರ್ಥಿಯ ಈ ಸಾಧನೆಗೆ ಶಾಲೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ, ಮುಖ್ಯ ಗುರುಮಾತೆ ಎಂ.ಪಿ.ಬುಕ್ಕಾ ಸೇರಿದಂತೆ ಶಾಲೆಯ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.



570 ಚೀಲ ಪಡಿತರ ಅಕ್ಕಿ ಜಪ್ತಿ

ಝಳಕಿ: ಪಡಿತರ ಅಕ್ಕಿ ಅಕ್ರಮವಾಗಿ ಸಾಗಣೆ ಹೋಗುವ ವಾಹನ ಸಮೀಪದ ರಾಷ್ಟ್ರೀಯ ಹೆದ್ದಾರಿ 52ರ ಹಳಗುಣಕಿ ಕ್ರಾಸ್ ಹತ್ತಿರ ಸಾರ್ವಜನಿಕರು ಹಿಡಿದು ಆಹಾರ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ. ತಕ್ಷಣ ಸ್ಥಳಕ್ಕೆ ಆಹಾರ ಅಧಿಕಾರಿಗಳಾದ ಸಿದ್ರಾಮೇಶ ಹಲಸಂಗಿ ಭೇಟಿ ನೀಡಿ ವಾಹನ ವಶಪಡಿಸಿಕೊಂಡು ಚಿತ್ರದುರ್ಗದಿಂದ ಗುರುರಾತ ಕಡೆ ತೆರಳುತ್ತಿದ್ದ ವಾಹನದಲ್ಲಿವಿರುವ ಅಂದಾಜು 8,29,920 ಮೌಲ್ಯದ 570 ಚೀಲಗಳ ಸುಮಾರು 29,640 ಕೆಜಿ ಅಕ್ಕಿ ಸಮೇತ ವಾಹನವನ್ನು ಜಪ್ತಿ ಮಾಡಿ ಚಾಲಕನ್ನು ಬಂಧಿಸಲಾಗಿದೆ. ಈ ಕುರಿತು ಹೋರ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಚ್ಚುವರಿ ರೈಲ್ವೆ ಸೇವೆ ಪ್ರಾರಂಭಿಸಿ: ಪಾಟೀಲ

ವಿಜಯಪುರ: ಪೆಟ್ರೋಲ್ ಮತ್ತು ಡೀಸೆಲ್ ದರ ಹೊರೆಯಾಗುತ್ತಿರುವ ಈ ದಿನಗಳಲ್ಲಿ ವಿಜಯಪುರದಿಂದ ಬೆಂಗಳೂರು ಮತ್ತು ಮುಂಬೈಗೆ ಹೆಚ್ಚುವರಿ ರೈಲು ಸೇವೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವ ಮೂಲಕ ಸಂಸದ ರಮೇಶ ಜಿಗಜಿಣಗಿ ತಮ್ಮ ಶಕ್ತಿ ತೋರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ರಾಜ್ಯದ ಪಂಚ ಗ್ಯಾರಂಟಿ ಯೋಜನೆಗಳು ಜಗತ್ತಿಗೆ ಮಾದರಿಯಾಗಿದ್ದು, ಅವುಗಳನ್ನು ಬಿಜೆಪಿ ಆಡಳಿತದಲ್ಲಿರುವ ಸರಕಾರಗಳೂ ನಕಲು ಮಾಡುತ್ತಿವೆ. ಇಂಥ ಸಂದರ್ಭದಲ್ಲಿ ಸಂಸದರು, ರಾಜ್ಯದ ಯೋಜನೆಗಳ ಬಗ್ಗೆ ಪದೇ ಪದೇ ಟೀಕೆ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ. ಪ್ರಚಾರಕ್ಕಾಗಿ ಹೇಳಿಕೆಗಳನ್ನು ನೀಡುವ ಬದಲು ವಿಜಯಪುರಕ್ಕೆ ವಂದೇ ಭಾರತ ರೈಲು ಸೇವೆಯನ್ನು ಪ್ರಾರಂಭಿಸಲು ಕೇಂದ್ರದ ಮೇಲೆ ಒತ್ತಡ ತರಬೇಕು ಎಂದು ಒತ್ತಾಯಿಸಿದ್ದಾರೆ. ಕೇಂದ್ರ ಸರ್ಕಾರದ ವೈಫಲ್ಯದ ಪರಿಣಾಮವಾಗಿ ದಿನೇ ದಿನೇ ಪೆಟ್ರೋಲ್, ಗ್ಯಾಸ್ ಬೆಲೆಗಳು ಹೆಚ್ಚಾಗುತ್ತಿದ್ದು, ಜನಸಾಮಾನ್ಯರಿಗೆ ಹೊರೆಯಾಗುತ್ತಿವೆ. ಪ್ರತಿನಿತ್ಯ ವಿಜಯಪುರ ಜಿಲ್ಲೆಯಿಂದ ಹತ್ತಾರು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳು ಬೆಂಗಳೂರಿಗೆ ಮತ್ತು ಮುಂಬೈಗೆ ಸಂಚರಿಸುತ್ತವೆ. ವಿಜಯಪುರದಿಂದ ಹೆಚ್ಚುವರಿ ರೈಲುಗಳನ್ನು ಓಡಿಸಬೇಕು. ರೈಲುಗಳು ವಿದ್ಯುತ್ ಶಕ್ತಿಯ ಮೇಲೆ ಸಂಚರಿಸುತ್ತವೆ. ಇದರಿಂದ ಜನತೆಗೆ ಅನುಕೂಲವಾಗಲಿದೆ. ಮಾತ್ರವಲ್ಲ ಪರಿಸರಕ್ಕೂ ಪೂರಕವಾಗಲಿದೆ. ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಬಳಸುವುದರಿಂದ ತೈಲ ಬಳಕೆಯೂ ಕಡಿಮೆಯಾಗಲಿದೆ. ಏಳು ಬಾರಿ ಸಂಸದರಾಗಿರುವ ಸಂಸದರು ಕೇಂದ್ರ ಸರಕಾರದಲ್ಲಿರುವ ತಮ್ಮ ವರ್ಚಸ್ಸನ್ನು ಬಳಸಿ ರೈಲುಗಳ ಸಂಖ್ಯೆ ಹೆಚ್ಚಿಸಬೇಕು. ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಕಾಳಜಿ ಹೊಂದಿರುವ ಸಂಸದರು ತಮ್ಮ ಪ್ರಭಾವ ಬಳಸಿ ಕೇಂದ್ರದ ಯೋಜನೆಗಳನ್ನು ಜಿಲ್ಲೆಯ ಜನರಿಗೆ ತಲುಪಿಸುವ ಕೆಲಸ ಮಾಡಬೇಕು ಎಂದು ತಿಳಿಸಿದ್ದಾರೆ.



ಮುದ್ದೇಬಿಹಾಳ: ನಗರದಲ್ಲಿ ನಿರ್ಮಾಣವಾಗುತ್ತಿರುವ ಕೊಟ್ಟೂರು ಬಸವೇಶ್ವರ ಶಿಲಾ ದೇವಸ್ಥಾನಕ್ಕೆ ಶನಿವಾರ ತಾಳಿಕೋಟೆಯ ಖಾಸ್ಗತೇಶ್ವರ ಮಠದ ಶ್ರೀಗಳಾದ ಸಿದ್ದಲಿಂಗ ದೇವರು ಆಗಮಿಸಿದ್ದರು. ಕೊಟ್ಟೂರು ಬಸವೇಶ್ವರ ಶಿಲಾ ದೇವಸ್ಥಾನದ ನಿರ್ಮಾಣ ಕಾರಣಿಕರ್ತರಾದ ಕೆ.ಪಿ.ಹಿರೇಮಠ ದಂಪತಿಗಳು, ಅರವಿಂದ ಲದ್ದಿಮಠ, ಶಾಂತು ಶಿವಯೋಗಿಮಠ, ಶ್ರೀಧರ ಕಾಗುನೂರಮಠ ಸೇರಿದಂತೆ ಮಹಿಳೆಯರು ಸದ್ಭಕ್ತರು ದರ್ಶನ ಪಡೆದು ಸ್ವಾಮೀಜಿಗಳನ್ನು ಗೌರವಿಸಿದರು.

ಗ್ರಾಮ ಸೇವಕರ ನೂತನ ಪದಾಧಿಕಾರಿಗಳ ಆಯ್ಕೆ

ಕೊಲ್ಹಾರ: ಕಂದಾಯ ಇಲಾಖೆ ಕೊಲ್ಹಾರ ತಾಲ್ಲೂಕು ಗ್ರಾಮ ಸಹಾಯಕರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ಹಾಗೂ ಬೀಳ್ಕೊಡುಗೆ ಸಮಾರಂಭ ನಾಡ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಪದಾಧಿಕಾರಿಗಳ ಆಯ್ಕೆ ಹಾಗೂ ಶ್ರೀಶೈಲ ಧರಿಯಪ್ಪ ನರಿಯವರ ನಿವೃತ್ತಿ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ತಹಶೀಲ್ದಾರ್ ಸಂತೋಷ ಮ್ಯಾಗೇರಿ ಅತಿಥಿಗಳಾಗಿ ಕಂದಾಯ ನಿರೀಕ್ಷಕ ಪಿ.ಎಸ್.ಹುಡೇದ ಹಾಗೂ ಗ್ರಾಮ ಆಡಳಿತ ಅಧಿಕಾರಿಗಳ ತಾಲೂಕು ಅಧ್ಯಕ್ಷರ ಮತ್ತು ಗ್ರಾಮ ಆಡಳಿತ ಅಧಿಕಾರಿಗಳ ಸಮ್ಮುಖದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಹಾಗೂ ಗ್ರಾಮ ಸೇವಕರ ತಾಲ್ಲೂಕು ಅಧ್ಯಕ್ಷ ಶ್ರೀಶೈಲ ಧರಿಯಪ್ಪ ನರಿಯವರ ಬೀಳ್ಕೊಡುಗೆ ಸಮಾರಂಭ ನಡೆಯಿತು.

ನೂತನ ತಾಲೂಕು ಗ್ರಾಮ ಸೇವಕರ ಸಂಘದ ಅಧ್ಯಕ್ಷರಾಗಿ ರಮೇಶ ಶೇಖಪ್ಪ ಬಾಡಗಂಡಿ,ಗೌರವ ಅಧ್ಯಕ್ಷ ರಾಗಿ ಶೆಂಕ್ರೆಮ್ಮ ರಾಚಪ್ಪ ಪಡಸಲಗಿ, ಉಪಾಧ್ಯಕ್ಷ ಹಣಮಂತ ಹಿರಗಪ್ಪ ತೆಗ್ಗಿ, ಕಾರ್ಯದರ್ಶಿ ಶ್ರೀಶೈಲ ಲಕ್ಷ್ಮಣ ವಾಲಿಕಾರ, ಖಜಾಂಚಿ ಸಿದ್ದಪ್ಪ ಅಡಿವೆಪ್ಪ ಪೂಜಾರಿ ಹಾಗೂ ಸದಸ್ಯರ ಆಯ್ಕೆಯಾಗಿದ್ದಾರೆ. ಗ್ರಾಮ ಆಡಳಿತ ಅಧಿಕಾರಿಗಳಾದ ಬಿ.ಎನ್.ಜಿಡ್ಡಿಮನಿ, ಹಿರಿಯ ನಿವೃತ್ತ ಗ್ರಾಮ ಸಹಾಯಕ ಸದಾಶಿವ ಬಳೂತಿ, ಕಲ್ಲಪ್ಪ ಕೂಡಗಿ, ಬಾಳಕೃಷ್ಣ ಗಾಯಕವಾಡ, ಪರಸಪ್ಪ ದಳವಾಯಿ, ಗೋಪಾಲ ಬಳೂತಿ, ಅಡಿವೆಪ್ಪ ಪೂಜಾರಿ, ಮುಬಾರಕ್ ಮುಲ್ಲಾ, ನವಾಬಸಾಬ ಹಿರಿಯಾಳ, ದಸ್ತಗೀರಸಾಬ್ ವಾಲೀಕಾರ, ವಿಜಯಕುಮಾರ ನರಿಯವರ, ಚಂದ್ರಶೇಖರ ಈಟಿ ಹಾಜರಿದ್ದರು.



ಕೊಲ್ಹಾರ: ಕಂದಾಯ ಇಲಾಖೆ ಕೊಲ್ಹಾರ ತಾಲೂಕು ಗ್ರಾಮ ಸಹಾಯಕರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ಹಾಗೂ ಬೀಳ್ಕೊಡುಗೆ ಸಮಾರಂಭ ನಾಡ ಕಚೇರಿ ಸಭಾಂಗಣದಲ್ಲಿ ಈ ಪದಾಧಿಕಾರಿಗಳ ಆಯ್ಕೆ ಹಾಗೂ ಶ್ರೀಶೈಲ ಧರಿಯಪ್ಪ ನರಿಯವರ ನಿವೃತ್ತಿ ಬೀಳ್ಕೊಡುಗೆ ಸಮಾರಂಭ ಮತ್ತು ಗ್ರಾಮ ಆಡಳಿತ ಅಧಿಕಾರಿಗಳ ಸಮ್ಮುಖದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಬದುಕಿಗೆ ಶರಣರ ಸಂದೇಶಗಳು ದಾರಿದೀಪ

ವಿಜಯಪುರ: ವಿಜಯಪುರ ಶರಣರ, ಸಂತರ ನಾಡು. ಸಂಸ್ಕೃತಿ, ಸಂಸ್ಕಾರ ಆಚಾರ-ವಿಚಾರಗಳು ನಮ್ಮ ಈ ಮಣ್ಣಿನ ಗುಣ ಧರ್ಮದಲ್ಲಿಯೇ ಅಡಗಿವೆ. 12ನೇ ಶತಮಾನದ ಶರಣರ ಸಂದೇಶಗಳು ಸಮಾನತೆ, ಕಾಯಕನಿಷ್ಠೆ ಮತ್ತು ಮಾನವೀಯತೆಯ ಮೇಲೆ ಆಧಾರಿತವಾಗಿದ್ದು, ಜಾತಿ ಬೇಧವಿಲ್ಲದೇ ಪ್ರತಿಯೊಬ್ಬರಿಗೂ ಸಮಾನ ಅವಕಾಶವಿರುವ ಸಮಾಜ ನಿರ್ಮಾಣವೇ ಅವರ ಮುಖ್ಯ ಗುರಿಯಾಗಿತ್ತು. ಇಂದು ನಾವೆಲ್ಲರೂ ಮೌಲ್ಯಾಧಾರಿತ ಬದುಕು ನಡೆಸಲು ಶರಣರ ಸಂದೇಶಗಳೇ ದಾರಿದೀಪವಾಗಿವೆ ಎಂದು ವಿಜಯಪುರ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ವಿ.ಸಿ.ನಾಗಠಾಣ ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ ಲಿಂ. ಬಸವರಾಜ ಪರಪ್ಪ ಆಲೂರ ದತ್ತಿ. ದಿ.ವೈ.ಎಸ್.ವಿ ಸೂರ್ಯನಾರಾಯಣ ದತ್ತಿ ಹಾಗೂ ಲಿಂ.ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ದತ್ತಿನಿಧಿಗೋಷ್ಠಿಗಳನ್ನು ಉದ್ಘಾಟಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ದತ್ತಿದಾನಿಗಳು ತಮ್ಮ ಹಿರಿಯರ ಸ್ಮರಣೆಗೋಸ್ಕರ ಇಟ್ಟಿರುವ ದತ್ತಿಗಳಿಗೆ ನ್ಯಾಯ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡುವ ಮೂಲಕ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಕೊಂಡು ಇಡೀ ಕನ್ನಡ ನಾಡಿನಲ್ಲಿಯೇ ನಮ್ಮ ಜಿಲ್ಲೆ ದತ್ತಿನಿಧಿಯಲ್ಲಿ ಎರಡನೇ ಸ್ಥಾನ ಪಡೆಯುವ ಮೂಲಕ ಬಹುದೊಡ್ಡ ಕೊಡುಗೆ ನೀಡಿದ್ದು, ದತ್ತಿಗೋಷ್ಠಿಗಳಮೂಲಕಶರಣರಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.



ಅಧ್ಯಕ್ಷತೆ ವಹಿಸಿದ್ದ ವಿಜಯಪುರದ ಸಾಯಿ ಸಕ್ಸೆಸ್ ಪೌಂಡೇಶನ್ ಸಂಸ್ಥಾಪಕ ಅಧ್ಯಕ್ಷೆ ಕಲ್ಪನಾ ಶಾಬಾದಿ ಮಾತನಾಡಿ ಶರಣರ ಸಂದೇಶಗಳು ನಮ್ಮೆಲ್ಲರ ಬಾಳಿಗೆ ಬೆಳಕಾಗಿ ನಿಲ್ಲಬಲ್ಲ ಅನೇಕ ದಿಕ್ಸೂಚಿಯಾದ ವಚನಗಳಲ್ಲಿ ಸಾಮಾಜಿಕ ಮತ್ತು ಮಾನವೀಯ ಮೌಲ್ಯಗಳಿದ್ದು ಅದರ ಸಂದೇಶಗಳನ್ನು ಅರಿತು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.

ಬಸವಣ್ಣನವರ ವಚನಗಳಲ್ಲಿನ ಸಂದೇಶಗಳು ಎಂಬ ವಿಷಯದ ಕುರಿತು ಎಕ್ಸಲೆಂಟ್ ಪದವಿಪೂರ್ವ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಶರಣಗೌಡ ಪಾಟೀಲ ವಿಶೇಷ ಉಪನ್ಯಾಸ ನೀಡುತ್ತ ಮಾತನಾಡಿ, ಬಸವಣ್ಣನವ ವಚನಗಳಲ್ಲಿ ಮಾನವೀಯ ಮೌಲ್ಯಗಳಿದ್ದು, ಸಮಾನತೆ ಮತ್ತು ನೈತಿಕತೆಯ ತಳಹದಿಯ ಮೇಲೆ ಯಾವುದೇ ಜಾತಿ ಧರ್ಮಕ್ಕೆ ಸೀಮಿತವಾಗಿರದೇ ಇಡೀ ವಿಶ್ವಕ್ಕೆ ಸಾರ್ವಕಾಲಿಕ ಸಂದೇಶಗಳನ್ನು ನೀಡುವ ವಚನಗಳಿದ್ದು, ದೃಷ್ಟಾಂತ ಹಾಗೂ ನಿದರ್ಶನಗಳೊಂದಿಗೆ ವಿವರಿಸಿದರು.

ಹೊನವಾಡದ ಶಿಕ್ಷಕಿ, ಸಾಹಿತಿ ಶರಣಮ್ಮ ಹಾದಿಮನಿ, ನಂದು ಗಡಗಿ, ಶ್ರೀಶೈಲ ಕನ್ನೂರ, ಕಲ್ಪನಾ ಬಾಬಕರ ಮಾತನಾಡಿದರು. ಶಕುಂತಲಾ ಹಿರೇಮಠ, ಮಹಾದೇವಿ ತೆಲಗಿ, ಗೌರವ ಕಾರ್ಯದರ್ಶಿ ಡಾ.ಮಾಧವ ಗುಡಿ, ಶಶಿಕಲಾ ನಾಯ್ಕೋಡಿ, ಯಮನಪ್ಪ ಪವಾರ, ಪರವೀನ ಶೇಖ, ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ, ವಿಜಯಲಕ್ಷ್ಮಿ ಹಳಕಟ್ಟಿ, ಜಿ.ಎಸ್.ಬಳ್ಳೂರ, ಸಿದ್ದಣ್ಣ ಸಾತಲಗಾಂವ, ಟಿ.ಆರ್.ಹಾವಿನಾಳ, ಬಿ.ಕೆ. ಗೋಟ್ಯಾಳ, ಅಂಬಾದಾಸ ಜೋಶಿ, ಡಾ.ಕೆ.ಬಿ.ಹಿರೇಮಠ, ಬಿ.ಎಸ್.ಕೋನರೆಡ್ಡಿ, ಅರ್ಜುನ ಶಿರೂರ, ಬಸವರಾಜ ಬಿರಾದಾರ, ಸಿದ್ದು ಮಾನೆ, ಎಂ.ಎಸ್.ಬಗಲಿ, ಶ್ರೀಕಾಂತ ನಾಡಗೌಡ, ಬಿ.ವಿ.ಪಟ್ಟಣಶೆಟ್ಟಿ, ಎಂ.ಆರ್ ಬಡಿಗೇರ, ಎ.ವಿ.ಜಹಾಗೀರದಾರ, ತ್ರಿವೇಣಿ ಬುರ್ಲಿ, ಎ.ಎಂ.ಹಳ್ಳೂರ, ಫಕ್ರುದ್ದೀನ್ ಅಲಿಅಹ್ಮದ ಹಿರೇಕೊಪ್ಪ, ಸಿದ್ದು ಬೀಳಗಿ, ಎಸ್.ಎನ್ ಪೋಳ, ಎಂ.ಎಸ್ ಕನ್ನೂರ, ನಿಖಿಲ ವಾಲಿಕಾರ, ಪಿ.ಎಂ.ಭಾವಿಕಟ್ಟಿ, ವಿರೇಶ ಕನ್ನೂರ,ಆರ್.ಎಚ್ ಹುಣಸಿಗಿಡದ, ಆರ್.ಆರ್ ಮದರಳ್ಳಿ, ಬಸವರಾಜ ಹಿರೇಮಠ ಚಂದ್ರಶೇಖರ ಸರೂರ, ಶಿವಾಜಿ ಮೋರೆ ಉಪಸ್ಥಿತರಿದ್ದರು.

ನಿರಂತರ ಪರಿಶ್ರಮದಿಂದ ಪ್ರತಿಫಲ ಸಾಧ್ಯ

ತೇರದಾಳ: ಮಾಳಿ ಸಮಾಜ ಈ ದೇಶಕ್ಕೆ ಶ್ರೇಷ್ಠ ಸಾಧಕರನ್ನು ನೀಡಿದೆ. ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಸೇರಿದಂತೆ ಇನ್ನೂ ಹಲವಾರು ಮಹಾಪುರುಷರು ನಮ್ಮ ದೇಶದಲ್ಲಿ ಆಗಿಹೋಗಿದ್ದಾರೆ. ಅವರು ನಮ್ಮಿಂದ ದೂರವಾಗಿ ಶತಕಗಳೆ ಕಳೆದಿರಬಹುದು ಆದರೆ ಅವರು ನಮ್ಮ ದೇಶಕ್ಕೆ ಮತ್ತು ಸಮಾಜಕ್ಕೆ ನೀಡಿದ ಕೊಡುಗೆಯಿಂದ ಅಜರಾಮರರಾಗಿದ್ದಾರೆ. ಸಮಾಜದ ಹಲವಾರು ಮಕ್ಕಳು ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿದ್ದನ್ನು ಕೇಳಿದರೆ ನನಗೆ ಹೆಮ್ಮೆ ಎನಿಸುತ್ತದೆ ಎಂದು ಗಂಗಾಧರ ದೇವರು ಹೇಳಿದರು.

ಕಲ್ಲಟ್ಟಿಗಲ್ಲಿಯ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಮಾಳಿ ಸಮಾಜ ಹಾಗೂ ಮಾಳಿ ಸಮಾಜದ ನೌಕರರ ಸಂಘ ತೇರದಾಳದವರು ತೇರದಾಳ ಮತಕ್ಷೇತ್ರದ ವ್ಯಾಪ್ತಿಯ ಮಾಳಿ ಸಮಾಜದ 2024-25 ಮತ್ತು 2025-26 ನೇ ಸಾಲಿನ ಎಸ್‌ಎಸ್ ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಮತ್ತು ವಿಶೇಷ ಸಾಧಕರಿಗೆ ಸನ್ಮಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಪ್ರಸ್ತುತ ಮಕ್ಕಳು ಮೊಬೈಲ್‌ದಿಂದ ತಮ್ಮ ಅಮೂಲ್ಯವಾದ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಕಾರಣ ಪಾಲಕರಾದವರೇ ಮೊದಲು ಮೊಬೈಲ್ ದಿಂದ ದೂರವಿರಬೇಕು. ಮಕ್ಕಳು ಯಾವಾಗಲೂ ನಿಮ್ಮನ್ನು ಅನುಕರಿಸುತ್ತಿರುತ್ತಾರೆ ಎಂಬುದನ್ನು ಮರೆಯಬಾರದು. ಮಕ್ಕಳ ಮನಸ್ಸು ಬಿಳಿಹಾಳೆ ಇದ್ದಂತೆ ಅದರಲ್ಲಿ ನಾವೆಲ್ಲ ಸೇರಿ ಒಳ್ಳೆಯ ಸಂಸ್ಕಾರದ ಚಿತ್ರ ಬಿಡಿಸೋಣ. ಹಣಕ್ಕಿಂತ ವಿದ್ಯೆ ಮುಖ್ಯ, ವಿದ್ಯೆಯೇ ನಮ್ಮನ್ನೂ ಸಹ ಸಾಧಕರ ಪಟ್ಟಿಯಲ್ಲಿ ಸೇರುವಂತೆ ಮಾಡುತ್ತದೆ. ಸಾಧನೆ ಮಾಡುವುದು ನಿಮ್ಮ ಕೈಯಲ್ಲಿದೆ. ನಿಮ್ಮ ಪರಿಶ್ರಮಕ್ಕೆ ಫಲ ಸಿಕ್ಕೆ ಸಿಗುತ್ತದೆ ಎಂಬುದಕ್ಕೆ ಈ ಸಾಧಕರೆ ಉದಾಹರಣೆ ಎಂದರು.

ಡಾ.ದೇವರಾಜ ಮುದಕನ್ನವರ, ಡಾ.ಸತೀಶ ಮಾಳಿ, ಡಾ.ಶಂಕರ ಅಥಣಿ, ಡಾ. ವಿನಾಯಕ ಮಾಳಿ, ಶೀವಶಂಕರ ಮುಕರಿ, ಎಂ.ಬಿ.ಮಾಳೇದ ಮಾತನಾಡಿದರು. ಸಿದ್ದೇಶ್ವರ ಪ್ರೌಢಶಾಲೆಯ ಮಕ್ಕಳು ಪ್ರಾರ್ಥನೆ ಹಾಗೂ ಸ್ವಾಗತಗೀತೆ ಹಾಡಿದರು. ಜೆ.ಎಂ. ಜೀರಗಾಳೆ ನಿರೂಪಿಸಿದರು.



ಹಡಪದ ಅಪ್ಪಣ್ಣನವರ ಅರುವಿನ ಗವಿಯಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ಆಗ್ರಹ

ಬಸವನಬಾಗೇವಾಡಿ: ಬೀದರ ಜಿಲ್ಲೆಯ ಬಸವಕಲ್ಯಾಣದ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರವಿರುವ ಹಡಪದ ಅಪ್ಪಣ್ಣನವರ ಅರುವಿನ ಗವಿಯಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡುವಂತೆ ಅಗ್ರಹಿಸಿ ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸೇವಾ ಸಂಘದ ಪ್ರದಾನ ಕಾರ್ಯದರ್ಶಿ ಚಿದಾನಂದ ಹಡಪದ ಬಸರಕೋಡ ಸಮಾಜದ ಪರವಾಗಿ ಬೀದರ ಜಿಲ್ಲಾ ಉಸ್ತುವಾರಿ ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಮನವಿ ಸಲ್ಲಿಸಿದರು.



ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರ 12ನೇ ಶತಮಾನದ ಅನೇಕ ಬಸವಾದಿ ಶರಣರ ಅರಿವಿನ ಗವಿಗಳು ಇರುವುದಾಗಿ ಇತಿಹಾಸ ಸಾರುತ್ತದೆ. ಅದೇ ರೀತಿ ವಿಶ್ವಗುರು, ಸಾಂಸ್ಕೃತಿಕ ನಾಯಕ ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿದ್ದ ಶಿವಶರಣ ಹಡಪದ ಅಪ್ಪಣ್ಣನವರ ಅರಿವಿನ ಗವಿಯೂ ಅಲ್ಲಿ ಅಸ್ತಿತ್ವದಲ್ಲಿದೆ. ಆದರೆ, ಅಪ್ಪಣ್ಣನವರ ಅರಿವಿನ ಗವಿಯನ್ನು ಬಸವೇಶ್ವರ ದೇವಸ್ಥಾನದ ಪಂಚಕಮಿಟಿಯವರು ಅಕ್ರಮವಾಗಿ ಹಸ್ತಕ್ಷೇಪ ಮಾಡಿ, ಅನ್ಯ ಶರಣರ ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದು ಗಮನಾರ್ಹ ಸಂಗತಿ, ಇದರಿಂದ ಶಿವಶರಣ ಹಡಪದ ಅಪ್ಪಣ್ಣನವರಿಗೆ ಮತ್ತು ನಮ್ಮ ಸಮುದಾಯದ ಭಕ್ತಿಭಾವನೆಗಳಿಗೆ ತೀವ್ರ ಅನ್ಯಾಯವಾಗಿದ್ದು, ನಮ್ಮ ಇತಿಹಾಸದ ಮೌಲ್ಯ ಕುಗ್ಗುವಂತಾಗಿದೆ.

ಹಡಪದ ಅಪ್ಪಣ್ಣನವರ ವಂಶಸ್ಥರು ಮತ್ತು ಸಮಾಜದ ಭಕ್ತರಾದ ನಾವು. ನಮ್ಮ ಶರಣರ ಇತಿಹಾಸ ಹಾಗೂ ಅರಿವಿನ ಗವಿಯನ್ನು ಕಳೆದುಕೊಳ್ಳುವ ಪ್ರಶ್ನೆಯೇ ಇಲ್ಲ, ಈ ಘಟನೆ ನಮ್ಮ ಭಾವನೆಗಳಿಗೆ ಗಂಭೀರ ಧಕ್ಕೆ ಉಂಟುಮಾಡಿದೆ, ಈಗಾಗಲೇ ಸಮಾಜದ ಮುಖಂಡರು, ಭಕ್ತರು ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿ, ಅನೇಕ ಮಠಾಧೀಶರು ಹಾಗೂ ನಾಯಕರು ಸಹ ಹಡವದ ಅಪ್ಪಣ್ಣನವರ ಪರವಾಗಿ ಹೋರಾಟ ನಡೆಸಿ ಪ್ರತಿಭಟನೆಗಳನ್ನು ಮಾಡಿದರೂ ಇನ್ನೂ ನ್ಯಾಯ ದೊರಕಿಲ್ಲ, ಆದುದರಿಂದ ಈ ಅಕ್ರಮ ಕೃತ್ಯದಲ್ಲಿ ಭಾಗಿಯಾದ ಪಂಚಕಮಿಟಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತಕ್ಷಣ ಕ್ರಮಕೈಗೊಂಡು, ಯಥಾಸ್ಥಿತಿಗೆ ತರಬೇಕು. ಹಾಗೆಯೇ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಅವರ ಮೂರ್ತಿಯನ್ನು ಪುನಃ ಪ್ರತಿಷ್ಠಾಪನೆ ಮಾಡಿ, ಆ ಸ್ಥಳವನ್ನು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿ ಸಮರ್ಪಕವಾಗಿ ಅಭಿವೃದ್ಧಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮನವಿ ಮೂಲಕ ಆಗ್ರಹಿಸಿದ್ದಾರೆ.

ಜೂ.8ರಂದು ನಾಗರಬೆಟ್ಟ ಬೃಹತ್ ರೈತ ಹೋರಾಟ: ನಡಹಳ್ಳಿ

ಮುದ್ದೇಬಿಹಾಳ: ನಾಗರಬೆಟ್ಟ ಏತ ನೀರಾವರಿ ಯೋಜನೆಯನ್ನು ತಕ್ಷಣವೇ ಪೂರ್ಣಗೊಳಿಸಿ ರೈತರ ಜಮೀನುಗಳಿಗೆ ನೀರು ಹರಿಸಲು ಆಗ್ರಹಿಸಿ ಜೂ.8ರಂದು ನಾಗರಬೆಟ್ಟದಲ್ಲಿ ಸುತ್ತಮುತ್ತಲಿನ ಹಳ್ಳಿಗಳ ರೈತರು ಜೊತೆಗೂಡಿ ಬೃಹತ್ ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ ನಡಹಳ್ಳಿ ಹೇಳಿದರು.

ತಾಲೂಕಿನ ಚವನಭಾವಿ ಗ್ರಾಮದ ಗದ್ದೇಮ್ಮದೇವಿ ದೇವಸ್ಥಾನದ ಆವರಣದಲ್ಲಿ ಶನಿವಾರ ರಾತ್ರಿ ಹಮ್ಮಿಕೊಳ್ಳಲಾಗಿದ್ದ ರೈತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು,

ದಶಕ ಕಳೆದರೂ ಈ ನೀರಾವರಿ ಯೋಜನೆಯಡಿ ಹೊಲಗಳಿಗೆ ನೀರು ಹರಿದಿಲ್ಲ, ಇಚ್ಛಾಶಕ್ತಿಯ ಕೊರತೆ ಹಾಗೂ ಅಧಿಕಾರಿಗಳ ಉದಾಸೀನ ಮನೋಭಾವದಿಂದಾಗಿ ರೈತರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಸರ್ಕಾರ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ಅನುಷ್ಠಾನಗೊಳಿಸಿರುವ ಯೋಜನೆ ಸಣ್ಣಪುಟ್ಟ ಕಾರಣಗಳಿಂದ ಸ್ಥಗಿತಗೊಂಡಿರುವುದನ್ನು ಬಗೆಹರಿಸಲು ಸಾಧ್ಯವಾಗದೇ ಇರುವುದು ತೀವ್ರ ಬೇಸರದ ಸಂಗತಿಯಾಗಿದೆ. ಯೋಜನೆಯ ವ್ಯಾಪ್ತಿಯಲ್ಲಿ ಬರುವ ಎಲ್ಲ ರೈತರನ್ನು ಒಗ್ಗೂಡಿಸಿಕೊಂಡು ನಾಗರಬೆಟ್ಟದಲ್ಲಿ ಬೃಹತ್ ಹೋರಾಟ ನಡೆಸಲಾಗುವುದು ಎಂದು ಹೇಳಿದರು.



ರೈತ ಸಂಘ ಹಾಗೂ ಹಸಿರು ಸೇನೆ ಸಂಘದ ರಾಜ್ಯ ಅಧ್ಯಕ್ಷ ಚೂನಪ್ಪ ಪೂಜಾರಿ ಮತ್ತು ಗೌರವಾಧ್ಯಕ್ಷ ಶಶಿಕಾಂತ ಗುರೂಜಿ. ಗೋವಿಂದಗೌಡ ಪಾಟೀಲ, ಗದ್ದೆಪ್ಪ ಮಾಳಿ, ಯಲ್ಲಪ್ಪ ಕಾರಕೂರ, ಸುರೇಶ ಸೋಮನಾಳ, ದ್ಯಾಮಣ್ಣ ಬಿರಾದಾರ, ಭೀಮಣ್ಣ ಬಿರಾದಾರ, ಪವಡೆಪ್ಪ ಜಂಗಡಭಾವಿ, ಹಣಮಂತ ಈಳಗೇರ, ಬಸಪ್ಪ ಜಂಗಡಬಾವಿ,


ಹುಲಗಪ್ಪ ತಳವಾರ, ಹುಸನಪ್ಪ ಗೋಗಿ, ಜುಮಣ್ಣ ಕಾರಕೂರ, ವಿರೇಶ ಚಲವಾದಿ ಸೇರಿದಂತೆ ನೂರಾರು ರೈತರು ಬೆಂಬಲ ಸೂಚಿಸಿದರು.

ಸೌಹಾರ್ದತೆಯಿಂದ ಬಕ್ರೀದ್ ಆಚರಿಸಿ

ಮುದ್ದೇಬಿಹಾಳ: ನಗರ ಪೊಲೀಸ್, ನಾಲತವಾಡ ಹಾಗೂ ತಾಳಿಕೋಟೆ ಪೊಲೀಸ್ ಠಾಣೆ ವತಿಯಿಂದ ಬಕ್ರೀದ್ ಹಬ್ಬದ ಪ್ರಯುಕ್ತವಾಗಿ ಶಾಂತಿ ಸಭೆಯನ್ನು ವಿಜಯ ಮಹಾಂತೇಶ ಮಂಗಲ ಭವನ ಸಭಾಂಗಣದಲ್ಲಿ ರವಿವಾರ ಮುಖಂಡರ ಸಮ್ಮುಖದಲ್ಲಿ ಆಯೋಜಿಸಲಾಗಿತ್ತು.


ಡಿವೈಎಸ್ಪಿ ಚಂದ್ರಕಾಂತ್ ನಂದಗಾವಿ ಅವಿಭಜಿತ ತಾಲೂಕಿನಲ್ಲಿ ನಾಗರಿಕರು ಸದಾ ಶಾಂತಿ ಸುವ್ಯವಸ್ಥೆ ಕಾಪಾಡಿಕೊಂಡು ಬಂದಿದ್ದೀರಿ. ಹಬ್ಬಗಳು ಎಂದರೆ ಸೌಹಾರ್ದತೆ ಮತ್ತು ಒಗ್ಗಟ್ಟಿನ ಆಚರಣೆ ಆಗಬೇಕು ಅಂದಾಗ ಪರಸ್ಪರ ನಂಬಿಕೆ ಮತ್ತು ಪ್ರೀತಿ ಬೆಳೆಯುತ್ತದೆ, ಮುದ್ದೇಬಿಹಾಳ ತಾಲೂಕಿನ ಜನ ಸದಾ ಕೂಡಿಕೊಂಡು ಬಾಳುವ ಜನ, ನನ್ನ ಹಿಂದಿನ ಕಾಲಾವಧಿಯಲ್ಲಿ ಇಲ್ಲಿನ ಜನ ಸಹಕಾರ ನೀಡಿದ್ದಾರೆ ಎಂದರು.

ಸಿಪಿಐ ಮಹಮ್ಮದ್ ಪಸಿಉದ್ದೀನ್ ಮಾತನಾಡಿ, ಬಕ್ರೀದ್ ಹಬ್ಬದಲ್ಲಿ ಪ್ರಾಣಿ ಬಲಿ ಕಡ್ಡಾಯವಲ್ಲ, ಬಲಿ ಕೊಡುವದಿದ್ದರೆ ಸ್ಥಳವನ್ನು ಶುಚಿಯಾಗಿಟ್ಟು, ತ್ಯಾಜ್ಯವನ್ನು ಪಡೆಯಲು ಪುರಸಭೆಯ ಕಾರ್ಮಿಕರಿಗೆ ಮೊದಲೇ ಸೂಚನೆ ನೀಡಬೇಕು. ಮನುಷ್ಯನ ದುರ್ಗುಣಗಳ ತ್ಯಾಗ, ಬಲಿದಾನವೇ ಹಬ್ಬದ ನಿಜವಾದ ಸಂದೇಶ ಎಂದು ಹೇಳಿದರು.



ತಾಳಿಕೋಟೆ ಪಿಎಸ್ಐ ಜ್ಯೋತಿ ಖೋತ, ಅಪರಾಧ ವಿಭಾಗದ ಪಿಎಸ್ಐ ಆರ್.ಎಸ್.ಬಾಂಗಿ, ವೈ.ಎಚ್.ವಿಜಯಕರ, ಪಿಂಟು ಸಾಲಿಮನಿ, ಹುಸೇನ್ ಕಾಜಿ, ಕಾಮರಾಜ ಬಿರಾದಾರ ಸಭೆಯಲ್ಲಿ ಮಾತನಾಡಿದರು, ಚನ್ನಬಸು ಗುಡ್ಡದ, ಸಂಗಣ್ಣ ಮೇಲಿನಮನಿ, ಗ್ರಾಮ ಆಡಳಿತ ಅಧಿಕಾರಿಗಳಾದ ಬಿ.ಎನ್.ಜಿಡ್ಡಿಮನಿ, ಹಿರಿಯ ನಿವೃತ್ತ ಗ್ರಾಮ ಸಹಾಯಕ ಸದಾಶಿವ ಬಳೂತಿ, ಕಲ್ಲಪ್ಪ ಕೂಡಗಿ, ಬಾಳಕೃಷ್ಣ ಗಾಯಕವಾಡ, ಪರಸಪ್ಪ ದಳವಾಯಿ, ಗೋಪಾಲ ಬಳೂತಿ, ಅಡಿವೆಪ್ಪ ಪೂಜಾರಿ, ಮುಬಾರಕ್ ಮುಲ್ಲಾ, ನವಾಬಸಾಬ ಹಿರಿಯಾಳ, ದಸ್ತಗೀರಸಾಬ್ ವಾಲೀಕಾರ, ವಿಜಯಕುಮಾರ ನರಿಯವರ, ಚಂದ್ರಶೇಖರ ಈಟಿ ಹಾಜರಿದ್ದರು.

ಮೂಲಭೂತ ಸೌಕರ್ಯಕ್ಕೆ ಆಗ್ರಹಿಸಿ ಮನವಿ



ದೇವರಹಿಪ್ಪರಗಿ: ಸಮೀಪದ ಮಾರ್ಕಬಿನಹಳ್ಳಿ ಗ್ರಾಮದ ಎನ್‌ಎ ಪ್ಲಾಟ್ ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಕಾಣುತ್ತಿದ್ದು, ಅಧಿಕಾರಿಗಳು ವ್ಯವಸ್ಥೆ ಮಾಡಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಮಾರ್ಕಬಿನಹಳ್ಳಿ ಗ್ರಾಮದ 43/2 ಸರ್ವೇ ನಂಬರಿನಲ್ಲಿ ಎನ್‌ಎ ಪ್ಲಾಟ್ ಗಳನ್ನು ನಿರ್ಮಿಸಲಾಗಿದೆ. ಆದರೆ ಅಲ್ಲಿ ಸಾರ್ವಜನಿಕರಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳು ಲಭ್ಯವಿಲ್ಲ, ವಿಶೇಷವಾಗಿ ಕುಡಿಯುವ ನೀರು, ವಿದ್ಯುತ್ ಸಂಪರ್ಕ ಹಾಗೂ ರಸ್ತೆ ವ್ಯವಸ್ಥೆ ಇಲ್ಲದ ಕಾರಣ ಇಲ್ಲಿನ ನಿವಾಸಿಗಳು ತುಂಬಾ ಸಂಕಷ್ಟ ಅನುಭವಿಸುತ್ತಿದ್ದಾರೆ. ಗ್ರಾಮೀಣ ಭಾಗದ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಬೇಕು. ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮ ಕೈಕೊಳ್ಳಬೇಕು ಆದ್ದರಿಂದ, ಈ ಸಮಸ್ಯೆಗೆ ಸಂಬಂಧಪಟ್ಟ ಮಾರ್ಕಬಿನಹಳ್ಳಿ ಗ್ರಾಮ ಪಂಚಾಯತಿ ಅಧಿಕಾರಿಗಳು ತಕ್ಷಣ ಗಮನಹರಿಸಿ, ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಂಡು ಸಾರ್ವಜನಿಕರ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಬೇಕು. 15 ದಿನದೊಳಗಾಗಿ ಸಮಸ್ಯೆಗೆ ಪರಿಹಾರ ಒದಗಿಸಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು ಎಂದು ಆಗ್ರಹಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ವಿಜಯಕುಮಾರ ಎಂಬತ್ನಾಳ, ಅನೀಲ ಧರಿ, ಸಾವಳಿಗೆಪ್ಪ ಮಾವಿನಗಿಡದ, ದಯಾನಂದ ಯಡಹಳ್ಳಿ, ಅನೀಲ ದಾಸರ, ಬಬಲು ಬೀಳಗಿ, ಶ್ರೀಶೈಲ ಮೊತಗೊಂಡ, ಸಿದ್ದು ಯಡಹಳ್ಳಿ, ಮಲ್ಲಪ್ಪ ಧರಿ, ಶಶಿಕಾಂತ ಗಣಿಯಾರ, ಚನ್ನಪ್ಪ ಮಾವಿನಗಿಡದ, ಗೊಲ್ಲಾಳ ಧರಿ, ಸಚಿನ ಮಾವಿನಗಿಡದ ಉಪಸ್ಥಿತರಿದ್ದರು.

ನೂತನ ಪದಾಧಿಕಾರಿಗಳ ಪದಗ್ರಹಣ

ಚಡಚಣ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಚಡಚಣ ತಾಲೂಕು ಘಟಕದ ನೂತನ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ತಾಲೂಕಿನ ಶಿಕ್ಷಕರ ಸೊಸೈಟಿ ಸಭಾಂಗಣದಲ್ಲಿ ನೆರವೇರಿತು.

ಸತತ ನಾಲ್ಕನೇ ಬಾರಿ ಅವಿರೋಧವಾಗಿ ತಾಲೂಕು ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ಎ.ಎಸ್.ಸೊನ್ನಗಿ ಅವರು ಅಧಿಕಾರ ಸ್ವೀಕರಿಸಿದರು. ನೂತನ ಪದಾಧಿಕಾರಿಗಳೂ ಅಧಿಕೃತವಾಗಿ ಜವಾಬ್ದಾರಿ ವಹಿಸಿಕೊಂಡರು.

ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಬಿ.ಸಿ.ಉಮರಾಣಿ, ಗೌರವಾಧ್ಯಕ್ಷೆಯಾಗಿ ಆರ್.ಜೆ. ಬಿರಾದಾರ, ಉಪಾಧ್ಯಕ್ಷರಾಗಿ ಎಲ್.ಎಸ್.ಬಿರಾದಾರ, ಮಹಿಳಾ ಉಪಾಧ್ಯಕ್ಷೆಯಾಗಿ ಆರ್.ವಿ.ಝುಳಕಿ, ಖಜಾಂಚಿಯಾಗಿ ವಿ.ಬಿ.ಭೈರಗೊಂಡ, ಸಹಕಾರ್ಯದರ್ಶಿಯಾಗಿ ಎಸ್.ಎಂ.ಬಗಲಿ, ಮಹಿಳಾ ಸಹಕಾರ್ಯದರ್ಶಿಯಾಗಿ ಎಸ್.ಪಿ.ಹಿರೇಮಠ, ಸಂಘಟನಾ ಕಾರ್ಯದರ್ಶಿಯಾಗಿ ಎಂ.ಎಸ್.ಅವಟಿ, ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ಎಸ್.ಎಸ್.ಸೂರಗೊಂಡ, ಕ್ರೀಡಾ ಕಾರ್ಯದರ್ಶಿಯಾಗಿ ರಿಯಾಜ್ ಅಹ್ಮದ್ ಮುಲ್ಲಾ, ಮಾಧ್ಯಮ ಸಂಚಾಲಕರಾಗಿ ಗೋಪಾಲ ಜಾಧವ ಹಾಗೂ ಜಿಲ್ಲಾ ಪ್ರತಿನಿಧಿಯಾಗಿ ಎಸ್.ಎಸ್.ಯಳಮೇಲಿ ಅಧಿಕಾರ ಸ್ವೀಕರಿಸಿದರು.

ಸಂಘದ ನೂತನ ಅಧ್ಯಕ್ಷ ಎ.ಎಸ್.ಸೊನ್ನಗಿ ಮಾತನಾಡಿ, ಶಿಕ್ಷಕರ ಸಮಸ್ಯೆಗಳ ಪರಿಹಾರ, ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ ಹಾಗೂ ಸಂಘದ ಚಟುವಟಿಕೆಗಳನ್ನು ಮತ್ತಷ್ಟು ಬಲಪಡಿಸಲು ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ಭರವಸೆ ನೀಡಿದರು. ಶಿಕ್ಷಕ ಸತೀಶ ಬಗಲಿ, ಡಿ.ಎಸ್.ಬಗಲಿ ಇದ್ದರು.



ಸೌಹಾರ್ದತೆಯಿಂದ ಬಕ್ರೀದ್ ಆಚರಿಸಿ: ನಂದರೆಡ್ಡಿ

ಕೊಲ್ಹಾರ: ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಸರ್ವರೂ ಶಾಂತಿ ಹಾಗೂ ಸೌಹಾರ್ದಯುತೆಯಿಂದ ಬಕ್ರೀದ್ ಹಬ್ಬವನ್ನು ಆಚರಣೆ ಮಾಡಬೇಕು ಎಂದು ಡಿವೈಎಸ್ಪಿ ಚಂದ್ರಕಾಂತ ನಂದರೆಡ್ಡಿ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬಕ್ರಿದ್ ಹಬ್ಬದ ಶಾಂತಿ ಸಭೆಯ ನೇತೃತ್ವ ವಹಿಸಿ ಅವರು ಮಾತನಾಡಿದರು. ಯುವ ಸಮುದಾಯ ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಜಾಗರೂಕರಾಗಿರಬೇಕು ಅನಗತ್ಯವಾಗಿ ಬಕ್ರಿದ್ ಹಬ್ಬದ ಫೋಟೋ, ವಿಡಿಯೋ ಹಂಚಿಕೊಂಡು ಶಾಂತಿ ಕದಡುವ ಕೆಲಸಕ್ಕೆ ಕೈ ಹಾಕಬಾರದು ಎಂದು ಎಚ್ಚರಿಕೆ ನೀಡಿದರು. ಹಿರಿಯರು ಯುವಕರಿಗೆ ತಿಳಿ ಹೇಳಬೇಕು ಎಂದರು.

ಪಿಎಸ್ಐ ಅಶೋಕ ನಾಯಕ್ ಮಾತನಾಡಿ, ಬಕ್ರಿದ್ ಹಬ್ಬದ ಆಚರಣೆಯಲ್ಲಿ ಅನಗತ್ಯ ಗೊಂದಲಗಳಿಗೆ ಆಸ್ಪದ ನೀಡದೆ ಶಾಂತಿಯಿಂದ ಆಚರಣೆ ಮಾಡಬೇಕು ಎಂದರು. ತ್ಯಾಗ, ಬಲಿದಾನದ ಸಂಕೇತವಾಗಿರುವ ಬಕ್ರಿದ್ ಹಬ್ಬವನ್ನು ಹಿಂದೂ, ಮುಸ್ಲಿಂ ಬಾಂಧವರು ಜೊತೆಯಾಗಿ ಆಚರಿಸುವ ಮೂಲಕ ಭಾವೈಕ್ಯತೆಗೆ ಭಾಷ್ಯ ಬರೆಯಬೇಕು ಎಂದು ಅವರು ಸಲಹೆ ನೀಡಿದರು.

ಮುಸ್ಲಿಂ ಸಮುದಾಯದ ಹಿರಿಯರಾದ ಆರ್.ಬಿ.ಪಕಾಲಿ ಮಾತನಾಡಿ, ಕೊಲ್ಹಾರ ಪಟ್ಟಣದಲ್ಲಿ ಹಿಂದೂ, ಮುಸ್ಲಿಂ ಸಮುದಾಯದವರು ಶಾಂತಿ ಸೌಹಾರ್ದತೆಯಿಂದ ಬದುಕುತ್ತಿದ್ದೇವೆ. ಸರ್ವರೂ ಒಂದಾಗಿ ಹಬ್ಬವನ್ನು ಆಚರಿಸುತ್ತವೆ ಎಂದರು.



ಅಲ್ಲಾಭಕ್ಷ ಬಿಜಾಪುರ ಮಾತನಾಡಿ ಭಾವೈಕ್ಯತೆಗೆ ಚ್ಯುತಿ ಬರದಂತೆ ಸರ್ವರೂ ಬಕ್ರಿದ್ ಹಬ್ಬವನ್ನು ಆಚರಣೆ ಮಾಡುತ್ತವೆ ಎಂದರು. ಮುಂದುವರೆದು ಮಾತನಾಡಿದ ಅವರು ಪ್ರತಿ ವರ್ಷ ಬಕ್ರಿದ್ ಹಬ್ಬದ ಹಾಗೂ ಇತರ ಸಂದರ್ಭಗಳಲ್ಲಿ ಗೋ ಹತ್ಯೆ ಹೆಸರಿನಲ್ಲಿ ನಡೆಯುವ ಗೊಂದಲಗಳು ನಿಲ್ಲಬೇಕಾದರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗೋ ವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸಬೇಕು ಇದರಿಂದ ಎಲ್ಲಾ ಗೊಂದಲಗಳಿಗೆ ತೆರೆ ಬಿದ್ದಂತಾಗುತ್ತದೆ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಪ್ರಮುಖರಾದ ಉಸ್ಮಾನ್ ಪಟೇಲ್ ಖಾನ್, ಟಿ.ಟಿ.ಹಗೇದಾಳ, ದಶರಥ ಈಟಿ ಮಾತನಾಡಿದರು. ಎಂ.ಆರ್.ಕಲಾದಗಿ, ಡೊಂಗ್ರಿ ಕಟಬರ, ಸುಭಾಷ್ ಭಜಂತ್ರಿ, ಸುರೇಶ ಗಿಡ್ಡಪ್ಪಗೋಳ, ಪರಶುರಾಮ ಚಿಮ್ಮಲಗಿ, ಸಿದ್ದಪ್ಪ ತಳಗೇರಿ ಇದ್ದರು.

ಕಿರುಸುದ್ದಿ

ಸರ್ಕಾರಿ ಶಾಲೆಗಳಿಗೆ ಪುಸ್ತಕ ಪೂರೈಕೆ



ಕುಷ್ಟಗಿ: ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಮತ್ತು ಅನುದಾನ ಮತ್ತು ಅನುದಾನಿತ ರಹಿತ ಶಾಲೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಿಂದ ಆಯಾ ಶಾಲೆಗಳಿಗೆ ಪುಸ್ತಕ ಪೂರೈಕೆ ಮಾಡಲಾಗಿದೆ. ತಾಲೂಕಿನ 180 ಗ್ರಾಮಗಳ, ಪೈಕಿ 20 ಕ್ಲಸ್ಟರ್‌ಗಳು ಹೊಂದಿದ್ದು, 1-10 ತರಗತಿವರಗೆ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಮೇ 29ರೊಳಗೆ ತಾಲೂಕಿನ ಎಲ್ಲ ಸರ್ಕಾರಿ ಶಾಲೆಗಳಿಗೆ ಈಗಾಗಲೇ ಪುಸ್ತಕಗಳನ್ನು ಸರಬರಾಜು ಮಾಡಲು ಶಿಕ್ಷಣ ಇಲಾಖೆ ಮುಂದಾಗಿದೆ. ತಾಲೂಕಿಗೆ ಒಟ್ಟಾರೆಯಾಗಿ 6,75,179 ಪುಸ್ತಕಗಳು ಬೇಡಿಕೆ ಇದ್ದು, ಈವರಗೆ 3,70,579 ಪುಸ್ತಕಗಳು ಲಭ್ಯವಾಗಿದೆ. ಶೇ.54.88ರಷ್ಟು ಪುಸ್ತಕ ವಿತರಿಸುವ ಕಾರ್ಯವಾಗಿದೆ. ತಾಲೂಕಿನಲ್ಲಿ 336 ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಅನುದಾನಿತ, ಅನುದಾನ ರಹಿತ, ಸರ್ಕಾರಿ ಹಿರಿಯ ಪ್ರಾಥಮಿಕ, ಹಾಗೂ ಪ್ರೌಢ ಶಾಲೆಗಳಿವೆ ಪುಸ್ತಕಗಳನ್ನು ರವಾನೆ ಮಾಡಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಶಿಕ್ಷಣ ಸಂಯೋಜಕ ಹಾಗೂ ಪುಸ್ತಕಗಳ ನೋಡಲ್ ಅಧಿಕಾರಿ ಶಿವಾನಂದ ಪಂಪಣ್ಣನವರ್ ತಿಳಿಸಿದ್ದಾರೆ.

ಜು.11ರಂದು ಲೋಕ ಅದಾಲತ್

ಬಳ್ಳಾರಿ: ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಕಾರ ಇವರ ನಿರ್ದೇಶನದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಕಾರ ವತಿಯಿಂದ ಜು.11ರಂದು ಬೆಳಿಗ್ಗೆ 10ಕ್ಕೆ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದೆ. ಸಾರ್ವಜನಿಕರು ತಮ್ಮ ವ್ಯಾಜ್ಯಪೂರ್ವ, ರಾಜಿಯಾಗಬಹುದಾದ ಅಪರಾಧ ಪ್ರಕರಣಗಳು, ಚೆಕ್ ಪ್ರಕರಣಗಳು, ಬ್ಯಾಂಕ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯೀಕರಣದ ಪ್ರಕರಣಗಳು, ವೈವಾಹಿಕ ಹಾಗೂ ಕೌಟುಂಬಿಕ ಪ್ರಕರಣಗಳು, ಸಿವಿಲ್ ಪ್ರಕರಣಗಳು ಹಾಗೂ ಇತರೆ ರಾಜಿಯಾಗಬಹುದಾದ ಪ್ರಕರಣಗಳನ್ನು ಜಿಲ್ಲಾ ನ್ಯಾಯಾಲಯದಲ್ಲಿ ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ಶೀಘ್ರವೇ ಇತ್ಯರ್ಥಗೊಳಿಸಿ ಪರಿಹಾರ ಪಡೆದುಕೊಳ್ಳಲು ಸುವರ್ಣ ಅವಕಾಶವಾಗಿದೆ. ಸಾರ್ವಜನಿಕರು, ಕಕ್ಷಿದಾರರು ಇದರ ಪ್ರಯೋಜನ ಪಡೆದುಕೊಳ್ಳುವುದರ ಮೂಲಕ ತಮ್ಮ ವಿವಾದಗಳನ್ನು ಅಂತ್ಯಗೊಳಿಸಿಕೊಳ್ಳಬಹುದು. ರಾಷ್ಟ್ರೀಯ ಲೋಕ್ ಅದಾಲತ್ ಅಂಗವಾಗಿ ಪ್ರತಿದಿನ ವಿವಿಧ ನ್ಯಾಯಾಲಯಗಳಲ್ಲಿ ಪೂರ್ವಭಾವಿ ಬೈಠಕ್‌ಗಳು ನಡೆಯುತ್ತಲಿರುತ್ತವೆ. ಪೂರ್ವಭಾವಿ ಬೈಠಕ್‌ಗಳ ಪ್ರಯೋಜನವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು.



ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಕಾರ ಅಥವಾ ದೂ.08392-278077 ಹಾಗೂ ಎನ್‌ಎಲ್‌ಎಸ್‌ಎ ಸಹಾಯವಾಣಿ ಸಂಖ್ಯೆ 15100ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು. ಸಾರ್ವಜನಿಕರು ಹಾಗೂ ಕಕ್ಷಿದಾರರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಕಾರದ ಅಧ್ಯಕ್ಷರು ಕೆ.ಜಿ.ಶಾಂತಿ ತಿಳಿಸಿದ್ದಾರೆ.

ಪ್ರಮಾಣ ವಚನ ಸ್ವೀಕಾರ

ಕೊಪ್ಪಳ: ಭಯೋತ್ಪಾದನಾ ವಿರೋಧಿ ದಿನದ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತದ ವತಿಯಿಂದ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮವು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆಯಿತು.

ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಪ್ರಮಾಣ ವಚನ ಬೋಧಿಸಿದರು. ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಜಿಲ್ಲಾ ಖಜಾನಾಧಿಕಾರಿಗಳಾದ ಕೆ.ಸುರೇಶ್ ಸೇರಿದಂತೆ ವಿವಿಧ ಇಲಾಖೆಗಳ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದು, ಪ್ರಮಾಣ ವಚನ ಸ್ವೀಕರಿಸಿದರು.



ಕುಷ್ಟಗಿ: ಕರ್ನಾಟಕ ಜನಪರ ಸೇವಾ ಸಮಿತಿ ಗಣ ಕರ್ನಾಟಕ ವತಿಯಿಂದ ನೀಡಲಾದ ದಶಮಾನೋತ್ಸವ, ಗಣ ಕರ್ನಾಟಕ ಪತ್ರಿಕೆ ಬಿಡುಗಡೆ ಸಮಾರಂಭ ಸಾಧಕರಿಗೆ ಪಟ್ಟಣದ ಶಾರದಾ ಕಟ್ಟಿಮನಿ ಅವರನ್ನು ಸಮಾಜ ಸೇವಾ ಕ್ಷೇತ್ರದಲ್ಲಿ ಗುರುತಿಸಿ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಆವರಣ ನಯನ ರಂಗ ಮಂದಿರದಲ್ಲಿ ಸೇವಾ ಜ್ಯೋತಿ ರಾಜ್ಯ ಪ್ರಶಸ್ತಿ ನೀಡಲಾಯಿತು.

ಜಿಲ್ಲಾ ಪಂಚಾಯತ್ ಸಿಇಓಗೆ ಬೀಳ್ಕೊಡುಗೆ

ಕಲಬುರಗಿ: ಜಿಲ್ಲೆಯ ಅಭಿವೃದ್ಧಿಗೆ ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಯ ಸಹಯೋಗದೊಂದಿಗೆ ತಂಡದ ರೂಪದಲ್ಲಿ ಕಾರ್ಯನಿರ್ವಹಿಸಿದ ತೃಪ್ತಿ ತಮಗಿದೆ ಎಂದು ನಿರ್ಗಮಿತ ಜಿಲ್ಲಾ ಪಂಚಾಯತ್ ಸಿ.ಇ.ಓ. ಭಂವರ್ ಸಿಂಗ್ ಮೀನಾ ಹೇಳಿದರು.

ಇಲ್ಲಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಚಿಕ್ಕಮಂಗಳೂರು ಜಿಲ್ಲಾಧಿಕಾರಿಯಾಗಿ ಮುಂಬಡ್ತಿ ಪಡೆದು ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಆಯೋಜಿಸಿದ ಬೀಳ್ಕೊಡುಗೆ ಸಮಾರಂಭದಲ್ಲಿ ಕಚೇರಿ ಸಿಬ್ಬಂದಿಯಿಂದ ಆತ್ಮೀಯ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ತಮಗೆ ಮೂರು ವರ್ಷಗಳ ಕಾಲ ಸುಧೀರ್ಘವಾಗಿ ಗ್ರಾಮೀಣ ಜನರ ಸೇವೆ ಸಲ್ಲಿಸುವ ಸೌಭಾಗ್ಯ ನನ್ನದಾಗಿತ್ತು ಎಂದರು.

ನೂತನ ಜಿಪಂ ಸಿಇಓ ಆಗಿ ಅಧಿಕಾರ ವಹಿಸಿಕೊಂಡಿರುವ ರಾಹುಲ ಸಂಕನೂರ್ ಅವರಿಗೂ ಜಿಲ್ಲಾ ಪಂಚಾಯತ್ ಕಚೇರಿ ಸಿಬ್ಬಂದಿಗಳು ಹೂಗುಚ್ಛ ನೀಡಿ ಸ್ವಾಗತ ಕೋರಿದರು. ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಮಾತನಾಡಿದರು.

ಡಿಸಿ ಇಕ್ರಮ್ ಶರೀಫ್, ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ ಸೇರಿದಂತೆ ಜಿಲ್ಲಾ ಪಂಚಾಯತಿಯ ಅಧಿಕಾರಿ-ಸಿಬ್ಬಂದಿಗಳು, ಇತರೆ ಇಲಾಖೆಯ ಅಧಿಕಾರಿಗಳು, ತಾಲೂಕಿನ ತಹಶೀಲ್ದಾರರು, ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಭಾಗವಹಿಸಿದ್ದರು.



ಕಲಬುರಗಿ: ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಚಿಕ್ಕಮಂಗಳೂರು ಜಿಲ್ಲಾಧಿಕಾರಿಯಾಗಿ ಜಿಲ್ಲಾ ಪಂಚಾಯತ್ ಸಿಇಓ ಭಂವರ್ ಸಿಂಗ್ ಅವರು ಮುಂಬಡ್ತಿ ಪಡೆದು ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಕಚೇರಿ ಸಿಬ್ಬಂದಿಯಿಂದ ಆತ್ಮೀಯ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಆದ್ಯ ಪತ್ರಕರ್ತ ನಾರದ ಜಯಂತಿ | ಸಾಧಕರಿಗೆ ಸನ್ಮಾನ

ದೇಶದ 22 ಭಾಷೆ ರಾಷ್ಟ್ರೀಯ ಭಾಷೆಗಳೇ

ಕಲಬುರಗಿ: 1969ರಲ್ಲೇ ದೇಶದಲ್ಲಿನ ಅಸ್ಪೃಶ್ಯತೆಯನ್ನು ಖಂಡಿಸಿ ಇದನ್ನು ಬುಡಸಮೇತ ಕಿತ್ತೊಗೆಯುವ ಸಂಕಲ್ಪ ಮಾಡಿ ಎಲ್ಲರನ್ನೂ ಜೋಡಿಸುವ ಕೆಲಸಕ್ಕೆ ಕರೆ ನೀಡಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಎರಡನೇ ಸರಸಂಘಚಾಲಕ ಡಾ.ಮಾಧವರಾವ್ ಸದಾಶಿವರಾವ್ ಗೋಳ್ವಲ್ಕರ್ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಹಾಗೂ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ ಅರುಣಕುಮಾರ ಹೇಳಿದರು.

ನಗರದ ಕನ್ನಡ ಭವನದ ಸುವರ್ಣ ಕಟ್ಟಡ ಸಭಾಂಗಣದಲ್ಲಿ ಕೇಶವ ಸೇವಾ ಸಮಿತಿ ಕಲಬುರಗಿಯಿಂದ ಆದ್ಯ ಪತ್ರಕರ್ತ ದೇವಋಷಿ ನಾರದ ಜಯಂತಿ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಆಗಮಿಸಿ ಮಾತನಾಡಿದ ಅವರು,ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಸ್ಪೃಷ್ಯತೆ ನಿವಾರಣೆಗೆಗಾಗಿ ನಡೆಸಿದ ಹೋರಾಟದ ಪರಿ ನಾವೆಲ್ಲರೂ ಸ್ಮರಿಸಿಕೊಳ್ಳುವ ಮೂಲಕ ಇದನ್ನು ಸಮಾಜದಿಂದ ಬೇರು ಸಮೇತ ಕಿತ್ತು ಬಿಸಾಡಬೇಕಿದೆ.ಅಂದಾಗ ಮಾತ್ರ ನಾವೆಲ್ಲರೂ ಸಮಾನರು,ನಾವೆಲ್ಲರೂ ಹಿಂದು ಎಂಬ ಭಾವನೆ



> ನರೇಟಿವ್ ಒಂದು ಹುಳ ಇದ್ದಂತೆ.ಮಾಹಿತಿ ಮತ್ತು ಜ್ಞಾನ ಹುಳವಲ್ಲ.ಹಿಂದಿ ಭಾಷೆ ಹೇರಿಕೆ ಎಂಬುದು, ಕಲಬುರಗಿ ಹಿಂದುಳಿದ ಪ್ರದೇಶ ಎಂಬ ಹೇಳಿಕೆ ಇವೆಲ್ಲಾ ನರೇಟಿವ್ ಹುಳ ಇದ್ದಂತೆ.ಇದೀಗ ಸದ್ಯಕ್ಕೆ ಜಿರಳೆ ಚರ್ಚೆ ತುಂಬಾ ಟ್ರೆಂಡ್ ಆಗಿದೆ.ಇದು ಕೂಡ ಒಂದು ಹುಳ ಇದ್ದಂತೆ.ಹೀಗಾಗಿ ವಾರ್ ಆಫ್ ನರೇಟಿವ್ ಕಡೆ ಗಮನ ಕೊಡದೇ,ಪಿಡೆ ಮತ್ತು ಪಿಡುಗು ಇವುಗಳನ್ನು ದೂರ ಮಾಡುವತ್ತ ಹೆಜ್ಜೆ ಹಾಕೋಣ.
>
> ■ ಅರುಣಕುಮಾರ, ಪ್ರಾಂತ ಪ್ರಚಾರ ಪ್ರಮುಖ ಕರ್ನಾಟಕ ಉತ್ತರ, ದಕ್ಷಿಣ

ಜಾಗೃತವಾಗಲಿದೆ ಎಂದರು.

ನಮ್ಮ ಭಾರತೀಯ ನೆಲದಲ್ಲಿ ಜನ್ಮ ತಾಳಿದ 22 ಭಾಷೆಗಳು ನಮ್ಮ ರಾಷ್ಟ್ರೀಯ ಭಾಷೆಗಳಾಗಿವೆ. ಇದರಲ್ಲಿ ಯಾವುದೇ ಅನುಮಾನವಿಲ್ಲ,ಆದರೆ, ಯಾವುದಾದರೂಒಂದುಭಾಷೆನಮ್ಮ ಸಂಪರ್ಕದ ಭಾಷೆ ಆಗಬೇಕಲ್ಲವೇ. 60 ಕೋಟಿ ಜನ ಮಾತನಾಡುವ ಹಿಂದಿ,5 ಕೋಟಿ ಮಾತನಾಡುವ ಕನ್ನಡ, 9 ಕೋಟಿ ತೆಲುಗು,10 ಕೋಟಿ ಮರಾಠಿ, ಇವುಗಳಲ್ಲಿ ಒಂದಾದರೂ ನಮ್ಮ ರಾಷ್ಟ್ರೀಯ ಭಾಷೆ ಆಗಬೇಕಲ್ಲವೇ.ಹಿಂದಿ ಹೇರಿಕೆ ಎಂದಾದರೆನೀವುಬ್ರಿಟಿಷರಾ.?ಕನ್ನಡ ಹಿಂದಿ ಜಗಳದಮಧ್ಯೆ 3ನೇಯವನಿಗೆ ಜಾಗ ಕೊಡುವುದು ಸರಿಯಲ್ಲ,ನಮ್ಮ ನೆಲದ ಭಾಷೆಗಳು ನಾವು ಮುನ್ನೆಲೆಗೆ ತರಬೇಕೆಂದ ಅವರು,ಬಹಳ ದುಃಖದಿಂದ ಹೇಳುವಂತಾದರೇ ನಮ್ಮ ಭಾರತ ಮಾತೇಯ 22 ಭಾಷೆಗಳನ್ನು ಕೊಲೆ ಮಾಡ್ತಾ ಇರೋದು ನಾವೇ ಎಂದು ಹೇಳಿದರು.

ಬ್ರಹ್ಮನ ಮಾನಸ ಪುತ್ರ ನಾರದರು ಆಗಿನ ಕಾಲದಲ್ಲಿ ಮೂರು ಲೋಕಗಳಿಗೆ ಕ್ಷಣಾರ್ಧದಲ್ಲಿ ಸಮಾಚಾರವನ್ನು ತಲುಪಿಸುವ ಕೆಲಸ ಮಾಡುತ್ತಿದ್ದರು. ಆದರೆ,ಇಂದು ನಾರದರನ್ನು ನಾವು ಯಾವ ರೀತಿ ಬಿಂಬಿಸಲಾಗುತ್ತಿದೆ ಎಂಬುದು ಅವಲೋಕನ ಮಾಡಿಕೊಳ್ಳುವ ಅಗತ್ಯವಿದೆ.ಕಷ್ಟ , ಸಮಸ್ಯೆ ಅಂತ ಬಂದಾಗ ಎಲ್ಲರಿಗೂ ನೆನಪಾಗುತ್ತಿದ್ದು ಕೇವಲ ನಾರದರು. ನಮ್ಮ ಭಾರತೀಯ ನೆಲದಲ್ಲಿ ಜನ್ಮ ತಾಳಿದ 22 ಭಾಷೆಗಳು ನಮ್ಮ ರಾಷ್ಟ್ರೀಯ ಭಾಷೆಗಳಾಗಿವೆ ಎಂದರು.

ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತ ಶಿವರಾಯ ದೊಡ್ಡಮನಿ ವಹಿಸಿದ್ದರು. ಸನ್ಮಾನಿತರಾಗಿ ಆಗಮಿಸಿದ ಹಿರಿಯ ಪತ್ರಕರ್ತ ಹಣಮಂತರಾವ್ ಭೈರಾಮಡಗಿ, ದೇವಿಂದ್ರಪ್ಪ ಅವಂಟಿ, ಸಂಜೀವ ರೆಡ್ಡಿ, ನಾಗನಾಥ್ ಯಾದಗಿರಿ ವ'ಾತ'ನಾ ಡಿ ದ' ರ'ು. ಪ್ರಾಂತ' ಪ್ರಚಾರ ಪ್ರಮುಖ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿಭಾಗ ಪ್ರಚಾರಕ ವಿಜಯ ಮಹಾಂತೇಶ, ಜಿಲ್ಲಾ ಸಂಘಚಾಲಕ ಅಶೋಕ್ ಪಾಟೀಲ್ ,ಮಹಾದೇವಯ್ಯ ಕರದಳ್ಳಿ,ಭರತ ಖಮಿತಕರ್, ಸೇರಿದಂತೆ ಇತರರು ಉಪಸ್ಥಿತರಿದ್ದರು. ಮುರಳಿ ಪೂಜಾರ ವೈಯಕ್ತಿಕ ಗೀತೆ ಹಾಡಿದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಆಶಾಕಿರಣ

ಯಲಬುರ್ಗಾ: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಈ ಎಕ್ಸ್‌ಫರ್ಟ್ ಕೋಚಿಂಗ್ ಕ್ಲಾಸಸ್ ಸದಾ ಆಶಾಕಿರಣವಾಗಿದೆ ಎಂದು ಯಾದಗಿರಿಯ ಕೃಷಿ ಉಪನಿರ್ದೇಶಕ ಹಂಪಣ್ಣ ಚವ್ಹಾಣ ಹೇಳಿದರು.

ತಾಲೂಕಿನ ಗೆದಗೇರಿ ಗ್ರಾಮದ ಎಕ್ಸ್‌ಫರ್ಟ್ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ಭಾನುವಾರ ನಡೆದ ಬೇಸಿಗೆ ತರಬೇತಿ ಶಿಬಿರ ಮುಕ್ತಾಯ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಸಂಸ್ಥೆಯ ಎಲ್ಲ ಕುಟುಂಬ ವರ್ಗದವರು ಈ ಭಾಗದ ಬಡಮಕ್ಕಳ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹದಾಯಕ ನೀಡುತ್ತಿರುವುದು ಸಂತಸ ತಂದಿದೆ ಎಂದರು.

ಇವತ್ತು ಹಲವಾರು ಶಿಕ್ಷಣ ಸಂಸ್ಥೆಗಳು ಗುಣಮಟ್ಟ ಶಿಕ್ಷಣಕ್ಕೆ ಒತ್ತು ಕೊಡದೆ ಕೇವಲ ಹಣ ಗಳಿಸುವ ಉದ್ದೇಶವನ್ನು ಹೊಂದಿವೆ. ಆದರೆ ಈ ಶಿಕ್ಷಣ ಸಂಸ್ಥೆ ಸದಾ ಕ್ರಿಯಾಶೀಲತೆಯಿಂದ ಸ್ಥಾಪನೆಗೊಂಡು ಬಡವರ ಮಕ್ಕಳ ಶಿಕ್ಷಣಕ್ಕೆ ಸಹಕಾಯಾಗಿದೆ ಎಂದು ಹೇಳಿದರು.

ಯಲಬುರ್ಗಾ ಸಂಸ್ಥಾನ ಮುರುಡಿ ಹಿರೇಮಠದ ಪೀಠಾಧಿಪತಿ ಬಸವಲಿಂಗೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿ, ಈ ಸಂಸ್ಥೆಯಲ್ಲಿ ಕಳೆದ 2ತಿಂಗಳ ಕಾಲ ಎಸ್‌ಎಲ್‌ಸಿ ವಿದ್ಯಾರ್ಥಿಗಳು ಬೇಸಿಗೆ ತರಬೇತಿಯಲ್ಲಿ ಪಡೆದ ಶಿಕ್ಷಣದ ಬಗ್ಗೆ ಅನೇಕ ವಿದ್ಯಾರ್ಥಿಗಳು ತಂತಮ್ಮ ಅನಿಸಿಕೆಗಳಲ್ಲಿ ಗುಣಮಟ್ಟ ಶಿಕ್ಷಣ ನೀಡಿದ್ದಾರೆಂದು ಹೇಳಿದಾಗ ನಿಜಕ್ಕೂ ಇಂತಹ ಗ್ರಾಮೀಣ ಪ್ರದೇಶದಲ್ಲಿ ಉತ್ತಮ ಗುಣಮಟ್ಟ ಶಿಕ್ಷಣ ನೀಡಿರುವುದು ಮಕ್ಕಳ ಉಜ್ವಲ್ ಭವಿಷ್ಯಕ್ಕೆ ದಾರಿದೀಪವಾಗಿದೆ ಎಂದರು.

ಕುಕನೂರ ವಿದ್ಯಾನಂದ ಗುರುಕುಲ ಕಾಲೇಜಿನ ಶಿಕ್ಷಕ ಸೋಮಶೇಖರ ನಿಲೋಗಲ್ ಹಾಗೂ ಮುಖ್ಯಶಿಕ್ಷಕ ದೇವಪ್ಪ ವಾಲ್ಮೀಕಿ ಮಾತನಾಡಿ ವಿದ್ಯಾರ್ಥಿಗಳು ಇಲ್ಲಿ ಪಡೆದುಕೊಂಡ ಬೇಸಿಗೆ ಶಿಬಿರದ ಶಿಕ್ಷಣವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಶಶಿಕಲಾ ಚವ್ಹಾಣ ಸಭೆ ಅಧ್ಯಕ್ಷತೆ ವಹಿಸಿದ್ದರು, ಹಿರೇಮಠ, ಕುಕನೂರಿನ ಅಲ್ಪಸಂಖ್ಯಾಯತ ಮೋರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಚಾರ್ಯ ಬಸವರಾಜ ದೊಡ್ಡನಿ, ಸಂಸ್ಥೆ ಕಾರ್ಯದರ್ಶಿ ಗಣೇಶ ರಾಠೋಡ ಮಾತನಾಡಿದರು.

ಚವಳಿಬಾಯಿ ಚವ್ಹಾಣ, ಶೀನಪ್ಪ ವೇ. ಮೂ., ಶಿವನಾಗಯ್ಯ ಹಿರೇಮಠ, ಲಲಿತಾ ರಾಠೋಡ, ಅಂದಪ್ಪ ಮಂಡಲಗೇರಿ, ಮಂಜುನಾಥ ಮಾಸ್ತಿ, ಶೀನಪ್ಪ ನಾಯಕ ಸೇರಿದಂತೆ ಮಕ್ಕಳ ಪಾಲಕರು, ಶಿಕ್ಷಕರು, ಸಿಬ್ಬಂದಿ, ಗ್ರಾಮಸ್ಥರು ಇದ್ದರು.



ಉಚಿತ ಆರೋಗ್ಯ, ನೇತ್ರ ತಪಾಸಣಾ ಶಿಬಿರ

ಸಿಂಧನೂರು: ಎಚ್.ಮರಿಯಪ್ಪ ಹೆಡಗಿಬಾಳ ಅವರು ವಕೀಲ ವೃತ್ತಿಯ ಜೊತೆಗೆ ಉಚಿತ ತಪಾಸಣಾ ಶಿಬಿರಗಳನ್ನು ಆಯೋಜಿಸಿ ಸಮಾಜಮುಖಿ ಸೇವಾ ಕಾರ್ಯಗಳನ್ನು ನಡೆಸುತ್ತಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ನಗರದ ಹೋಲಿ ಫ್ಯಾಮಿಲಿ ಶಾಲೆಯಲ್ಲಿ ಎಚ್.ಮರಿಯಪ್ಪ ಹೆಡಗಿಬಾಳ ವಕೀಲರು ಚಾರಿಟೇಬಲ್ ಟ್ರಸ್ಟ್ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಟ್ರಸ್ಟ್‌ನ ಸಂಸ್ಥಾಪಕ ಎಚ್. ಮರಿಯಪ್ಪ ಹೆಡಗಿಬಾಳ ಅವರ ಜನ್ಮದಿನದ ಅಂಗವಾಗಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೇಸಿಗೆ ಶಿಬಿರ ಸಮಾರೋಪ, ಉಚಿತ ಆರೋಗ್ಯ ಮತ್ತು ನೇತ್ರ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಈ ಭೂಮಿ ಮೇಲೆ ಪ್ರತಿಯೊಬ್ಬ ವ್ಯಕ್ತಿಯ ಹುಟ್ಟು ಆಕಸ್ಮಿಕ, ಸಾವು ಖಚಿತ, ಇವುಗಳ ಮಧ್ಯೆ ಸಮಾಜಮುಖಿ ಕೆಲಸಗಳನ್ನು ಮಾಡುವ ಮೂಲಕ ಉನ್ನತ ಸ್ಥಾನಕ್ಕೆ ಬಂದಾಗ ಅದು ನಿಜವಾದ ಸಾಧನೆ ಮತ್ತು ಜೀವನ ಸಾರ್ಥಕವಾಗುತ್ತದೆ ಎಂದರು. ಎಚ್. ಮರಿಯಪ್ಪ ಅವರು ಪ್ರತಿವರ್ಷ ಬೇಸಿಗೆಯಲ್ಲಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ,10ನೇ ತರಗತಿ ವಿದ್ಯಾರ್ಥಿಗಳು ಉಚಿತ ಈ ತರಬೇತಿ ಶಿಬಿರ,ಕಾನೂನು ಅರಿವು ಕಾರ್ಯಕ್ರಮ,ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಜೊತೆಗೆ ಅನೇಕ ಸೇವಾ ಕಾರ್ಯಗಳನ್ನು ಮಾಡುವ ಮೂಲಕ ಸಾಮಾಜಿಕ ಜವಾಬ್ದಾರಿ ಮೆರೆಯುತ್ತಿದ್ದಾರೆ. ಇದು ಇತರರಿಗೆ ಸ್ಫೂರ್ತಿದಾಯಕವಾಗಿದೆ ಎಂದು ಅಭಿಪ್ರಾಯಪಟ್ಟರು. ವೆಂಕಟಗಿರಿ ಕ್ಯಾಂಪಿನ ಸಿದ್ಧಾಶ್ರಮದ ಸದಾನಂದ ಶರಣರು ಹಾಗೂ ಹೋಲಿ ಫ್ಯಾಮಿಲಿ ಚರ್ಚ್ ಸ್ಕೂಲ್ ವ್ಯವಸ್ಥಾಪಕ ಫಾದರ್ ಜ್ಞಾನ ಪ್ರಕಾಶಂ ಅವರು ಸಾನಿಧ್ಯ ವಹಿಸಿದ್ದರು. ಸ್ಫೂರ್ತಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಹಾಗೂ ಡಾ.ಎಸ್.ವಿ.ಸವಡಿ ಆಯುರ್ವೇದಿಕ್ ಆಸ್ಪತ್ರೆ ಗಂಗಾವತಿ ಇವರ ಸಹಯೋಗದಲ್ಲಿ ಉಚಿತ ಆರೋಗ್ಯ ಮತ್ತು ಉಚಿತ ನೇತ್ರ ತಪಾಸಣಾ ಶಿಬಿರ ನಡೆಯಿತು. ಡಾ.ಎಚ್.ಮರಿಯಪ್ಪ ಹೆಡಗಿಬಾಳ ವಕೀಲರು ಮಾತನಾಡಿದರು.

ಜಿಲ್ಲಾ ವಕೀಲರ ಸಂಘ ಕೊಪ್ಪಳ ಅಧ್ಯಕ್ಷ ಎ.ವಿ.ಕಣವಿ, ಮಾಜಿ ವಕೀಲರ ಸಂಘದ ಅಧ್ಯಕ್ಷ ಎನ್.ರಾಮನಗೌಡ, ಮಸ್ಕಿ ವಕೀಲರ ಸಂಘದ ಅಧ್ಯಕ್ಷ ವೀರಭದ್ರಪ್ಪ, ಜಿಲಾನ್ ಖಾಜಿ ವಕೀಲರು, ವೀರಭದ್ರಗೌಡ ವಕೀಲರು, ಮಂಜುನಾಥ ಸಾಸಲಮರಿ ಇತರರಿದ್ದರು.



ನ್ಯಾಯಬೆಲೆ ಅಂಗಡಿ ಮಾಲೀಕನ ಅಮಾನತಿಗೆ ಆಗ್ರಹ

ಕುಷ್ಟಗಿ: ತಾಲೂಕಿನ ಹುಲಿಯಾಪುರ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕರು ಸಾರ್ವಜನಿಕರಿಗೆ ಪಡಿತರ ವಿತರಣೆಯಲ್ಲಿ ಸರಿಯಾಗಿ ಹಂಚಿಕೆ ಮಾಡುತ್ತಿಲ್ಲ, ತಕ್ಷಣವೇ ಅವರನ್ನು ಅಮಾನತುಗೊಳಿಸಬೇಕು ಎಂದು ಗ್ರಾಮಸ್ಥರು ಗುರುವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾರ್ಡ್‌ದಾರರಿಗೆ ತಲುಪದ ಪೂರ್ಣ ಅಕ್ಕಿ ಸರ್ಕಾರದ ನಿಯಮಾವಳಿಗಳ ಪ್ರಕಾರ, ಅಂತ್ಯೋದಯ ಅನ್ನ ಯೋಜನೆಯಡಿ ಪ್ರತಿ ಕಾರ್ಡ್‌ಗೆ ಮೇ ಮತ್ತು ಜೂನ್ ತಿಂಗಳ ತಲಾ 35 ಕೆಜಿಯಂತೆ ಒಟ್ಟು 70 ಕೆಜಿ ಅಕ್ಕಿಯನ್ನು ಒಟ್ಟಿಗೆ ವಿತರಿಸಬೇಕಾಗಿದೆ. ಆದರೆ, ಹುಲಿಯಾಪುರ ಗ್ರಾಮದ ಸುಮಾರು 150 ಅಂತ್ಯೋದಯ ಕಾರ್ಡ್‌ದಾರರಿಗೆ 70 ಕೆಜಿ ಬದಲಿಗೆ ಕೇವಲ 35 ಕೆಜಿ ಹಾಗೂ 50 ಕೆಜಿ ಮಾತ್ರ ನೀಡಿ ಕೈತೊಳೆದುಕೊಳ್ಳಲಾಗಿದೆ. ಈ ಬಾರಿ ಅನ್ನಭಾಗ್ಯ ಯೋಜನೆಯಡಿ ನಗದು ವರ್ಗಾವಣೆ ಇಲ್ಲದ ಕಾರಣ, ಮೇ ಮತ್ತು ಜೂನ್ ತಿಂಗಳ ರಾಜ್ಯ ಹಾಗೂ ಕೇಂದ್ರ ಸರ್ಕಾರದ ತಲಾ 5 ಕೆಜಿ ಸೇರಿದಂತೆ ಒಟ್ಟು ಪಡಿತರವನ್ನು ಪ್ರತ್ಯೇಕವಾಗಿ ಬಯೋಮೆಟ್ರಿಕ್ ಪಡೆದು ವಿತರಿಸಬೇಕಾದ ನಿಯಮವನ್ನು ಇಲ್ಲಿ ಸಂಪೂರ್ಣವಾಗಿ ಗಾಳಿಗೆ ತೂರಲಾಗಿದೆ ಎಂದು ಕರವೇ ಗ್ರಾಮ ಘಟಕದ ಅಧ್ಯಕ್ಷ ಯಮನೂರಪ್ಪ ಬನ್ನಿಗೋಳ, ಗ್ರಾಮಸ್ಥರಾದ ಯಮನೂರಸಾಬ್ ಕಂಬಾರ, ಫಕೀರಪ್ಪ, ರಮೇಶ್, ಕರೀಂಸಾಬ್ ,ಹುಸೇನಸಾಬ್, ನಾಗಪ್ಪ, ಸುರೇಶ್ ಒತ್ತಾಯಿಸಿದ್ದಾರೆ.



ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಕುಷ್ಟಗಿ ಆಹಾರ ಇಲಾಖೆ ಶಿರಸ್ತೇದಾರ್ ಚನ್ನಬಸಪ್ಪ ಹಟ್ಟಿ, ಆಹಾರ ನಿರೀಕ್ಷಕ ರಮೇಶ ತಾಳಕೇರಿ ಪ್ರತಿಕ್ರಿಯಿಸಿ, ಗ್ರಾಮಸ್ಥರು ದಿಢೀರ್ ಪ್ರತಿಭಟನೆ ನಡೆಸಿದ್ದು, ಸಾರ್ವಜನಿಕರ ಅಹವಾಲು ಆಲಿಸಲಾಯಿತು. ಕೂಡಲೇ ತನಿಖೆ ನಡೆಸಿ ಪಡಿತರ ವಿತರಣೆಯಲ್ಲಿ ಲೋಪ ಎಸಗಿರುವುದು ಪ್ರಾಥಮಿಕವಾಗಿ ಕಂಡು ಬಂದಿದ್ದು, ತಪ್ಪಿತಸ್ಥ ಹಂಚಿಕೆದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಅವರನ್ನು ತಕ್ಷಣವೇ ಅಮಾನತುಗೊಳಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

ಹಳೆಯ ಹಸ್ತಪ್ರತಿ ದಾಖಲೆಗಳ ಸಂಗ್ರಹವಿದ್ದರೆ ಮಾಹಿತಿ ನೀಡಿ

ರಾಯಚೂರು: ಜಿಲ್ಲಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು, ಶಾಸನಗಳು ಹಾಗೂ ದಾಖಲೆಗಳ ಸಂಗ್ರಹವಿದ್ದಲ್ಲಿ ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಸಾರ್ವಜನಿಕರಲ್ಲಿ ಮನವಿ ಮಾಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜ್ಞಾನ ಭಾರತ ಮಿಷನ್ ಯೋಜನೆಯಡಿ ರಾಷ್ಟ್ರೀಯ ಹಸ್ತಪ್ರತಿ ಸಮೀಕ್ಷಾ ಕಾರ್ಯಕ್ಕೆ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಪ್ರಾಚೀನ ಕಾಲದ ಶಾಸನಗಳು, ಹಸ್ತ ಪ್ರತಿಗಳು, ಕೈಬರಹಗಳನ್ನು ತಂತ್ರಜ್ಞಾನ ಮೂಲಕ ಶಾಶ್ವತವಾಗಿ ಉಳಿಸಲು ಅತ್ಯಂತ ಪುರಾತನ, ಹಳೆಯ ದಾಖಲೆಗಳ ಸಮೀಕ್ಷೆ, ಸಂರಕ್ಷಣೆ, ರಕ್ಷಣೆ ಡಿಜಟಲೀಕರಣಗೊಳಿಸಲು ಸರ್ಕಾರವು ಜ್ಞಾನ ಭಾರತಂ ಮಿಷನ್ ಯೋಜನೆ ಜಾರಿಗೆ ತಂದಿದೆ ಎಂದರು.

ರಾಷ್ಟ್ರ, ರಾಜ್ಯ, ಕರ್ನಾಟಕದ ಶ್ರೀಮಂತ ಸಂಸ್ಕೃತ ಪರಂಪರೆಯನ್ನು ಒಂದೇ



ರಾಷ್ಟ್ರೀಯ ವೇದಿಕೆ ಮೂಲಕ ಸಾರ್ವಜನಿಕ ಪ್ರವೇಶವನ್ನು ಒದಗಿಸಿ ಭವಿಷದ ಪೀಳಿಗೆಗೆ ಅವುಗಳ ಜ್ಞಾನ ಸಂಪತ್ತಿನ ಸಂರಕ್ಷಣೆ ಮತ್ತು ಬಳಕೆಗೆ ಹಸ್ತ ಪ್ರತಿಗಳ ಸಂರಕ್ಷಣೆ ಹಾಗೂ ಡಿಜಟಲೀಕರಣಗೊಳಿಸಲಾಗುತ್ತಿದೆ ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಶಿವಾನಂದ, ಜಿಲ್ಲಾ ಪುರಾತತ್ವ ಸಂರಕ್ಷಣಾಧಿಕಾರಿ ಶಿವಬಸವ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಜಿಲ್ಲಾ ವ್ಯವಸ್ಥಾಪಕ ಜಿ.ಹರೀಶ ಸೇರಿದಂತೆ ಇತರರಿದ್ದರು.

ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡಿ: ಶ್ರೀ

ಕಲಬುರಗಿ: ವಿದ್ಯೆಯು ನಿರಂತರ ಪ್ರಯತ್ನದಿಂದ ಪ್ರಾಪ್ತಿಯಾಗುತ್ತದೆ. ಶಿಕ್ಷಣದ ಜೊತೆಗೆ ಸಂಸ್ಕಾರವೂ ಅತ್ಯಂತ ಮುಖ್ಯವಾಗಿದ್ದು, ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಮಕ್ಕಳು ತೊಡಗಿಸಿಕೊಳ್ಳಬೇಕು ಎಂದು ಮಳಖೇಡದ ಮೂಲಾಧಾರ ಸಂಸ್ಥಾನ ಬೃಹನ್ಮಠದ ಬ್ರಹ್ಮ ಅಭಿನವ ಕಾರ್ತಿಕೇಶ್ವರ ಶಿವಾಚಾರ್ಯರು ಕರೆ ನೀಡಿದರು.

ನಗರದ ಶರಣ ಸಿರಸಗಿಯಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಅಕ್ಷರಾಭ್ಯಾಸ ಮತ್ತು ವಿದ್ಯಾರಂಭ' ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಮಕ್ಕಳಿಗೆ ಸಹನ ಶಕ್ತಿಯೇ ಸಾದ್ಯ ಪ್ರಾಪ್ತಿ ಎಂಬ ವಾಣಿಯನ್ನು ಪ್ರಥಮ ಪಾಠವಾಗಿ ಬೋಧಿಸಿದ ಶ್ರೀಗಳು, ಮನುಷ್ಯ ತನ್ನ ಕರ್ಮವನ್ನು ನಂಬಬೇಕು. ವಧು-ವರರಿಗೆ ವಿವಾಹದ ವೇಳೆ 'ಸಾವಧಾನ' (ಸಹನೆ) ಎಂದು ಏಕೆ ಹೇಳುತ್ತಾರೆ ಎಂಬುದರ ಆಧ್ಯಾತ್ಮಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ವಿವರಿಸಿದರು. ಮುಂಬರುವ ದಿನಗಳಲ್ಲಿ ಭಾರತವು ಜ್ಞಾನ ಮತ್ತು ಸಂಸ್ಕಾರದ ಬಲದಿಂದ ಜಗತ್ತನ್ನು ಮುನ್ನಡೆಸುವ ಅದ್ಭುತ ಶಕ್ತಿಯಾಗಿ ಹೊರಹೊಮ್ಮಲಿದೆ ಎಂದು ಆಶಿಸಿದರು.

ಪಂಚಮುಖಿ ಶಿಕ್ಷಣದ ಮಹತ್ವ: ಕಾರ್ಯಕ್ರಮದಲ್ಲಿ ದಿಕ್ಸೂಚಿ ನುಡಿಗಳನ್ನಾಡಿದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕರೆಸ್ಪಾಂಡೆಂಟ್ ಕೃಷ್ಣ ಜೋಶಿ, ರಾಷ್ಟ್ರೋತ್ಥಾನ ಪರಿಷತ್ ಸಮಾಜದಲ್ಲಿ ಹಮ್ಮಿಕೊಂಡಿರುವ ವಿವಿಧ ಪ್ರಕಲ್ಪಗಳ ಕುರಿತು



» ರಾಷ್ಟ್ರೋತ್ಥಾನದಲ್ಲಿ ಅಕ್ಷರಾಭ್ಯಾಸ

ಮಾಹಿತಿ ನೀಡಿದ ಅವರು, 'ಸಾಧನ' ಮತ್ತು 'ತಪಸ್' ಯೋಜನೆಯಡಿ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಮಕ್ಕಳಿಗೆ ಜೆಇಇ ಹಾಗೂ ನೀಟ್ ಉಚಿತ ತರಬೇತಿ ನೀಡಲಾಗುತ್ತಿದೆ. ರಾಜ್ಯದಲ್ಲಿ ಹೊಸದಾಗಿ ಶಾಲೆಗಳು ಸ್ಥಾಪನೆಯಾಗುತ್ತಿದ್ದು, ಒಟ್ಟು ಸಿಬಿಎಸ್‌ಇ ಶಾಲೆಗಳ ಸಂಖ್ಯೆ 20ಕ್ಕೆ ಏರಿಕೆಯಾಗಿದೆ ಎಂದರು.

ಶಾಲೆಯ ಶಿಕ್ಷಕ ಸಂಜೀವ ಹಡಪದ ಸ್ವಾಗತಿಸಿದರು. ಶಿಕ್ಷಕಿ ಶಾಂತಕುಮಾರಿ ಎಂ. ನಿರೂಪಿಸಿದರು. ಪ್ರಧಾನಾಚಾರ್ಯ ಲಾಲ ದೀಪ್ ಶ್ರೀನಿವಾಸನ್ ವಂದಿಸಿದರು. ಶಾಂತಿ ಮಂತ್ರ ಪಠಣದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಸಮಾರಂಭದಲ್ಲಿ ಶಾಲೆಯ ಆಡಳಿತಾಧಿಕಾರಿಗಳು, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

ತ್ಯಾಜ್ಯ ಸಂಸ್ಕರಿಸಿ ನೀಡದಿದ್ದರೆ ನೀರು, ವಿದ್ಯುತ್ ಕಟ್: ಡಿಸಿ ಡಾ.ಸುರೇಶ

ಕೊಪ್ಪಳ: ಸುಪ್ರೀಂ ಕೋರ್ಟ್ ಆದೇಶ ಅನುಸಾರ ಜಿಲ್ಲೆಯ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಸ್ತು ವಿಲೇವಾರಿಗೆ ಸೂಕ್ತ ಕ್ರಮ ಕೈಗೊಂಡು, ತ್ಯಾಜ್ಯ ಸಂಸ್ಕರಿಸದವರಿಗೆ ನೀರು ಹಾಗೂ ವಿದ್ಯುತ್ ಸ್ಥಗಿತಗೊಳಿಸಲು ಅಗತ್ಯ ಕ್ರಮ ಜರುಗಿಸುವಂತೆ ಡಿಸಿ ಡಾ.ಸುರೇಶ ಬಿ. ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮಗಳು-2026ರ ಕುರಿತು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಮತ್ತು ಇತರೆ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಘನ ತ್ಯಾಜ್ಯ ವಸ್ತು ವಿಲೇವಾರಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ನ ನಿರ್ದೇಶನದ ರೀತ್ಯಾ, ಕೇಂದ್ರ ಸರ್ಕಾರವು ಏ.1ರಿಂದ ಅನ್ವಯವಾಗುವಂತೆ 'ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮಗಳ'ನ್ನು ಜಾರಿಗೊಳಿಸಲಾಗಿದ್ದು, ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲು ಕ್ರಮ ವಹಿಸಬೇಕು. ಸರಕಾರದ ಆದೇಶದನುಸಾರ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸದಂತೆ ಜಿಲ್ಲಾ ಮಟ್ಟದ ವಿಜಿಲನ್ಸ್ ಕಮೀಟಿ ಹಾಗೂ ವಿಶೇಷ ಶೆಲ್ ರಚಿಸಲಾಗಿದ್ದು, ತ್ಯಾಜ್ಯ ಸಂಸ್ಕರಣೆಯ ಬಗ್ಗೆ ಸಮಿತಿಯ ಆದೇಶ ಪಾಲಿಸಬೇಕೆಂದು ನಿರ್ದೇಶಿಸಿದರು. ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಟಿ.ಲಿಂಗರಾಜು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರಗೌಡ ಪಾಟೀಲ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಜಗದೀಶ ಇದ್ದರು.

ವಿದ್ಯಾರ್ಥಿಗಳ ಜೀವನಕ್ಕೆ ಶಿಕ್ಷಣವೇ ರಾಮಬಾಣ

ಯಲಬುರ್ಗಾ: ಪ್ರತಿಯೊಬ್ಬ ವಿದ್ಯಾರ್ಥಿಗಳು ಜೀವನದಲ್ಲಿ ಏನನ್ನಾದರೂ ಸಾಧಿಸಬೇಕಾದರೆ ಶಿಕ್ಷಣವೇ ರಾಮಬಾಣವಾಗಿದೆ ಎಂದು ಮುಸ್ಲಿಂ ಕಮಿಟಿ ತಾಲೂಕು ಅಧ್ಯಕ್ಷ ಎಚ್.ಎಚ್.ಹಿರೇಮನಿ ಹೇಳಿದರು.

ಪಟ್ಟಣದ ಶಾದಿಮಹಲ್‌ನಲ್ಲಿ ಭಾನುವಾರ ಕುಕನೂರ-ಯಲಬುರ್ಗಾ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ, ಮುಸ್ಲಿಂ ಕಮಿಟಿ, ಅಹಲೇ ಸುನ್ನತ್ (ಸುನ್ನಿ) ಜಮೀಯಾಮಸೀದಿಕಮೀಟಿಹಾಗೂ ಹಜರತ್ ಅಶ್ರಫ್ ಅಲಿ ವಲಿಯವರ ದರ್ಗಾ ಕಮಿಟಿಯ ಸಹಯೋಗದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ನಿರಂತರ ಅಭ್ಯಾದಿಂದ ಹೆಚ್ಚು ಅಂಕಗಳನ್ನು ಗಳಿಸಿಕೊಂಡು ಉನ್ನತ ಹುದ್ದೆಗಳನ್ನು ಪಡೆಯುವ ಮೂಲಕ ಸಮಾಜದಲ್ಲಿ ಆದರ್ಶ ವಿದ್ಯಾರ್ಥಿಗಳಾಗಿ ಇತರರಿಗೆ ಮಾದರಿಯಾಗಬೇಕು ಎಂದರು.



ಜಿಲ್ಲಾ ಮುಸ್ಲಿಂ ನೌಕರರ ಸಂಘದ ಅಧ್ಯಕ್ಷ ಮುಕ್ತುಂಸಾಬ ಜಮಾದಾರ ಮಾತನಾಡಿ, ನಮ್ಮ ಸಮಾಜ ಭಾಂಧವರು ನಮ್ಮ ಮಕ್ಕಳಿಗೆ ಹೆಚ್ಚು ಶಿಕ್ಷಣ ಕೊಡಿಸುವ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಮುಸ್ಲಿಂ ನೌಕರರ ಸಂಘದ ಅಧ್ಯಕ್ಷ ಖಾದರಸಾಬ ನೂರಭಾಷಾ ಹಾಗೂ ಸಮಾಜ ಮುಖಂಡ ಎಂ.ಎಫ್. ನದಾಫ್ ಮತ್ತು ಅರಣ್ಯಾಧಿಕಾರಿ ಶರೀಫ್ ಕೊತ್ವಾಲ್ ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸಲಾಯಿತು.

ಸಮಾಜದ ಇರ್ಷಾದ್ ಖಾಜಿ ಸಾನಿಧ್ಯ ವಹಿಸಿದ್ದರು. ಅತಿಥಿಗಳಾಗಿ ಸಿಆರ್‌ಪಿ ಹುಸೇನಸಾಬ ಭಾಗವಾನ್, ಅಕ್ತರಸಾಬ ಖಾಜಿ, ಬಾಬುಸಾಬ ಕುಂದಗೋಳ, ಅಜ್ಮೀರಸಾಬ ನಂದಾಪೂರ, ಶ್ಯಾಮೀದಸಾಬ ಮುಲ್ಲಾ, ಬಾಬುಸಾಬ ಮಂಡಲಗೇರಿ, ಮೆಹಬೂಬಸಾಬ ಮಕಾಂದರ, ಚಿನ್ನುಭಾಷ ಅತ್ತಾರ, ರಷೀದಸಾಬ ಹಣಜಗಿ, ರಫೀಸಾಬ ಉಮಚಗಿ, ಶಿರಸ್ತೇದಾರ ಎಂ.ಡಿ.ಮುಸ್ತಾಫ, ಭಾಷಾ ಅಲಿ, ಶ್ಯಾಮೀದಸಾಬ ಮುಲ್ಲಾ, ಖಾಜಸಾಬ ಅಮರಾವತಿ, ರಿಯಾಜ್ ಖಾಜಿ, ಪೀರಸಾಬ ದಫೇದ, ಪಾಷಾಸಾಬ ಕನಕಗಿರಿ ಇತರರಿದ್ದರು.

ಕಿರುಸುದ್ದಿ

ಕೆ.ಸಾನಿಕಗೆ ಕನ್ನಡ ರತ್ನ ಪುರಸ್ಕಾರ

ಹಗರಿಬೊಮ್ಮನಹಳ್ಳಿ: ತಾಲೂಕಿನ ವಲ್ಲಬಾಪುರ ಗ್ರಾಮದ ಎಂ.ಪಿ.ನಾಗಮ್ಮ ಕೊಟ್ರಗೌಡ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಕೆ.ಸಾನಿಕಗೆ ಕನ್ನಡ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. 2025-26 ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ಕನ್ನಡ ಭಾಷೆ ವಿಷಯದಲ್ಲಿ 125ಕ್ಕೆ 123 ಅಂಕ ಪಡೆದು ಸಾಧನೆಗೈದ ನಿಮಿತ್ತ ನವ ಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ ಅರಕ್ಕಳ್ಳಿ ಹರಪನಹಳ್ಳಿ ನಿವಾಸಿ ಕೆ.ಸಾನಿಕ ನಾಗರಾಜ ವರಲಹಳ್ಳಿ ಇವರನ್ನು ಸನ್ಮಾನಿಸಿ ಕನ್ನಡ ರತ್ನ ಪ್ರಶಸ್ತಿ ನೀಡಲಾಯಿತು. ಈ ವೇಳೆ ಶಾಲೆ ಕನ್ನಡ ಶಿಕ್ಷಕ ಎ.ಎಂ ಸಿದ್ದಲಿಂಗಯ್ಯ ಮಾತನಾಡಿ, ಹರಪನಹಳ್ಳಿ ನವ ಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರಶಸ್ತಿ ಪುರಸ್ಕಾರ ನೀಡುತ್ತಿರುವುದು ಕನ್ನಡದ ಬೆಳವಣಿಗೆಗೆ ಸಹಕಾರಿಯಾಗಲಿದೆ. ಸಂಸ್ಥೆಯವರು ಹೀಗೆ ಕನ್ನಡದ ಪ್ರತಿಭೆ ಗುರುತಿಸಿ ಕನ್ನಡವನ್ನು ಪ್ರೋತ್ಸಾಹಿಸುವ ಹೆಚ್ಚೆಚ್ಚು ಮಾಡಲಿ ಎಂದು ಶುಭ ಕೋರಿದರು. ಈ ವೇಳೆ ಸಂಸ್ಥೆ ಅಧ್ಯಕ್ಷ ಕೆ.ಸ್ವಪ್ನ, ಕಾರ್ಯದರ್ಶಿ ಮಲ್ಲಿಕಾರ್ಜುನ, ನಿವೃತ್ತ ಅಧಿಕಾರಿ ಡಿ.ಕೊಟ್ರೇಶ, ಶಿಕ್ಷಕ ಸಂಘದ ಮುಕುಲ್ ಭಾಷಾ ಕೆ.ನಾಗರಾಜ ವರಲಹಳ್ಳಿ ಸೇರಿದಂತೆ ಇತರರು ಇದ್ದರು.

ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಆನಂದ ಆಯ್ಕೆ

ಹೂವಿನಹಡಗಲಿ: 2026-31ನೇ ಸಾಲಿನ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಚುನಾವಣೆ ಮೂಲಕ ಇತ್ತೀಚೆಗೆ ಇಲ್ಲಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ನಡೆಯಿತು.ನೂತನ ಅಧ್ಯಕ್ಷರಾಗಿ ಯು.ಆನಂದ,



ಪ್ರಧಾನ ಕಾರ್ಯದರ್ಶಿಯಾಗಿ ಜಿ.ಜಗದೀಶ, ಖಜಾಂಚಿ ರೇಣುಕಾ ವೈ., ಉಪಾಧ್ಯಕ್ಷರಾಗಿ ಮುಕ್ತಿಯರ್ ಅಹಮ್ಮದ್, ಉಪಾಧ್ಯಕ್ಷರು (ಮಹಿಳೆ) ಎನ್.ಡಿ.ರೇಖಾ, ಸಹ ಕಾರ್ಯದರ್ಶಿ ಮೈಲಾರ ಕೋಟೆಪ್ಪ ಆಯ್ಕೆ ಆಗಿದ್ದಾರೆ.ಕ್ಷೇತ್ರ ಸಮನ್ವಯಾಧಿಕಾರಿ ಎ.ಕೋಟೆಪ್ಪ, ಶಿಕ್ಷಣ ಸಂಯೋಜಕ ಮಿಟ್ಯಾನಾಯ್ಕ್, ಕೋರಿ ವಿಶ್ವನಾಥ, ಹನುಮಂತಪ್ಪ, ಮಧು, ಪ್ರಕಾಶ ಚುನಾವಣಾ ಪ್ರಕ್ರಿಯೆ ನಿರ್ವಹಿಸಿದರು.

ಮನೆ ಮೇಲ್ಛಾವಣಿ ಕುಸಿತ



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದಲ್ಲಿ ಕಳೆದ ಮೂರು ದಿನಗಳಿಂದ ಮಳೆ ಸುರಿಯುತ್ತಿದ್ದು ಕಚ್ಚಾ ಮನೆಗಳು ಮಳೆ ನೀರಿಗೆ ಸೋರುತ್ತಿವೆ.ಶನಿವಾರ ಬಿದ್ದ ಕೃತಿಕ ಮಳೆಗೆ ಎಮ್ಮಿಗನೂರಿನ 5ನೇ ವಾರ್ಡ್‌ನಲ್ಲಿ ಕಚ್ಚಾ ಮನೆಯ ಮೇಲ್ಛಾವಣಿ ಕುಸಿದು ಬಿದ್ದಿದೆ. ಈ ಮನೆ ಗ್ರಾಮದ ತಳವಾರ ಪೇಟೆಯ ಫಕೀರಮ್ಮ ಸೇರಿದ್ದು ಎಂದು ತಿಳಿದು ಬಂದಿದೆ. ಯಾವುದೇ ರೀತಿಯ ಪ್ರಾಣಪಾಯವಾಗಿಲ್ಲ ನಿರಂತರ ಮಳೆ ಸುರಿಯುವಿಕೆಯಿಂದಾಗಿ ಕಚ್ಚಾ ಮನೆಗಳು ಬೀಳುವ ಸಂಭವ ಹೆಚ್ಚಿದೆ. ಕಚ್ಚಾ ಮನೆಗಳಲ್ಲಿ ವಾಸಿಸುವವರು ಎಚ್ಚರವಿರಬೇಕಿದೆ.

ನಿಧನ ಸುದ್ದಿ

ಗುರುಬಸಮ್ಮ ಹಂಚಿನಾಳ



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ವಿ. ಗುರುಬಸಮ್ಮ ಎರೆ ಹಂಚಿನಾಳ (81) ನಿಧಾನರಾದರು. ಮೃತರು ಇಬ್ಬರು ಪುತ್ರರು, ಅಪಾರ ಬಂಧು ಬಳಗ ಅಗಲಿದ್ದಾರೆ.



ಹಗರಿಬೊಮ್ಮನಹಳ್ಳಿ: ತಾಲೂಕಿನ ವಲ್ಲಬಾಪುರ ಗ್ರಾಮದ ಎಂ.ಪಿ.ನಾಗಮ್ಮ ಕೊಟ್ರಗೌಡ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಕೆ.ಸಾನಿಕಗೆ ಕನ್ನಡ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಶಾಲೆ ಕನ್ನಡ ಶಿಕ್ಷಕ ಎ.ಎಂ ಸಿದ್ದಲಿಂಗಯ್ಯ, ಸಂಸ್ಥೆ ಅಧ್ಯಕ್ಷ ಕೆ.ಸ್ವಪ್ನ, ಕಾರ್ಯದರ್ಶಿ ಮಲ್ಲಿಕಾರ್ಜುನ, ನಿವೃತ್ತ ಅಧಿಕಾರಿ ಡಿ.ಕೊಟ್ರೇಶ, ಶಿಕ್ಷಕ ಸಂಘದ ಮುಕುಲ್ ಭಾಷಾ ಕೆ.ನಾಗರಾಜ ವರಲಹಳ್ಳಿ ಸೇರಿದಂತೆ ಇತರರು ಇದ್ದರು.

ಕಲಾ ಮೇಳ: ಡೊಳ್ಳು ಕುಣಿತ ಪ್ರದರ್ಶನ ಅದ್ಧೂರಿ

ಹೂವಿನಹಡಗಲಿ: ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಿತ ಟ್ರಸ್ಟ್ 11ನೇ ರಾಷ್ಟ್ರೀಯ ನೃತ್ಯ ಕಲಾ ಮೇಳದಲ್ಲಿ ತಾಲೂಕಿನ ವರಕನಹಳ್ಳಿ ಗ್ರಾಮದ ಬೀರಲಿಂಗೇಶ್ವರ ಡೊಳ್ಳು ಭಜನಾ ಸಂಘದಿಂದ ಭಾಗವಹಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿ ಸೈನಿಸಿಕೊಂಡಿದ್ದಾರೆ.

ಕಲಾ ಬಳಗದ ಸದಸ್ಯ ಜಂಬಣ್ಣ ಮಾತನಾಡಿ, ಕರ್ನಾಟಕದಾದ್ಯಂತ ಕಲೆ, ಜಾನಪದ ಮತ್ತು ಸಾಹಿತ್ಯ ಉತ್ತೇಜಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರಂತರವಾಗಿ ವಿವಿಧ ಸಾಂಸ್ಕೃತಿಕ ಮೇಳಗಳು, ಯುವಜನೋತ್ಸವಗಳು ಮತ್ತು ಪ್ರದರ್ಶನಗಳನ್ನು ಆಯೋಜಿಸುತ್ತದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇಂತಹ ಕಲಾ ಮೇಳಗಳು, ನಾಟಕೋತ್ಸವಗಳು, ಸಾಹಿತ್ಯ ಮೇಳಗಳು ನಡೆಯುತ್ತಿರುತ್ತವೆ. ಇದೊಂದು ನಮಗೆ ಖುಷಿ ತರುವಂತಹ ವಿಚಾರ ಗ್ರಾಮೀಣ ಭಾಗಗಳ ಕಲೆ ಪ್ರೋತ್ಸಾಹಿಸುವಂತಹ ಕಲಾ ಮೇಳ ನಿಜಕ್ಕೂ ಗ್ರೇಟ್ ಎಂದರು.

75ನೇ ರಾಜ್ಯಮಟ್ಟದ ಕಲಾ ಪ್ರತಿಭೋತ್ಸವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಾರ್ಯಕ್ರಮ ಜಗಮಗಗೊಂಡಿತು.

ಈ ವೇಳೆ ವರಕನಹಳ್ಳಿ ಗ್ರಾಮದ ಶ್ರೀ ಬೀರಲಿಂಗೇಶ್ವರ ಡೊಳ್ಳು ಭಜನಾ ಸಂಘದ ಸದಸ್ಯರಾದ ಜಂಬಣ್ಣ, ಈರಪ್ಪ, ಗೋಣೆಪ್ಪ, ಕರಿಬಸಪ್ಪ, ಗೋಣೆಪ್ಪ ತಳವಾರ, ಸಂಘದ ಸರ್ವ ಸದಸ್ಯರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.



ಹೂವಿನಹಡಗಲಿ: ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಿತ ಟ್ರಸ್ಟ್ 11ನೇ ರಾಷ್ಟ್ರೀಯ ನೃತ್ಯ ಕಲಾ ಮೇಳದಲ್ಲಿ ತಾಲೂಕಿನ ವರಕನಹಳ್ಳಿ ಗ್ರಾಮದ ಬೀರಲಿಂಗೇಶ್ವರ ಡೊಳ್ಳು ಭಜನಾ ಸಂಘದಿಂದ ಭಾಗವಹಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿ ಸೈನಿಸಿಕೊಂಡಿದ್ದಾರೆ.

ವಿಪತ್ತು ನಿರ್ವಹಣಾ ಅಣಕು ಪ್ರದರ್ಶನ | ಡಿಎಸ್ಪಿ ತಿಪ್ಪೇಸ್ವಾಮಿ ಹೇಳಿಕೆ

ರಕ್ಷಣಾ ಕಾರ್ಯದಲ್ಲಿ ಸಮನ್ವಯತೆ ಮುಖ್ಯ

ಬಳ್ಳಾರಿ: ಕೈಗಾರಿಕೆಗಳು ಮತ್ತು ಕಾರ್ಖಾನೆಗಳಲ್ಲಿ ಅನಿರೀಕ್ಷಿತವಾಗಿ ಸಂಭವಿಸುವ ಬೆಂಕಿ ಅವಘಡಗಳನ್ನು ಎದುರಿಸಲು, ಸಾರ್ವಜನಿಕ ಆಸ್ತಿ-ಪಾಸ್ತಿ ನಷ್ಟವನ್ನು ತಡೆಯಲು ಹಾಗೂ ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರನ್ನು ಮತ್ತು ಸಿಬ್ಬಂದಿಗಳನ್ನು ಸುರಕ್ಷಿತವಾಗಿ ರಕ್ಷಿಸಲು ವಿಪತ್ತು ನಿರ್ವಹಣಾ ಅಣಕು ಪ್ರದರ್ಶನ ಅಗತ್ಯ ಎಂದು ಬಳ್ಳಾರಿ ಡಿಎಆರ್‌ನ ಡಿಎಸ್ಪಿ ಜಿ.ಎಂ.ತಿಪ್ಪೇಸ್ವಾಮಿ ಹೇಳಿದರು.

ತಾಲೂಕಿನ ಅಮರಾಪುರ ಗ್ರಾಮದ ಡಿ.ಎಂ. ಗ್ಲೋಬಲ್ ಕ್ಲಾತಿಂಗ್ ಕಂಪನಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಗೃಹರಕ್ಷಕ ದಳ, ಪೌರರಕ್ಷಣೆ ಮತ್ತು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಆಶ್ರಯದಲ್ಲಿ ವಿಪತ್ತು ನಿರ್ವಹಣೆ ಕುರಿತು ಹಮ್ಮಿಕೊಂಡಿದ್ದ ಅಣಕು ಪ್ರದರ್ಶನದಲ್ಲಿ ಮಾತನಾಡಿ, ಕಡಿಮೆ ಸಮಯದಲ್ಲಿ, ಕನಿಷ್ಠ ನಷ್ಟದೊಂದಿಗೆ ಜನರನ್ನು ರಕ್ಷಿಸುವುದು ಅಣಕು ಪ್ರದರ್ಶನದ ಮುಖ್ಯ ಉದ್ದೇಶ. ಇಂತಹ ಸಂದರ್ಭದಲ್ಲಿ ತ್ವರಿತ ಕಾರ್ಯಾಚರಣೆ ಮತ್ತು ಇಲಾಖೆಗಳ ಸಮನ್ವಯತೆಯೂ ಅಗತ್ಯ ಎಂದರು.

ಯಾವುದೇ ತುರ್ತು ಸಂದರ್ಭ ಎದುರಾದಾಗ ಕಾರ್ಖಾನೆಯ ಭದ್ರತಾ ಸಿಬ್ಬಂದಿಯ ಪಾತ್ರ ಅತ್ಯಂತ ಪ್ರಮುಖವಾಗಿರುತ್ತದೆ. ಅಲಾರಂ ಮೊಳಗಿದ ತಕ್ಷಣ ರ್‍ಯಾಲಿ ಪೋಸ್ಟ್‌ನಲ್ಲಿ ಸಿಬ್ಬಂದಿಗಳು ಹೇಗೆ ಜಮಾಯಿಸಬೇಕು, ಕಾರ್ಖಾನೆಯ ಎಡಭಾಗ, ಬಲಭಾಗ, ಮುಂಭಾಗ ಹಾಗೂ ಮುಖ್ಯ ದ್ವಾರಗಳಲ್ಲಿ ಯಾರ್ಯಾರು ಕರ್ತವ್ಯ ನಿರ್ವಹಿಸಬೇಕು ಎಂಬ ಬಗ್ಗೆ ಚಾರ್ಟ್



ಸಿದ್ಧವಿರಬೇಕು ಎಂದು ವಿವರಿಸಿದರು.

ಗೃಹರಕ್ಷಕ ದಳದ ಜಿಲ್ಲಾ ಸಮಾದೇಷ್ಟ ವೈ. ಶೇಕ್ ಸಾಬ್ ಮಾತನಾಡಿ, ಇತ್ತೀಚಿನ ಜಾಗತಿಕ ವಿದ್ಯಮಾನಗಳಾದ ಉಕ್ರೇನ್, ಇರಾನ್ ಮತ್ತು ಇಸ್ರೇಲ್ ದೇಶಗಳಲ್ಲಿನ ಪರಿಸ್ಥಿತಿಗಳನ್ನು ಗಮನಿಸಿದಾಗ, ಅಗ್ನಿ ಸುರಕ್ಷತೆ ಮತ್ತು ವಿಪತ್ತು ನಿರ್ವಹಣಾ ಮೋಕ್ ಡ್ರಿಲ್‌ಗಳ ಮಹತ್ವ ಏನೆಂಬುದು ನಮಗೆ ಅರಿವಾಗುತ್ತದೆ. ಇದು ಕೇವಲ ಒಂದು ತಾಲೀಮು ಅಲ್ಲ, ದೇಶದ ರಕ್ಷಣೆ ಮತ್ತು ಭವಿಷ್ಯಕ್ಕೆ ಭದ್ರವಾದ ಅಡಿಪಾಯವಾಗಿದೆ ಎಂದು ಹೇಳಿದರು.

ಪ್ರಕೃತಿ ವಿಕೋಪಗಳಾದ ಭೂಕಂಪ, ನೆರೆಹಾವಳಿಗಳಂತಹ ನೈಸರ್ಗಿಕ ವಿಕೋಪಗಳು ಒಂದು ಕಡೆಯಾದರೆ, ಯುದ್ಧದಂತಹ ಮಾನವ ನಿರ್ಮಿತ ಆಪತ್ತುಗಳು ಎದುರಾದಾಗ ಇಂತಹ ಸಣ್ಣಪುಟ್ಟ ಮೋಕ್ ಡ್ರಿಲ್‌ಗಳು ನಮ್ಮ ಜೀವ ರಕ್ಷಣೆಗೆ ಧಾವಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪರಿಣಿತ ಪರಮೇಶ ಅವರು ಮಾತನಾಡಿ, ನಾಗರಿಕರ ಸುರಕ್ಷತೆ ಹಾಗೂ ಸನ್ನದ್ಧತೆಯನ್ನು ಪರಿಶೀಲಿಸಲು ವರ್ಷಕ್ಕೆ ಎರಡು ಬಾರಿ (ಏಪ್ರಿಲ್ ಹಾಗೂ ನವೆಂಬರ್‌ನಲ್ಲಿ) ಏರ್ ರೈಡ್ ಅಟ್ಯಾಕ್ (ವಾಯುದಾಳಿ) ಮತ್ತು ಬ್ಯಾಕ್ ಔಟ್ ಮೋಕ್ ಡ್ರಿಲ್‌ಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಅಣಕು ಪ್ರದರ್ಶನದಲ್ಲಿ ಗಾಯಗೊಂಡವರನ್ನು ತಕ್ಷಣ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ ಪ್ರಥಮ ಚಿಕಿತ್ಸೆ ನೀಡುವುದು, ಕಾನೂನು ಸುವ್ಯವಸ್ಥೆ ಕಾಪಾಡುವುದು ಮತ್ತು ಆರೋಗ್ಯ ದೃಷ್ಟಿಯಿಂದ ಕೈಗೊಳ್ಳಬೇಕಾದ ತುರ್ತು ಕ್ರಮಗಳ ಬಗ್ಗೆ ಪ್ರಾಯೋಗಿಕವಾಗಿ ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ಅಗ್ನಿಶಾಮಕ ದಳ ಹಾಗೂ ಗೃಹರಕ್ಷಕ ದಳದ ಸಿಬ್ಬಂದಿ ಜಂಟಿಯಾಗಿ ಹಮ್ಮಿಕೊಂಡಿದ್ದ ವಿವಿಧ ರಕ್ಷಣಾ ಕಾರ್ಯಾಚರಣೆಗಳ ಪ್ರಾತ್ಯಕ್ಷಿಕೆಯನ್ನು ಸಾರ್ವಜನಿಕರು ಆಸಕ್ತಿಯಿಂದ ವೀಕ್ಷಿಸಿದರು.

ಈ ವೇಳೆ ಬಳ್ಳಾರಿ ತಾಲೂಕು ಉಪ ತಹಶೀಲ್ದಾರ್ ವಿನಾಯಕಗೌಡ, ಗೃಹರಕ್ಷಕ ದಳದ ಅಧಿಕಾರಿ ಎಚ್.ತಿಪ್ಪೇಸ್ವಾಮಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಅಧಿಕಾರಿ ಹನುಮನಗೌಡ ಪೊಲೀಸ್ ಪಾಟೀಲ, ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕ ಮಹಾಂತೇಶ ಕಂಚಿನಮಠ, ಜಿಲ್ಲಾ ಉದ್ಯೋಗಾಧಿಕಾರಿ ಹಟ್ಟಪ್ಪ ಸೇರಿದಂತೆ ಇತರರಿದ್ದರು.

ಶಿಕ್ಷಣ ಸಂಸ್ಥೆಗೆ ಜಾಗ ನೀಡಲು ಸಿದ್ಧ: ಗವಿಯಪ್ಪ

ವಿಜಯನಗರ: ಇತರೆ ಸಮಾಜಗಳು ಶಿಕ್ಷಣ ಸಂಸ್ಥೆಗಳಿಗೆ ಒತ್ತು ನೀಡಿದಂತೆ ಕುರುಬ ಸಮಾಜ ಶಿಕ್ಷಣ ಸಂಸ್ಥೆಗಳನ್ನು ತೆರೆದರೆ ಅದಕ್ಕೆ ಬೇಕಾದ ಸರ್ಕಾರಿ ಭೂಮಿ ಒದಗಿಸಿಕೊಡಲು ಸಿದ್ಧ ಎಂದು ಶಾಸಕ ಎಚ್.ಆರ್.ಗವಿಯಪ್ಪ ಭರವಸೆ ನೀಡಿದರು.

ಜಿಲ್ಲಾ ಕುರುಬರ ಸಂಘ ಹಾಗೂ ಜಿಲ್ಲಾ ಕನಕನೌಕರರಸಂಘದಿಂದಹೊಸಪೇಟೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿ, ಲಿಂಗಾಯತ ಸಮಾಜ ಶಿಕ್ಷಣ ಸಂಸ್ಥೆಗಳಿಗೆ ಒತ್ತು ಕೊಟ್ಟಿದೆ, ಅದೇ ರೀತಿ ಕುರುಬ ಸಮಾಜ ಸಹ ಶಿಕ್ಷಣ ಸಂಸ್ಥೆ ತೆರೆಯಲು ಆದ್ಯತೆ ನೀಡಬೇಕು. ಕ್ಷೇತ್ರದಲ್ಲಿ ಆನಂದ ಸಿಂಗ್ ಮತ್ತು ನನ್ನ ಅವಧಿಯಲ್ಲಿ ಹಿಂದುಳಿದ ಸಮುದಾಯಗಳಿಗೆ ಏನು ಸಹಕಾರ ಬೇಕೋ ಅದನ್ನು ನೀಡುತ್ತಾ ಬಂದಿದ್ದೇವೆ ಎಂದರು.

ಮಾಜಿ ಸಚಿವ ಆನಂದಸಿಂಗ್ ಮಾತನಾಡಿ, ಈ ಭಾಗದಲ್ಲಿ ಹಕ್ಕಬುಕ್ಕರು ವಿಜಯನಗರ ಸಾಮ್ರಾಜ್ಯ ಕಟ್ಟಿದರು. ಅದರಂತೆ ಹಲವಾರು ವರ್ಷಗಳ ಹೋರಾಟದ ನಂತರ ಬಳ್ಳಾರಿಯಿಂದ ಬೇರ್ಪಟ್ಟು ವಿಜಯನಗರ ಜಿಲ್ಲೆಯಾಗಿದೆ. ಇದರಿಂದ ಈ ಭಾಗದ ಜನರಿಗೆ ಅನುಕೂಲವಾಗಿದೆ ಎಂದರು.

ವಿಜಯನಗರ ಗ್ಯಾರಂಟಿ ಯೋಜನೆ ಅನುಷ್ಠಾನ ಅಧ್ಯಕ್ಷ ಕುರಿ ಶಿವಮೂರ್ತಿ, ಹುಡಾ ಮಾಜಿ ಅಧ್ಯಕ್ಷ ಆರ್.ಕೊಟ್ರೇಶ, ಜಿಲ್ಲಾ ಕುರುಬರ ಸಂಘದ ಸಂಚಾಲಕ ಬುಡ್ಡಿ ಬಸವರಾಜ, ಹುಡಾ ಅಧ್ಯಕ್ಷ ಎಚ್.ಎನ್.ಎಫ್.ಮೊಹಮ್ಮದ್ ಇಮಾಂ ನಿಯಾಜಿ, ಹಂಪಿ ವಿವಿ ಪ್ರಾಧ್ಯಾಪಕ ಪ್ರೊ. ಎಫ್.ಟಿ.ಹಳ್ಳಿಕೇರಿ,ರಾಯಚೂರು ವಿವಿ ಪ್ರಾಧ್ಯಾಪಕ ಪ್ರೊ.ಕೆ.ವೆಂಕಟೇಶ, ಪ್ರೊ. ರಮೇಶ ಮಾತನಾಡಿದರು.

ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಅಯ್ಯಾಳಿ ತಿಮ್ಮಪ್ಪ ಅಧ್ಯಕ್ಷತೆ ವಹಿಸಿದ್ದರು. 7ನೇ ತರಗತಿ ವಿದ್ಯಾರ್ಥಿ ಅಂತಾರಾಷ್ಟ್ರೀಯ ಯೋಗ ಪ್ರತಿಭೆ ಶ್ಯಾಮ ಯೋಗ ಪ್ರದರ್ಶಿಸಿದ. 200 ಮಂದಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕುಲಗುರು ಕೊಟ್ರೇಶ ಒಡೆಯರ, ಗುರುನಾಥ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಮುಖಂಡರಾದ ಅಯ್ಯಾಳಿ ಮೂರ್ತಿ, ರಾಮಚಂದ್ರಗೌಡ, ಎಲ್.ಎಸ್.ಆನಂದ, ಕೆ.ರವಿಕುಮಾರ, ಸಾಲಿ ವೆಂಕಟೇಶ, ಎಚ್. ಮಹೇಶ, ವೈ.ಎರಿಸ್ವಾಮಿ, ಪಲ್ಲೇದ ಸಿದ್ದೇಶ, ಜಿಲ್ಲಾ, ತಾಲೂಕು ಕನಕ ನೌಕರರ ಸಂಘದ ಶಿವರಾಮಪ್ಪ, ಬತ್ತಿ ತಿಮ್ಮಪ್ಪ, ದ್ರಾಕ್ಷಾಯಿಣಿ, ಟಿ.ವಿಶ್ವನಾಥ, ಮಲ್ಲಿಕಾರ್ಜುನ, ಕ್ಯಾದಿಗಿಹಾಳ್ ಉದೇದಪ್ಪ, ಕೆ.ರಮೇಶ, ಎಲ್ಲಾ ತಾಲೂಕಿನ ಕುರುಬರ ಸಂಘದ ಅಧ್ಯಕ್ಷರು ಸೇರಿದಂತೆ ಇತರರು ಇದ್ದರು.



ಮೇ 26ರಂದು ವೈಜ್ಞಾನಿಕ ಬಿತ್ತನೆ ಮೇಳ

ಬಳ್ಳಾರಿ: ನಗರದ ಎಪಿಎಂಸಿ ಆವರಣದಲ್ಲಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ನೇತೃತ್ವದಲ್ಲಿ ಜಿಲ್ಲಾಡಳಿತ, ಜಿಪಂ ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ನೀರಾವರಿ ಮತ್ತು ಪಶು ಸಂಗೋಪನಾ ಇಲಾಖೆ, ಜಿಲ್ಲಾ ಕಾಟನ್ ಅಸೋಸಿಯೇಷನ್, ಕರ್ನಾಟಕ ರಾಜ್ಯ ಕೃಷಿ ಪರಿಕರಗಳ ಮಾರಾಟಗಾರರ ಸಂಘ ಬಳ್ಳಾರಿ ಜಿಲ್ಲಾ ಘಟಕ, ಎಪಿಎಂಸಿ ವರ್ತಕರ ಸಂಘ, ದಲ್ಲಾಲಿ ವರ್ತಕರ ಸಂಘ, ಕನ್ನಡ ನಾಡು ರೈತ ಸಂಘ, ಬಳ್ಳಾರಿ-ರೈತ ಸಮೂಹದ ಸಹಕಾರದಲ್ಲಿ 'ಗುಣಮಟ್ಟದ ಬೀಜ ಮತ್ತು ವೈಜ್ಞಾನಿಕ ಬಿತ್ತನೆ' ಕುರಿತು ಮೇ 26ರಂದು 'ಕೃಷಿ ಮೇಳವನ್ನು ಆಯೋಜಿಸಲಾಗಿದೆ ಎಂದು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಅವ್ವಾರು ಮಂಜುನಾಥ ಹೇಳಿದರು.

ನಗರದ ಚೇಂಬರ್ ಆಫ್ ಕಾಮರ್ಸ್ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಳಗ್ಗೆ ರೈತ ನಡಿಗೆ ಸಾಂಸ್ಕೃತಿಕ ತಂಡಗಳ ಜೊತೆಯಲ್ಲಿ ಆರಂಭವಾಗಲಿದೆ. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ. ಹನುಮಂತಪ್ಪ ಭಾಗವಹಿಸುವರು.

ಕೃಷಿ ವಿಜ್ಞಾನಿ ಡಾ.ಎ.ಜಿ.ಶ್ರೀನಿವಾಸ, ಡಾ.ರವಿಶಂಕರ ಜಿ., ಡಾ.ಪಾಲಯ್ಯ, ಡಾ.ಎಂ.ಭೀಮಣ್ಣ ಉಪನ್ಯಾಸ ನೀಡಲಿದ್ದಾರೆ.

ಅತಿಥಿಗಳಾಗಿ ಮೇಯರ್ ಪಿ.ಗಾದೆಪ್ಪ, ಶಾಸಕ ಬಿ.ನಾಗೇಂದ್ರ, ನಾರಾ ಭರತ ರೆಡ್ಡಿ, ಜೆ.ಎನ್.ಗಣೇಶ, ಬಿ.ಎಂ.ನಾಗರಾಜ, ಈ. ಅನ್ನಪೂರ್ಣ ತುಕಾರಾಂ, ವೈ.ಎಂ.ಸತೀಶ, ಸಂಸದರಾದ ಈ.ತುಕಾರಾಂ, ಡಾ.ಸಯ್ಯದ್ ನಾಸೀರ್ ಹುಸೇನ್, ಬುಡಾ ಅಧ್ಯಕ್ಷ ಜೆ.ಎಸ್. ಆಂಜನೇಯಲು, ಲಿಡ್ಕರ್ ಅಧ್ಯಕ್ಷ ಮುಂಡ್ರಗಿ ನಾಗರಾಜ, ಎಪಿಎಂಸಿ ಅಧ್ಯಕ್ಷ ಕಟ್ಟೇಮನಿ ನಾಗೇಂದ್ರ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಸುಮಾರು 10 ಸಾವಿರ ರೈತರು ಸೇರುವ ನಿರೀಕ್ಷೆ ಇದೆ ಎಂದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಎಸ್ .ದೊಡ್ಡನಗೌಡ, ಉಪಾಧ್ಯಕ್ಷರಾದ ಸೊಂತಾ ಗಿರಿಧರ್, ಪಿ.ಪಾಲಣ್ಣ, ಜಂಟಿ ಕಾರ್ಯದರ್ಶಿ ಡಾ.ಮರ್ಚೇಡ್ ಮಲ್ಲಿಕಾರ್ಜುನಗೌಡ, ವಿ.ರಾಮಚಂದ್ರ, ಖಜಾಂಚಿ ಸಿ.ಎಸ್. ಸತ್ಯನಾರಾಯಣ, ಮಾಜಿ ಅಧ್ಯಕ್ಷರಾದ, ಸಿ.ಶ್ರೀನಿವಾಸ್, ಬಿ.ಮಹಾರುದ್ರಗೌಡ, ನೇಕಾರ ನಾಗರಾಜ್, ಇವೆಂಟ್ಸ್ ಕಮಿಟಿ ಚೇರ್ಮನ್, ಪ್ರೆಸ್ ಅಂಡ್ ಮೀಡಿಯಾ ಕಮಿಟಿ ಚೇರ್ಮನ್ ತಾಟಕೂರಿ ಶ್ರೀನಿವಾಸರಾವ್, ಮ್ಯಾಗಜಿನ್ ಕಮಿಟಿಯ ಕೌಡಿಕಿ ಹನುಮೇಶಬಾಬು, ಕೆ.ಎಂ.ಭೋಗೇಶ್, ಜಿ.ರಾಜೇಶ್ ಇತರರಿದ್ದರು.



ಮಾಲವಿ ಜಲಾಶಯ ಭರ್ತಿ: ರೈತನ ಮುಖದಲ್ಲಿ ಮಂದಹಾಸ

ಹಗರಿಬೊಮ್ಮನಹಳ್ಳಿ: ತಾಲೂಕಿನ ಹಲವಡೆ ಶನಿವಾರ ರಾತ್ರಿ ಸುರಿದ ಸಿಡಿಲಬ್ಬರದ ಧಾರಾಕಾರ ಸುರಿದ ಮಳೆಗೆ ಮಾಲವಿ ರಾಮನ ಹಳ್ಳ ತಾಲೂಕಿನ ಹಲವೆಡೆ ಹಳ್ಳಗಳು, ಚೆಕ್‌ಡ್ಯಾಂಗಳು ತುಂಬಿ ಹರಿದಿವೆ. ಪಟ್ಟಣದಲ್ಲಿ ಮನೆಗಳಿಗೆ ನೀರು ನುಗ್ಗಿವೆ ಹಲವು ಗಿಡ ಮರಗಳು ನೆಲಕ್ಕುರುಳಿವೆ.

ಹಳೇ ಬಸ್ ನಿಲ್ದಾಣ ತರಕಾರಿ ಮಾರುಕಟ್ಟೆ ಕೆಸರು ನೀರಿನಿಂದ ಆವೃತವಾಗಿತ್ತು. ತಾಲೂಕಿನ ಜೀವನಾಡಿ ಮಾಲವಿ ಜಲಾಶಯಕ್ಕೆ ಪ್ರಸಕ್ತ ವರ್ಷದ ಮೊದಲ ಬಾರಿಗೆ ನೀರು ಹರಿದು ಬರುತ್ತಿರುವುದು ಜಲಾಶಯದ ಅಚ್ಚುಕಟ್ಟು ರೈತರಲ್ಲಿ ಸಂತಸ ಮನೆ ಮಾಡಿದೆ. ಇಲ್ಲಿನ ರೈತರು ಯುವಕರು ಮಾಲವಿ ಜಲಾಶಯಕ್ಕೆ ನೀರು ಬರುತ್ತಿರುವುದನ್ನು ಸೆಲ್ಫಿ



ಕ್ಲಿಕ್ಕಿಸಿಕೊಂಡು ನಗು ಚೆಲ್ಲುತ್ತಿರುವುದು ನೋಡಿದರೆ ಮಳೆಯಿಂದ ರೈತರಲ್ಲಿ ಮಂದಹಾಸ ಮೂಡಿದ್ದು, ಕೃಷಿ ಚಟುವಟಿಕೆಗಳು ಕೈಗೊಳ್ಳಲು ಮಳೆಯಿಂದ ಅನುಕೂಲವಾಗಿದೆ.

ಈ ವರ್ಷ ಉತ್ತಮ ಮಳೆ ಆಗುವ ನಿರೀಕ್ಷೆಯಲ್ಲಿ ರೈತರು ಹೊಲವನ್ನು ರಂಟೇ-ಕುಂಟೆ ಒಡೆಯುವ ಮೂಲಕ ಬಿತ್ತನೆಗೆ ಸಿದ್ಧತೆ ಮಾಡಿ ಕೊಳ್ಳಲಾಗಿದೆ. ಬಿತ್ತನೆ ಬೀಜ ರಸ ಗೊಬ್ಬರಗಳ ಖರೀದಿಗಾಗಿ ಸಿದ್ಧರಿದ್ದಾರೆ. ಈ ಯುದ್ಧದ ಸಂದರ್ಭದಲ್ಲಿ ರೈತರ ಅಗತ್ಯಕ್ಕೆ ತಕ್ಕ ಹಾಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಸಂಗ್ರಹ ಮಾಡಿಕೊಳ್ಳುವುದು ವಿತರಣೆ ಮಾಡುವುದು ಸವಾಲಿನ ಕೆಲಸವಾಗಿದೆ .

ಶನಿವಾರ ರಾತ್ರಿ ಹಗರಿಬೊಮ್ಮನಹಳ್ಳಿಯಲ್ಲಿ 76.6 ಮಿಮೀ, ತಂಬ್ರಹಳ್ಳಿ 14.6ಮಿಮೀ, ಹಂಪಸಾಗರ 23.2 ಮಿಮೀ, ಮಾಲವಿ 79.2 ಮಿಮೀ, ತಾಲೂಕಿನಲ್ಲಿ ಒಟ್ಟು 193.6 ಮಿಮೀ ಸರಾಸರಿ ಶೇ 48.4ರಷ್ಟು ಪ್ರಮಾಣದ ಮಳೆ ಆಗಿದೆ. ಕೃತಿಕಾ ಮಳೆ ಕೊನೆಯ ದಿನದ ಮಳೆಯಿಂದಾಗಿ ಬಿತ್ತನೆಗೆ ಅನುಕೂಲವಾಗಿದೆ. ಮಳೆಯಿಂದ ಕೃಷಿ ಚಟುವಟಿಕೆಗಳು ಗರಿಗೆದರಿವೆ.

ಅಪ್ರಾಪ್ತೆ ಹತ್ಯೆ ಪ್ರಕರಣ ಎಸ್‌ಐಟಿಗೆ ವಹಿಸಿ: ಚೇತನ ಅಹಿಂಸಾ

ಬೀದರ: ಜಿಲ್ಲೆಯ ಕಮಲನಗರ ತಾಲೂಕಿನ ಬೆಳಕುಣಿ ಗ್ರಾಮದಲ್ಲಿ ಮೇ 8ರಂದು ನಡೆದ ಅಪ್ರಾಪ್ತೆ ಹತ್ಯೆ ಪ್ರಕರಣವನ್ನು ಎಸ್‌ಐಟಿಗೆ ವಹಿಸಬೇಕೆಂದು ಚಿತ್ರನಟ ಹಾಗೂ ಹೋರಾಟಗಾರ ಚೇತನ ಅಹಿಂಸಾ ಆಗ್ರಹಿಸಿದರು.

ಶನಿವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 16 ವರ್ಷದ ಅಪ್ರಾಪ್ತ ಬಾಲಕಿಯು ಓರ್ವ ಕ್ರೀಡಾಪಟು. ಆರೋಪಿಯನ್ನು ಬಚಾವ್ ಮಾಡಲು ಕಾಣದ ಕೈಗಳು ಕೆಲಸ ಮಾಡುತ್ತಿವೆ ಎಂಬುದು ನಿಧಾನಗತಿಯ ತನಿಖೆಯಿಂದ ಗೊತ್ತಾಗುತ್ತಿದೆ. ಮೊದಲಂತೂ ಈಕೆ ಆತ್ಮಹತ್ಯೆಗೆ ಶರಣಾಗಿದ್ದಾಳೆ ಎಂದು ಕೇಸ್ ದಾಖಲಾಗಿತ್ತು. ಹಲವಾರು ಸಂಘಟಕರ ಹೋರಾಟದ ಪ್ರತಿಫಲ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಸತ್ಯ ಬಹಿರಂಗವಾಗುತ್ತಿದ್ದಂತೆ ಪೋಕ್ಸೋ ಪ್ರಕರಣ ದಾಖಲಿಸಿದ್ದರೂ ಅಪರಾಧಿಗೆ ಇನ್ನು ಶಿಕ್ಷೆಯಾಗಿಲ್ಲ ಎಂದರು.

ಈ ಪ್ರಕರಣದಲ್ಲಿ ಜಿಲ್ಲಾಡಳಿತ ಹಾಗೂ ಪೋಲಿಸ್ ಇಲಾಖೆ ಎಲ್ಲೋ ಸತ್ಯ ಮರೆ ಮಾಚುತ್ತಿರಬಹುದು ಎಂದೆನಿಸುತ್ತಿದೆ. ಘಟನೆ ನಡೆದು 15 ದಿನಗಳು ಕಳೆದರೂ ಇಲ್ಲಿಗೆ ಐಜಿಪಿಯಾಗಲಿ ಅಥವಾ ಇತರೆ ಹಿರಿಯ ಪೊಲೀಸ್ ಅಧಿಕಾರಿಗಳು ಬರದೆ ಇರುವುದಕ್ಕೆ ಪ್ರಭಾವಿಗಳ ಒತ್ತಡ ಇರಬಹುದು ಅಥವಾ ಆರೋಪಿಯನ್ನು ಈ ಪ್ರಕರಣದಿಂದ ಬಚಾವ್ ಮಾಡಲು ಎಲ್ಲೋ



ಒಳಗೊಳಗೆ ಮಸಲತ್ತು ನಡೆಯುತ್ತಿದೆ ಎಂಬ ಅನುಮಾನ ಮೂಡುತ್ತಿದೆ. ಆದ್ದರಿಂದ ಈ ಪ್ರಕರಣ ನಿಸ್ಪಕ್ಷಪಾತವಾಗಿ ತನಿಖೆಯಾಗಲು ಹೊರಗಿನ ಪೊಲೀಸ್ ಅಧಿಕಾರಿಗಳಿಗೆ ಈ ಪ್ರಕರಣದ ಜವಾಬ್ದಾರಿ ವಹಿಸಬೇಕೆಂದು ಒತ್ತಾಯಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ಶವ ಪರಿಕ್ಷೆ ನಡೆಸಿ, ಅದರ ವರದಿ ಬಹಿರಂಗಗೊಳಿಸಬೇಕು ಎಂದರು.

ಪತ್ರಕರ್ತ ಶಕ್ತಿಕಾಂತ ಬಾವಿದೊಡ್ಡಿ ಮಾತನಾಡಿದರು.

ಬಿಎಸ್‌ಪಿ ಜಿಲ್ಲಾಧ್ಯಕ್ಷ ಕಪಿಲ ಗೋಡಬೋಲೆ, ದಲಿತ ಮುಖಂಡರಾದ ರಾಜಕುಮಾರ ಮೂಲಭಾರತಿ, ಹರ್ಷಿತ ದಾಂಡೇಕರ್, ಹನುಮಂತ್ ಮಟ್ಟೆ, ಅಂಬಾದಾಸ್ ಚಕ್ರವರ್ತಿ, ಸಂತೋಷ ಶಿಂದೆ, ಉತ್ತಮ ಸುತಾರ, ರಜನಿಶ ಎಂ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

ರಸ್ತೆ ಅತಿಕ್ರಮಿಸುವ ಮಾಲೀಕರಿಗೆ ನೋಟಿಸ್ ನೀಡಿ



ಕುರುಗೋಡು: ತಾಲೂಕಿನ ಅರಳಿಹಳ್ಳಿ ಬಳಿ ಮರಳು ಬ್ಲಾಕ್‌ಗಾಗಿ ಸ್ಥಳ ವೀಕ್ಷಿಸಲು ಇತ್ತೀಚೆಗೆ ಬಳ್ಳಾರಿ ಎಸಿ ಎಚ್.ಡಿ.ರಾಜೇಶ ಆಗಮಿಸಿದ್ದರು.

ಸಮೀಪದ ಕಂಪ್ಲಿ ಪಟ್ಟಣದ ಅತಿಥಿಗೃಹ ಆವರಣದಲ್ಲಿ ಮಾತನಾಡಿ, ಸರ್ಕಾರಿ ಸಂಸ್ಥೆಗಳ ಕಾಮಗಾರಿಗಳಿಗೆ ಮರಳು ನೀಡಲು ಪಿಡಬ್ಲ್ಯುಡಿಗೆ ಅನುಮತಿ ನೀಡಬೇಕಿದೆ. ಇದಕ್ಕಾಗಿ ಕಂದಾಯ ಇಲಾಖೆಯಿಂದ ಎನ್‌ಒಸಿ ನೀಡಲು ಅರಳಿಹಳ್ಳಿ ಬಳಿ ಸ್ಥಳ ವೀಕ್ಷಿಸಿದ್ದಾಗಿ ತಿಳಿಸಿದರು.

ಪಟ್ಟಣದ ಕುರುಗೋಡು ರಸ್ತೆ ಡಿವೈಡರ್‌ನಲ್ಲಿ 600ಮೀ.ಉದ್ದದಲ್ಲಿ ಬೀದಿ ದೀಪ ಅಳವಡಿಸಿ ಒಂದು ವರ್ಷಗಳಷ್ಟಾಗಿದೆ. ಇನ್ನು ಪುರಸಭೆಗೆ ಹಸ್ತಾಂತರಿಸುವ ಮುನ್ನಾವೇ ಬೀದಿ ದೀಪ ಬೆಳಗುತ್ತಿಲ್ಲ ಸೂಕ್ತ ಕ್ರಮ ಕೈಗೊಳ್ಳಬೇಕು. ಪಾದಾಚಾರಿ ರಸ್ತೆ ಅತಿಕ್ರಮಿಸುವ ಅಂಗಡಿಗಳ ಮಾಲೀಕರಿಗೆ ನೋಟಿಸ್ ನೀಡಬೇಕು. ಟ್ರೇಡ್ ಲೈಸೆನ್ಸ್ ರದ್ದುಗೊಳಿಸುವ ಕ್ರಮ ಕೈಗೊಳ್ಳುವಂತೆ ಪುರಸಭೆ ಮುಖ್ಯಾಧಿಕಾರಿಗಳಿಗೆ ಸೂಚಿಸಿದರು.

ಪೂರ್ವದಲ್ಲಿ ಜಿಲ್ಲೆಯ ಶಿರುಗುಪ್ಪ ತಾಲೂಕಿನಲ್ಲಿ ಬೇಟಿ ನೀಡಲಾಗಿದ್ದು, ನಂತರ ಸಂಡೂರು ವ್ಯಾಪ್ತಿಯ ಕಡೆ ವೀಕ್ಷಣೆ ಮಾಡಲಾಗುವುದು ಎಂದು ತಿಳಿದು ಬಂದಿದೆ.

ಕಂಪ್ಲಿ ತಹಸೀಲ್ದಾರ್ ಜೂಗಲ ಮಂಜುನಾಯಕ, ಕಂದಾಯ ನಿರೀಕ್ಷಕ ವೈ. ಎಂ.ಜಗದೀಶ, ವಿವಿಧ ಇಲಾಖೆಯ ಸಿಬ್ಬಂದಿಗಳು ಇತರರಿದ್ದರು.

ದಿವ್ಯ ಜ್ಞಾನ ಸಾಧನೆಗೆ ಸೋಪಾನ

ಕೊಟ್ಟೂರು: ಥಿಯಾಸಫಿಯಲ್ಲಿರುವ ಮಹಾತ್ಮರ ಚಿಂತನೆಗಳು ದಿವ್ಯ ಜ್ಞಾನ ಸಾಧಕರ ಸಾಧನೆಗೆ ಸೋಪಾನಗಳಾಗಿವೆ ಎಂದು ಕೊಟ್ಟೂರು ಥಿಯಸಾಫಿಕಲ್ ಲಾಡ್ಜ್ ಕಾರ್ಯದರ್ಶಿ ಸೋದರ ಜೆ.ಎಂ.ಧನಂಜಯ ಹೇಳಿದರು.ಇಲ್ಲಿಯ ಬ್ರಹ್ಮ ಜ್ಞಾನ ಸಮಾಜದಲ್ಲಿ ನಡೆದ ಮಾಸಿಕ ಕಿರು ವ್ಯಾಸಂಗ ಗೋಷ್ಠಿಯ ನಿರ್ದೇಶಕರಾಗಿ ಮಾತನಾಡಿ, ಗುಪ್ತ ಸಿದ್ಧಾ, ಪರಮ ಗುರು ಚರಣ ಸನ್ನಿಧಿಯಲ್ಲಿ' ಗ್ರಂಥಗಳು ಥಿಯಾಸಫಿಯಲ್ಲಿರುವ ಶ್ರೇಷ್ಠ ಗ್ರಂಥಗಳಾಗಿವೆ ಎಂದರು.

ಲಾಡ್ಜ್ ಹಿರಿಯ ಸದಸ್ಯ ಸೋದರ ಎನ್.ಹಂಪಣ್ಣ ಮಾತನಾಡಿ, ನಮ್ಮಲ್ಲಿ ವಿವೇಕ, ಸತ್ಯ, ವಿನಯ ಮತ್ತು ಸಮರ್ಪಣಾ ಭಾವವನ್ನು ಮೈಗೂಡಿಸಿಕೊಳ್ಳಬೇಕು. ಸ್ವೀಕಾರ ಮನೋಭಾವ ಮತ್ತು ಸ್ಥಿತಪ್ರಜ್ಞತೆಯನ್ನು ರೂಢಿಸಿಕೊಳ್ಳಬೇಕು ಎಂದರು.

ಪ್ರಸಾದ ವ್ಯವಸ್ಥೆಯನ್ನು ಸೋದರ ಸಾಸ್ವಿಹಳ್ಳಿ ಬಸವರಾಜಪ್ಪ ಮತ್ತು ಕುಟುಂಬದವರು ನೆರವೇರಿಸಿದರು. ಈ ವೇಳೆ ಲಾಡ್ಜ್ ಅಧ್ಯಕ್ಷ ಮೈದೂರು ಶಂಕ್ರಣ್ಣ, ಸಹ ಕಾರ್ಯದರ್ಶಿ ಟಿ.ಕೊಟ್ರೇಶಿ, ಖಜಾಂಚಿ ಹೊಂಬಾಳೆ ಮಂಜುನಾಥ, ಜಿ.ಷಡಕ್ಷರಿಗೌಡ, ಬಿ.ಹನುಮಂತಪ್ಪ, ಜಿ.ಸಿದ್ದಣ್ಣ, ಮಹಾಂತಪ್ಪ, ಡಿ.ಕೊಟ್ರೇಶ, ಎಚ್.ಪೂರ್ಣಿಮಾ, ಜಿ.ಮಲ್ಲಿಕಾರ್ಜುನ ಇತರರಿದ್ದರು.



ಜಿಲ್ಲಾ ಗೌರವಾಧ್ಯಕ್ಷರಾಗಿ ರಾಮಲಿಂಗಪ್ಪ ಆಯ್ಕೆ



ವಿಜಯನಗರ: ಹೊಸಪೇಟೆಯಲ್ಲಿ ಭಾನುವಾರ ನಡೆದ ಜಿಲ್ಲಾ ಸವಿತಾ ಸಮಾಜ ನೌಕರರ ಸಂಘದ ಸಭೆಯಲ್ಲಿ ಸಂಘದ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಂಘದ ನೂತನ ಜಿಲ್ಲಾ ಗೌರವಾಧ್ಯಕ್ಷರನ್ನಾಗಿ ಅಬಕಾರಿ ಇಲಾಖೆ ನಿವೃತ್ತ ಅಧಿಕಾರ ಡಿ.ರಾಮಲಿಂಗಪ್ಪ, ಜಿಲ್ಲಾ ಅಧ್ಯಕ್ಷರನ್ನಾಗಿ ನಿವೃತ್ತ ಎಎಸ್‌ಐ ಎಚ್.ಶ್ರೀನಿವಾಸ, ಖಜಾಂಚಿಯಾಗಿ ಸಾರಿಗೆ ಇಲಾಖೆ ನಿವೃತ್ತ ನೌಕರ ಎಸ್. ಮನೋಹರ ಕುಮಾರ, ಪ್ರಧಾನ ಕಾರ್ಯದರ್ಶಿಯನ್ನಾಗಿ ವೀರೇಂದ್ರ ನಾಗಲದಿನ್ನಿ, ಜಿಲ್ಲಾ ಉಪಾಧ್ಯಕ್ಷರನ್ನಾಗಿ ಮರಿಯಮ್ಮನಹಳ್ಳಿ ನಿವೃತ್ತ ಶಿಕ್ಷಕ ಕೆ.ನಾಗರಾಜ(ನಾಗೇಶ), ಕೂಡ್ಲಿಗಿ ತಾಲೂಕಿನ ನ್ಯಾಯಾಂಗ ಇಲಾಖೆ ಕೃಷ್ಣವೇಣಿ, ಹಗರಿಬೊಮ್ಮನಹಳ್ಳಿ ರಾಮಕೃಷ್ಣ, ಕೊಟ್ಟೂರಿನ ದೈಹಿಕ ಶಿಕ್ಷಕ ರಮೇಶ ಹಾಗೂ ಹೂವಿನಹಡಗಲಿ ಉಪನ್ಯಾಸಕಿ ನಾಗವೇಣಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಇನ್ನುಳಿದ ಪದಾಧಿಕಾರಿಗಳನ್ನು ಮುಂದಿನ ಸಭೆಯಲ್ಲಿ ಆಯ್ಕೆ ಮಾಡಲು ನಿರ್ಣಯಿಸಲಾಯಿತು.

ಈ ವೇಳೆ ನಗರಸಭೆ ಅಧ್ಯಕ್ಷ ಎನ್.ರೂಪೇಶ ಕುಮಾರ, ಸಮಾಜದ ಪ್ರಮುಖರಾದ ಸೂರ್ಯನಾರಾಯಣ, ಮುಖ್ಯ ಶಿಕ್ಷಕಿ ಪಿ.ಎಲ್.ಉಷಾ, ರಾಜಶೇಖರ ಪತ್ರಕರ್ತ ಸಿ.ಕೆ.ನಾಗರಾಜ, ಮಹೇಶ, ಗಿರೀಶ, ಸಂಧ್ಯಾರಾಣಿ, ಡಾ.ಗುಣಪ್ರಿಯ, ದೀಪಕ, ರಮೇಶ ಬಾಬು, ಜಿ.ನಾಗರಾಜ, ಮಂಜುನಾಥ ಅಮರಚಿಂತ, ಮಾದವ, ಕಿರಣ ಕುಮಾರ ಇದ್ದರು.

ಬೀಳ್ಕೊಡುಗೆ ಸಮಾರಂಭ

ಕುರುಗೋಡು: ಪ್ರತಿಯೊಬ್ಬ ಸಾರ್ವಜನಿಕರು ಆರೋಗ್ಯದ ಬಗ್ಗೆ ಉತ್ತಮ ಕಾಳಜಿ ವಹಿಸಬೇಕು. ತಮ್ಮ ಸೇವೆಗೆ ನೇಮಿಸಿರುವ ನಮ್ಮ ವೈದ್ಯ ವೃತ್ತಿಯನ್ನು ಮತ್ತು ಸರ್ಕಾರದ ಅನೇಕ ಜನಪರ ಯೋಜನೆಗಳನ್ನು ಬಳಸಿಕೊಂಡು ಉತ್ತಮ ಆರೋಗ್ಯವಂತರಾಗಬೇಕು. ಗ್ರಾಮೀಣ ಪ್ರದೇಶದ ಜನರ ಪ್ರೀತಿ ವಿಶ್ವಾಸ ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಉನ್ನತ ಮಟ್ಟದ ವ್ಯಾಸಂಗಕ್ಕೆ ನಿಯೋಜನೆಗೊಂಡಿರುವ ಡಾ.ಸುನಿಲ ಕುಮಾರ ಹೇಳಿದರು.

ಸಮೀಪದ ತಾಳೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಹಮ್ಮದ್ ಕಾಸಿಂ ಮಾತನಾಡಿದರು.

ಈ ವೇಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ವಿರೂಪಾಕ್ಷಪ್ಪ, ಬಳ್ಳಾರೆಪ್ಪ, ಹನುಮಂತಪ್ಪ, ಯಂಕಪ್ಪ, ಭೀಮರೆಡ್ಡಿ, ಬಾಲಾಜಿ, ಜಯಣ್ಣ, ಗ್ರಾಮದ ಮುಖಂಡರಾದ ಪುರುಷೋತ್ತಮರೆಡ್ಡಿ, ನೆನೆಕ್ಯಪ್ಪ, ತುರುಮುಂದೆಪ್ಪ, ಈರಣ್ಣ, ಮುಕ್ಕಣ್ಣ ಮೃತ್ಯುಂಜಯ, ನಾಸ್ರಿನ್, ವಾಹಿದಾ, ರೇಣುಕಾ, ಪದ್ಮಜ ಶೋಭಾ, ರುದ್ರಮ್ಮ, ಹಾಗೂ ತಾಲೂಕ ವಿವಿಧ ಆರೋಗ್ಯ ಅಧಿಕಾರಿಗಳು, ಆರೋಗ್ಯ ನಿರಕ್ಷಣಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳು, ಆಶಾ, ಅಂಗನವಾಡಿ ಕಾರ್ಯಕರ್ತರು ಇದ್ದರು.

